ಮಂಗಳವಾರ, ಆಗಸ್ಟ್ 9, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 220 | ಪುಟ 14

• www.prajavani.net

/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ನೆನಪಿನ ಶಕ್ತಿಯನ್ನು ವೈಜ್ಞಾನಿಕ ತರಬೇತಿಯ ಮೂಲಕ ಯಾರು ಬೇಕಾದರೂ ಗಳಿಸಬಹುದು

ಅನುಭವ ಮಂಟಪ
ಬೆಟ್ಟದ ಜೀವಗಳ ಧ್ಯಾನ ಮತ್ತು ಪರಿಸರವಾದ

ಜೆಇಇ ಮೇನ್: 24 ಅಭ್ಯರ್ಥಿಗಳಿಗೆ ಪೂರ್ಣ ಅಂಕ 6

ಸೇತುವೆ ಮುಳುಗಡೆ, ಸಂಚಾರ ಸ್ಥಗಿತ 5

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 58,853 ▲ | 17,525 ▲ | ₹53,650 (ಬೆಂಗಳೂರು) | ₹59,500 (ಬೆಂಗಳೂರು) | 79.63 ▼ |

# ಭಾರತ ಬಳಗದ ಪದಕ ಸಿರಿ–ಗರಿ

**ಬರ್ಮಿಂಗ್‌ಹ್ಯಾಮ್:** ಇಂಗ್ಲೆಂಡ್ ನೆಲದಲ್ಲಿ ಸೋಮವಾರವೂ ಭಾರತದ ತ್ರಿವರ್ಣ ಧ್ವಜ ಸಂಭ್ರಮದಿಂದ ನಲಿದಾಡಿತು. ಕಾಮನ್‌ವೆಲ್ತ್ ಕ್ರೀಡಾಕೂಟದ ಅಂಗಳದಲ್ಲಿ ರಾಷ್ಟ್ರಗೀತೆ ಮೊಳಗಿತು. ಒಟ್ಟು 61 ಪದಕಗಳನ್ನು ಸೂರೆ ಮಾಡಿದ ಭಾರತ ತಂಡವು ನಾಲ್ಕನೇ ಸ್ಥಾನ ಗಳಿಸಿತು. ಟೇಬಲ್ ಟೆನಿಸ್‌ನಲ್ಲಿ ಅನುಭವಿ ಅಚಂತ ಶರತ್ ಕಮಲ್ ಚಿನ್ನ ಟ್ರಿಪಲ್ ಸಾಧನೆ ಮಾಡಿದರು. ಬ್ಯಾಡ್ಮಿಂಟನ್‌ನಲ್ಲಿ ಒಲಿಂಪಿಯನ್ ಪಿ.ವಿ. ಸಿಂಧು ಇದೇ ಮೊದಲ ಬಾರಿ ಕಾಮನ್‌ವೆಲ್ತ್ ಕೂಟದ ಮಹಿಳೆಯರ ಸಿಂಗಲ್ಸ್‌ನಲ್ಲಿ ಚಿನ್ನಕ್ಕೆ ಮುತ್ತಿಟ್ಟರು. 2014ರಲ್ಲಿ ಅವರು ಕಂಚು ಮತ್ತು ಹೋದ ಬಾರಿ ಬೆಳ್ಳಿ ಪಡೆದಿದ್ದರು.

- ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಬ್ಯಾಡ್ಮಿಂಟನ್ ಸಿಂಗಲ್ಸ್‌ನಲ್ಲಿ ಪಿ.ವಿ. ಸಿಂಧುಗೆ ಚಿನ್ನದ ಕಿರೀಟ
- ಮೊದಲ ಬಾರಿ ಈ ಕೂಟದಲ್ಲಿ ಆಡಿದ ಲಕ್ಷ್ಯ ಸೇನ್‌ಗೆ ಬ್ಯಾಡ್ಮಿಂಟನ್ ಪುರುಷರ ಸಿಂಗಲ್ಸ್ ಸ್ವರ್ಣ
- ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ–ಚಿರಾಗ್ ಶೆಟ್ಟಿಗೆ ಡಬಲ್ಸ್ ಕಿರೀಟ
- 40 ವರ್ಷದ ಅಚಂತ್ ಶರತ್ ಕಮಲ್ ಟೇಬಲ್ ಟೆನಿಸ್ ಪುರುಷರ ಸಿಂಗಲ್ಸ್ ಚಿನ್ನ.
- ಟೇಬಲ್ ಟೆನಿಸ್ ಮಿಶ್ರ ಡಬಲ್ಸ್‌ನಲ್ಲಿ ಅಚಂತ ಶರತ್ ಕಮಲ್–ಶ್ರೀಜಾ ಅಕುಲಾಗೆ ಬಂಗಾರ
- ಭಾರತ ಪುರುಷರ ಹಾಕಿ ತಂಡಕ್ಕೆ ಬೆಳ್ಳಿ



ಲಕ್ಷ್ಯ ಸೇನ್

61 ಭಾರತ ಗಳಿಸಿದ ಒಟ್ಟು ಪದಕ
22 ಚಿನ್ನ
16 ಬೆಳ್ಳಿ
23 ಕಂಚು

ಸಾತ್ವಿಕ್ ಸಾಯಿರಾಜ್ ಮತ್ತು ಚಿರಾಗ್ ಶೆಟ್ಟಿ




| 215 | 4 | 72 | 5054 | 20 | 11 |
|---|---|---|---|---|---|
| ಭಾರತ ತಂಡದಲ್ಲಿದ್ದ ಅಥ್ಲೀಟ್‌ಗಳು | ಪಡೆದ ಸ್ಥಾನ | ಭಾಗವಹಿಸಿದ ದೇಶಗಳು | ವಾಲ್ಗೊಂಡ ಒಟ್ಟು ಸ್ಪರ್ಧಿಗಳು | ಆಯೋಜಿಸಿದ ಕ್ರೀಡೆಗಳು | ಕೂಟ ನಡೆದ ಒಟ್ಟು ದಿನಗಳು |

ವಿವರ ಪುಟ 11

## ಬಿಹಾರ: ಜೆಡಿಯುಗೆ ಆರ್‌ಜೆಡಿ, ಕಾಂಗ್ರೆಸ್ ಭರವಸೆ

# ‘ಬಿಜೆಪಿ ಸಖ್ಯ ಬಿಟ್ಟರೆ ಬೆಂಬಲ’

**ಪಟ್ನಾ/ನವದೆಹಲಿ (ಪಿಟಿಐ):** ‘ಬಿಜೆಪಿ ಸಖ್ಯವನ್ನು ತೊರೆಯುವುದಾದರೆ ಜೆಡಿಯುಗೆ ಬೆಂಬಲ ನೀಡಲಾಗುವುದು’ ಎಂದು ಬಿಹಾರದ ವಿರೋಧ ಪಕ್ಷಗಳಾದ ಆರ್‌ಜೆಡಿ, ಕಾಂಗ್ರೆಸ್ ಮತ್ತು ಎಡಪಕ್ಷಗಳು ಹೇಳಿವೆ. ಜೆಡಿಯು ಮತ್ತು ಬಿಜೆಪಿ ನಡುವಣ ಸಂಬಂಧ ಬಿಗಡಾಯಿಸಿರುವ ಸಂದರ್ಭದಲ್ಲೇ ವಿರೋಧ ಪಕ್ಷಗಳು ಬಹಿರಂಗವಾಗಿ ಈ ಮಾತು ಹೇಳಿವೆ.

ಬಿಜೆಪಿ ಜತೆಗಿನ ಮೈತ್ರಿಯನ್ನು ಜೆಡಿಯು ತೊರೆಯಲಿದೆ ಎಂಬ ವದಂತಿ ಹರಡಿದೆ. ಈ ವದಂತಿಯನ್ನು ಜೆಡಿಯು ನಿರಾಕರಿಸಿದೆ. ಆದರೆ, ಬಿಹಾರ ಮುಖ್ಯಮಂತ್ರಿ ಮತ್ತು ಜೆಡಿಯು ನಾಯಕ ನಿತೀಶ್ ಕುಮಾರ್ ಅವರು ಮಂಗಳವಾರ ತಮ್ಮ ಶಾಸಕಾಂಗ ಪಕ್ಷದ ಸಭೆಯನ್ನು ಕರೆದಿದ್ದಾರೆ. ಜೆಡಿಯುವಿನ 45 ಶಾಸಕರು ಮತ್ತು ಎಲ್ಲಾ ಸಂಸದರೂ ಸಭೆಯಲ್ಲಿ ಇರಬೇಕು ಎಂದು ಸೂಚಿಸಿದ್ದಾರೆ. ‘ಪಕ್ಷದ ಮುಂದಿನ ನಡೆಯನ್ನು ಆ ಸಭೆಯಲ್ಲಿ ನಿರ್ಧರಿಸಲಾಗುವುದು’ ಎಂದು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಲಲನ್ ಸಿಂಗ್ ಹೇಳಿದ್ದಾರೆ.

ಇದರ ಜತೆಯಲ್ಲೇ ಪ್ರಮುಖ ವಿರೋಧ ಪಕ್ಷವಾದ ಆರ್‌ಜೆಡಿ ಸಹ ಮಂಗಳವಾರ ಶಾಸಕಾಂಗ ಪಕ್ಷದ ಸಭೆ ಕರೆದಿದೆ. ಪಕ್ಷದ ಎಲ್ಲಾ ಶಾಸಕರು ಸೋಮವಾರ ರಾತ್ರಿಯ ಹೊತ್ತಿಗೇ ಪಟ್ನಾಕ್ಕೆ ಬರಬೇಕು. ಮುಂದಿನ 5–6 ದಿನಗಳವರೆಗೆ ಎಲ್ಲರೂ ಪಟ್ನಾದಲ್ಲೇ ಇರಬೇಕು ಎಂದು ಎಲ್ಲಾ ಶಾಸಕರಿಗೆ ಸೂಚನೆ ನೀಡಲಾಗಿದೆ ಎಂದು ಪಕ್ಷದ ಮೂಲಗಳು ಹೇಳಿವೆ.

ಕಾಂಗ್ರೆಸ್‌ನ ಬಿಹಾರ ಘಟಕ ಸೋಮವಾರ ಸಭೆ ನಡೆಸಿದೆ. ಮಂಗಳವಾರವೂ ಸಭೆ ನಡೆಸಲಿದೆ.

ಇನ್ನೊಂದು ಸುದ್ದಿ 6

### ಸೋನಿಯಾ ಜತೆ ಮಾತುಕತೆ?

ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರ ಜತೆ ಭಾನುವಾರ ರಾತ್ರಿ ಮಾತುಕತೆ ನಡೆಸಿದ್ದಾರೆ ಎನ್ನಲಾಗಿದೆ. ಆದರೆ ಜೆಡಿಯು ಆಗಲೀ ಕಾಂಗ್ರೆಸ್ ಆಗಲೀ ಇದನ್ನು ದೃಢಪಡಿಸಿಲ್ಲ.

ಈ ಬಗ್ಗೆ ಪ್ರಶ್ನಿಸಿದಾಗ ಕಾಂಗ್ರೆಸ್ ರಾಷ್ಟ್ರೀಯ ಕಾರ್ಯದರ್ಶಿ ಶಕೀಲ್ ಅಹ್ಮದ್ ಖಾನ್ ಅವರು, ‘ಇದನ್ನು ನಾನು ದೃಢಪಡಿಸಲು ಸಾಧ್ಯವಿಲ್ಲ. ಪಕ್ಷದ ಉನ್ನತ ನಾಯಕರಷ್ಟೇ ಆ ಬಗ್ಗೆ ಹೇಳಬೇಕು’ ಎಂದು ಹೇಳಿದ್ದಾರೆ. ಈ ಮಾತುಕತೆ ನಡೆದಿದೆ ಎಂಬ ಸುದ್ದಿಯ ಬಗ್ಗೆ ಜೆಡಿಯು ಸಹ ಯಾವುದೇ ಮಾಹಿತಿ ನೀಡಿಲ್ಲ. ಜೆಡಿಯು ನಾಯಕರು, ‘ನಮಗೇನೂ ತಿಳಿದಿಲ್ಲ’ ಎಂದಷ್ಟೇ ಹೇಳಿದ್ದಾರೆ.

**ಬಿಜೆಪಿ ವಿರುದ್ಧ ಹೋರಾಡಲು ಬದ್ಧರಾಗಿದ್ದೇವೆ. ನಿತೀಶ್ ಸಹ ಬಿಜೆಪಿ ವಿರುದ್ಧ ಹೋರಾಡಲು ನಿರ್ಧರಿಸಿದರೆ, ನಮ್ಮ ಜತೆ ಬರಲಿ**
**ಶಿವಾನಂದ ತಿವಾರಿ**
ಆರ್‌ಜೆಡಿ ರಾಷ್ಟ್ರೀಯ ಉಪಾಧ್ಯಕ್ಷ

**ಬಿಜೆಪಿ ಮೈತ್ರಿ ತೊರೆದು, ಬೇರೆ ಮೈತ್ರಿಕೂಟ ರಚಿಸುವುದಾದರೆ ಜೆಡಿಯುಗೆ ನಾವು ಬೆಂಬಲ ನೀಡುತ್ತೇವೆ. ಹೊಸ ಮೈತ್ರಿಕೂಟ ಬಂದರೆ, ಅದು ಉತ್ತಮ ಬೆಳವಣಿಗೆ**
**ದೀಪಂಕರ್ ಭಟ್ಟಾಚಾರ್ಯ**
ಸಿಪಿಐಎಂಎಲ್ ಪ್ರಧಾನ ಕಾರ್ಯದರ್ಶಿ

**ಸಮಾನ ಸಿದ್ಧಾಂತದ ಪಕ್ಷಗಳು ಒಗ್ಗಟ್ಟಾಗಿರಬೇಕು. ಸಮಾಜವಾದಿ ಎಂದು ಹೇಳಿಕೊಳ್ಳುವ ನಿತೀಶ್ ಬಿಜೆಪಿ ಸಖ್ಯ ತೊರೆದರೆ, ನಾವು ಅದನ್ನು ಸ್ವಾಗತಿಸುತ್ತೇವೆ**
**ಶಕೀಲ್ ಅಹ್ಮದ್ ಖಾನ್**
ಕಾಂಗ್ರೆಸ್ ರಾಷ್ಟ್ರೀಯ ಕಾರ್ಯದರ್ಶಿ

## ಕಲ್ಲಿದ್ದಲು: ಮಾಜಿ ಕಾರ್ಯದರ್ಶಿಗೆ ಜೈಲು

ಎಚ್‌.ಸಿ.ಗುಪ್ತಾ

**ನವದೆಹಲಿ (ಪಿಟಿಐ):** ಮಹಾರಾಷ್ಟ್ರದಲ್ಲಿ ಕಲ್ಲಿದ್ದಲು ಹಂಚಿಕೆ ಮಾಡುವಲ್ಲಿ ಅಕ್ರಮ ಎಸಗಿದ್ದ ಪ್ರಕರಣಕ್ಕೆ ಸಂಬಂಧಿಸಿ, ಮಾಜಿ ಕಾರ್ಯದರ್ಶಿ ಎಚ್‌.ಸಿ. ಗುಪ್ತಾಗೆ ಸಿಬಿಐ ಪ್ರಕರಣಗಳ ವಿಶೇಷ ನ್ಯಾಯಾಲಯ ಮೂರು ವರ್ಷ ಜೈಲು ಶಿಕ್ಷೆ ವಿಧಿಸಿದೆ.

10ನೇ ಪುಟ ನೋಡಿ

## ‘ಗಣೇಶೋತ್ಸವಕ್ಕೆ ನಿರ್ಬಂಧವಿಲ್ಲ’

**ಬೆಂಗಳೂರು:** ಈ ವರ್ಷದ ಗಣೇಶೋತ್ಸವವನ್ನು ಕೋವಿಡ್ ಪೂರ್ವದಲ್ಲಿ ನಡೆಯುತ್ತಿದ್ದಂತೆ ನಡೆಸಲು ಅನುಮತಿ ನೀಡಲಾಗುವುದು, ಯಾವುದೇ ನಿರ್ಬಂಧಗಳನ್ನು ವಿಧಿಸುವುದಿಲ್ಲ ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಈ ಸಂಬಂಧ ಮುಖ್ಯಮಂತ್ರಿಯವರ ಜತೆ ಚರ್ಚೆ ನಡೆಸಿದ್ದು ಅವರು ಇದಕ್ಕೆ ಒಪ್ಪಿಗೆ ನೀಡಿದ್ದಾರೆ ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಕಳೆದ ಎರಡು ವರ್ಷ ಕೋವಿಡ್‌ನಿಂದಾಗಿ ಸಾರ್ವಜನಿಕ ಗಣೇಶೋತ್ಸವಗಳ ಮೇಲೆ ನಿರ್ಬಂಧ ಹೇರಲಾಗಿತ್ತು. ಆಗ ಸಾರ್ವಜನಿಕರ ಪ್ರಾಣ ಉಳಿಸುವುದು ಮುಖ್ಯವಾಗಿತ್ತು. ಸರ್ಕಾರದ ಮನವಿಗೆ ಸಾರ್ವಜನಿಕರು ಸ್ಪಂದಿಸಿದ್ದರು. ಈ ಬಾರಿ ಯಾವುದೇ ಅಡೆತಡೆಗಳಿರುವುದಿಲ್ಲ. ಕೋವಿಡ್ ಪೂರ್ವದಲ್ಲಿ ಹೇಗೆ ಗಣೇಶೋತ್ಸವವನ್ನು ಆಚರಿಸಲಾಗುತ್ತಿತ್ತೋ ಹಾಗೆಯೇ ಆಚರಿಸಬಹುದು ಎಂದರು.

# ಶಿಕ್ಷಕರ ನೇಮಕಾತಿ ಪರೀಕ್ಷೆಯ ಫಲಿತಾಂಶ ತಿಂಗಳ ಕೊನೆಗೆ ಪ್ರಕಟ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 15 ಸಾವಿರ ಶಿಕ್ಷಕರ ನೇಮಕಾತಿ ಪರೀಕ್ಷೆಯ ಫಲಿತಾಂಶವನ್ನು ಇದೇ ತಿಂಗಳ ಅಂತ್ಯದ ಒಳಗೆ ನೀಡಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಅಕ್ಟೋಬರ್‌ನಲ್ಲಿ ಪಟ್ಟಿ ಬಿಡುಗಡೆ ಮಾಡಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಬಿ.ಸಿ.ನಾಗೇಶ್ ಹೇಳಿದರು.

ಸಚಿವರಾಗಿ ಅಧಿಕಾರ ವಹಿಸಿಕೊಂಡ ವರ್ಷದ ಸಾಧನೆಗಳನ್ನು ಸೋಮವಾರ ಮೆಲುಕು ಹಾಕಿದ ಅವರು, ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳಲ್ಲಿನ ಮಕ್ಕಳಿಗೆ ‘ಸ್ಪೋಕನ್ ಇಂಗ್ಲಿಷ್’ತರಗತಿಗಳನ್ನು ಆರಂಭಿಸಲಾಗುವುದು. ಅದಕ್ಕಾಗಿ ನೇಮಕಾತಿಯಲ್ಲಿ ಇಂಗ್ಲಿಷ್ ಶಿಕ್ಷಕರಿಗೆ ಆದ್ಯತೆ ನೀಡಲಾಗಿದೆ ಎಂದು ಅವರು ಹೇಳಿದರು.

ಕೌನ್ಸೆಲಿಂಗ್ ಮೂಲಕ 23 ಸಾವಿರಕ್ಕೂ ಹೆಚ್ಚು ಶಿಕ್ಷಕರ ವರ್ಗಾವಣೆ ಪ್ರಕ್ರಿಯೆ ಪೂರ್ಣಗೊಳಿಸಲಾಗಿದೆ. ಅನುದಾನಿತ ಶಾಲೆಗಳಲ್ಲಿ 2015ರ ಡಿ.31ರ ಪೂರ್ವದಲ್ಲಿ ಖಾಲಿಯಾಗಿರುವ ಬೋಧಕರ ಹುದ್ದೆಗಳ ಭರ್ತಿಗೆ ಅನುಮತಿ ನೀಡಲಾಗಿದೆ. ಇದರಿಂದ ಎರಡು ಸಾವಿರಕ್ಕೂ ಹೆಚ್ಚು ಹುದ್ದೆಗಳು ಭರ್ತಿಯಾಗಲಿವೆ ಎಂದು ವಿವರ ನೀಡಿದರು.

ವರ್ಷಕ್ಕೆ ಎರಡು ಬಾರಿ ಟಿಇಟಿ ಪರೀಕ್ಷೆ ನಡೆಸಬೇಕು ಎನ್ನುವ ಯೋಜನೆ ಇದೆ. ಆದರೆ, ಈ ವರ್ಷ 15 ಸಾವಿರ ಶಿಕ್ಷಕರ ನೇಮಕ ಪರೀಕ್ಷೆ ಪ್ರಕ್ರಿಯೆ ನಡೆಯುತ್ತಿರುವ ಕಾರಣ ಒಂದೇ ಟಿಇಟಿ ಇರಲಿದೆ. ನ.6ರಂದು ಪರೀಕ್ಷೆ ನಡೆಯಲಿದೆ ಎಂದು ಸಚಿವರು ಮಾಹಿತಿ ನೀಡಿದರು.

# ಸಾವಿರ ನಗರ: ಜಿಯೊ 5ಜಿ ಸೇವೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ದೇಶದ ಒಂದು ಸಾವಿರ ನಗರಗಳಲ್ಲಿ 5ಜಿ ದೂರಸಂಪರ್ಕ ಸೇವೆಗಳನ್ನು ಒದಗಿಸಲು ಯೋಜನೆ ಪೂರ್ಣಗೊಂಡಿದೆ ಎಂದು ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ (ಆರ್‌ಐಎಲ್) ತನ್ನ ವಾರ್ಷಿಕ ವರದಿಯಲ್ಲಿ ಹೇಳಿದೆ.

ದೂರಸಂಪರ್ಕ ಸೇವೆಗಳನ್ನು ಒದಗಿಸುವ ಜಿಯೊ ಕಂಪನಿಯು ರಿಲಯನ್ಸ್ ಇಂಡಸ್ಟ್ರೀಸ್‌ನ ಅಂಗಸಂಸ್ಥೆ.

‘ಜಿಯೊ ಮೊಬೈಲ್ ದೂರಸಂಪರ್ಕ ನೆಟ್‌ವರ್ಕ್‌ಅನ್ನು ಭವಿಷ್ಯದ ಅಗತ್ಯಗಳಿಗೆ ತಕ್ಕಂತೆ ರೂಪಿಸಲಾಗಿದೆ. ಈ ಕಾರಣದಿಂದ 4ಜಿ ಸೇವೆಗಳನ್ನು ಸುಲಲಿತವಾಗಿ 5ಜಿ ಸೇವೆಗಳಿಗೆ ಮೇಲ್ದರ್ಜೆಗೆ ಏರಿಸಲು ಸಾಧ್ಯವಾಗಲಿದೆ’ ಎಂದು ಕಂಪನಿಯು ಹೇಳಿದೆ.

ಸಂಪೂರ್ಣವಾಗಿ ದೇಶೀಯವಾಗಿ ಅಭಿವೃದ್ಧಿಪಡಿಸಿರುವ 5ಜಿ ಉಪಕರಣಗಳನ್ನು ಹೊಂದಿರುವುದಾಗಿಯೂ ಕಂಪನಿಯು ವಾರ್ಷಿಕ ವರದಿಯಲ್ಲಿ ತಿಳಿಸಿದೆ.

‘ನಗರಗಳಲ್ಲಿ 5ಜಿ ಸೇವೆ ಆರಂಭಗೊಂಡ ತಕ್ಷಣಕ್ಕೆ, ತೀರಾ ದೂರದ ಪ್ರದೇಶಗಳಲ್ಲಿ ಹಾಗೂ ಗ್ರಾಮೀಣ ಭಾಗಗಳಲ್ಲಿ 5ಜಿ ಸೇವೆ ಆರಂಭ ಆಗದಿರಬಹುದು. ಹಂತ ಹಂತವಾಗಿ ಅಲ್ಲಿಯೂ ಸೇವೆಗಳು ಆರಂಭವಾಗುತ್ತವೆ. ಜಿಯೊ ಎಲ್ಲೆಲ್ಲಿ 4ಜಿ ಸೇವೆಗಳನ್ನು ಒದಗಿಸುತ್ತಿದೆಯೋ ಅಲ್ಲೆಲ್ಲ 5ಜಿ ಸೇವೆಗಳು ಲಭ್ಯವಾಗುವುದು ಖಚಿತ. 5ಜಿ ಸೇವೆ ಒದಗಿಸಲು ಮೊದಲೇ ಸಿದ್ಧವಾಗಿದ್ದೆವು’ ಎಂದು ಕಂಪನಿಯ ಮೂಲಗಳು ತಿಳಿಸಿವೆ.

‘ಡೇಟಾ ಬಳಕೆಯು ಎಲ್ಲಿ ಜಾಸ್ತಿ ಇದೆಯೋ ಅಲ್ಲಿ 5ಜಿ ಸೇವೆಗಳು ಮೊದಲಿಗೆ ಆರಂಭವಾಗಲಿವೆ’ ಎಂದು ಮೂಲಗಳು ವಿವರಿಸಿವೆ.

### ‘ಒಂದು ತಿಂಗಳಲ್ಲಿ ಆರಂಭ ಸಾಧ್ಯತೆ’

**ನವದೆಹಲಿ (ಪಿಟಿಐ):** 5ಜಿ ಸೇವೆಗಳು ಸರಿಸುಮಾರು ಒಂದು ತಿಂಗಳಲ್ಲಿ ಆರಂಭವಾಗುವ ನಿರೀಕ್ಷೆ ಇದೆ ಎಂದು ಕೇಂದ್ರ ದೂರಸಂಪರ್ಕ ಖಾತೆ ರಾಜ್ಯ ಸಚಿವ ದೇವುಸಿಂಹ ಚೌಹಾನ್ ಸೋಮವಾರ ಹೇಳಿದ್ದಾರೆ.

5ಜಿ ಸೇವೆಗಳನ್ನು ಒದಗಿಸಲು ದೇಶೀಯವಾಗಿ ಅಭಿವೃದ್ಧಿಪಡಿಸಿದ ಉಪಕರಣಗಳನ್ನು ಅಳವಡಿಸುವ ಸಾಧ್ಯತೆ ಇದೆ ಎಂದು ಅವರು ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ.

## ಚಿನಕುರಳಿ

ಪ್ರಕಾಶ್ ಶೆಟ್ಟಿ

## ಮಂಗಗಳಿಂದ ತೊಂದರೆ: 1533 ಸಹಾಯವಾಣಿ

**ಬೆಂಗಳೂರು:** ನಗರದಲ್ಲಿ ಮಂಗಗಳು ಮತ್ತು ಇತರೆ ವನ್ಯಜೀವಿಗಳಿಂದ ತೊಂದರೆ ಉಂಟಾದರೆ ಸಾರ್ವಜನಿಕರು ಶುಲ್ಕರಹಿತ 1533ಗೆ ಕರೆ ಮಾಡಬಹುದು ಎಂದು ಬಿಬಿಎಂಪಿ ತಿಳಿಸಿದೆ.

ಪ್ರಾಣಿಹಿಂಸೆ ತಡೆ ಕಾಯಿದೆ ಉಲ್ಲಂಘನೆಯಾಗದಂತೆ ಸಾರ್ವಜನಿಕರ ಜೀವಕ್ಕೆ ಹಾನಿಯಾಗದ ರೀತಿಯಲ್ಲಿ ಗಾಯಗೊಂಡ, ರೋಗಗ್ರಸ್ತವಾದ ಹಾಗೂ ಹಾನಿಯುಂಟು ಮಾಡುವಂತಹ ಮಂಗಗಳನ್ನು ರಕ್ಷಣೆ ಮಾಡಿ, ಸೂಕ್ತ ಆವಾಸ ಸ್ಥಾನಕ್ಕೆ ಸ್ಥಳಾಂತರ ಮಾಡಲಾಗುತ್ತದೆ ಎಂದು ಅರಣ್ಯ ವಿಭಾಗ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಗೋವಿಂದರಾಜು ತಿಳಿಸಿದ್ದಾರೆ.

ಪಾಲಿಕೆ ವ್ಯಾಪ್ತಿಯಲ್ಲಿ ವನ್ಯಜೀವಿಗಳಿಂದ (ಮಂಗಗಳು, ಹಾವುಗಳು, ಪಕ್ಷಿಗಳು ಇತ್ಯಾದಿ) ಆಗಬಹುದಾದ ತೊಂದರೆಗಳನ್ನು ನಿವಾರಣೆ ಮಾಡುವ ಸಂಬಂಧ ಹಾಗೂ ತುರ್ತು ಸಂದರ್ಭಗಳಲ್ಲಿ ಬಿಬಿಎಂಪಿ ವ್ಯಾಪ್ತಿಯ ಸಾರ್ವಜನಿಕರು ಪಾಲಿಕೆಯ ಶುಲ್ಕರಹಿತ ಸಂಖ್ಯೆಗೆ ಕರೆ ಮಾಡಬಹುದು. ಅಲ್ಲದೆ, 'ನಮ್ಮ ಬೆಂಗಳೂರು' ಆ್ಯಪ್ ಮೂಲಕವೂ ದೂರು ನೀಡಬಹುದು ಎಂದು ತಿಳಿಸಿದ್ದಾರೆ.


ಯಶಸ್ವಿ 28ನೇ ವರ್ಷದಲ್ಲಿ

ಭಾರತ ಸರ್ಕಾರದ ಪ್ರವಾಸೋದ್ಯಮ ಸಚಿವಾಲಯದಿಂದ 'ಅನುಭವಿ ಸೇವಾ ಪೂರೈಕೆದಾರ' ಮಾನ್ಯತೆ & ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಇಲಾಖೆಯಿಂದ ಮಾನ್ಯತೆ

ಅಡಿಗಾಸ್ ಯಾತ್ರಾ®

email: care@adigasyatra.com website: www.adigasyatra.com

944 94 78 944

INTERNATIONAL TOURS

AIRTICKETS, VISA, DELUXE / LUXURY HOTELS, MEALS, ENTRY TICKETS*, BOATING, CABLE CAR, TRAIN, GUIDANCE

EUROPE 13 DAYS

98456 31379

Germany, Switzerland, Liechtenstein, France, Belgium, The Netherland, Austria, Italy, Venice, Rome, Vatican City, Luxembourg **Dep. Date : November 1**

BALI - 7 DAYS

Kintamani Volcano Mountain, Batik Factory, Ubud Palace & Market, Taman Ayun Royal Temple, Bedugul Vigitable Plantation, Tanah Lot Temple, Bedugul, Pura Ulun Danu Temple, Beraton Lake, Tanjung Benoa Beach, Uluwatu Temple, Denpasar City

**Dep. Date : Sep 19. Oct 10, 17. Nov 7, 14, 28. Dec 5, 19.**

SINGAPORE - MALAYSIA - THAILAND 4 / 5 / 7 / 11 DAYS

Universal Studios, Sentosa Island, Palawan Beach, Madame Tussauds, Wings of Time, Cable Car, Singapore City Tour, Garden By The Bay

Kuala Lumpur City Tour, Twin Tower, Putrajaya, City Tour, Batu Caves, Genting Highland, Theme Park

Pattaya, Coral Island, Gems Gallery, Alcazar Show, Nong Nooch Village, Cultural Show, Elephant Show, Bangkok Temple & City Tour, Safari World, Marine Park, Dolphin & Sea Lion Show, Orangutan Show, Bird Show

**Dep. Date : OCT 13. NOV 10,24. DEC 8, 15**

BHUTAN - 8 DAYS | DUBAI - 6 DAYS

- Thimphu City
- Phuentsholing
- Paro Dzong Punakha Dzong Taktsang

**Dep. Date : OCT 6, 12, 19, 27. NOV 2, 9, 16, 23, 30. DEC 7, 14, 21.**

Desert Safari, Belly Dance, Tanuara Show, Dhow Cruise, Dubai City Tour, Burj Khalifa, Abudabhi City Tour

**Dep. Dates : OCT 6, 13, 27. NOV 3, 17, 24. DEC 1, 8, 15. JAN 5, 12, 19, 26.**

NEPAL - MUKTHINATH - 9 DAYS



Kathmandu, Bhakthapur, Doleshwar Mahadev, Pokhara, Phewa Lake, Mukthinath Darshan, Manakamana Cable Car

**Dep. Date : SEP7, 14, 21. OCT 12, 19, 27. NOV 2, 16, 23. DEC 7, 14.**

NATURALLY NEPAL-9 DAYS

Kathmandu, Bhakthapur, Doleshwar Mahadev, Pokhara, Phewa Lake, Lumbini, Manakamana Cable Car, Jungle Activities In Chitwan National Park

**Dep. Dates : SEP 7, 14, 21. OCT 12, 19, 27. NOV 2, 16, 23. DEC 7, 14.**

EXPERIENCE NEPAL- 5 DAYS

Kathmandu, Manokamana, Pokhara, Phewa Lake, Bakthapur, Doleshwar

**Dep. Dates : SEP 6, 13,20. OCT 11, 18, 25 NOV 1, 8, 22. DEC 6, 13, 20.**

SRILANKA - RAMAYANA TRAILS- 6 DAYS



Ramayana Temples, Negombo, Manavari Temple, Muneshwara Temple, Trincomalee, Kandy Tooth Relic, Sigiriya Rock Photoshop, Nuwara Eliya, Ramboda Hanuman, Ashoka Vatika, Colombo City Tour Sita Agni Pravesam, Bentota River Cruise,

**Dep. Dates : AUG 12, 26. SEP 2, 16, 30. OCT 7, 21, 28. NOV 4, 18, 25. DEC 2, 16**



MALDIVES - 5 DAYS MAURITIUS - 7 DAYS

Island Visits, Dolphins Watching, Snorkeling, Speed Boat Transfers In Indian Ocean 4 / 5 Star Resort Visit

**Dep. Dates : SEP 5, 12, 19, 26.OCT 3, 10, 17, 24. NOV 7, 14, 21, 28. DEC 5, 12, 19**

Ile Aux Cerfs
North Island Tour
South Island Tour

**Dep. Dates : SEP 5, 12, 19, 26.OCT 3, 10, 17, 24. NOV 7, 14, 21, 28. DEC 5, 12, 19**

CAMBODIA - VIETNAM 6/7/12 DAYS

CAMBODIA
Phnom Penh, Seim Rep, Thousan River, Tonle Sap, Angkor Wat World Largest Hindu Temple

VIETNAM
Hanoi, Ninh Binh, Tam coc, Halong Bay, Ho Chi Minh City, Cu Chi Tunnels, Mekong Delta

**Dep. Dates : OCT 6, 13, 27. NOV 3, 17, 24. DEC 1, 8, 15.**

ಬಸವನಗುಡಿ: ☎ : 080-26616678 9611600810, 7022259008 | ಮಲ್ಲೇಶ್ವರಂ: ☎ : 080-23346678 7022259005, 7022259009 | ಹುಬ್ಬಳ್ಳಿ: ☎ : 0836-2256678 8095800701, 9448083008


ಸಮನ್ವಯ ಸಮಿತಿಯಲ್ಲಿ ಬಿಬಿಎಂಪಿ ಮುಖ್ಯ ಆಯುಕ್ತ ಸೂಚನೆ

# ಹೊರವರ್ತುಲ ರಸ್ತೆಗಳಲ್ಲಿ ನಿಲುಗಡೆ ನಿಷೇಧ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದ ಹೊರ ವರ್ತುಲ ರಸ್ತೆಗಳ ಸರ್ವೀಸ್ ರಸ್ತೆಗಳಲ್ಲಿ ವಾಹನಗಳನ್ನು ನಿಲುಗಡೆ ಮಾಡದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಸಂಚಾರ ಪೊಲೀಸರಿಗೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದರು.

ನಗರದಲ್ಲಿ ಸಂಚಾರ ದಟ್ಟಣೆ ನಿರ್ವಹಣೆಗೆ ಸಂಬಂಧಿಸಿದಂತೆ ಒಳಾಡಳಿತ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಅಧ್ಯಕ್ಷತೆಯಲ್ಲಿ ನಡೆದ ವಿವಿಧ ಇಲಾಖೆಗಳ ಸಮನ್ವಯ ಸಭೆಯಲ್ಲಿ ಅವರು ಮಾತನಾಡಿದರು.

'ಹೊರ ವರ್ತುಲ ರಸ್ತೆಗಳ ಸರ್ವೀಸ್ ರಸ್ತೆಗಳಲ್ಲಿ ವಾಹನಗಳನ್ನು ಪಾರ್ಕಿಂಗ್ ಮಾಡಿರುತ್ತಾರೆ. ಇದರಿಂದ ಸರ್ವೀಸ್ ರಸ್ತೆಗಳಲ್ಲಿ ವಾಹನ ಸಂಚಾರಕ್ಕೆ ಸಮಸ್ಯೆ ಆಗಲಿದೆ. ಈ ಸಂಬಂಧ ಹೊರವರ್ತುಲ ರಸ್ತೆಗಳ ಸರ್ವೀಸ್ ರಸ್ತೆಗಳಲ್ಲಿ ವಾಹನಗಳನ್ನು ನಿಲ್ಲಿಸಲು ಅವಕಾಶ ನೀಡಬಾರದು. ಸಂಚಾರ ಪೊಲೀಸರು ಹಾಗೂ ಪಾಲಿಕೆ ಸಹಯೋಗದಲ್ಲಿ 'ನೋ ಪಾರ್ಕಿಂಗ್' ನಾಮಫಲಕಗಳನ್ನು ಅಳವಡಿಸಬೇಕು' ಎಂದರು.

ಹೊರ ವರ್ತುಲ ರಸ್ತೆ, ಪ್ರಮುಖ ರಸ್ತೆಗಳಲ್ಲಿ ಪಾದಚಾರಿ ಮಾರ್ಗಗಳಲ್ಲಿ ಬೀದಿಬದಿ ವ್ಯಾಪಾರಿಗಳು ವ್ಯಾಪಾರ ಮಾಡದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಅಲ್ಲದೇ ಕೆಪಿಟಿಸಿಎಲ್, ಬೆಸ್ಕಾಂ, ಜಲಮಂಡಳಿ ಸೇರಿ ಇನ್ನಿತರೆ ಇಲಾಖೆಗಳು ಕೆಲಸ ಮಾಡುವ ಸಾಮಗ್ರಿಗಳನ್ನು ಬಿಟ್ಟಿದ್ದರೆ ಕೂಡಲೆ ತೆರವು ತೆರವುಗೊಳಿಸಬೇಕು. ಸಾಮಗ್ರಿ ಹಾಕಿದವರಿಗೆ ದಂಡ ವಿಧಿಸಬೇಕು ಎಂದು ಪಾಲಿಕೆ ಅಧಿಕಾರಿಗೆ ಸೂಚಿಸಿದರು.

ಸಭೆಯಲ್ಲಿ ಬೆಂಗಳೂರು ನಗರ ಪೊಲೀಸ್ ಆಯುಕ್ತ ಪ್ರತಾಪ್ ರೆಡ್ಡಿ, ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಫರ್ವೇಜ್, ಬಿಡಿಎ ಆಯುಕ್ತ ರಾಜೇಶ್ ಗೌಡ, ಜಲಮಂಡಳಿ ಅಧ್ಯಕ್ಷ ಜಯರಾಮ್, ಸಂಚಾರ ವಿಭಾಗದ ಜಂಟಿ ಆಯುಕ್ತ ರವಿಕಾಂತೇಗೌಡ, ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ರಾಜೇಂದ್ರ ಚೋಳನ್, ಬಿಎಂಟಿಸಿ ನಿರ್ದೇಶಕ ಸೂರ್ಯಸೇನ್, ಪಾಲಿಕೆ ವಿಶೇಷ ಆಯುಕ್ತ ಡಾ. ತ್ರಿಲೋಕ್ ಚಂದ್ರ ಅವರು ಇದ್ದರು.


ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ

ಸಂ. 4, 100 ಅಡಿ ರಿಂಗ್ ರಸ್ತೆ, ಬನಶಂಕರಿ 3ನೇ ಹಂತ, ಬೆಂಗಳೂರು–560 085
ದೂ: 080–26980100, ಫ್ಯಾಕ್ಸ್: 080–26422377
ಇ–ಮೇಲ್: dpi.dsert-ka@gmail.com । ವೆಬ್‌ಸೈಟ್: http://dsert.kar.nic.in

ಸಂಖ್ಯೆ: DSERT/ADMIN/TNDR/1/2022-ADMN ದಿನಾಂಕ: 08.08.2022

**ಅಲ್ಪಾವಧಿ ಟೆಂಡರ್ ಪ್ರಕಟಣೆ**
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು. ಇವರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ **Supply of General Stationery and Cartidges to DSERT Office.** ಸಂಬಂಧ ಅರ್ಹ ಬಿಡ್‌ದಾರರಿಂದ ಎರಡು ಬಿಡ್ ವಿಧಾನದಲ್ಲಿ ಇ–ಟೆಂಡರ್ ಕರೆಯಲಾಗಿದೆ. ಟೆಂಡರಿನ ಅಂದಾಜು ಮೊತ್ತ: **ರೂ. 15,00,000/–ಗಳು.** ಇ.ಎಂ.ಡಿ ಮೊತ್ತ: **ರೂ. 40,000/–** 1) ಪ್ರಿ–ಬಿಡ್ ಸಭೆಯ **ದಿನಾಂಕ: 16.08.2022ರ ಬೆಳಿಗ್ಗೆ 11:30 ಗಂಟೆಗೆ.** 2) ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 19.08.2022 ರಂದು ಸಂಜೆ 5:00 ಗಂಟೆಯವರೆಗೆ.** ಹೆಚ್ಚಿನ ಮಾಹಿತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿರುತ್ತದೆ.

ಸಹಿ/–
ನಿರ್ದೇಶಕರು

ವಾಸಾಸಂಇ/ವಾಪ್ರ/ಜಿಎ/1723/2022–23

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ


## ಕೋಲ್ಡ್ ಮಿಕ್ಸ್ ಬಳಸಿ ಗುಂಡಿ ಮುಚ್ಚಿ

ನಗರದಲ್ಲಿ ಪ್ರತಿನಿತ್ಯ ಮಳೆ ಸುರಿಯುತ್ತಿರುವ ಕಾರಣ ಹಾಟ್ ಮಿಕ್ಸ್ ರಸ್ತೆ ಗಂಡಿಗಳನ್ನು ಸರಿಯಾಗಿ ಮುಚ್ಚಲು ಸಾಧ್ಯವಾಗುತ್ತಿಲ್ಲ. ಈ ಪೈಕಿ ಕೋಲ್ಡ್ ಮಿಕ್ಸ್ ಬಳಸಿ ರಸ್ತೆ ಗುಂಡಿಗಳನ್ನು ಮುಚ್ಚಲು ರಸ್ತೆ ಮೂಲಸೌಕರ್ಯ ವಿಭಾಗದ ಮುಖ್ಯ ಎಂಜಿನಿಯರ್‌ಗೆ ತುಷಾರ್ ಗಿರಿನಾಥ್ ಸೂಚನೆ ನೀಡಿದರು.

**ಮ್ಯಾನ್ ಹೋಲ್ಸ್, ಸ್ಲ್ಯಾಬ್ ಸರಿಪಡಿಸಿ:** ನಗರದ ಪ್ರಮುಖ ರಸ್ತೆಗಳಲ್ಲಿ ಮ್ಯಾನ್ ಹೋಲ್‌ಗಳು ರಸ್ತೆ ಮಟ್ಟಕ್ಕಿಂತ ಎತ್ತರವಾಗಿವೆ. ಇದರಿಂದ ವಾಹನಗಳ ಸಂಚಾರಕ್ಕೆ ಅಡಚಣೆಯಾಗಲಿದೆ. ಇದನ್ನು ಜಲಮಂಡಳಿಯಿಂದ ಗುರುತಿಸಿ ಕೂಡಲೇ ದುರಸ್ತಿಪಡಿಸಬೇಕು ಎಂದರು.

**ಜಂಕ್ಷನ್‌ಗಳ ಅಭಿವೃದ್ಧಿ:** ಸಿಲ್ಕ್ ಬೋರ್ಡ್, ಜಯದೇವ, ಟಿನ್ ಫ್ಯಾಕ್ಟರಿ, ಹೆಬ್ಬಾಳ, ಗೊರಗುಂಟೆಪಾಳ್ಯ, ಕಾಡುಬಿಸಲಹಳ್ಳಿ, ಸಾರಕ್ಕಿ, ಆರ್.ಆರ್. ಎಂ.ಆರ್, ಇಬ್ಬಲೂರು ಜಂಕ್ಷನ್‌ಗಳಲ್ಲಿ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ತ್ವರಿತಾಗಿ ಪೂರ್ಣಗೊಳಿಸಿ ವಾಹನಗಳ ಸುಗಮ ಸಂಚಾರಕ್ಕೆ ವ್ಯವಸ್ಥೆ ಕಲ್ಪಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

## ಮಹಾರಾಷ್ಟ್ರ: ದಾನ್ವೆ ನಾಮನಿರ್ದೇಶನ

**ಮುಂಬೈ:** ಮಹಾರಾಷ್ಟ್ರದ ವಿಧಾನ ಪರಿಷತ್ತಿನ ವಿರೋಧಪಕ್ಷದ ನಾಯಕನ ಸ್ಥಾನಕ್ಕೆ ಶಾಸಕ ಅಂಬಾದಾಸ್ ದಾನ್ವೆ ಅವರನ್ನು ಶಿವಸೇನಾದ ಮುಖ್ಯಸ್ಥ ಉದ್ಧವ್ ಠಾಕ್ರೆ ಅವರು ಸೋಮವಾರ ನಾಮನಿರ್ದೇಶನ ಮಾಡಿದ್ದಾರೆ.


ಚಿತ್ರಕಲಾ ಪರಿಷತ್ ದಸ್ತಕಾರ್ ನೇಚರ್ ಉತ್ಸವ್

Dastkaar Nature Utsav

Art Crafts Handlooms & Lifestyle Exhibition cum Sale

ಪ್ರದರ್ಶನ ಮತ್ತು ಮಾರಾಟ

at: Karnataka Chitrakala Parishat
Near Shivananda Store, Kumara Krupa Road, Bangalore

5th to 14th August 2022 Time: 10:30am to 8:30pm

An opulent show of ethnic & traditional silk, cotton handloom products made by master weavers from all over India

Entry & Parking Free

Regd. with ministry of textiles, govt. of India Cont: 98412 78707


## ವಿವಿಧೆಡೆ ವಿದ್ಯುತ್ ವ್ಯತ್ಯಯ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಿರ್ವಹಣಾ ಕಾರ್ಯ ಕೈಗೊಂಡಿರುವುದರಿಂದ ಇದೇ 10 ಮತ್ತು 11ರಿಂದ 13ರವರೆಗೆ ನಗರದ ವಿವಿಧೆಡೆ ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

**ಆ.10ರಂದು ವ್ಯತ್ಯಯವಾಗುವ ಸ್ಥಳಗಳು:** ಸರ್ಜಾಪುರ, ಸೆಸ್ನಾನಾ ಗಾರ್ಡನ್, ಹೊರ ವರ್ತುಲ ರಸ್ತೆ, ಸೆಂಟ್ರಲ್ ಮಾಲ್, ಎಕ್ಸೋರಾ ಬ್ಯುಸಿನೆಸ್ ಪಾರ್ಕ್, ಶೋಭಾ ಅಪಾರ್ಟ್‌ಮೆಂಟ್‌ಗಳು, ಸಲಾರ್‌ಪುರಿಯಾ ಸಾಫ್ಟ್ ಝೋನ್, ತಕ್ಷಶೀಲ ಹೆಲ್ತ್ ಕೇರ್ ಸುತ್ತಮುತ್ತ ಪ್ರದೇಶಗಳು.

**11ರಿಂದ 13ರವರೆಗೆ:** ಎಲೆಕ್ಟ್ರಾನಿಕ್ ಸಿಟಿ ಹಂತ-2, ವೀರಸಂದ್ರ, ಅನಂತ ನಗರ, ದೊಡ್ಡನಾಗಮಂಗಲ ಸುತ್ತಮುತ್ತ ಪ್ರದೇಶಗಳು.

## 12ರಂದು ರಾಜ್ಯಮಟ್ಟದ ಏಕತಾ ಸಮಾವೇಶ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ದಸಂಸದ ಸಂಯೋಜಕ ಸಮಿತಿಯಿಂದ ಆಗಸ್ಟ್ 12ರಂದು ನಗರದ ಅಂಬೇಡ್ಕರ್ ಭವನದಲ್ಲಿ ರಾಜ್ಯಮಟ್ಟದ ಶೋಷಿತರ ಏಕತಾ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ಸಂಸ್ಥಾಪನಾ ಸಂಯೋಜಕ ವಿ. ನಾಗರಾಜ ತಿಳಿಸಿದರು.

ದಲಿತರ ಮೇಲೆ ನಿರಂತರವಾಗಿ ಕೊಲೆ, ಹಲ್ಲೆ, ದೌರ್ಜನ್ಯ, ಬಹಿಷ್ಕಾರ, ಅತ್ಯಾಚಾರ ಮತ್ತು ಅಸ್ಪೃಶ್ಯತೆಯ ಆಚರಣೆಗಳು ನಡೆಯುತ್ತಿವೆ. ದಲಿತ ಸಮುದಾಯದ ಜನರು ಮನುಷ್ಯರೇ ಅಲ್ಲ ಎನ್ನುವ ರೀತಿಯಲ್ಲಿ ನಡೆಸಿಕೊಳ್ಳಲಾಗುತ್ತಿದೆ. ದೇಶದಲ್ಲಿ ಜಾಗೃತಿ ಮೂಡಿಸುವುದು ಅವಶ್ಯ. ಈ ಉದ್ದೇಶದಿಂದ ಸಮಾವೇಶ ಆಯೋಜಿಸಲಾಗಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ಹೇಳಿದರು.

ಸಂವಿಧಾನದ ಎಲ್ಲ ರಕ್ಷಣೆಯಿದ್ದರೂ ಪ್ರತಿನಿತ್ಯ ಒಂದಲ್ಲ ಒಂದು ಕಾರಣಕ್ಕೆ ದಲಿತರು ಮತ್ತು ಮಹಿಳೆಯರ ಮೇಲೆ ದೌರ್ಜನ್ಯಗಳು ನಡೆಯುತ್ತಿವೆ. ವ್ಯವಸ್ಥೆ ಇದ್ದರೂ ಸರ್ಕಾರ ಸ್ಪಂದಿಸುತ್ತಿಲ್ಲ. ನ್ಯಾಯವೂ ಸಿಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಯಿಂದ ಜನ ಸಾಮಾನ್ಯರ ಬದುಕು ನಾಶವಾಗುತ್ತಿದೆ. ಸಮಾಜದ ಸ್ವಾಸ್ಥ್ಯ ಕಾಪಾಡಬೇಕಾದ ಸರ್ಕಾರವು ಮಕ್ಕಳ ಮನಸ್ಸಿನಲ್ಲಿ ವಿಷ ಬೀಜ ಬಿತ್ತುವಂತೆ ಪಠ್ಯ ಪುಸ್ತಕ ಪರಿಷ್ಕರಿಸಿ, ಸನಾತನ ಪರಂಪರೆಯ ಹೆಸರಿನಲ್ಲಿ ನೂತನ ಶಿಕ್ಷಣ ನೀತಿ ಜಾರಿಗೊಳಿಸಿ ಜನರ ಬೆಳವಣಿಗೆಗೆ ಕುಂದು ತರುತ್ತಿದೆ ಎಂದು ಹೇಳಿದರು.

ಮುಖಂಡರಾದ ಎನ್. ವೆಂಕಟೇಶ್, ಮಾವಳ್ಳಿ ಶಂಕರ್, ಶ್ರೀನಿವಾಸ್, ದಿವಾಕರ್ ಹಾಜರಿದ್ದರು.


ಪರಸ್ಪರ ಅಂತರ ಕಾಯ್ದುಕೊಳ್ಳಿ



ಪ್ರಜಾವಾಣಿ

## ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

### PUBLIC NOTICE

**PUBLIC NOTICE**

My client proposes to purchase the property more particularly described in the schedule hereunder from its present owner **Mr.SANTOSH MARKOSE**, aged about 48 years, son of Mr.C.M.Markose, presently residing at 108/130A, MOUNTS BAYRD, PERTH, NA 6000, represented by his General Power of Attorney holder **Mr.SAM JOSEPH, aged about 47 years, son of Mr.C.M.Markose, residing at No.302, TGR Corner, 3d Main Road, Opp:Diya School, Bethel Nagar, Krishnarajapuram, Bangalore - 560 036.** It is represented by the present owner that he has clear and marketable title to the Schedule Property. Any person/ persons who claim any right, title or interest of any nature or any lien, charge or enforceable right in relation to the Schedule Property and/or has any objections of any nature to the transaction should lodge such claims and/or objections in writing to the undersigned together with supporting documents within fifteen (15) days hereof, failing which it will presumed that no valid claims or objections subsist and my clients would proceed to complete the transaction with the present owner thereof subject to compliance with other statutory and legal formalities.

**SCHEDULE PROPERTY**

All that piece and parcel of the agricultural lands comprised in various survey numbers of Uchalagollahalli Village, Thondebhavi Hobli, Gowribidanur Taluk, Chikkaballapura District:

**No. 1.** Sy.No. 9, Total Extent (Acre) 5 Gunta - 20, Kharab (Acre) -- (Gunta) 20. Net Extent (Acre) 5 (Gunta) -- Boundaries. East by, West by, North by, South by E: Arsalabande Village Boundary W: Sy. No.8/2 of N: Araslabande Village Boundary, S: Sy. No.10/2.

**No. 2.** Sy.No. 14/1, Total Extent (Acre) 4 Gunta - 12, Kharab (Acre) -- (Gunta) 4. Net Extent (Acre) 4 (Gunta) 8, Boundaries. East by, West by, North by, South by E: Sy. No.15/1 & 15/2, W:Sy. No.10/1B1N: No. Arasalabande Village Boundary 19/5, S:Sy. No.13.

**No. 3.** Sy.No. 15/1, Total Extent (Acre) -- Gunta - 35, Kharab (Acre) -- (Gunta) 2. Net Extent (Acre) -- (Gunta) 33, Boundaries. East by, West by, North by, South by E:Govt. Land, W:Sy. No.14/1 N: Arasalabande Village boundary S:Sy. No.15/1.

**No. 4.** Sy.No. 15/4, Total Extent (Acre) 3, Gunta - 16½, Kharab (Acre) -- (Gunta) ½. Net Extent (Acre) 3 (Gunta) 16, Boundaries. East by, West by, North by, South by E:Govt. Land, W: Sy. No.17/p4 N: Sy. No.15/1, S: Sy. No.15/2.

**No. 5.** Sy.No. 44/2, Total Extent (Acre) 2, Gunta - 26, Kharab (Acre) -- (Gunta) 7. Net Extent (Acre) 2 (Gunta) 19, Boundaries. East by, West by, North by, South by E: Arasalabande Village Boundary W:Sy.No. 13/3, N:Sy.No.16 S:Sy.No.44/1.

**No. 6.** Sy.No. 16, Total Extent (Acre) 1, Gunta - 36, Kharab (Acre) -- (Gunta) 4. Net Extent (Acre) 1 (Gunta) 32, Boundaries. East by, West by, North by, South by E: Arsalabande Village Boundary W:Sy.No. 15/2, 3, 4 & 5, N: Arsalabande Village Boundary S:Sy.No.44.

**ARVIND RAGHAVAN,** Advocate
No.48, ISHITHA', 2nd Main Road, Vyalikaval, Bangalore-560 003, Mob: 98450 04419
Bangalore. Dated:09/08 /2022

### BUSINESS

**Business Offers**

**Finance**

**NRI'S INVESTMENT**
And Finance Available On Low Interest Against Properties, Land & Building,Sites,Flats, Converted& Agriculture Lands
Call:7411265189

**WANTED BUSINESS**
Partner Veg Hotel 10 Lakhs Investment Monthly Income 1 Lakhs Contact: 8892501007/ 9606701007

**General**

**INDEPENDENCE DAY**
Tricolor Seed paper flags for sale contact WhatsApp 8939301520

### JOB OPPORTUNITIES

**Multiple Vacancy**

**REQUIRED TEAMLEADER,** Telecaller, & FieldExecutive For BankLoan collection. direct recruitment to company Contact:- 9620206756, 9620200756.

**Part-Time Jobs**

**GOVERNMENT RECOGNISED** Data Entry Typing Work From Home, Daily Payment, No Target, No Accuracy, With Govt Bond. For details M: 9742344447

**Hotel**

**REQUIRED IMMEDIATELY** for THE ODYSSEY RETREAT RESORT at KanakapuraRoad. FRONT OFFICE EXECUTIVE, CAPTAINS, STEWARDS, HOUSEKEEPING BOYS, OPERATIONS MANAGER, ACCOUNTS MANAGER.
Call:9880470004
vivaciousdestinations @gmail.com

### RENTAL PROPERTIES

**Accommodation Available**

**Commercial**

**OFFICE** for rent @ malleswaram 18crs near CET 325sft 3rd floor rent15000 bapuji: 9164972345

### PERSONAL

**Change of Name**

**I,** VAISHNAVI V.B D/o Vijay B.S, residing at No. 1252, 1st E Main, 8th B Cross, Sai Mandir Road, Girinagar 2nd Phase, Bangalore-560085, declare that both VAISHNAVI V.B and VAISHNAVI are same person and belongs to me only, vide affidavit dated 08.08.2022, sworn before notary Mamatha N.K, Bangalore.

**CHANGE OF NAME**
I, Geeetha Shivaji Mashale, W/o. Sri Shivasharana Agarakhed, aged about 27 years, residing at No. 953/6, 'Aastha', Sir. M.V. Layout, 3rd Block, Amma Ashrama Main Road, Jnanabharathi, Bangalore - 560056, have changed my name as GEETHA SHIVASHARANA AGARAKHED and sworn before Notary, L.Veena, vide affidavit dated: 06.08.2022.

**I, SUNITHA** VENKATESH MURTHY residing at No.458, 10th 'A' Cross, 12th 'A' Main Road 'A' Sector, Near Ganesha Park, Yelahanka NewTown, Bengaluru-560064 have changed my name to B.J.SUNITHA vide affidavit dated 08/08/2022 sworn before notary G.R.Ravindra Reddy, Bengaluru.

**I, LAKSHMINARAYANAPPA** Residing at #519, 8th Cross, Harsha Layout, Kengeri, Bangalore-60, have changed my daughter's name from ANANYA G.L. to ANANYA NARAYAN affidavit dated 02.08.2022, before notary H.S. Sakalesh Aradhya, Bangalore. Henceforth she shall be called ANANYA NARAYAN only.

**ADHI LAXMI,** Wife/o, JC682129P, NB SUB, SRINIVASA RAO SENAPATHI, Vill- Gokivada, Yellamanchilli, Visakhapatnam, Andhra Pradesh, changed name from ADHI LAXMI to SENAPATHI ADHI LAXMI 06/08/2022 Notary K.V.Mani, Bangalore

**PUSHPA, WIFE/O,** JC682027Y, SUB, BHOJ RAJ, Vill- Andhariya, Amla/ Multai, Betul, Madhya Pradesh, changed name from PUSHPA to PUSHPA GADEKAR 06/08/2022 Notary K.V.Mani, Bangalore

**CAUTION NOTICE**
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

### ಹೊರ ವರ್ತುಲ ರಸ್ತೆಯಲ್ಲಿ ಇದ್ದ ಆದ್ಯತಾ ಪಥವೂ ಮಾಯ

# ಪ್ರಸ್ತಾವದಲ್ಲೇ ಉಳಿದ ಬಸ್ ಪಥ

• ವಿಜಯಕುಮಾರ್ ಎಸ್.ಕೆ.

**ಬೆಂಗಳೂರು:** ಅತಿ ಹೆಚ್ಚು ವಾಹನ ದಟ್ಟಣೆ ಇರುವ ರಸ್ತೆಗಳಲ್ಲಿ ಬಸ್ ಆದ್ಯತಾ ಪಥ ಅಭಿವೃದ್ಧಿಪಡಿಸುವ ಯೋಜನೆ ನನೆಗುದಿಗೆ ಬಿದ್ದಿದೆ. ಪ್ರಾಯೋಗಿಕವಾಗಿ ಹೊರ ವರ್ತುಲ ರಸ್ತೆಯಲ್ಲಿ ಅನುಷ್ಠಾನಕ್ಕೆ ತಂದಿದ್ದ ಬಸ್ ಪಥವೂ ಈಗ ಮಾಯವಾಗಿದೆ.

ನಗರದಲ್ಲಿ ತ್ವರಿತ ಬಸ್ ಸಾರಿಗೆ ಸೇವೆ ಒದಗಿಸಲು ಬಿಬಿಎಂಪಿ, ಬಿಎಂಟಿಸಿ, ಭೂಸಾರಿಗೆ ನಿರ್ದೇಶನಾಲಯ(ಡಲ್ಟ್) ಹಾಗೂ ಸಂಚಾರ ಪೊಲೀಸ್ ಅಧಿಕಾರಿಗಳು ಜಂಟಿಯಾಗಿ ಬಸ್ ಆದ್ಯತಾ ಪಥಗಳನ್ನು ನಿರ್ಮಿಸಲು 2019ರಲ್ಲಿ ಯೋಜನೆ ರೂಪಿಸಿದ್ದರು. ಸಿಲ್ಕ್ ಬೋರ್ಡ್ ಜಂಕ್ಷನ್‌ನಿಂದ ಕೆ.ಆರ್.ಪುರದ ತನಕ 17 ಕಿಲೋ ಮೀಟರ್‌ನಲ್ಲಿ ಪ್ರಾಯೋಗಿಕವಾಗಿ ಬಸ್ ಪಥ ನಿರ್ಮಾಣವೂ ಆಗಿತ್ತು.

ಆರು ಪಥದ ರಸ್ತೆಯಲ್ಲಿ ಎರಡು ಪಥಗಳನ್ನು ಬಿಎಂಟಿಸಿ ಬಸ್‌ಗಳ ಸಂಚಾರಕ್ಕೆ ಕಾಯ್ದಿರಿಸಲಾಗಿತ್ತು. ಹಲವು ತೊಡಕು, ಗೊಂದಲಗಳ ನಡುವೆ ಬಸ್ ಪಥ ನಿರ್ಮಾಣವಾಗಿತ್ತು. ಯೋಜನೆ ಆರಂಭಿಸಿದಾಗ ಆದ್ಯತೆ ಪಥದೊಳಗೆ ಬೇರೆ ವಾಹನಗಳು ನುಸುಳುವುದನ್ನು ತಡೆಯಲು ಕಬ್ಬಿಣದ ಬೊಲಾರ್ಡ್‌ಗಳನ್ನು ಬಿಬಿಎಂಪಿಯಿಂದ ಅಳವಡಿಸಲಾಗಿತ್ತು. ಖಾಸಗಿ ವಾಹನಗಳು ಬೊಲಾರ್ಡ್‌ಗಳಿಗೇ ಡಿಕ್ಕಿ ಹೊಡೆದು ಸರಣಿ ಅಪಘಾತಗಳಿಂದ ಸಮಸ್ಯೆ ಸೃಷ್ಟಿಯಾಗಿತ್ತು. ಬಳಿಕ ಕಬ್ಬಿಣದ ಬೊಲಾರ್ಡ್ ತೆಗೆದು, ಎಫ್‌ಆರ್‌ಪಿ (ಫೈಬರ್ ರಿಇನ್‌ಫೋರ್ಸ್ಡ್ ಪ್ಲಾಸ್ಟಿಕ್) ಬೊಲಾರ್ಡ್‌ಗಳನ್ನು ಅಳವಡಿಸಲಾಯಿತು.

ಬಸ್ ಪಥದ ಬಗ್ಗೆ ಬಿಎಂಟಿಸಿ ಹೆಚ್ಚಿನ ಪ್ರಚಾರವನ್ನೂ ಮಾಡಿತ್ತು. ಗೀತೆಯೊಂದನ್ನು ರಚಿಸಿ ಯೂಟ್ಯೂಬ್‌ನಲ್ಲಿ ಹಂಚಿಕೆ ಮಾಡಿತ್ತು. ಬಸ್‌ನಲ್ಲಿ ಪ್ರಯಾಣ ಮಾಡಿದರೆ ಸಮಯಕ್ಕೆ ಸರಿಯಾಗಿ ಕಚೇರಿ ತಲುಪಲು ಸಾಧ್ಯ ಎಂಬ ಸಂದೇಶವನ್ನು ಗೀತೆಯಲ್ಲಿ ಚಿತ್ರಿಸಲಾಗಿತ್ತು. ಆದರೆ, ಈಗ ಆ ಬಸ್ ಆದ್ಯತಾ ಪಥವೇ ಇಲ್ಲವಾಗಿದ್ದು, ಎಲ್ಲಾ ಬೊಲಾರ್ಡ್‌ಗಳನ್ನು ತೆರವುಗೊಳಿಸಲಾಗಿದೆ.

ಮೆಟ್ರೊ ರೈಲು ಮಾರ್ಗದ ಕಾಮಗಾರಿ ಆರಂಭವಾದ ಬಳಿಕ ಈ ಆದ್ಯತಾ ಪಥವೂ ಕಣ್ಮರೆಯಾಗಿದೆ. ಆರು ಪಥಗಳಲ್ಲಿ ಎರಡು ಪಥಗಳನ್ನು ಕಾಮಗಾರಿಗೆ ಬಳಕೆ ಮಾಡಿಕೊಳ್ಳಲಾಗಿದ್ದು, ಬ್ಯಾರಿಕೇಡ್‌ಗಳನ್ನು ಅಳವಡಿಸಿಕೊಳ್ಳಲಾಗಿದೆ. ಉಳಿದ ನಾಲ್ಕು ಪಥದಲ್ಲಿ ಬಸ್ ಆದ್ಯತಾ ಪಥಕ್ಕೆ ಬಳಸಿಕೊಂಡರೆ, ಬೇರೆ ವಾಹನಗಳ ಸಂಚಾರಕ್ಕೆ ತೊಂದರೆ ಆಗಲಿದೆ ಎಂಬ ಕಾರಣಕ್ಕೆ ತೆರವುಗೊಳಿಸಲಾಗಿದೆ.

‘ಬಸ್ ಆದ್ಯತಾ ಪಥ ಉಳಿಸಿಕೊಂಡು, ಬಸ್‌ಗಳ ಸಂಖ್ಯೆಯನ್ನು ಹೆಚ್ಚಿಸಿದ್ದರೆ ಬಸ್‌ನಲ್ಲಿ ಪ್ರಯಾಣಿಸಲು ಜನ ಆಸಕ್ತಿ ವಹಿಸುತ್ತಿದ್ದರು. ಆಗ ಖಾಸಗಿ ವಾಹನಗಳ ಸಂಖ್ಯೆ ಕಡಿಮೆಯಾಗುತ್ತಿತ್ತು. ಈಗ ಬಸ್ ಪಥ ಇಲ್ಲದಿರುವುದರಿಂದ ಖಾಸಗಿ ವಾಹನಗಳ ಸಂಖ್ಯೆ ಹೆಚ್ಚಾಗಿದೆ’ ಎಂಬುದು ನಾಗರಿಕ ಸಂಘಟನೆಗಳ ಅಭಿಪ್ರಾಯ.

#### ಆದ್ಯತಾ ಪಥಕ್ಕೆ ಗುರುತಿಸಿದ್ದ ರಸ್ತೆಗಳು

- ಹೊರವರ್ತುಲ ರಸ್ತೆ
- ಸರ್ಜಾಪುರ ರಸ್ತೆ
- ತುಮಕೂರು ರಸ್ತೆ
- ಹಳೆ ಮದ್ರಾಸ್ ರಸ್ತೆ
- ಬಳ್ಳಾರಿ ರಸ್ತೆ
- ಹಳೆ ವಿಮಾನನಿಲ್ದಾಣ ರಸ್ತೆ
- ಬನ್ನೇರುಘಟ್ಟ ರಸ್ತೆ
- ಕನಕಪುರ ರಸ್ತೆ
- ಮಾಗಡಿ ರಸ್ತೆ
- ಪಶ್ಚಿಮಕಾರ್ಡ್ ರಸ್ತೆ
- ಹೊಸೂರು ರಸ್ತೆ
- ಮೈಸೂರು ರಸ್ತೆ

ಹೊರ ವರ್ತುಲ ರಸ್ತೆಯಲ್ಲಿನ ಸಂಚಾರ ದಟ್ಟಣೆ

#### ‘ಒಂದು ವಾರ ಪ್ರಯೋಗ ಮಾಡಲಿ’

‘ಸಂಚಾರ ದಟ್ಟಣೆ ಕಡಿಮೆ ಮಾಡಲು ಬಸ್ ಆದ್ಯತಾ ಪಥ ಉಪಯೋಗ ಆಗುವುದರಲ್ಲಿ ಅನುಮಾನ ಇಲ್ಲ. ಸರ್ಕಾರ ಪ್ರಾಯೋಗಿಕವಾಗಿ ಒಂದು ವಾರ ಅನುಷ್ಠಾನಕ್ಕೆ ತಂದು ಪರಿಶೀಲಿಸಲಿ’ ಎಂದು ಐಐಎಸ್‌ಸಿ ಪ್ರೊಫೆಸರ್ ಆಶಿಶ್ ವರ್ಮಾ ಸಲಹೆ ನೀಡಿದರು.

‘ಸರ್ಕಾರಕ್ಕೆ ಹಲವು ಬಾರಿ ಈ ವಿಷಯ ಮನವರಿಕೆ ಮಾಡಿಸಿದ್ದೇವೆ. ಸಂಬಂಧಪಟ್ಟವರು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕಿದೆ’ ಎಂದರು.

#### ಸಂಚಾರ ದಟ್ಟಣೆಗೆ ಆದ್ಯತಾ ಪಥವೇ ಪರಿಹಾರ

ಶ್ರೀನಿವಾಸ್ ಅಲವಿಲ್ಲಿ

‘ನಗರದಲ್ಲಿ ಹೆಚ್ಚುತ್ತಿರುವ ಸಂಚಾರ ದಟ್ಟಣೆ ಕಡಿಮೆ ಮಾಡಲು ಬಸ್ ಆದ್ಯತಾ ಪಥವೊಂದೇ ಪರಿಹಾರ’ ಎಂದು ಜನಾಗ್ರಹ ಸಂಘಟನೆಯ ಶ್ರೀನಿವಾಸ್ ಅಲವಿಲ್ಲಿ ಹೇಳಿದರು.

‘ಬಸ್‌ನಲ್ಲಿ ಪ್ರಯಾಣ ಮಾಡಿದರೆ ಸಮಯಕ್ಕೆ ಸರಿಯಾಗಿ ಗುರಿ ತಲುಪುವ ವಿಶ್ವಾಸ ಬಂದರೆ ಖಾಸಗಿ ವಾಹನಗಳ ಬದಲು ಬಸ್‌ನಲ್ಲೇ ಜನ ಪ್ರಯಾಣ ಮಾಡುತ್ತಾರೆ. ಈ ರೀತಿಯ ವಿಶ್ವಾಸ ಮೂಡಿಸುವ ಕೆಲಸ ಆಗಬೇಕಿದೆ’ ಎಂದರು.

‘ಬಸ್ ಪಥದಲ್ಲಿ ಹೆಚ್ಚಿನ ಬಸ್‌ಗಳು ಕಾರ್ಯಾಚರಣೆ ಮಾಡಬೇಕು. 12 ರಸ್ತೆಗಳು ಮಾತ್ರವಲ್ಲ ಅಗತ್ಯ ಇರುವ ಎಲ್ಲಾ ಕಡೆಯೂ ಆದ್ಯತಾ ಪಥ ಇರುವುದು ಒಳ್ಳೆಯದು. ಹೊರ ವರ್ತುಲ ರಸ್ತೆಯಲ್ಲಿ ಮೆಟ್ರೊ ರೈಲು ಕಾಮಗಾರಿಗಾಗಿ ಬಸ್ ಪಥವನ್ನು ತೆರವುಗೊಳಿಸಲಾಗಿದೆ. ಉಳಿಸಿಕೊಂಡಿದ್ದರೆ ಸಂಚಾರ ದಟ್ಟಣೆ ಕಡಿಮೆ ಮಾಡಬಹುದಿತ್ತು’ ಎಂದು ಅಭಿಪ್ರಾಯಪಟ್ಟರು.

‘ಹಣ ಉಳಿತಾಯದ ಬಗ್ಗೆ ಜನ ಹೆಚ್ಚು ಯೋಚಿಸುತ್ತಾರೆ. ದ್ವಿಚಕ್ರ ವಾಹನಕ್ಕಿಂತ ಕಡಿಮೆ ಖರ್ಚಿನಲ್ಲಿ ಬಸ್‌ನಲ್ಲಿ ಪ್ರಯಾಣ ಮಾಡಬಹುದು ಎಂಬುದನ್ನೂ ಅರ್ಥ ಮಾಡಿಸಬೇಕಿದೆ. ಪ್ರಯಾಣ ದರ ಹೊರೆ ಎನಿಸದಂತೆ ನೋಡಿಕೊಳ್ಳಬೇಕು’ ಎಂದರು.

---

# ಬೆಂಗಳೂರು–ಮೈಸೂರು ಹೆದ್ದಾರಿ ಆಗಸ್ಟ್ 15ಕ್ಕೆ ಭಾಗಶಃ ಮುಕ್ತ

ಪ್ರಜಾವಾಣಿ ವಾರ್ತೆ

**ರಾಮನಗರ:** ಬೆಂಗಳೂರು–ಮೈಸೂರು ನಡುವಿನ ದಶಪಥ ರಾಷ್ಟ್ರೀಯ ಹೆದ್ದಾರಿಯು ಆಗಸ್ಟ್ 15ರಿಂದ ಪ್ರಯಾಣಿಕರ ಬಳಕೆಗೆ ಭಾಗಶಃ ಮುಕ್ತವಾಗಲಿದೆ.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅಧ್ಯಕ್ಷತೆಯಲ್ಲಿ ಸೋಮವಾರ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕ ಶ್ರೀಧರ್ ಈ ಮಾಹಿತಿ ನೀಡಿದರು.

ನಿಡಘಟ್ಟದಿಂದ ಬೆಂಗಳೂರಿನ ಕ್ರೈಸ್ಟ್ ಕಾಲೇಜುವರೆಗಿನ ಸುಮಾರು 51 ಕಿ.ಮೀ. ಉದ್ದದ ಹೆದ್ದಾರಿಯ ಒಂದು ಬದಿಯನ್ನು (ಒನ್ ವೇ) ಅಂದು ಸಂಚಾರಕ್ಕೆ ಮುಕ್ತಗೊಳಿಸಲಾಗುವುದು ಎಂದರು.

ಸೆಪ್ಟೆಂಬರ್ 2ನೇ ವಾರದೊಳಗೆ ಇನ್ನೊಂದು ಬದಿಯ ಸಂಚಾರಕ್ಕೂ ಅವಕಾಶ ನೀಡಲಾಗುವುದು. ಸೆ. 15ರ ಒಳಗೆ ಬೆಂಗಳೂರಿನ ಮೊದಲ ನಾಲ್ಕು ಕಿ.ಮೀ ಹೆದ್ದಾರಿ ಕಾಮಗಾರಿ ಹೊರತುಪಡಿಸಿ ಉಳಿದ 51 ಕಿ.ಮೀ. ಹೆದ್ದಾರಿಯೂ ಸಂಚಾರಕ್ಕೆ ಮುಕ್ತವಾಗಲಿದೆ. ಮೊದಲಿಗೆ ಆರು ಪಥಗಳ ಎಕ್ಸ್‌ಪ್ರೆಸ್ ಹೈವೆ ಹಾಗೂ ನಂತರದಲ್ಲಿ ಸರ್ವೀಸ್ ರಸ್ತೆಗಳು ಪ್ರಯಾಣಿಕರಿಗೆ ಮುಕ್ತವಾಗಲಿವೆ ಎಂದು ಮಾಹಿತಿ ನೀಡಿದರು.

ಹೆದ್ದಾರಿ ಪ್ರಯಾಣಕ್ಕೆ ಅವಕಾಶ ನೀಡುವ ಮುನ್ನ ಅದರ ಸುರಕ್ಷತೆಯ ಪರೀಕ್ಷೆ ನಡೆಸಲಾಗುವುದು. ಇನ್ನೆರಡು ದಿನದಲ್ಲಿ ದೆಹಲಿಯ ಅಧಿಕಾರಿಗಳ ತಂಡವು ಹೆದ್ದಾರಿ ಸುರಕ್ಷತೆ ಕುರಿತು ಪರಿಶೀಲನೆ ನಡೆಸಲಿದೆ. ಹೆದ್ದಾರಿ ಮೊದಲ ಹಂತವು ಸಂಚಾರಕ್ಕೆ ಮುಕ್ತವಾದರೂ ಪ್ರಯಾಣಿಕರಿಗೆ ಸದ್ಯ ಟೋಲ್ ಹೊರೆ ಬೀಳದು. ಎರಡೂ ಹಂತದ ಕಾಮಗಾರಿಗಳು ಮುಗಿದ ಬಳಿಕವಷ್ಟೇ ಟೋಲ್ ಸಂಗ್ರಹ ಆರಂಭಿಸುವುದಾಗಿ ಅಧಿಕಾರಿಗಳು ವಿವರಿಸಿದರು.

**ಸಚಿವರಿಂದ ತರಾಟೆ:** ಇದಕ್ಕೂ ಮುನ್ನ ಸಚಿವ ಅಶ್ವತ್ಥನಾರಾಯಣ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

‘ಕಾಮಗಾರಿಯನ್ನು ವೈಜ್ಞಾನಿಕವಾಗಿ ನಿರ್ವಹಿಸಿಲ್ಲ. ಅಂಡರ್‌ಪಾಸ್‌ಗಳಲ್ಲಿ ನೀರು ನಿಲ್ಲುತ್ತಿದೆ. ಬೈಪಾಸ್ ಕಾಮಗಾರಿಗಳ ಗುಣಮಟ್ಟ ಸಹ ತೃಪ್ತಿಕರವಾಗಿಲ್ಲ. ಈ ಕುರಿತು ಸಾರ್ವಜನಿಕರಿಂದ ಸಾಕಷ್ಟು ದೂರುಗಳು ಬರುತ್ತಿವೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

### ನಗರದಲ್ಲಿ ಇಂದು

**ಮೇಕ್ ಇನ್ ಇಂಡಿಯಾ ಜಾಗೃತಿ ಜಾಥಾ, ಅತಿಥಿ:** ಡಾ.ವೀಣಾ ಕೆ.ಎನ್., ಆಯೋಜನೆ: ದಯಾನಂದ ಸಾಗರ ಸಂಸ್ಥೆ, ಸ್ಥಳ: ಕಗ್ಗಲಿಪುರ ವೃತ್ತ, ಬೆಳಿಗ್ಗೆ 9

**ವಚನ ಶ್ರಾವಣದ 12ನೇ ದಿನದ ಕಾರ್ಯಕ್ರಮ, ಗಾಯಕ ಸಮರ್ಥ್, ಮಹರ್ಶ್, ಪೂರ್ಣಿಕಾ ಆರಾಧ್ಯ, ಉಪನ್ಯಾಸ:** ವಚನಜ್ಯೋತಿ ಬಳಗದ ಅಧ್ಯಕ್ಷ ಎಸ್. ಪಿನಾಕಪಾಣಿ, ಅಧ್ಯಕ್ಷತೆ: ಜಾಗತಿಕ ಲಿಂಗಾಯತ ಮಹಾಸಭಾದ ಅಧ್ಯಕ್ಷ ಪ್ರೊ. ವೀರಭದ್ರಯ್ಯ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಪದ್ಮನಾಭನಗರದ ಶ್ವೇತ ಶಿವಕುಮಾರಸ್ವಾಮಿ ಅವರ ಕಚೇರಿ, ಸಂಜೆ 5

**ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್ತು ವತಿಯಿಂದ ಧಾರ್ಮಿಕ–ಸಾಂಸ್ಕೃತಿಕ ಕಾರ್ಯಕ್ರಮ**, ಪವಿತ್ರ ಗಾನ ವೃಂದದವರಿಂದ ಭಜನೆ, ಶ್ರೀ ಖೇಡಾ ವೇದವ್ಯಾಸಾಚಾರ್ಯರಿಂದ ಪ್ರವಚನ, ಸಂಜೆ 6

**ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಅವರ 20ನೇ ವರ್ಷದ ಕಾರ್ಯಕ್ರಮದ ಅಂಗವಾಗಿ ಮನೆ–ಮನೆಗಳಲ್ಲಿ ಶಿವಪೂಜೆ, ವಚನ ಪ್ರವಚನ:** ಸ್ಥಳ: ಎಚ್.ಎಂ.ವಿನಾಯಕ ಅವರ ನಿವಾಸ, ಕೆಎನ್‌ಎಸ್ ಅನಿರವನ್ ಲೇಔಟ್, ಕನ್ನಹಳ್ಳಿ, ರಾತ್ರಿ 7.30

**ರಾಘವೇಂದ್ರ ಸಾರ್ವಭೌಮರ 351ನೇ ಆರಾಧನೆ ಹಾಗೂ ಶ್ರೀಕೃಷ್ಣ ಜಯಂತಿ ಉತ್ಸವ:** ಪ್ರವಚನ: ಕಲ್ಯಾ ಶ್ರೀಕಾಂತಾಚಾರ್, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, ಸುಧೀಂದ್ರನಗರ, ಮಲ್ಲೇಶ್ವರ, ಸಂಜೆ 6.30

**ಪೌರಾಣಿಕ ನಾಟಕೋತ್ಸವ ಸಮಾರೋಪ ಸಮಾರಂಭ:** ವೀರ ಬಬ್ರುವಾಹನ ನಾಟಕ, ಅಧ್ಯಕ್ಷತೆ ಬಿ.ವಿ. ರಾಜಾರಾಂ, ಅತಿಥಿಗಳು: ರಾಜು ಮಳವಳ್ಳಿ, ಸಿ.ಕೆ. ರಾಮೇಗೌಡ, ಎಸ್‌ಎಲ್‌ಎನ್ ಸ್ವಾಮಿ, ಆಯೋಜನೆ: ಕನ್ನಡ ರಂಗಸಂಗೀತ ಪರಿಷತ್ತು, ಸ್ಥಳ: ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 11

### ಸ್ವಾತಂತ್ರ್ಯದ ಅಮೃತ ಮಹೋತ್ಸವಕ್ಕೆ ಸಿದ್ಧತೆ

**ಬೆಂಗಳೂರು:** ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಆಯೋಜಿಸುವ ಸಂಬಂಧ ಮೂರನೇ ಸಭೆ ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿ ಸೋಮವಾರ ನಡೆಯಿತು.

‘ಅಮೃತ ಮಹೋತ್ಸವದ ಅಂಗವಾಗಿ ಮೂರು ಉಪ ಸಮಿತಿಯನ್ನು ರಚಿಸಲಾಗಿದೆ. ಪೊಲೀಸ್ ಆಯುಕ್ತರು, ಜಿಲ್ಲಾಧಿಕಾರಿ, ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ನೇತೃತ್ವದಲ್ಲಿ ಸಮಿತಿಗಳಿವೆ. ಯಾವ ರೀತಿಯಲ್ಲಿ ಕಾರ್ಯಕ್ರಮ ಆಯೋಜಿಸಬೇಕು, ಅದಕ್ಕೆ ಬೇಕಾದ ಕ್ರಮಗಳ ಬಗ್ಗೆ ಚರ್ಚೆ ನಡೆಸಲಾಯಿತು’ ಎಂದು ಬಿಬಿಎಂಪಿ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

‘ಮನೆ ಮನೆಯಲ್ಲೂ ತ್ರಿವರ್ಣ ಧ್ವಜ’ ಅಭಿಯಾನದ ಅಂಗವಾಗಿ ಬಿಬಿಎಂಪಿ ವ್ಯಾಪ್ತಿಯ ಎಲ್ಲ ವಿಧಾನಸಭೆ ಕ್ಷೇತ್ರಗಳಲ್ಲೂ ಕಾರ್ಯಕ್ರಮ ಆಯೋಜಿಸಲು ವಲಯ ಆಯುಕ್ತರಿಗೆ ಸೂಚಿಸಲಾಗಿದೆ. ಇದಕ್ಕಾಗಿ ಸಿದ್ಧತೆ ನಡೆದಿದೆ’ ಎಂದರು.

### ಈದ್ಗಾ ಮೈದಾನ ಕಾರ್ಯಕ್ರಮಕ್ಕೆ ಅನುಮತಿ ಕಡ್ಡಾಯ: ಅಶೋಕ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಚಾಮರಾಜಪೇಟೆಯ ಮೈದಾನವು (ಈದ್ಗಾ ಮೈದಾನ) ಕಂದಾಯ ಇಲಾಖೆಗೆ ಸೇರಿದ್ದು, ಅಲ್ಲಿ ಯಾವುದೇ ಕಾರ್ಯಕ್ರಮ ನಡೆಸಬೇಕಿದ್ದರೂ ಇಲಾಖೆಯ ಅನುಮತಿ ಪಡೆದುಕೊಳ್ಳಬೇಕು’ ಎಂದು ಕಂದಾಯ ಸಚಿವ ಆರ್.ಅಶೋಕ ಹೇಳಿದರು.

‘ಈ ಮೈದಾನಕ್ಕೆ ಸಂಬಂಧಿಸಿದಂತೆ ವಿವಾದ ಇರುವುದರಿಂದ ಅಲ್ಲಿ ಧ್ವಜಾರೋಹಣ, ಗಣೇಶೋತ್ಸವ, ನಮಾಜ್, ಪ್ರಾರ್ಥನೆ ಹೀಗೆ ಏನೇ ಮಾಡುವುದಿದ್ದರೂ ಅನುಮತಿಗಾಗಿ ಕಂದಾಯ ಇಲಾಖೆಗೆ ಮನವಿ ಸಲ್ಲಿಸಬೇಕು’ ಎಂದು ಅವರು ಸುದ್ದಿಗೋಷ್ಠಿಯಲ್ಲಿ ಸೋಮವಾರ ತಿಳಿಸಿದರು.

‘ಮನವಿ ಬಂದರೆ ಇಲಾಖೆ ತೀರ್ಮಾನ ತೆಗೆದುಕೊಳ್ಳುತ್ತದೆ. ಈವರೆಗೆ ಯಾರೂ ಮನವಿ ಸಲ್ಲಿಸಿಲ್ಲ. ಈ ಹಿಂದೆ ಬಿಬಿಎಂಪಿಯಿಂದ ಅನುಮತಿ ಪಡೆದುಕೊಳ್ಳುತ್ತಿದ್ದರು’ ಎಂದರು.

‘ಈ ಮೈದಾನ ನಮ್ಮದೇ ಎಂದು ಯಾರೂ ಹೇಳಿಕೊಳ್ಳಲು ಸಾಧ್ಯವಿಲ್ಲ. ಮೈದಾನ ಸರ್ಕಾರಕ್ಕೆ ಸೇರಿದ್ದು. ಯಾವುದೇ ಮನವಿಯನ್ನು ಕಾನೂನು ಪ್ರಕಾರವೇ ಪರಿಶೀಲನೆ ನಡೆಸಲಾಗುತ್ತದೆ. ಯಾರೂ ಯಾವುದೇ ರೀತಿಯ ಗೊಂದಲ ಸೃಷ್ಟಿಸುವುದು ಬೇಡ. ಈ ಸರ್ಕಾರ ಎಲ್ಲರ ಸರ್ಕಾರ’ ಎಂದು ಹೇಳಿದರು.

‘ಈ ಜಾಗ ತಮ್ಮದೆಂದು ಹೇಳುವವರು ದಾಖಲೆಗಳನ್ನು ಸಲ್ಲಿಸಬೇಕು ಎಂದು ಬಿಬಿಎಂಪಿ ತಿಳಿಸಿತ್ತು. ಸೂಕ್ತ ದಾಖಲೆಗಳನ್ನು ಯಾರೂ ಸಲ್ಲಿಸಿಲ್ಲ. ಆದರೆ, ಕಂದಾಯ ಇಲಾಖೆಗೆ ಸೇರಿದ್ದು ಎನ್ನುವುದಕ್ಕೆ ನಮ್ಮ ಬಳಿ ದಾಖಲೆಗಳಿವೆ. ಈವರೆಗೂ ಇದು ಬಿಬಿಎಂಪಿಗೆ ಸೇರಿದ್ದು ಎಂದು ಭಾವಿಸಲಾಗಿತ್ತು. ನ್ಯಾಯಾಲಯದ ಸೂಚನೆಯಂತೆ ದಾಖಲೆಗಳ ಪರಿಶೀಲನೆ ನಡೆಸಿದ ನಂತರ ಕಂದಾಯ ಇಲಾಖೆಗೆ ಸೇರಿದ್ದು ಎಂಬುದು ಖಚಿತವಾಗಿದೆ’ ಎಂದು ಸಚಿವರು ಹೇಳಿದರು.

### ‘ಗೂಂಡಾಗಿರಿ ಮಾಡಿದವರು ಯಾರು’

**ಬೆಂಗಳೂರು:** ‘ಹಿಜಾಬ್, ಹಲಾಲ್ ಹೆಸರಿನಲ್ಲಿ ಸಂಘ ಪರಿವಾರದ ಕಾರ್ಯಕರ್ತರು ನಡೆಸಿದ ಗೂಂಡಾಗಿರಿಯನ್ನು ನಿಯಂತ್ರಿಸಲು ವಿಫಲರಾದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬಿಬಿಎಂಪಿ ಮೀಸಲಾತಿ ನಿಗದಿಯಲ್ಲಿನ ಅನ್ಯಾಯದ ವಿರುದ್ಧ ಕಾಂಗ್ರೆಸ್ ನಡೆಸಿದ ಪ್ರತಿಭಟನೆಯನ್ನು ಗೂಂಡಾಗಿರಿ ಎನ್ನುವುದು ಸರಿಯೆ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಸೋಮವಾರ ಪ್ರಶ್ನಿಸಿದರು.

ಇದೇ 15ರಂದು ಕಾಂಗ್ರೆಸ್ ವತಿಯಿಂದ ಹಮ್ಮಿಕೊಂಡಿರುವ ಸಮಾವೇಶ ನಡೆಯಲಿರುವ ಬಸವನಗುಡಿ ನ್ಯಾಷನಲ್ ಕಾಲೇಜು ಮೈದಾನಕ್ಕೆ ಭೇಟಿ ನೀಡಿ ಸಿದ್ಧತೆಗಳನ್ನು ಪರಿಶೀಲಿಸಿದ ಬಳಿಕ ಮಾತನಾಡಿದ ಅವರು, ‘ಮೀಸಲಾತಿ ನಿಗದಿಯಲ್ಲಿ ಆಗಿರುವ ಅನ್ಯಾಯವನ್ನು ಪ್ರಶ್ನಿಸಿದ್ದೇವೆ. ಅದನ್ನು ಗೂಂಡಾಗಿರಿ ಎನ್ನಬಹುದೆ? ಮುಖ್ಯಮಂತ್ರಿ ಹುದ್ದೆಯಲ್ಲಿರುವವರು ಆಡುವ ಮಾತುಗಳಿಗೆ ತೂಕ ಇರಬೇಕು’ ಎಂದರು.

ಬಿಬಿಎಂಪಿ ವಾರ್ಡ್ ಮರು ವಿಂಗಡಣೆ ಪ್ರಶ್ನಿಸಿ 3,000 ಆಕ್ಷೇಪಣೆಗಳು ಸಲ್ಲಿಕೆಯಾಗಿದ್ದವು. ಎಲ್ಲವನ್ನೂ ಮೂಲೆಗೆ ತಳ್ಳಿದ ನಗರಾಭಿವೃದ್ಧಿ ಇಲಾಖೆ ಆರ್‌ಎಸ್‌ಎಸ್, ಬಿಜೆಪಿ ಕೈಗೊಂಬೆಯಂತೆ ವರ್ತಿಸಿದೆ. ಮೀಸಲಾತಿ ನಿಗದಿಯಲ್ಲೂ ಆರ್‌ಎಸ್‌ಎಸ್, ಬಿಜೆಪಿ ಶಾಸಕರು, ಸಂಸದರು ನೀಡಿದ ಪಟ್ಟಿಯನ್ನೇ ಒಪ್ಪಿಕೊಂಡಿದೆ. ಅದನ್ನು ಪ್ರತಿಭಟಿಸಿ ಇಲಾಖೆಯ ಕಚೇರಿಯ ನಾಮಫಲಕಕ್ಕೆ ‘ಆರ್‌ಎಸ್‌ಎಸ್ ಕಚೇರಿ’ ಎಂದು ಹಾಕಲಾಗಿತ್ತು. ಇದರಲ್ಲಿ ತಪ್ಪೇನಿದೆ ಎಂದರು.

ಕಾಂಡಕೋಶ ದಾನಕ್ಕೆ ಸಂಬಂಧಿಸಿದಂತೆ ಹೆಸರು ನೋಂದಣಿ ಪ್ರಕ್ರಿಯೆ ನಡೆಯಿತು

## ಕಾಂಡಕೋಶ ದಾನಕ್ಕೆ ಹೆಸರು ನೋಂದಣಿ

**ಬೆಂಗಳೂರು:** ಡಿಕೆಎಂಎಸ್, ಬಿಎಂಎಸ್‌ಟಿ ಫೌಂಡೇಶನ್ ಇಂಡಿಯಾ ವತಿಯಿಂದ ರಕ್ತದ ಕಾಂಡಕೋಶ ದಾನಿಗಳ ನೋಂದಣಿ ಅಭಿಯಾನ ನಗರದಲ್ಲಿ ನಡೆಯಿತು.

ನಟ ರೋಬೊ ಗಣೇಶ್ ನೇತೃತ್ವದಲ್ಲಿ ಹಲವು ಕಲಾವಿದರು ಹಾಗೂ ಯುವಜನರು ಕಾಂಡಕೋಶ ದಾನಿಗಳಾಗಿ ಹೆಸರು ನೋಂದಾಯಿಸಿಕೊಂಡರು.

ಭಾರತದಲ್ಲಿ ಪ್ರತಿ 5 ನಿಮಿಷಗಳಿಗೆ ಒಬ್ಬರಂತೆ ರಕ್ತದ ಕ್ಯಾನ್ಸರ್‌ನಿಂದ ಬಳಲುತ್ತಿದ್ದಾರೆ ಎಂಬುದು ಆಘಾತಕಾರಿ ಸಂಗತಿ. ರೋಗಿಗೆ ಸರಿಹೊಂದುವ ದಾನಿಯಿಂದ ರಕ್ತದ ಕಾಂಡಕೋಶ ಕಸಿ ಮಾಡಿದರೆ ಮಾತ್ರ ಅಂತಹ ರೋಗಿಗಳು ಬದುಕಿ ಉಳಿಯುವ ಅವಕಾಶ ಇರುತ್ತದೆ ಎಂದು ಆಯೋಜಕರು ತಿಳಿಸಿದ್ದಾರೆ.

ಫೌಂಡೇಶನ್ ಇಂಡಿಯಾದ ಸಿಇಒ ಪ್ಯಾಟ್ರಿಕ್ ಪಾಲ್ ಮಾತನಾಡಿ, ‘ಅನೇಕ ರೋಗಿಗಳಿಗೆ ಹೊಂದಾಣಿಕೆಯಾಗುವ ರಕ್ತದ ಕಾಂಡಕೋಶ ದಾನಿಗಾಗಿ ಹುಡುಕಾಟ ಕಷ್ಟಕರವಾಗಿದೆ. ಬದ್ಧತೆಯಿರುವ ದಾನಿಗಳನ್ನು ಹೆಚ್ಚು ಸಂಖ್ಯೆಯಲ್ಲಿ ನೋಂದಾಯಿಸುವುದು ನಮ್ಮ ಆದ್ಯತೆ. ಫೌಂಡೇಶನ್ ಈವರೆಗೆ 70 ಸಾವಿರ ಸಂಭಾವ್ಯ ದಾನಿಗಳನ್ನು ನೋಂದಾಯಿಸಿದೆ’ ಎಂದರು.

ವೈದ್ಯ ಗೋವಿಂದ್ ಎರಿಯಾಟ್ ನಾಯರ್ ಹಾಜರಿದ್ದರು.

### 7.5 ಲಕ್ಷ ರಾಷ್ಟ್ರಧ್ವಜ ಮಾರಾಟದ ಗುರಿ

**ಬೆಂಗಳೂರು:** ‘ಹರ್ ಘರ್ ತಿರಂಗಾ’ ಅಭಿಯಾನದ ಅಂಗವಾಗಿ ಅಂಚೆ ಕಚೇರಿಗಳ ಮೂಲಕ ಅಂದಾಜು 7.5 ಲಕ್ಷ ರಾಷ್ಟ್ರಧ್ವಜ ಮಾರಾಟ ಮಾಡುವ ಗುರಿ ಇದೆ’ ಎಂದು ಕರ್ನಾಟಕ ಅಂಚೆ ವೃತ್ತದ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಎಸ್.ರಾಜೇಂದ್ರಕುಮಾರ್ ಮಾಹಿತಿ ನೀಡಿದರು.

‘ಈ ಅಭಿಯಾನವು ಭಾರತೀಯರಲ್ಲಿ ದೇಶಾಭಿಮಾನ ಮೂಡಿಸುವ ವಿನೂತನ ಕಾರ್ಯಕ್ರಮ ಆಗಿದೆ. ಈ ಅಭಿಯಾನದಲ್ಲಿ ಪ್ರತಿಯೊಬ್ಬರೂ ಪಾಲ್ಗೊಂಡು ದೇಶಾಭಿಮಾನ ತೋರಬೇಕು. ಪ್ರತಿ ನಾಗರಿಕರಿಗೂ ಧ್ವಜ ಸಿಗಬೇಕು ಎಂಬ ಉದ್ದೇಶದಿಂದ ಅಂಚೆ ಕಚೇರಿ ಈ ಕಾರ್ಯಕ್ರಮ ಹಮ್ಮಿಕೊಂಡಿದೆ’ ಎಂದು ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ಹೇಳಿದರು.

‘ಕರ್ನಾಟಕ ಅಂಚೆ ವೃತ್ತದ ಮೂಲಕ 9,500ಕ್ಕೂ ಹೆಚ್ಚು ಅಂಚೆ ಕಚೇರಿಗಳ ಮೂಲಕ ಇದುವರೆಗೆ 2.5 ಲಕ್ಷಕ್ಕೂ ಹೆಚ್ಚು ರಾಷ್ಟ್ರಧ್ವಜ ಮಾರಾಟ ಮಾಡಲಾಗಿದೆ’ ಎಂದು ತಿಳಿಸಿದರು.

‘ರಾಜ್ಯದ 97 ಅಂಚೆ ಕಚೇರಿಗಳಲ್ಲಿ ಸೆಲ್ಫಿ ಪಾಯಿಂಟ್ ಸ್ಥಾಪಿಸಲಾಗಿದೆ. ಹ್ಯಾಶ್‌ಟ್ಯಾಗ್‌ಗಳೊಂದಿಗೆ ಇಂಡಿಯಾ ಪೋಸ್ಟ್ ಮತ್ತು ಅಮೃತ ಮಹೋತ್ಸವ ಹ್ಯಾಂಡಲ್‌ಗಳನ್ನು ಟ್ಯಾಗ್ ಮಾಡುವ ಮೂಲಕ ಸೆಲ್ಫಿ ಕ್ಲಿಕ್ಕಿಸಿ ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಳ್ಳಬಹುದು’ ಎಂದು ಮಾಹಿತಿ ನೀಡಿದರು.

ರಾಜ್ಯದಾದ್ಯಂತ ಅಂಚೆ ವಿಭಾಗಗಳಿಂದ 19 ಸ್ಥಳಗಳಲ್ಲಿ ಪ್ರಭಾತ್ ಫೇರಿ ಆಯೋಜಿಸಲಾಗಿದೆ ಎಂದರು.

#### ಇದೇ 15ರಂದು ಕಾಂಗ್ರೆಸ್ ಪಕ್ಷದ ವತಿಯಿಂದ ಹಮ್ಮಿಕೊಂಡಿರುವ ಕಾರ್ಯಕ್ರಮ

## ಸ್ವಾತಂತ್ರ್ಯ ನಡಿಗೆಗೆ ಸಿದ್ಧತೆ: ಡಿಕೆಶಿ ಸರಣಿ ಸಭೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸ್ವಾತಂತ್ರ್ಯದ ಅಮೃತ ಮಹೋತ್ಸವದ ಪ್ರಯುಕ್ತ ಇದೇ 15ರಂದು ಕಾಂಗ್ರೆಸ್ ಪಕ್ಷದ ವತಿಯಿಂದ ಹಮ್ಮಿಕೊಂಡಿರುವ ‘ಸ್ವಾತಂತ್ರ್ಯ ನಡಿಗೆ’ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವುದಕ್ಕಾಗಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನಗರದ ನಾಲ್ಕು ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಪಕ್ಷದ ಮುಖಂಡರು, ಕಾರ್ಯಕರ್ತರ ಸರಣಿ ಸಭೆಗಳನ್ನು ಸೋಮವಾರ ನಡೆಸಿದರು.

ರಾಜಾಜಿನಗರ, ಮಹಾಲಕ್ಷ್ಮಿ ಬಡಾವಣೆ, ದಾಸರಹಳ್ಳಿ ಮತ್ತು ಯಲಹಂಕ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಸಭೆ ನಡೆಸಿದ ಅವರು, ಸ್ವಾತಂತ್ರ್ಯ ನಡಿಗೆಯ ಮೂಲಕವೇ ಪಕ್ಷ ಸಂಘಟನೆ ಚುರುಕುಗೊಳಿಸುವಂತೆ ಸೂಚನೆ ನೀಡಿದರು. ಬಿಜೆಪಿ ಹಾಗೂ ಜೆಡಿಎಸ್ ಶಾಸಕರಿರುವ ಕ್ಷೇತ್ರಗಳಲ್ಲೇ ಇಡೀ ದಿನ ಸುತ್ತಾಟ ನಡೆಸಿದ ಅವರು, ಕಾಂಗ್ರೆಸ್ ಕಾರ್ಯಕರ್ತರಿಗೆ ಹುಮ್ಮಸ್ಸು ತುಂಬಲು ಯತ್ನಿಸಿದರು.

ರಾಜಾಜಿನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಸಭೆಯಲ್ಲಿ ಮಾಜಿ ಮೇಯರ್ ಜಿ. ಪದ್ಮಾವತಿ, ಪಾಲಿಕೆ ಮಾಜಿ ಸದಸ್ಯ ಕೃಷ್ಣಮೂರ್ತಿ ಸೇರಿ ಹಲವು ಮುಖಂಡರು ಇದ್ದರು. ಮಹಾಲಕ್ಷ್ಮಿ ಬಡಾವಣೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಸಭೆಯಲ್ಲಿ ವಿಧಾನ ಪರಿಷತ್ ಸದಸ್ಯ ಮಂಜುನಾಥ ಭಂಡಾರಿ, ಮುಖಂಡ ಎಚ್.ಎಂ. ರೇವಣ್ಣ, ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ರಾಜಕುಮಾರ್, ಪಾಲಿಕೆ ಮಾಜಿ ಸದಸ್ಯರಾದ ಎಂ. ಶಿವರಾಜು, ಎಸ್. ಕೇಶವಮೂರ್ತಿ ಅವರೂ ಪಾಲ್ಗೊಂಡಿದ್ದರು.

ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಸಭೆಯಲ್ಲಿ ಸ್ಥಳೀಯ ಮುಖಂಡರಾದ ಪಿ.ಎನ್. ಕೃಷ್ಣಮೂರ್ತಿ, ನಾಗಲಕ್ಷ್ಮಿ ಚೌಧರಿ, ಗೀತಾ ಶಿವರಾಮು, ಕೆ.ಆರ್. ಮಂಜುನಾಥ್ ಇದ್ದರು. ಯಲಹಂಕ ಕ್ಷೇತ್ರದ ವ್ಯಾಪ್ತಿಯ ಸಭೆಯಲ್ಲಿ ಹಲವು ಮಂದಿ ಸ್ಥಳೀಯ ಮುಖಂಡರು ಪಾಲ್ಗೊಂಡಿದ್ದರು.

**ಶಕ್ತಿ ತುಂಬುವ ಯತ್ನ:** ರಾಜಾಜಿನಗರ ಕ್ಷೇತ್ರದಲ್ಲಿನ ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಶಿವಕುಮಾರ್, ‘ಕಾಂಗ್ರೆಸ್ ಶಾಸಕರಿಲ್ಲದ ಕ್ಷೇತ್ರಗಳಲ್ಲಿ ಪ್ರವಾಸ ಮಾಡುತ್ತಿದ್ದೇನೆ. ಎಲ್ಲ ಕ್ಷೇತ್ರಗಳಲ್ಲೂ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಿಗೆ ಶಕ್ತಿ ತುಂಬುವ ಪ್ರಯತ್ನ ಮಾಡುತ್ತಿದ್ದೇನೆ’ ಎಂದರು.

#### ದಾಸರಹಳ್ಳಿ ಸಭೆಯಲ್ಲಿ ವಾಗ್ವಾದ

ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಸಭೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸೇರಿದಂತೆ ಪಕ್ಷದ ನಾಯಕರ ಎದುರಿನಲ್ಲೇ ಸ್ಥಳೀಯ ಮುಖಂಡರು ವಾಗ್ವಾದ ನಡೆಸಿದ ಘಟನೆ ಸೋಮವಾರ ನಡೆಯಿತು.

ಸಭೆಯ ಆರಂಭದಲ್ಲೇ ಕೆಲವರು ತಮಗೆ ಸೂಕ್ತ ಪ್ರಾತಿನಿಧ್ಯ ನೀಡಿಲ್ಲ ಎಂದು ತಕರಾರು ತೆಗೆದರು. ಮತ್ತೊಂದು ಗುಂಪು ಕೂಡ ವಾಗ್ವಾದಕ್ಕೆ ಇಳಿಯಿತು. ಎರಡೂ ಗುಂಪಿನ ಮುಖಂಡರಿಗೆ ಗದರಿದ ಶಿವಕುಮಾರ್, ಸಭೆ ಮುಂದುವರಿಸಿದರು.



ರಾಮನಗರ ಜಿಲ್ಲಾ ಪಂಚಾಯತ್
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ರಾಮನಗರ ವಿಭಾಗ, ರಾಮನಗರ.

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ : 18/ಕಾಅ/ಗ್ರಾ.ಕು.ನೀ.&ನೈ.ವಿ/ರಾ/ಟೆಂಡರ್/ಸ.ಇಂ.-1/ಜೆಜೆಎಂ/970/2022-23 ದಿನಾಂಕ : 04-08-2022

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000 ರ ಪ್ರಕಾರ ರಾಮನಗರ ಜಿಲ್ಲೆಯ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿನ ಗ್ರಾಮೀಣ ಪ್ರದೇಶದಲ್ಲಿ ಜೆಜೆಎಂ ಯೋಜನೆಯಡಿಯಲ್ಲಿ ಅನುಮೋದನೆಗೊಂಡಿರುವ ರಾಮನಗರ ಜಿಲ್ಲೆಯ ರಾಮನಗರ ತಾಲ್ಲೂಕಿನ ಕುಡಿಯುವ ನೀರು ಸರಬರಾಜು ಯೋಜನೆಯ ಕಾಮಗಾರಿಗಳನ್ನು ನಿರ್ವಹಿಸಲು ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್‌ಗಳನ್ನು ಅಧಿಕೃತ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ. ವಿವರಗಳು ಕಾಮಗಾರಿಗಳನ್ನು ನಿರ್ವಹಿಸಲು ಈ ಕೆಳಕಂಡಂತಿವೆ.

1) ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ : ರೂ. 102.22 ಲಕ್ಷಗಳು. ಇ.ಎಂ.ಡಿ. ಮೊತ್ತ : ರೂ. 2.00 ಲಕ್ಷಗಳು. 2) ಕನಿಷ್ಠ ಟೆಂಡರ್‌ಗಿಟ್ಟ ಮೊತ್ತ : ರೂ. 85.96 ಲಕ್ಷಗಳು. ಇ.ಎಂ.ಡಿ. ಮೊತ್ತ : ರೂ. 1.72 ಲಕ್ಷಗಳು. 3) ಕಾಲಾವಧಿ : 06 ತಿಂಗಳು. 4) ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ದರಗಳನ್ನು ನಮೂದಿಸಿ ಸಲ್ಲಿಸಲು ಕೊನೆಯ ದಿನಾಂಕ : 20-08-2022 ರ ಸಂಜೆ 5.30 ಗಂಟೆಯವರೆಗೆ. 5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 22-08-2022 ರ ಬೆಳಿಗ್ಗೆ 11.00 ಗಂಟೆಯ ನಂತರ. 6) ಆರ್ಥಿಕ ಬಿಡ್ ತೆರೆಯುವ ದಿನಾಂಕ : 24-08-2022 ರ ಬೆಳಿಗ್ಗೆ 11.00 ಗಂಟೆಯ ನಂತರ. 7) ಬಿಡ್ ಪೂರ್ವಭಾವಿ ಸಭೆ : 16-08-2022 ರ ಬೆಳಿಗ್ಗೆ 11.00 ಗಂಟೆಯ ನಂತರ

ಮೇಲ್ಕಾಣಿಸಿದ ದಿನವೇನಾದರೂ ಸಾರ್ವತ್ರಿಕ ರಜಾ ದಿನವಾದಲ್ಲಿ ಮುಂದಿನ ದಿನವನ್ನು ಗಣನೆಗೆ ತೆಗೆದುಕೊಳ್ಳಲಾಗುವುದು. ಟೆಂಡರ್ ಕಾಮಗಾರಿಗಳ ವಿವರ ಹಾಗೂ ನಿಯಮಾವಳಿಗಳನ್ನು ಒಳಗೊಂಡಿರುವ ಮಾಹಿತಿಗೆ ಈ ಕಛೇರಿಯ ಇಲಾಖೆ ವೆಬ್‌ಸೈಟ್ : www.eproc.karnataka.gov.in ರಲ್ಲಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆ,
ರಾಮನಗರ ವಿಭಾಗ, ರಾಮನಗರ.

ಡಿಐಪಿಆರ್/ರಾಮನಗರ/166/ಮಣಿಪಾಲ್/2022-23



Government of Karnataka
KARNATAKA FOREST DEPARTMENT
HALIYAL DIVISION, HALIYAL

As per Government Notification No. FEE./168/FDP2017, Bangalore Dated: 14.11.2017, As per Government Notification No. FEE./168/FDP 2017, Bangalore Dated: 27.02.2018, As per APCCF(FRM) Bengaluru Office letter No. APCCF(FRM)/B3/Sales /CR-06/2022-23 Date: 28.07.2022 E-Office No: 752250

KARNATAKA FOREST CODE, 1976
APPENDIX XVIII A (Rule 64)
Detailed Notification for e-Tender cum Auction of Timber and Other Forest Produce in GTD Dandeli, Bhagawati, Jagalbet and Kulgi Depot of Haliyal Division, Haliyal

No: B5/DTS/August-2022/MSTC/CR-10/2022-23 Date: 28.07.2022

It is hereby notified for the general information of the public that, the following kinds and quantity of Timber and other forest produce stocked and lotted in the **GTD Dandeli, Bhagawati, Jagalbet and Kulgi,** Government Timber Depots of **Haliyal Division, Haliyal** will be sold through the public e-tender cum auction method in one or more sessions from **16.08.2022, 17.08.2022, 18.08.2022 & 19.08.2022** (All Four Sessions) **GTD Dandeli Depot, 20.08.2022 (Ist & IInd Session) in Bhagawati Depot, 20.08.2022 (IIIrd Session) in Jagalbet Depot and 22.08.2022 (Ist & IInd session) in Kulgi Depot** from **10.00 A.M** till the bidding for all lots is completed. The Sale Conducting Officer will be the Deputy Conservator of Forests, **Haliyal Division, Haliyal.**

For any Clarifications, you can contact:
Assistant Conservator of Forests, Govt. Timber Depot, Dandeli: acfgtd.dandeli@gmail.com Ph: 08284-231237, Range Forest Officer, Virnoli (Kulgi Depot): virnolirfo96@gmail.com Ph: 08284-258050, Range Forest Officer, Bhagawati: bgtirfo97@gmail.com Ph: 08284-267818, Range Forest Officer, Jagalbet: rfojbt93@gmail.com Ph: 08383-252767, Deputy Conservator of Forests, Haliyal: dcfhalyal@gmail.com Ph: 08284-220128
Sri. Damodhar, Manager, MSTC Limited Bangalore Mob No: 9841002253

Sd/- (BALACHANDRA. H.C IFS.)
Deputy Conservator of Forests,
Haliyal Division, Haliyal

DIPR/ADK/MCA/303/22-23 Dt.08.08.2022



ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ,
ಕೊರಟಗೆರೆ ತಾಲ್ಲೂಕು ಸ್ತ್ರೀಶಕ್ತಿ ಭವನ, ಕೊರಟಗೆರೆ, ತುಮಕೂರು ಜಿಲ್ಲೆ.
Email ID: koratagerecdpo@gmail,com ದೂ.ಸಂ: 08138-232315
ಸಂ.ಶಿಅಯೋ:ಕೊ:ಕಾಬಾ:ಇಟೆಂಡರ್:2022-23 ದಿನಾಂಕ: 04.08.2022

ಅಲ್ಪಾವಧಿ ಇ-ಪ್ರೊಕ್ಯೂರ್‌ಮೆಂಟ್ ಮರು ಟೆಂಡರ್ ಪ್ರಕಟಣೆ

ಕೊರಟಗೆರೆ ಶಿಶು ಅಭಿವೃದ್ಧಿ ಯೋಜನೆಯ ಕಾರ್ಯಕ್ರಮಗಳನ್ನು ತಾಲ್ಲೂಕಿನಲ್ಲಿ ಅನುಷ್ಠಾನಗೊಳಿಸುವ ಬಗ್ಗೆ ಹಾಗೂ ಅಧಿಕೃತ ಪ್ರವಾಸ ಕೈಗೊಳ್ಳಬೇಕಾಗಿರುವುದರಿಂದ 2022-23ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಹವಾನಿಯಂತ್ರಿತ ಕಾರನ್ನು ಬಾಡಿಗೆ ನೀಡಲು ಅರ್ಹ ಮಾಲೀಕರಿಂದ ಮತ್ತು ಟ್ರಾವೆಲ್ ಏಜೆನ್ಸಿಯವರಿಂದ ಪಾರದರ್ಶಕ ಅಧಿನಿಯಮದಂತೆ ದ್ವಿಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಇ-ಪ್ರೊಕ್ಯೂರ್‌ಮೆಂಟ್ ಮರು ಟೆಂಡರನ್ನು ಆಹ್ವಾನಿಸಲಾಗಿದೆ. ಇಚ್ಛೆಯುಳ್ಳವರು ಪ್ರತಿ ಮಾಸಿಕ ಬಾಡಿಗೆ ದರ (ಚಾಲಕನ ಸಂಬಳ, ಇಂಧನ, ದುರಸ್ಥಿ, ನಿಲುಗಡೆ ವೆಚ್ಚ ಸೇರಿಸಿ ಹಾಗೂ ಇತರೆ ವೆಚ್ಚ ಒಳಗೊಂಡಂತೆ)ವನ್ನು ಸಲ್ಲಿಸುವುದು. ಟೆಂಡರ್‌ದಾರರು ಅರ್ಜಿಗಳನ್ನು ದಿನಾಂಕ: **04.08.2022** ರಿಂದ **ದಿನಾಂಕ: 16.08.2022** ರಂದು ಸಂಜೆ 4.00 ಗಂಟೆಯೊಳಗೆ ಟೆಂಡರ್ ಅಪ್ಲೋಡ್ ಮಾಡಬಹುದಾಗಿದೆ. ಇ-ಟೆಂಡರ್ ಮುಖಾಂತರ ಅರ್ಜಿಯನ್ನು ತೆರೆಯುವ ದಿನಾಂಕ: **18.08.2022**ರಂದು ಬೆಳಗ್ಗೆ 11.00ಗಂಟೆಗೆ ಹೆಚ್ಚಿನ ವಿವರಗಳನ್ನು www.eproc.karnataka.gov.in ವೆಬ್‌ಸೈಟ್‌ನಲ್ಲಿ ಪರಿಶೀಲಿಸುವುದು ಹಾಗೂ ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಸಮಗ್ರ ಶಿಶು ಅಭಿವೃದ್ಧಿ ಯೋಜನೆ, ತಾಲ್ಲೂಕು ಸ್ತ್ರೀಶಕ್ತಿ ಭವನ, ಕೊರಟಗೆರೆ ತುಮಕೂರು ಜಿಲ್ಲೆ ಇಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/- ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು,
ಸಮಗ್ರ ಶಿಶು ಅಭಿವೃದ್ಧಿ ಯೋಜನೆ, ಕೊರಟಗೆರೆ.

DIPR/TUM/404/MCA/2022-23



ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಅಭಿಯಂತರರು, ಕೃಭಾಜನಿನಿ, ಇಂಶಾಕಾ, ನಿಮಪೋ, ವಿಭಾಗ ಸಂ-8, ಝಳಕಿ - 586204. ತಾ:ಇಂಡಿ, ಜಿ: ವಿಜಯಪುರ. ದೂರವಾಣಿ ಸಂ: 08422-282227
ಇ-ಮೇಲ್:eezalaki1@gmail.com
ಸಂ:ಕೃಭಾಜನಿನಿ/ಇಂಶಾಕಾವಿ-8/ಝಳಕಿ/ಡಿಬಿ/ಟೆಂಡರ್/ಐಬಿಸಿ-ರಿಮಾಡಲಿಂಗ್ ಸರ್ವೆ/2022-23/1319 ದಿನಾಂಕ:02.08.2022

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನೀಯರರು, ಕೃಭಾಜನಿನಿ, ಇಂಶಾಕಾ, ನಿಮಪೋ, ವಿಭಾಗ ಸಂ: 8 ಝಳಕಿ ತಾ: ಇಂಡಿ ಇವರು ಶೇಕಡಾವಾರು ಸ್ಟ್ಯಾಂಡರ್ಡ ಟೆಂಡರ್ ಡಾಕ್ಯೂಮೆಂಟ್ ಕೆ/ಸಿ-4 ರಡಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧ್ಯಾದೇಶ 1999-2000 ರ ಪ್ರಕಾರ ಆ್ಯಕ್ಟ-2000 ನಿಯಮದಂತೆ ದ್ವೀ ಲಕೋಟೆ ಪದ್ಧತಿಯಲ್ಲಿ ಕ್ವಾಲಿಟಿ ಕಮ್ ಕಾಸ್ಟ್ ಬೇಸ್ಡ್ ಸೆಲೆಕ್ಷನ್, ಪ್ರೀ ಕ್ವಾಲೀಫೀಕೇಶನ್ ಟೆಂಡರನ್ನು ಕೆ.ಬಿ.ಜೆ.ಎನ್.ಎಲ್/ ಕೆ.ಎನ್.ಎನ್.ಎಲ್/ ಕೆ.ಪಿ.ಡಬ್ಲ್ಯೂ.ಡಿ /ಫರ್ಮ ನೊಂದಾಯಿತ ಕಂಪನೀಜ್ ಆಕ್ಟ್, ಎಂಪ್ಯಾನಲ್ಡ್ ನೊಂದಾಯಿತ ಏಜೆನ್ಸಿಗಳಿಂದ ಟೆಂಡರನ್ನು ಆಹ್ವಾನಿಸಲಾಗಿರುತ್ತದೆ.

ಕಾಮಗಾರಿ ಹೆಸರು :1] "Consultancy Services for Survey and investigation, Preparation of estimates and DTP for the works of Remodelling of Indi Branch Canal from Ch. 64.00 to 172.00 Km, Distributaries, Laterals and sub-laterals including Structures there under" [I.No.21567]
[ಟೆಂಡರ್ ಸಂ: KBJNL/2021-22/IW/WORK_INDENT21567]
ಟೆಂಡರಗಿಟ್ಟ ಮೊತ್ತ ರೂ: 556.22 ಲಕ್ಷ. 2] ಇ.ಎಂ.ಡಿ ರೂ: 8.34 ಲಕ್ಷ/-
ಟೆಂಡರಗೆ ಸಂಬಂಧಿಸಿದ ಮಾಹಿತಿಗಾಗಿ ಕಛೇರಿಯ ಅವಧಿಯಲ್ಲಿ ಅಥವಾ ವೆಬಸೈಟ ಮುಖಾಂತರ http;//eproc.karnataka.gov.in ಪಡೆದುಕೊಳ್ಳಬಹುದು.

ಟೆಂಡರಿನ ವಿವಿಧ ಹಂತಗಳು:
1) ಟೆಂಡರ ಡಾಕ್ಯುಮೆಂಟನ್ನು ಇ-ಪೋರ್ಟಲನಲ್ಲಿ ವೀಕ್ಷಿಸುವ ಮತ್ತು ಭರ್ತಿ ಮಾಡಿದ ಬಿಡನ್ನು ಸಲ್ಲಿಸುವ ಕಾಲಾವಧಿಯು ದಿ: **26.08.2022** ರಿಂದ **02.09.2022** ರ ಸಾಯಂಕಾಲ 4.30 ಗಂಟೆಯವರೆಗೆ.
2) ಪ್ರೀ ಬಿಡ್ ಸಭೆಯು ಈ ಕಛೇರಿಯಲ್ಲಿ ದಿನಾಂಕ: **29.08.2022** ರಂದು 11.00 ಗಂಟೆ.
3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿ: **05.09.2022** ಬೆಳಗ್ಗೆ 11.00 ಗಂಟೆ.
4) ಆರ್ಥಿಕ ಬಿಡ್‌ನ್ನು ತೆರೆಯುವ ದಿ: **07.09.2022** ಬೆಳಗ್ಗೆ 11.00 ಗಂಟೆ.

ಟಿಪ್ಪಣಿ : 1) ಮೇಲೆ ತಿಳಿಸಿದ ದಿನಾಂಕಗಳು ಸಾರ್ವಜನಿಕ ರಜಾ ದಿನವಾದಲ್ಲಿ ಅಥವಾ ಹಾಗೆ ಘೋಷಿಸಿದಲ್ಲಿ ಮುಂದಿನ ಕೆಲಸದ ದಿನವನ್ನು ಪರಿಗಣಿಸಲಾಗುವುದು. 2) ಷರತ್ತಿನ ಟೆಂಡರುಗಳನ್ನು ನಿರಾಕರಿಸಲಾಗುವುದು, ಟೆಂಡರನ್ನು ಸ್ವೀಕರಿಸುವ ಅಧಿಕಾರಿಯು, ಯಾವುದೇ ಅಥವಾ ಎಲ್ಲಾ ಟೆಂಡರುಗಳನ್ನು ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ.
3) ಹೆಚ್ಚಿನ ವಿವರಗಳಿಗಾಗಿ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.

ಸಹಿ/- ಕಾರ್ಯಪಾಲಕ ಅಭಿಯಂತರರು, ಕೃಭಾಜನಿನಿ, ಇಂಶಾಕಾ, ನಿಮಪೋ, ವಿಭಾಗ ಸಂ:8,ಝಳಕಿ
ವಾಸಾಸಂಇ/ವಿಜಯಪುರ/340/ಎಂಸಿಎ/2022-23



ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು - 560070.
ಸಂಖ್ಯೆ:ಕಾಅ/ಗ್ರಾಕುನೀ&ನೈವಿ/ಬೆಂನ/ತಾಂಸ/ಟೆಂಡರ್/07/2022-23 ದಿನಾಂಕ: 08-08-2022

ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

2021-22 ನೇ ಸಾಲಿನ JJM ಲೆಕ್ಕಶೀರ್ಷಿಕೆ ಅನುದಾನದಡಿ ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: **29-08-2022 ರಂದು ಸಂಜೆ 4.00 ಗಂಟೆಯವರೆಗೆ** ಸಲ್ಲಿಸಬಹುದಾಗಿರುತ್ತದೆ.
ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್: http://www.eproc.karnataka.gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/- ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ
ಬೆಂಗಳೂರು

ವಾಸಾಸಂಇ/ವಾ.ಪ್ರ/1719/ಅಡ್ವರ್ಟೋರ್/2022-23

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
"ಜ್ಞಾನ ಸಂಗಮ", ಬೆಳಗಾವಿ-590018, ಕರ್ನಾಟಕ, ಭಾರತ
Ref.VTU/BGM/SAP/CW4/T-596/2022-2023/2587 Date :08/08/2022

ಟೆಂಡರ ಪ್ರಕಟಣೆ

ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರಿಂದ ಕೆಳಕಂಡ ಕೆಲಸಕ್ಕೆ ಇ-ಟೆಂಡರ (ದ್ವಿ ಲಕೋಟೆ ಪದ್ಧತಿ) ಮೂಲಕ ಮೊಹರ ಬಂದ ದರಖಾಸ್ತುಗಳನ್ನು ಅರ್ಹ ತಯಾರಕರು/ಪೂರೈಕೆದಾರರಿಂದ ಆಹ್ವಾನಿಸಲಾಗಿದೆ. ಕೆಲಸದ ಹೆಸರು: "Tender for Supply of Sports Equipments, Jersey to VTU P.G. Centers of Belagavi, Kalaburgi, Muddenahalli, Mysuru and UBDTCE, Davanagere to participate in Inter Collegiate Sports/ Games 2022-2023, Sports Section ,VTU ,Belagavi .".
ಕ್ರ ಸಂ:1:ವಿವರಣೆ:Schedule–I-Sports Equipment, ಟೆಂಡರಿಗಿಟ್ಟ ಮೊತ್ತ:Rs.39,91,000/-,ಮುಂಗಡ ಠೇವಣಿ:80,000/-, ಕ್ರ ಸಂ:2: ವಿವರಣೆ:Schedule – II- Jersey,ಟೆಂಡರಿಗಿಟ್ಟ ಮೊತ್ತ:Rs.4,25,000/-, ಮುಂಗಡ ಠೇವಣಿ:11,000/-
ಟೆಂಡರ ಸಲ್ಲಿಸಲು ಕೊನೆಯ ದಿನಾಂಕ:22/08/2022 ರಂದು 2.30 ರ ವರೆಗೆ ಟೆಂಡರ ತೆರೆಯುವ ದಿನಾಂಕ:23/08/2022-ರಂದು 4.00 ಗಂಟೆಗೆ ಹೆಚ್ಚಿನ ಮಾಹಿತಿಗಾಗಿ www.eproc.karnataka.gov.in ಮತ್ತು www.vtu.ac.in ನೋಡಬಹುದು.

DIPR/BGM/RO-NO-675/MCA/2022-23



ಗದಗ-ಬೆಟಗೇರಿ ನಗರಸಭೆ ಕಾರ್ಯಾಲಯ-582101
ಜಿಲ್ಲಾ: ಗದಗ ರಾಜ್ಯ : ಕರ್ನಾಟಕ
ದೂ:08372-259932 ಇ-ಮೇಲ್ : itstaff.ulb.gadag@gmail.com
ನಂ. ಗಬೆನಸ/ತಾಂ.ವಿ/ವಹಿ/ಟೆಂಡರ್/2022-23 ದಿನಾಂಕ: 08-08-2022

ಟೆಂಡರ ಪ್ರಕಟಣೆ
(ಕರ್ನಾಟಕ ಪಾರದರ್ಶಕ ಅಧಿನಿಯಮ 2000 ರನ್ವಯ)

ಸನ್ 2022-23 ನೇ ಸಾಲಿನ ನಗರಸಭೆ ಅನುದಾನದಲ್ಲಿ 02 ಕಾಮಗಾರಿಯ ಅಂದಾಜು ಮೊತ್ತ ರೂ. 30.00 ಲಕ್ಷಗಳಿಗೆ ಅಲ್ಪಾವಧಿ ಟೆಂಡರ್‌ನ್ನು ಕೆಡಬ್ಲ್ಯೂ-1 ಪ್ರಕಾರ ಆಹ್ವಾನಿಸಿದ್ದು ಇಚ್ಛೆಯುಳ್ಳ ಗುತ್ತಿಗೆದಾರರು ಬಿಡ್ಡ್ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ತಾಂತ್ರಿಕ ಶಾಖೆಯಲ್ಲಿ ಕೇಳಿ ಪಡೆಯಬಹುದು.

| ಪ್ಯಾ ನಂ. | ಕಾಮಗಾರಿ ಇಂಡೆಂಟ್ ನಂ. | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಇ.ಎಂ.ಡಿ ಮೊತ್ತ | ಕಾಮಗಾರಿಯ ಕಾಲಾವಕಾಶ |
|---|---|---|---|---|
| 1 | 133779 | 15.00 | 37500.00 | 180 ದಿನ |
| 2 | 133348 | 15.00 | 37500.00 | 180 ದಿನ |

| | |
|---|---|
| ಟೆಂಡರ ಪಾರ್ಮ ವೆಬ್ ಸೈಟಿನಿಂದ ಡೌನ್ ಲೋಡ ಮಾಡಿಕೊಳ್ಳುವ ಪ್ರಾರಂಭದ | ದಿನಾಂಕ:08-08-2022 |
| ಭರ್ತಿ ಮಾಡಿದ ಟೆಂಡರಗಳನ್ನು ಅಪಲೋಡ್ (Upload) ಮಾಡುವ ಕೊನೆಯ | ದಿನಾಂಕ:22-08-2022 ಸಾಯಂಕಾಲ: 4:00 ಘಂಟೆಯವರೆಗೆ |
| ಟೆಂಡರಗಳನ್ನು ತೆರೆಯುವ | ದಿನಾಂಕ:23-08-2022 ರ ಸಾಯಂಕಾಲ 4.30 ಘಂಟೆಯ ನಂತರ ತೆರೆಯಲಾಗುವುದು. |

ಹೆಚ್ಚಿನ ಮಾಹಿತಿಗಾಗಿ Website: www.eproc.karnataka.gov.in ವೆಬ್‌ಸೈಟನಲ್ಲಿ ನೋಡಬಹುದು

ಸಹಿ/- ಶ್ರೀಮತಿ ಉಷಾ ಎಮ್ ದಾಸರ, ಅಧ್ಯಕ್ಷರು, ನಗರಸಭೆ.ಗದಗ-ಬೆಟಗೇರಿ
ಸಹಿ/-ಶ್ರೀ ರಮೇಶ ಎಸ್ ಸುಣಗಾರ, ಪೌರಾಯುಕ್ತರು, ನಗರಸಭೆ.ಗದಗ-ಬೆಟಗೇರಿ

ವಾ.ಸಾ.ಇ/ಗದಗ/236/2022-23/ದೇಶಪಾಂಡೆಪಬ್ಲಿಸಿಟಿ



ಸುವರ್ಣ ಕರ್ನಾಟಕ
ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರ, ಬಾಗಲಕೋಟೆ
ಹಳೇ SBI ಕಟ್ಟಡ, ಹಳೇ ತಹಶೀಲದಾರ ಕಛೇರಿ ಹತ್ತೀರ, ಬಾಗಲಕೋಟೆ-587101.
ಇ ಮೇಲ್: pa196bagalkot@gmail.com
ಕ್ರ.ಸಂ: ಬಾನಪ್ರಾ/ಟೆಂಡರ/2022-23 ದಿನಾಂಕ : 08 -08-2022.

ಟೆಂಡರ್ ಪ್ರಕಟಣೆ
E-Proceurement portal ಮುಖಾಂತರ

ಕರ್ನಾಟಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999, ನಿಯಮಾವಳಿಗಳು 2000 ರಂತೆ ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರ, ಬಾಗಲಕೋಟೆ ವ್ಯಾಪ್ತಿಯಲ್ಲಿ ಸನ್ 2022-23 ನೇ ಸಾಲಿನ ಕೆರೆ ಅಭಿವೃದ್ಧಿ ನಿಧಿಯಡಿಯಲ್ಲಿ ಈ ಕೆಳಗೆ ನಮೂದಿಸಿದ ಕಾಮಗಾರಿಗೆ ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆ/ಕಾರ್ಮಿಕ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ / E-Proceurement portal ನಲ್ಲಿ ನೋಂದಾಯಿತ ಗುತ್ತಿಗೆದಾರರಿಂದ Standard Tender Documents Kw-1 ರಂತೆ ಟೆಂಡರನ್ನು ಆಹ್ವಾನಿಸಲಾಗಿದ್ದು, ವಿವರ ಕೆಳಗಿನಂತಿರುತ್ತದೆ.

UDD/2022-23/OW/WORK_INDENT 1666/Call-2
ಹೀಗೆ ರೂ : 500.00 ಲಕ್ಷದ ಕಾಮಗಾರಿ ಇರುತ್ತದೆ

ಹೆಚ್ಚಿನ ಮಾಹಿತಿಗಾಗಿ http://eproc.karnataka.gov.in ದಲ್ಲಿ ಅಥವಾ ಈ ಕಛೇರಿಯ ತಾಂತ್ರಿಕ ವಿಭಾಗದಲ್ಲಿ ಸಂಪರ್ಕಿಸಬಹುದಾಗಿದೆ.
1) Last date for submission of bid through E. procurement portal before : 09 **-09-2022** At **16.30 hours.**
2) Opening of Technical bid is on or after : **12 -09-2022** at **11.30 AM**
3) Opening of Financial Bid is on or after : **14-09-2022** at **16 :30 PM**

ಸಹಿ/-ಸಹಾಯಕ ಅಭಿಯಂತರರು, ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರ, ಬಾಗಲಕೋಟೆ
ಸಹಿ/-ಆಯುಕ್ತರು, ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರ, ಬಾಗಲಕೋಟೆ

ವಾ.ಸಾ.ಇ/ಬಾಗಲಕೋಟ/338/2022-23/ದೇಶಪಾಂಡೆಪಬ್ಲಿಸಿಟಿ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ ರಾಣೇಬೆನ್ನೂರು
CHILD DEVELOPMENT PROJECT OFFICE, RANEBENUR
ದೂರವಾಣಿ : 08373-266731E-Mail : cdporanebennur@gmail.com
ಸಂ.ಶಿಅಯೋರಾ/ಅಂ.ಕೇ/ಕೋಮೊ/ಮ.ಟೆಂಡರ್/2022-23 ದಿನಾಂಕ : 08/08/2022

ಅಲ್ಪಾವಧಿ ಮರು ಇ-ಟೆಂಡರ್ ಪ್ರಕಟಣೆ

ಶಿಶು ಅಭಿವೃದ್ಧಿ ಯೋಜನೆ, ರಾಣೇಬೆನ್ನೂರು ತಾಲ್ಲೂಕಿನ 373 ಅಂಗನವಾಡಿ ಕೇಂದ್ರಗಳ ಫಲಾನುಭವಿಗಳಾದ 3 ರಿಂದ 6 ವರ್ಷದ ಮಕ್ಕಳು, ಗರ್ಭಿಣಿ, ಬಾಣಂತಿ ಹಾಗೂ ಅಪೌಷ್ಠಿಕ ಮಕ್ಕಳಿಗೆ ವಿತರಿಸಲು 2022-23 ನೇ ಸಾಲಿನ ಉಳಿದ ಅವಧಿಗೆ ಕೋಳಿಮೊಟ್ಟೆ ಸರಬರಾಜು ಮಾಡಲು ಅಲ್ಪಾವಧಿ ಮರು ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ವೇಳಾಪಟ್ಟಿ

| | | | |
|---|---|---|---|
| 1 | ಟೆಂಡರ್ ಉಲ್ಲೇಖ ಸಂಖ್ಯೆ | : | ಸಂಖ್ಯೆ: CDPO RNR/ EGG/Tender /2022-23 ದಿನಾಂಕ: 08.08.2022 |
| 2 | ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://eproc.karnataka.gov.in ನಿಂದ ಟೆಂಡರ್ ದಸ್ತಾವೇಜಿನ ಡೌನ್‌ಲೋಡ್ ಪ್ರಾರಂಭದ ದಿನಾಂಕ | : | 08-08-2022 |
| 3 | ಇ-ಟೆಂಡರ್ ಅನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ | : | ದಿನಾಂಕ: 20.08.2022 ಸಂಜೆ 5:00 ಗಂಟೆಯ ವರೆಗೆ |
| 4 | ತಾಂತ್ರಿಕ ಬಿಡ್‌ಗಳನ್ನು ಆನ್‌ಲೈನ್‌ನಲ್ಲಿ ತೆರೆಯುವ ದಿನಾಂಕ ಮತ್ತು ಸಮಯ | : | 22.08.2022, ಬೆಳಿಗ್ಗೆ 11:00 ಗಂಟೆಗೆ |
| 5 | ಹಣಕಾಸು ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ | : | 26.08.2022, ಬೆಳಿಗ್ಗೆ 11.00 ಗಂಟೆಗೆ |
| 6 | ಟೆಂಡರ್‌ಗಳನ್ನು ತೆರೆಯುವ ಸ್ಥಳ | : | ಇ- ಪ್ರೊಕ್ಯೂರ್‌ಮೆಂಟ್ ಪೋರ್ಟಲ್ |
| 7 | ಸಂವಹನಕ್ಕಾಗಿ ವಿಳಾಸ | : | ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಬನಶಂಕರಿ ಬಡಾವಣೆ, ಬನಶಂಕರಿ ಕಲ್ಯಾಣ ಮಂಟಪ ಹತ್ತಿರ, ರಾಣೇಬೆನ್ನೂರು, ಹಾವೇರಿ ಜಿಲ್ಲೆ, ಕರ್ನಾಟಕ - 581115 ದೂರವಾಣಿ: 08373-266731 ಇಮೇಲ್: cdporanebenur@gmail.com |

ಸಹಿ/- ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ರಾಣೇಬೆನ್ನೂರು


ಅಭ್ಯರ್ಥಿಯೊಂದಿಗೆ ₹50 ಲಕ್ಷಕ್ಕೆ ಒಪ್ಪಂದ • ಡಿಜಿ–ಐಜಿಪಿ ಕಚೇರಿಗೂ ನಂಟು

# ಹುದ್ದೆ ಮಾರಿದ್ದ ಸೂಪರಿಂಟೆಂಡೆಂಟ್

• ಸಂತೋಷ ಜಿಗಳಿಕೊಪ್ಪ

**ಬೆಂಗಳೂರು:** ಪೊಲೀಸ್ ಇಲಾಖೆಯಲ್ಲಿ ಸೂಪರಿಂಟೆಂಡೆಂಟ್ ಆಗಿದ್ದ ಆರೋಪಿ ಆರ್. ಮಂಜುನಾಥ್ (33), ಕಮಿಷನ್ ಆಸೆಗಾಗಿ ತಮ್ಮ ಪ್ರಭಾವ ಬಳಸಿ ಅಭ್ಯರ್ಥಿ ಎಚ್. ಯಶವಂತಗೌಡ (28) ಅವರನ್ನು ಅಕ್ರಮವಾಗಿ ಪಿಎಸ್‌ಐ ಹುದ್ದೆಗೆ ಆಯ್ಕೆ ಮಾಡಿಸಿದ್ದ ಮಾಹಿತಿಯನ್ನು ಸಿಐಡಿ ಪತ್ತೆ ಮಾಡಿದೆ.

ಪಿಎಸ್‌ಐ ನೇಮಕಾತಿ ಅಕ್ರಮ ಸಂಬಂಧ ಹೈಗ್ರೌಂಡ್ಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದಲ್ಲಿ 30ನೇ ಆರೋಪಿ ಆಗಿರುವ ಆರ್. ಮಂಜುನಾಥ್, ನೇಮಕಾತಿ ವಿಭಾಗದ ಎಫ್‌ಡಿಎ ಡಿ. ಹರ್ಷ ಹಾಗೂ ಡಿವೈಎಸ್ಪಿ ಶಾಂತಕುಮಾರ್ ಜೊತೆ ಒಪ್ಪಂದ ಮಾಡಿಸಿದ್ದ ಸಂಗತಿ ದೋಷಾರೋಪ ಪಟ್ಟಿಯಲ್ಲಿ ದಾಖಲಿಸಲಾಗಿದೆ.

'ಬೆಂಗಳೂರು ಶ್ರೀಗಂಧಕಾವಲು ಬಳಿಯ 'ಡಿ' ಗ್ರೂಪ್ ಲೇಔಟ್ ನಿವಾಸಿ ಮಂಜುನಾಥ್, ನೃಪತುಂಗ ರಸ್ತೆಯಲ್ಲಿರುವ ಪೊಲೀಸ್ ಪ್ರಧಾನ ಕಚೇರಿ ಹಾಗೂ ರಾಜ್ಯ ಪೊಲೀಸ್ ಮಹಾನಿರ್ದೇಶಕರ (ಡಿಜಿ-ಐಜಿಪಿ) ಕಚೇರಿಯಲ್ಲಿ ಪ್ರಥಮ ದರ್ಜೆ ಸಹಾಯಕನಾಗಿ (ಎಫ್‌ಡಿಎ) ಹಲವು ವರ್ಷ ಕೆಲಸ ಮಾಡಿದ್ದ. ಇದೇ ವೇಳೆಯೇ ಈತ, ನೇಮಕಾತಿ ವಿಭಾಗದ ಸಿಬ್ಬಂದಿ ಜೊತೆ ಸ್ನೇಹ ಬೆಳೆಸಿಕೊಂಡಿದ್ದ' ಎಂಬ ಅಂಶ ಆರೋಪ ಪಟ್ಟಿಯಲ್ಲಿದೆ.

'ಪೊಲೀಸ್ ಇಲಾಖೆ ಪ್ರತಿನಿಧಿಯಾಗಿ ರಾಜ್ಯ ಸರ್ಕಾರಿ ನೌಕರರ ಸಂಘಕ್ಕೂ ಆಯ್ಕೆಯಾಗಿದ್ದ ಮಂಜುನಾಥ್, ಅಭ್ಯರ್ಥಿಗಳನ್ನು ಅಕ್ರಮವಾಗಿ ಪಿಎಸ್‌ಐ ಮಾಡಿಸಿ, ಹಣ ಸಂಪಾದಿಸುವ ಸಂಚು ರೂಪಿಸಿದ್ದರು' ಎಂಬ ಮಾಹಿತಿ ಪಟ್ಟಿಯಲ್ಲಿದೆ.

**ಮೊದಲ ಕಂತಿನಲ್ಲಿ ₹ 45 ಲಕ್ಷ ಪಾವತಿ:** 'ಯಲಹಂಕ ತಾಲ್ಲೂಕಿನ ಸಿಂಗಜಾಲ ಹೋಬಳಿ ನಿವಾಸಿಯಾಗಿದ್ದ ಅಭ್ಯರ್ಥಿ ಎಚ್. ಯಶವಂತಗೌಡನನ್ನು (28) ಸಂಪರ್ಕಿಸಿದ್ದ ಆರ್. ಮಂಜುನಾಥ್, ₹ 50 ಲಕ್ಷ ನೀಡಿದರೆ ಪಿಎಸ್‌ಐ ಮಾಡಿಸುವುದಾಗಿ ಹೇಳಿದ್ದ. ಆತನ ಮಾತಿನಂತೆ ಹಣ ನೀಡಲು ಯಶವಂತಗೌಡ ಒಪ್ಪಿದ್ದ' ಎಂಬ ಅಂಶವನ್ನು ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

'ಎಫ್‌ಡಿಎ ಹರ್ಷ ಮೂಲಕ ಡಿವೈಎಸ್ಪಿ ಶಾಂತಕುಮಾರ್ ಅವರನ್ನು ಸಂಪರ್ಕಿಸಿದ್ದ ಮಂಜುನಾಥ್, ಯಶವಂತ ಗೌಡನನ್ನು ಪಿಎಸ್‌ಐ ಮಾಡಲು ₹ 50 ಲಕ್ಷಕ್ಕೆ ಒಪ್ಪಂದ ಮಾಡಿಕೊಂಡಿದ್ದ. ಮೊದಲ ಕಂತಿನಲ್ಲೇ ₹ 45 ಲಕ್ಷ ಸಹ ಪಾವತಿ ಮಾಡಲಾಗಿತ್ತು.' 'ಹಣ ಪಡೆದಿದ್ದ ಡಿವೈಎಸ್ಪಿ, ಪೂರ್ವ ನಿಯೋಜಿತ ಸಂಚಿನಂತೆ ಯಶವಂತಗೌಡನ ಒಎಂಆರ್ ಪ್ರತಿ ತಿದ್ದುಪಡಿ ಮಾಡಿಸಿದ್ದ. ಪತ್ರಿಕೆ-1ರಲ್ಲಿ (ಪ್ರಬಂಧ, ಭಾಷಾಂತರ, ಸಾರಾಂಶ ಬರಹ) 34.5 ಅಂಕ ಹಾಗೂ ಪತ್ರಿಕೆ-2ರಲ್ಲಿ (ಸಾಮಾನ್ಯ ಅಧ್ಯಯನ) 123.75 ಅಂಕ ಬಂದಿತ್ತು. ಒಟ್ಟು 158.25 ಅಂಕದೊಂದಿಗೆ ಯಶವಂತಗೌಡ, ರಾಜ್ಯಕ್ಕೆ 8ನೇ ರ‍್ಯಾಂಕ್ ಪಡೆದಿದ್ದ' ಎಂಬ ಮಾಹಿತಿ ಪಟ್ಟಿಯಲ್ಲಿದೆ.

**ಮುಖ್ಯಾಂಶಗಳು**
- ರಾಜ್ಯ ಸರ್ಕಾರಿ ನೌಕರರ ಸಂಘದ ಪ್ರತಿನಿಧಿ
- ಮೊದಲ ಕಂತಿನಲ್ಲಿ ₹ 45 ಲಕ್ಷ ಪಾವತಿ
- ನೇಮಕಾತಿ ಡಿವೈಎಸ್ಪಿ ಜೊತೆ ಸಂಪರ್ಕ

ಪ್ರಜಾವಾಣಿ ವಿಶೇಷ

## 'ವರ್ಗಾವಣೆಯಾದರೂ ಕಚೇರಿ ಬಿಡದ ಮಂಜುನಾಥ್'

'ಪಿಎಸ್‌ಐ ನೇಮಕಾತಿ ಅಕ್ರಮದ ಆರೋಪಿ ಆರ್. ಮಂಜುನಾಥ್‌ಗೆ ಕಳೆದ ವರ್ಷವಷ್ಟೇ ಸೂಪರಿಂಟೆಂಡೆಂಟ್ ಹುದ್ದೆಗೆ ಬಡ್ತಿ ಸಿಕ್ಕಿತ್ತು. ಡಿಜಿ-ಐಜಿಪಿ ಕಚೇರಿಯಿಂದ ಆಂತರಿಕ ಭದ್ರತಾ ವಿಭಾಗಕ್ಕೆ (ಐಎಸ್‌ಡಿ) ವರ್ಗಾವಣೆ ಮಾಡಲಾಗಿತ್ತು. ಆದರೆ, ಮಂಜುನಾಥ್ ಕರ್ತವ್ಯಕ್ಕೆ ಹಾಜರಾಗಿರಲಿಲ್ಲ. ಡಿಜಿ-ಐಜಿಪಿ ಕಚೇರಿಯಲ್ಲೇ ಮುಂದುವರಿಯಲು ಪ್ರಭಾವಿ ರಾಜಕಾರಣಿ ಮೂಲಕ ಹಿರಿಯ ಅಧಿಕಾರಿಗಳ ಮೇಲೆ ಒತ್ತಡ ತಂದಿದ್ದರು' ಎಂದು ಸಿಐಡಿ ಮೂಲಗಳು ಹೇಳಿವೆ.

'ಐಎಸ್‌ಡಿ ವರ್ಗಾವಣೆ ರದ್ದುಪಡಿಸಿದ್ದ ಪೊಲೀಸ್ ಇಲಾಖೆ, ಚಿಕ್ಕಮಗಳೂರು ಎಸ್ಪಿ ಕಚೇರಿಗೆ ಮಂಜುನಾಥ್ ಅವರನ್ನು ವರ್ಗಾವಣೆ ಮಾಡಿತ್ತು. ಅಲ್ಲಿಗೂ ಮಂಜುನಾಥ್ ಹೋಗಿರಲಿಲ್ಲ. ಡಿಜಿ-ಐಜಿಪಿ ಕಚೇರಿಗೇ ಆಗಾಗ ಹೋಗಿ ಬರುತ್ತಿದ್ದರು. ಸರ್ಕಾರಿ ನೌಕರರ ಸಂಘದ ಪ್ರತಿನಿಧಿ ಎಂಬ ಕಾರಣಕ್ಕೆ, ಹಿರಿಯ ಅಧಿಕಾರಿಗಳು ಸಹ ಏನೂ ಕೇಳುತ್ತಿರಲಿಲ್ಲ' ಎಂದೂ ಮೂಲಗಳು ತಿಳಿಸಿವೆ.

# 'ಬಿಜೆಪಿಯವರಿಗೆ ನನ್ನಿಂದ ಭಯ ಬಂದಿದೆ'

ಬಿಜೆಪಿ ನಾಯಕರಿಗೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ತಿರುಗೇಟು

ಪ್ರಜಾವಾಣಿ ವಾರ್ತೆ

**ಮೈಸೂರು:** 'ದಾವಣಗೆರೆಯಲ್ಲಿ ನಡೆದ ನನ್ನ 75ನೇ ಜನ್ಮದಿನೋತ್ಸವದಲ್ಲಿ ಸೇರಿದ್ದ ಜನಸ್ತೋಮ ನೋಡಿ ಬಿಜೆಪಿಯವರಿಗೆ ಭಯ ಬಂದಿದೆ. ಹೀಗಾಗಿಯೇ ವ್ಯರ್ಥ ಟೀಕೆಗಳನ್ನು ಮಾಡುತ್ತಿದ್ದಾರೆ' ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಇಲ್ಲಿ ಪತ್ರಕರ್ತರೊಂದಿಗೆ ಸೋಮವಾರ ಮಾತನಾಡಿದ ಅವರು, 'ಬಿಜೆಪಿಗೆ ನನ್ನನ್ನು ಕಂಡರೆ ಭಯ. ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತದೆ ಎಂದು ಹೆದರಿದ್ದಾರೆ' ಎಂದರು.

'ಅಹಿಂದ ಸಮುದಾಯದವರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆದಿರುವ ಬಗ್ಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಅಹಿಂದದವರ ಮತಗಳು ಕಾಂಗ್ರೆಸ್ ಪರವಾಗಿಯೇ ಇರುವುದರಿಂದ ಪಟ್ಟಿಯಿಂದ ಡಿಲೀಟ್ ಮಾಡುವ ಕೆಲಸ ನಡೆದಿರಬಹುದು. ಆ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯುತ್ತೇನೆ' ಎಂದು ಪ್ರತಿಕ್ರಿಯಿಸಿದರು.

'ಹರ್ ಘರ್ ತಿರಂಗಾ ಕಾರ್ಯಕ್ರಮವು ಬಿಜೆಪಿಯವರ ನಾಟಕದ ಭಾಗ. ಬಿಜೆಪಿಯವರು ರಾಷ್ಟ್ರಧ್ವಜಕ್ಕೆ ಗೌರವ ಕೊಟ್ಟವರಲ್ಲ. ಅವರು ರಾಷ್ಟ್ರಗೀತೆ, ಬಾವುಟವನ್ನು ವಿರೋಧಿಸುತ್ತಿದ್ದವರು. ಅವರಿಗೆ ನಮ್ಮ ಬಾವುಟದ ಮೇಲೆ ನಂಬಿಕೆ ಇಲ್ಲ. ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜಕೀಕರಣ ಮಾಡಲು ಮುಂದಾಗಿದ್ದಾರೆ' ಎಂದು ಆರೋಪಿಸಿದರು.

'ರಾಷ್ಟ್ರಧ್ವಜವನ್ನು ಖಾದಿ ಅಥವಾ ರೇಷ್ಮೆಯಲ್ಲೇ ತಯಾರಿಸಬೇಕು. ಆದರೆ ಚೀನಾದಿಂದ ತರಲಾಗುತ್ತಿದೆ. ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ಚೀನಾದಿಂದ ಆಮದು ಹೆಚ್ಚಾಗಿದೆ. ಆತ್ಮನಿರ್ಭರ ಭಾರತವೆಂಬುದು ಎಲ್ಲಿ ಯಶಸ್ವಿಯಾಯಿತು?' ಎಂದರು.

'ಯಾವ ಕ್ಷೇತ್ರದಲ್ಲಿ ಸ್ಪರ್ಧಿಸಬೇಕೆಂಬುದನ್ನು ನಿರ್ಧರಿಸಿಲ್ಲ. ಚುನಾವಣೆ ಬಂದಾಗ ಪ್ರಕಟಿಸುತ್ತೇನೆ. ವರುಣಾ ವಿಧಾನಸಭಾ ಕ್ಷೇತ್ರದಲ್ಲಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಾಕ್ಷಣ ಅಲ್ಲೇ ಸ್ಪರ್ಧಿಸುವೆ ಎಂದರ್ಥವಲ್ಲ. ಪಕ್ಷದ ನಾಯಕನಾಗಿ ಎಲ್ಲ ಕ್ಷೇತ್ರಗಳಲ್ಲೂ ಪ್ರವಾಸ ಮಾಡುತ್ತಿದ್ದೇನೆ' ಎಂದು ಪ್ರತಿಕ್ರಿಯಿಸಿದರು.

ನಂಜನಗೂಡು ತಾಲ್ಲೂಕಿನ ತಗಡೂರಿನಲ್ಲಿ ಕಾಂಗ್ರೆಸ್ ಏರ್ಪಡಿಸಿದ್ದ 'ಸ್ವಾತಂತ್ರ್ಯ ನಡಿಗೆ' ಕಾರ್ಯಕ್ರಮದಲ್ಲಿ ಕೇಳಿಬಂದ 'ವರುಣಾದಲ್ಲೇ ಸ್ಪರ್ಧಿಸಬೇಕು' ಎಂಬ ಒತ್ತಾಯದ ಬಗ್ಗೆ ಅವರು ತಮ್ಮ ಭಾಷಣದಲ್ಲಿ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

## ಹುಟ್ಟಿದ ಕೂಡಲೇ ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿದ್ದೀರಾ: ಎಚ್‌ಡಿಕೆ

**ಬೆಂಗಳೂರು:** 'ಸ್ವಾತಂತ್ರ್ಯ ಹೋರಾಟಕ್ಕೆ ನಿಮ್ಮ ಕೊಡುಗೆ ಏನು. ವಿಕಿಪೀಡಿಯಾ ಪ್ರಕಾರ, ನಿಮ್ಮ ಜನ್ಮ ವರ್ಷ 1947. ಹುಟ್ಟಿದ ಕೂಡಲೇ ಪಂಚೆ ಕಟ್ಟಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿದ್ದೀರಾ ಮಿಸ್ಟರ್ ಸಿದ್ದರಾಮಯ್ಯ?' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

'ಸ್ವಯಂಘೋಷಿತ ಸಂವಿಧಾನ ರಕ್ಷಕ ಸಿದ್ದರಾಮಯ್ಯ ಜೆಡಿಎಸ್ ಬಗ್ಗೆ ಮತ್ತೆ ವಿಷಕಾರಿಕೊಂಡಿದ್ದಾರೆ. ಜೆಡಿಎಸ್ ಪಕ್ಷ ಸ್ವಾತಂತ್ರ್ಯ ಹೋರಾಟಕ್ಕೆ ನೀಡಿದ ಕೊಡುಗೆ ಏನು ಎಂದು ಅವರು ಪ್ರಶ್ನಿಸಿದ್ದಾರೆ. ನಮ್ಮ ಪಕ್ಷದ್ದು ಇರಲಿ, ಸ್ವಾತಂತ್ರ್ಯ ಹೋರಾಟಕ್ಕೆ ಈ ಸೋಗಲಾಡಿ ಸಿದ್ದಸೂತ್ರದಾರನ ಕೊಡುಗೆ ಏನು' ಎಂದು ಟ್ವೀಟ್ ಮಾಡಿದ್ದಾರೆ.

'ಜೆಡಿಎಸ್ ಸ್ಥಾಪನೆ ಆಗಿದ್ದೇ 1999ರಲ್ಲಿ. ಆಗ ನೀವು ಎಲ್ಲಿದ್ದೀರಿ? ನಿಮಗೂ ಕಾಂಗ್ರೆಸ್ ಪಕ್ಷಕ್ಕೂ ಏನು ಸಂಬಂಧ? ನೀವು ಕಾಂಗ್ರೆಸ್ ಸೇರಿದ್ದು 2006ರಲ್ಲಿ. ಹೀಗಾಗಿ, ಆ ಪಕ್ಷದ ಪೂರ್ವಾಪರದ ಬಗ್ಗೆ ಮಾತನಾಡಲು ಏನು ನೈತಿಕತೆ ಇದೆ ನಿಮಗೆ' ಎಂದು ಪ್ರಶ್ನಿಸಿದ್ದಾರೆ.

'ಗೆದ್ದಲು ಕಟ್ಟಿಕೊಂಡ ಹುತ್ತಕ್ಕೆ ಹಾವಿನಂತೆ ಸೇರಿಕೊಂಡ ನೀವು, ಸ್ವಾರ್ಥ ಬೀಜಾಸುರನಾಗಿ ಆ ಪಕ್ಷದ ಮೂಲ ನಾಯಕರನ್ನೆಲ್ಲ ನುಂಗುತ್ತಿರುವ ನಿಮ್ಮ ಬಕಾಸುರ ಬಾಯಲ್ಲಿ ಸ್ವಾತಂತ್ರ್ಯ ಹೋರಾಟದ ಪಾರಾಯಣವೇ? ನಿಮಗೆ ಅದು ಬೇರೆ ಕೇಡು. ಅಧಿಕಾರಕ್ಕಾಗಿ ದೀನ ದಲಿತರು, ಅಲ್ಪಸಂಖ್ಯಾತರ ಹೆಸರು ಬಳಸಿಕೊಂಡು, ಹಾದಿಬೀದಿಯಲ್ಲಿ ಹೈಡ್ರಾಮಾ ಮಾಡಿ ಕಾಂಗ್ರೆಸ್‌ಗೆ ವಕ್ಕರಿಸಿಕೊಂಡ ನಿಮಗೆ, ಸ್ವಾತಂತ್ರ್ಯ ಹೋರಾಟದ ಬಗ್ಗೆ ಮಾತನಾಡುವ ನೈತಿಕ ಹಕ್ಕು ಇದೆಯಾ' ಎಂದು ಕೇಳಿದ್ದಾರೆ.

'ನೀವು ಹೇಳಿದ ಕಾಂಗ್ರೆಸ್ ಈಗೆಲ್ಲಿದೆ? ನೀವು ಕದ್ದಮಾಲು ಹ್ಯೂಬ್ಲೋ ವಾಚು ಕಟ್ಟಿದಾಗಲೇ 1947ರ ಕಾಂಗ್ರೆಸ್‌ಗೆ ಸಮಾಧಿ ಕಟ್ಟಿ ತಿಥಿ ಊಟವನ್ನೂ ಮಾಡಿದ್ದೀರಿ' ಎಂದು ಕುಟುಕಿದ್ದಾರೆ.

ಹೆರಿಗೆ ಸೌಲಭ್ಯ ಸಹಾಯಧನ ₹50 ಸಾವಿರಕ್ಕೆ ಏರಿಕೆ

# ಕಟ್ಟಡ ಕಾರ್ಮಿಕರಿಗೆ ಕೊಡುಗೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಕಾರ್ಯಕ್ರಮಗಳ (ಉದ್ಯೋಗ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ನಿಯಮಗಳಿಗೆ ತಿದ್ದುಪಡಿ ಮಾಡಿ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ.

ಇದರಿಂದಾಗಿ ಕಾರ್ಮಿಕರ ಧನ ಸಹಾಯ, ಸಾಮಾಜಿಕ ಭದ್ರತೆ ಯೋಜನೆಗಳ ಮೊತ್ತ ಹೆಚ್ಚಳವಾಗಲಿದೆ. ಅಲ್ಲದೆ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯು ಎಲ್ಲ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿ ಮಾಡಲು ಈ ತಿದ್ದುಪಡಿ ಮಾಡಲಾಗಿದೆ. ಇದಕ್ಕೆ ಈಗಾಗಲೇ ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ಪಡೆಯಲಾಗಿತ್ತು.

**ತಿದ್ದುಪಡಿಯ ಪ್ರಮುಖ ಅಂಶಗಳು:**
- ಪಿಂಚಣಿ ಸೌಲಭ್ಯ ₹2,000 ದಿಂದ ₹3,000 ಕ್ಕೆ ಹೆಚ್ಚಳ
- ಗೃಹ ಭಾಗ್ಯ ಸೌಲಭ್ಯದಡಿ 21ರಿಂದ 50 ವರ್ಷದ ನೋಂದಾಯಿತ ಫಲಾನುಭವಿಗಳಿಗೆ ಮನೆ ಕಟ್ಟಲು 10 ಕಂತುಗಳಲ್ಲಿ ಸಾಲ ನೀಡಲು ನಿಯಮಗಳ ಸರಳೀಕರಣ
- ಹೆರಿಗೆ ಸೌಲಭ್ಯದಡಿ ಸಹಾಯಧನ ₹50 ಸಾವಿರಕ್ಕೆ ಹೆಚ್ಚಳ

*ಅಂತಿಮ ಸಂಸ್ಕಾರ ವೆಚ್ಚ ಸೌಲಭ್ಯದಡಿ ಸಹಾಯ ಧನ ₹50,000 ದಿಂದ ₹71,000ಕ್ಕೆ ಹೆಚ್ಚಳ. ಕೋವಿಡ್‌ನಿಂದ ಫಲಾನುಭವಿ ಮೃತಪಟ್ಟರೆ ಅವಲಂಬಿತರಿಗೆ ₹2 ಲಕ್ಷ ಸಹಾಯಧನ
- ಫಲಾನುಭವಿಗಳ ಮಕ್ಕಳು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಯಲು ತರಬೇತಿ, ಕಲಿಕಾ ಕಿಟ್, ಕಂಪ್ಯೂಟರ್, ಲ್ಯಾಪ್ ಟಾಪ್ ಮತ್ತು ಟ್ಯಾಬ್ ವಿತರಣೆ
- ವೈದ್ಯಕೀಯ ಸೌಲಭ್ಯದಡಿ ಸಹಾಯಧನ ₹10,000 ದಿಂದ ₹20,000 ಕ್ಕೆ ಹೆಚ್ಚಳ, ಕಾರ್ಮಿಕರು ಕೆಲಸ ನಿರ್ವಹಿಸುವ ಸ್ಥಳದಲ್ಲಿ ಸಂಚಾರಿ ವೈದ್ಯಕೀಯ ಘಟಕಗಳ ಸ್ಥಾಪನೆ, ಅವಶ್ಯಕತೆ ಇದ್ದಾಗ ಪೌಷ್ಠಿಕ ಆಹಾರ ಕಿಟ್‌ಗಳ ವಿತರಣೆ.
- ಫಲಾನುಭವಿ ಕೆಲಸ ಮಾಡುವ ಸ್ಥಳದಲ್ಲಿ ಅಪಘಾತದಿಂದ ಮೃತಪಟ್ಟರೆ ಅವಲಂಬಿತರಿಗೆ ಪರಿಹಾರ ₹2 ಲಕ್ಷದಿಂದ ₹5 ಲಕ್ಷಕ್ಕೆ ಏರಿಕೆ
- ಮದುವೆ ಸಹಾಯಧನದ ಮೊತ್ತ ₹50,000 ದಿಂದ ₹60,000 ಕ್ಕೆ ಏರಿಕೆ
- ಸಾರಿಗೆ ಸೌಲಭ್ಯದಡಿ ಫಲಾನುಭವಿಗಳಿಗೆ ರಾಜ್ಯದಾದ್ಯಂತ ಕೆಎಸ್‌ಆರ್‌ಟಿಸಿ ಬಸ್‌ಪಾಸ್ ಸೌಲಭ್ಯ ಒದಗಿಸುವುದು.
- ಮಂಡಳಿಯ ಕಾರ್ಯದರ್ಶಿಗಳಿಗೆ ಆರ್ಥಿಕ ಇಲಾಖೆ ನಿಗದಿ ಮಾಡಿರುವ ವಿತ್ತಾಧಿಕಾರ ₹2 ಕೋಟಿಯಿಂದ ₹2.5 ಕೋಟಿಗೆ ಹೆಚ್ಚಿಸುವುದು

## ಮೇಕೆದಾಟು ಯಾತ್ರೆಗೆ ಸಿದ್ದರಾಮೋತ್ಸವ ಪ್ರತ್ಯುತ್ತರ:ವಿಜಯೇಂದ್ರ

**ಶಿಕಾರಿಪುರ:** 'ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಸಿದ್ದರಾಮೋತ್ಸವವು ಡಿ.ಕೆ. ಶಿವಕುಮಾರ್ ಅವರ ಮೇಕೆದಾಟು ಪಾದಯಾತ್ರೆಗೆ ಪ್ರತ್ಯುತ್ತರವಾಗಿರಬಹುದು' ಎಂದು ಬಿಜೆಪಿ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಅಭಿಪ್ರಾಯಪಟ್ಟರು.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕಾಂಗ್ರೆಸ್‌ನಲ್ಲಿ ಹಗ್ಗಜಗ್ಗಾಟ ನಡೆಯುತ್ತಿದೆ. ಡಿ.ಕೆ. ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷರಾದ ಮೇಲೆ ತಮ್ಮ ನಾಯಕತ್ವ ಪರೀಕ್ಷೆ ಮಾಡಿಕೊಳ್ಳಲು ಮೇಕೆದಾಟು ಪಾದಯಾತ್ರೆ ಮಾಡಿದರು. ಸಹಜವಾಗಿಯೇ ಸಿದ್ದರಾಮಯ್ಯ ಅವರು ಸಿದ್ದರಾಮೋತ್ಸವ ನಡೆಸುವ ಮೂಲಕ ಮೇಕೆದಾಟು ಪಾದಯಾತ್ರೆಗೆ ಪ್ರತ್ಯುತ್ತರ ನೀಡಿದ್ದಾರೆ ಎಂದು ನಾವು ಭಾವಿಸಿದ್ದೇವೆ. ಕಾಂಗ್ರೆಸ್ ಆಂತರಿಕ ಕಲಹದಲ್ಲಿ ಬಿಜೆಪಿ ತಲೆ ಹಾಕುವುದಿಲ್ಲ' ಎಂದು ಹೇಳಿದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಬೇಸರ

# ಶೇ 10ರ ಮೀಸಲಾತಿ ವಿರುದ್ಧ ಧ್ವನಿ ಎತ್ತದ ಒಬಿಸಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಮೀಸಲಾತಿ ವಿರೋಧಿಸುತ್ತಿದ್ದವರು ಶೇ 10ರಷ್ಟು ಮೀಸಲಾತಿ ದೊರೆತ ಮೇಲೆ ಸುಮ್ಮನಾದರು. ಆರ್ಥಿಕತೆಯ ಆಧಾರದಲ್ಲಿ ಮೇಲ್ವರ್ಗಗಳಿಗೆ ನೀಡಿದ ಮೀಸಲಾತಿ ವಿರುದ್ಧ ಪರಿಶಿಷ್ಟರು, ಹಿಂದುಳಿದ ವರ್ಗಗಳು ಧ್ವನಿಯನ್ನೇ ಎತ್ತಲಿಲ್ಲ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಬೇಸರ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಒಕ್ಕೂಟ ಸೋಮವಾರ ಹಮ್ಮಿಕೊಂಡಿದ್ದ ಹಾವನೂರು ಆಯೋಗದ ಸುವರ್ಣ ಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಹಾವನೂರು, ಮಂಡಲ್ ಆಯೋಗದ ವರದಿ ಸೇರಿದಂತೆ ಒಟ್ಟಾರೆ ಮೀಸಲಾತಿ ವಿರೋಧಿಸಿದ್ದು ಇದೇ ಸಂಘ ಪರಿವಾರ, ಬಿಜೆಪಿ. ಮೀಸಲಾತಿ ವಿರೋಧಿಸಿದ್ದ ರಾಮಾಜೋಯಿಸ್ ಅವರ ನಡೆ ಸಮರ್ಥಿಸಿಕೊಂಡಿದ್ದ ಅಂತಹ ಪಕ್ಷದ ಜತೆಗೆ ಹಿಂದುಳಿದ ವರ್ಗಗಳು ಗುರುತಿಸಿಕೊಳ್ಳುತ್ತಿರುವುದು ವಿಪರ್ಯಾಸ ಎಂದರು.

ಸಾವಿರಾರು ವರ್ಷಗಳಿಂದಲೂ ಶೇ 90ರಷ್ಟು ಮೀಸಲಾತಿಯನ್ನು ಅಲಿಖಿತವಾಗಿ ಅನುಭವಿಸುತ್ತಾ ಬಂದ ವರ್ಗ ಹೇಗೆ ತಾನೆ ತಮ್ಮ ಸೌಲಭ್ಯ ಬಿಟ್ಟುಕೊಡಲು ಸಾಧ್ಯ? ಬಹುಸಂಖ್ಯಾತ ಶೂದ್ರರು, ದಲಿತರು, ಮಹಿಳೆಯರು ಅಕ್ಷರ ಸಂಸ್ಕೃತಿ, ಸಂಪತ್ತಿನ ಹಿಡಿತದಿಂದ ವಂಚಿತರಾಗಿದ್ದರು. ನಾಲ್ವಡಿ ಕೃಷ್ಣರಾಜ ಒಡೆಯರ್ ಮಿಲ್ಲರ್ ಸಮಿತಿ ಮೂಲಕ ಮೀಸಲಾತಿ ಕ್ರಾಂತಿಗೆ ಮುನ್ನುಡಿ ಬರೆದರು. ನಂತರ ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಅಳವಡಿಸಿದರು. 50 ವರ್ಷಗಳ ಹಿಂದೆ ಎಲ್.ಜಿ.ಹಾವನೂರು ಅವರು ಇತಿಹಾಸ ನಿರ್ಮಾಣಕ್ಕೆ ಸಾಕ್ಷಿಯಾದರು ಎಂದು ಬಣ್ಣಿಸಿದರು.

ಹಿರಿಯ ವಕೀಲ ರವಿವರ್ಮ ಕುಮಾರ್, ಹಾವನೂರು ಆಯೋಗದ ವರದಿಯ ಹಲವು ಶಿಫಾರಸುಗಳನ್ನು ಇಂದಿಗೂ ಜಾರಿಗೆ ತಂದಿಲ್ಲ ಎಂದರು.

ದಕ್ಷಿಣ ಆಫ್ರಿಕಾ ಸಂವಿಧಾನದಲ್ಲೂ ಹಾವನೂರು ವರದಿಯ ಹಲವು ಅಂಶ ಅಳವಡಿಸಿಕೊಳ್ಳಲಾಗಿದೆ. ವರ್ಣಭೇದ ನೀತಿ ವಿರುದ್ಧದ ನೀತಿಗಳು, ಶೋಷಿತ ವರ್ಗಗಳ ಗುರುತಿಸುವಿಕೆ, ಮಾಹಿತಿ ಸಂಗ್ರಹದ ಅಂಶಗಳು ಪ್ರಭಾವ ಬೀರಿವೆ ಎಂದರು. ಮಾಜಿ ಸಚಿವ ಎಚ್.ಎಂ.ರೇವಣ್ಣ, ಮಾಜಿ ಸಭಾಪತಿ ವಿ.ಆರ್. ಸುದರ್ಶನ್, ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷರಾದ ಶಂಕರಪ್ಪ, ಕಾಂತರಾಜ್, ಒಕ್ಕೂಟದ ಅಧ್ಯಕ್ಷ ಬಿ.ಕೆ.ರವಿ ಉಪಸ್ಥಿತರಿದ್ದರು.

ಹಾವನೂರ್ ಆಯೋಗದ ಸುವರ್ಣ ಮಹೋತ್ಸವ ಸಮಾರಂಭದಲ್ಲಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ತಮಿಳುನಾಡಿನ ದ್ರಾವಿಡ ಕಳಗಂ ಅಧ್ಯಕ್ಷ ವೀರಮಣಿ ಅವರಿಗೆ ಮೈಸೂರು ಪೇಟ ತೊಡಿಸಿ ಸನ್ಮಾನಿಸಿದರು. ರವಿವರ್ಮಕುಮಾರ್, ರಾಮಚಂದ್ರಪ್ಪ ಇದ್ದಾರೆ. –ಪ್ರಜಾವಾಣಿ ಚಿತ್ರ

## 'ಭಾರತದ ಭರವಸೆ ಸಿದ್ದರಾಮಯ್ಯ'

ಪ್ರಜಾಪ್ರಭುತ್ವ, ಜಾತ್ಯತೀತತೆ, ಸಾಮಾಜಿಕ ನ್ಯಾಯ ಉಳಿಸಲು, ಅನುಷ್ಠಾನಗೊಳಿಸಲು ಸಿದ್ದರಾಮಯ್ಯ ಭಾರತಕ್ಕೆ ಅನಿವಾರ್ಯ. ರಾಜ್ಯದ ಜನರು ಅವರ ಬೆಂಬಲಕ್ಕೆ ನಿಲ್ಲಬೇಕು ಎಂದು ತಮಿಳುನಾಡಿನ ದ್ರಾವಿಡ ಕಳಗಂ ಪಕ್ಷದ ಅಧ್ಯಕ್ಷ ವೀರಮಣಿ ಕೋರಿದರು.
ಸಾಮಾಜಿಕ ನ್ಯಾಯದಲ್ಲಿ ಇತಿಹಾಸ ನಿರ್ಮಾಣ ಮಾಡಿದವರು ಹಾವನೂರು. ವರದಿ ಅನುಷ್ಠಾನಕ್ಕೆ ಶ್ರಮಿಸಿದವರು ದೇವರಾಜ ಅರಸು. ಅವರ ನಂತರದ ಆಶಾ ಕಿರಣ ಸಿದ್ದರಾಮಯ್ಯ. ಅವರೇ ರಾಜ್ಯದ ಮುಂದಿನ ಮುಖ್ಯಮಂತ್ರಿ ಎಂದರು.

## ಮೂಲಸೌಕರ್ಯ ಒದಗಿಸಿದ ನಂತರ ಪ್ರಕ್ರಿಯೆ: ಎಸ್‌.ಆರ್‌. ವಿಶ್ವನಾಥ್

# ಬಿಡಿಎ ಬಡಾವಣೆ ಶೀಘ್ರ ಬಿಬಿಎಂಪಿಗೆ

ಪ್ರಜಾವಾಣಿ ವಾರ್ತೆ

ಬನಶಂಕರಿ 6ನೇ ಹಂತ, ಜೆ.ಪಿ. ನಗರ 8, 9 ನೇ ಹಂತ ಹಾಗೂ ಅಂಜನಾಪುರ ಮುಂದುವರೆದ ಬಡಾವಣೆಗಳ ಮೂಲಸೌಕರ್ಯವನ್ನು ಬಿಡಿಎ ಅಧ್ಯಕ್ಷ ಎಸ್‌.ಆರ್‌. ವಿಶ್ವನಾಥ್ ಸೋಮವಾರ ಪರಿಶೀಲಿಸಿದರು. ಬಿಡಿಎ ಆಯುಕ್ತ ರಾಜೇಶ್ ಗೌಡ, ಬೆಂಗಳೂರು ದಕ್ಷಿಣ ಕ್ಷೇತ್ರದ ಶಾಸಕ ಎಂ.ಕೃಷ್ಣಪ್ಪ, ಅಧಿಕಾರಿಗಳು ಇದ್ದರು

**ಬೆಂಗಳೂರು:** ಬನಶಂಕರಿ, ಅಂಜನಾಪುರ ಮತ್ತು ವಿಶ್ವೇಶ್ವರಯ್ಯ ಬಡಾವಣೆಗಳಿಗೆ ಮೂಲಸೌಕರ್ಯ ಒದಗಿಸಿ, ನಂತರ ಬಿಬಿಎಂಪಿಗೆ ಹಸ್ತಾಂತರಿಸಲಾಗುವುದು ಎಂದು ಬಿಡಿಎ ಅಧ್ಯಕ್ಷ ಎಸ್.ಆರ್. ವಿಶ್ವನಾಥ್ ತಿಳಿಸಿದರು.

ಬನಶಂಕರಿ 6ನೇ ಹಂತ, ಜೆ.ಪಿ. ನಗರ 8, 9ನೇ ಹಂತ ಹಾಗೂ ಅಂಜನಾಪುರ ಮುಂದುವರೆದ ಬಡಾವಣೆಗಳ ಮೂಲಸೌಕರ್ಯವನ್ನು ಸೋಮವಾರ ಪರಿಶೀಲಿಸಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಬೆಂಗಳೂರು ದಕ್ಷಿಣ ಕ್ಷೇತ್ರದ ಶಾಸಕ ಎಂ.ಕೃಷ್ಣಪ್ಪ, ಬಿಡಿಎ ಆಯುಕ್ತ ಎಂ.ಬಿ. ರಾಜೇಶ್ ಗೌಡ ಅವರ ನೇತೃತ್ವದ ಅಧಿಕಾರಿಗಳ ತಂಡ ಪರಿಶೀಲನೆ ನಡೆಸಿತು.

ಸಾರ್ವಜನಿಕರು ಮತ್ತು ಜನಪ್ರತಿನಿಧಿಗಳ ಅಹವಾಲು ಸ್ವೀಕರಿಸಿದ ವಿಶ್ವನಾಥ್, ‘ನಾನಾ ಕಾರಣಗಳಿಂದಾಗಿ ಅಂಜನಾಪುರ, ಬನಶಂಕರಿ ಮತ್ತು ವಿಶ್ವೇಶ್ವರಯ್ಯ ಬಡಾವಣೆಗಳಿಗೆ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸುವಲ್ಲಿ ವಿಳಂಬವಾಗಿದೆ. ಕುಡಿವ ನೀರು, ಒಳಚರಂಡಿ, ವಿದ್ಯುತ್, ರಸ್ತೆ ಸಂಪರ್ಕ ಸೇರಿದಂತೆ ಇನ್ನಿತರೆ ಮೂಲಸೌಕರ್ಯಗಳನ್ನು ಕಲ್ಪಿಸಲು ಬಿಡಿಎ ಪ್ರಾಧಿಕಾರ ಮಂಡಳಿಯಲ್ಲಿ ನಿರ್ಧರಿಸಲಾಗಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮೂಲಸೌಕರ್ಯಗಳನ್ನು ಒದಗಿಸಲು ಸೂಚಿಸಿದ್ದಾರೆ’ ಎಂದು ತಿಳಿಸಿದರು.

‘ಒಂದು ವರ್ಷದಲ್ಲಿ ವಿವಿಧ ಬಡಾವಣೆಗಳಲ್ಲಿ ಅತಿಕ್ರಮಿಸಿದವರ ವಿರುದ್ಧ ಸಮರ ಸಾರಿ ಕಾನೂನಿನಡಿ ಬಿಡಿಎ ಜಾಗವನ್ನು ಮರುವಶ ಪಡೆದುಕೊಳ್ಳಲಾಯಿತು. ಇದರಿಂದ ಸಂಸ್ಥೆಗೆ ಸಾಕಷ್ಟು ಆದಾಯ ಬಂದಿದೆ. ಜೊತೆಗೆ ಆರ್ಥಿಕ ಸಂಪನ್ಮೂಲ ಕ್ರೋಡೀಕರಣಕ್ಕೂ ಕಾರಣವಾಗಿದೆ. ಇದುವರೆಗೆ ಬಿಡಿಎಗೆ ಸೇರಿದ 9 ಸಾವಿರ ನಿವೇಶನಗಳನ್ನು ಪತ್ತೆ ಮಾಡಿದ್ದು, ಹಂತ ಹಂತವಾಗಿ ಹರಾಜು ಪ್ರಕ್ರಿಯೆ ನಡೆಸಲಾಗುತ್ತಿದೆ. ಇದರಿಂದ ಇದುವರೆಗೆ ಸುಮಾರು ₹3 ಸಾವಿರ ಕೋಟಿ ಆದಾಯ ಬಂದಿದೆ’ ಎಂದರು.

‘ಬನಶಂಕರಿ ಮುಂದುವರಿದ ಬಡಾವಣೆಗೆ ಕುಡಿಯುವ ನೀರು ಪೂರೈಸಲು ಜಲಮಂಡಳಿಗೆ ₹54 ಕೋಟಿ ಪೈಕಿ ₹27.50 ಕೋಟಿ ಸಂದಾಯ ಮಾಡಲಾಗಿದೆ. ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆಗೆ ಹಣದ ಕೊರತೆ ಇಲ್ಲ’ ಎಂದು ತಿಳಿಸಿದರು.

‘ಬೆಂಗಳೂರು ದಕ್ಷಿಣ ಮತ್ತು ಯಶವಂತಪುರ ವಿಧಾನಸಭೆ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಬರುವ ಬಿಡಿಎ ಬಡಾವಣೆಗಳ ಮೂಲಸೌಕರ್ಯಕ್ಕಾಗಿ ಸುಮಾರು ₹400 ಕೋಟಿ ಮೀಸಲಿಡಲಾಗಿದ್ದು, ಈಗಾಗಲೇ ₹200 ಕೋಟಿ ವೆಚ್ಚದ ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ’ ಎಂದರು.

‘ಅರ್ಕಾವತಿ ಬಡಾವಣೆಯ ಮೂಲಸೌಕರ್ಯಕ್ಕಾಗಿ ₹450 ಕೋಟಿ, ಹೆಬ್ಬಾಳ ಮೇಲ್ಸೇತುವೆ ವಿಸ್ತರಣೆಗೆ ₹175 ಕೋಟಿ ಮೀಸಲಾಗಿದೆ. ನಾಡಪ್ರಭು ಕೆಂಪೇಗೌಡ ಬಡಾವಣೆಗೆ ಮೂಲಸೌಕರ್ಯ ಕಲ್ಪಿಸಲು ಅಗತ್ಯವಿರುವ ಅನುದಾನ ಬಿಡುಗಡೆ ಮಾಡಿದ್ದು, ಕಾಮಗಾರಿಯನ್ನು ತ್ವರಿತಗತಿಯಲ್ಲಿ ನಡೆಸಲಾಗುತ್ತದೆ’ ಎಂದು ವಿಶ್ವನಾಥ್ ತಿಳಿಸಿದರು.

ಬಿಡಿಎ ಕಾರ್ಯದರ್ಶಿ ಆನಂದ್, ಎಂಜಿನಿಯರ್ ಸುರೇಶ್, ಅಶೋಕ್ ಇದ್ದರು.

## ನೇಣು ಬಿಗಿದ ಸ್ಥಿತಿಯಲ್ಲಿ ಮೃತದೇಹಗಳು ಪತ್ತೆ

# ಮಗಳ ಕೊಂದು ತಾಯಿ ಆತ್ಮಹತ್ಯೆ ಶಂಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬನಶಂಕರಿ ಠಾಣೆ ವ್ಯಾಪ್ತಿಯಲ್ಲಿ ತಾಯಿ–ಮಗಳ ಮೃತದೇಹಗಳು ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ತಾಯಿಯೇ ಮಗಳನ್ನು ಕೊಂದು ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ವ್ಯಕ್ತವಾಗಿದೆ.

‘ಠಾಣೆ ವ್ಯಾಪ್ತಿಯಲ್ಲಿ ವಾಸವಿದ್ದ ದಂತವೈದ್ಯೆ ಶೈಮಾ (39) ಹಾಗೂ ಮಗಳು ಆರಾಧನಾ (9) ಇಬ್ಬರ ಮೃತದೇಹಗಳು ಆಗಸ್ಟ್ 6ರಂದು ಮಧ್ಯಾಹ್ನ ಪತ್ತೆಯಾಗಿವೆ. ಇವರಿಬ್ಬರ ಸಾವಿನಲ್ಲಿ ಅನುಮಾನವಿರುವ ಬಗ್ಗೆ ಶೈಮಾ ಸಹೋದರ ಶರತ್ ದೂರು ನೀಡಿದ್ದು, ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಮಗಳು ಆರಾಧನಾ ಜೊತೆ ಶೈಮಾ

‘ಕೊಡಗಿನ ವಿರಾಜಪೇಟೆಯ ಶೈಮಾ, ಕೋಲಾರದ ನಾರಾಯಣ್ ಅವರನ್ನು ಪ್ರೀತಿಸಿ 10 ವರ್ಷಗಳ ಹಿಂದೆ ಮದುವೆಯಾಗಿದ್ದರು. ಮಗಳು ಆರಾಧನಾ ಜೊತೆ ದಂಪತಿ ವಾಸವಿದ್ದರು. ನಾರಾಯಣ್ ಸಹ ವೈದ್ಯರಾಗಿದ್ದು, ಮನೆಯ ಸಮೀಪದಲ್ಲಿ ಕ್ಲಿನಿಕ್ ನಡೆಸುತ್ತಿದ್ದರು. ಶೈಮಾ ಅವರಿಗೆ ಸಹಾಯ ಮಾಡುತ್ತಿದ್ದರು’ ಎಂದು ಮೂಲಗಳು ತಿಳಿಸಿವೆ.

**ಕಾರಣ ನಿಗೂಢ:** ‘ನಾರಾಯಣ್ ಅವರು ಆಗಸ್ಟ್ 6ರಂದು ಕೆಲಸದ ನಿಮಿತ್ತ ಹೊರಗಡೆ ಹೋಗಿದ್ದರು. ಈ ವೇಳೆ ಶೈಮಾ ಹಾಗೂ ಆರಾಧನಾ ಮಾತ್ರ ಮನೆಯಲ್ಲಿದ್ದರು. ಬಾಗಿಲನ್ನು ಒಳಗಡೆಯಿಂದ ಲಾಕ್ ಮಾಡಿಕೊಂಡಿದ್ದರು. ಮಧ್ಯಾಹ್ನವಾದರೂ ಅವರಿಬ್ಬರು ಬಾಗಿಲು ತೆರೆದು ಹೊರಗೆ ಬಂದಿರಲಿಲ್ಲ. ಅನುಮಾನಗೊಂಡು ಕಿಟಕಿಯಲ್ಲಿ ನೋಡಿದಾಗ ಮೃತದೇಹಗಳು ಕಂಡಿದ್ದವು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮಾಹಿತಿ ಬರುತ್ತಿದ್ದಂತೆ ಸ್ಥಳಕ್ಕೆ ಹೋಗಿ ಮೃತದೇಹಗಳನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಇವರಿಬ್ಬರ ಸಾವಿನಲ್ಲಿ ಅನುಮಾನ ಇರುವುದಾಗಿ ಶೈಮಾ ಕುಟುಂಬದವರು ತಿಳಿಸಿದ್ದರು. ಹೀಗಾಗಿ, ತಕ್ಷಣ ದೂರು ದಾಖಲಿಸಿಕೊಂಡಿರಲಿಲ್ಲ. ಆಸ್ಟ್ರೇಲಿಯಾದಲ್ಲಿದ್ದ ಸಹೋದರ ಶರತ್, ಸೋಮವಾರ ನಗರಕ್ಕೆ ಬಂದು ದೂರು ನೀಡಿದ್ದಾರೆ. ಮರಣೋತ್ತರ ಪರೀಕ್ಷೆ ನಡೆಸಿ, ಮೃತದೇಹಗಳನ್ನು ಹಸ್ತಾಂತರಿಸಲಾಗಿದೆ.’

‘ಆರಾಧನಾ ಕುತ್ತಿಗೆಗೆ ನೇಣು ಬಿಗಿದು ಕೊಲೆ ಮಾಡಿದ ಬಳಿಕ ಶೈಮಾ ಸಹ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಸ್ಥಳದಲ್ಲಿ ಯಾವುದೇ ಮರಣಪತ್ರ ಸಿಕ್ಕಿಲ್ಲ. ಮರಣೋತ್ತರ ಪರೀಕ್ಷೆ ವರದಿ ಬಂದ ನಂತರ ಸಾವಿಗೆ ನಿಖರ ಕಾರಣ ತಿಳಿಯಲಿದೆ. ಪತಿ ನಾರಾಯಣ್ ಹಾಗೂ ಇತರರನ್ನೂ ವಿಚಾರಣೆ ನಡೆಸಲಾಗುವುದು’ ಎಂದೂ ಮೂಲಗಳು ತಿಳಿಸಿವೆ.

ಸಂಪಂಗಿರಾಮನಗರ ಠಾಣೆ ವ್ಯಾಪ್ತಿಯಲ್ಲೂ ಆಗಸ್ಟ್ 4ರಂದು ತಾಯಿ ಸುಷ್ಮಾ (34) ಎಂಬುವರು ತಮ್ಮ ನಾಲ್ಕು ವರ್ಷದ ಮಗಳು ದ್ವಿತಿಯನ್ನು ನಾಲ್ಕನೇ ಮಹಡಿಯಿಂದ ಎಸೆದು ಕೊಲೆ ಮಾಡಿದ್ದರು. ಆರೋಪಿ ಸುಷ್ಮಾ ಸಹ ದಂತವೈದ್ಯೆ. ಬುದ್ಧಿಮಾಂದ್ಯ ಎಂಬ ಕಾರಣಕ್ಕೆ ಮಗಳನ್ನು ಕೊಂದಿರುವುದಾಗಿ ಹೇಳಿಕೆ ನೀಡಿದ್ದರು.

# ಸಿಮ್ ಕಾರ್ಡ್ ಕದ್ದು ₹ 3.45 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪರಿಚಯಸ್ಥರ ಸಿಮ್‌ಕಾರ್ಡ್ ಕದ್ದು, ಅದರ ಮೂಲಕ ಬ್ಯಾಂಕ್ ಖಾತೆ ವಹಿವಾಟು ನಡೆಸಿ ₹ 3.45 ಲಕ್ಷ ಡ್ರಾ ಮಾಡಿಕೊಂಡು ವಂಚಿಸಿದ್ದ ಆರೋಪದಡಿ ಜಿ.ಬಿ. ಪ್ರಕಾಶ್ (31) ಎಂಬುವರನ್ನು ಈಶಾನ್ಯ ವಿಭಾಗದ ಸೈಬರ್ ಕ್ರೈಂ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಮಂಡ್ಯ ಜಿಲ್ಲೆಯ ದುದ್ದ ಹೋಬಳಿಯ ಗುನ್ನ ನಾಯಕನಹಳ್ಳಿ ನಿವಾಸಿ ಪ್ರಕಾಶ್, ಮೇ 8ರಿಂದ 14ರ ಅವಧಿಯಲ್ಲಿ ಅಕ್ರಮವಾಗಿ ಹಣ ಡ್ರಾ ಮಾಡಿಕೊಂಡಿದ್ದ. ಠಾಣೆ ವ್ಯಾಪ್ತಿ ನಿವಾಸಿಯೊಬ್ಬರು ನೀಡಿದ್ದ ಆರೋಪದಡಿ ಪ್ರಕಾಶ್‌ನನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಶಾಖೆಯಲ್ಲಿ ಖಾತೆ ಹೊಂದಿರುವ ದೂರುದಾರ, ಖಾತೆಗೆ ತಮ್ಮ ಮೊಬೈಲ್ ಸಂಖ್ಯೆ ಜೋಡಿಸಿದ್ದರು. ಅದೇ ಸಂಖ್ಯೆ ಮೂಲಕ ಹಣದ ವಹಿವಾಟು ನಡೆಸುತ್ತಿದ್ದರು. ಇದನ್ನು ತಿಳಿದಿದ್ದ ಆರೋಪಿ, ಸಂಚು ರೂಪಿಸಿ ಖಾತೆಯಿಂದ ಹಣ ದೋಚಿದ್ದ’ ಎಂದು ತಿಳಿಸಿದರು.

**ಕರೆ ಮಾಡುವ ಸೋಗಿನಲ್ಲಿ ಕಳ್ಳತನ:** ‘ಸಂಬಂಧಿಕರಿಗೆ ಕರೆ ಮಾಡಬೇಕೆಂದು ದೂರುದಾರರಿಂದ ಮೊಬೈಲ್ ಪಡೆದಿದ್ದ ಆರೋಪಿ ಪ್ರಕಾಶ್, ಅದರ ಸಿಮ್ ಕಾರ್ಡ್ ಕದ್ದಿದ್ದರು. ನಂತರ, ಬೇರೊಂದು ಸಿಮ್ ಕಾರ್ಡ್ ಹಾಕಿ ಮೊಬೈಲ್ ವಾಪಸು ಕೊಟ್ಟಿದ್ದರು. ಕಾರ್ಡ್ ಕಳ್ಳತನವಾದ ಸಂಗತಿ ದೂರುದಾರರಿಗೆ ಗೊತ್ತಾಗಿರಲಿಲ್ಲ’ ಎಂದು ಪೊಲೀಸರು ಹೇಳಿದರು.

‘ಕದ್ದ ಸಿಮ್‌ಕಾರ್ಡ್ ಬೇರೊಂದು ಮೊಬೈಲ್‌ಗೆ ಹಾಕಿದ್ದ ಆರೋಪಿ, ದೂರುದಾರರ ಖಾತೆ ವ್ಯವಹಾರ ನಡೆಸಿದ್ದ. ಒನ್ ಟೈಂ ಪಾಸ್‌ವರ್ಡ್ (ಒಟಿಪಿ) ಸಹ ಅದೇ ಮೊಬೈಲ್‌ಗೆ ಬಂದಿದ್ದು. ಅದನ್ನು ದಾಖಲಿಸಿ ₹ 3.45 ಲಕ್ಷ ಡ್ರಾ ಮಾಡಿಕೊಂಡಿದ್ದ’ ಎಂದೂ ತಿಳಿಸಿದರು.

**ದ್ವಿಚಕ್ರ ವಾಹನ ಖರೀದಿ:** ‘ವಂಚನೆಯಿಂದ ಬಂದ ಹಣದಲ್ಲೇ ಆರೋಪಿ, ದ್ವಿಚಕ್ರ ವಾಹನ ಖರೀದಿಸಿದ್ದ. ₹ 1.30 ಲಕ್ಷ ತನ್ನ ಖಾತೆಯಲ್ಲೇ ಇಟ್ಟುಕೊಂಡಿದ್ದ. ಆರೋಪಿಯನ್ನು ಬಂಧಿಸುತ್ತಿದ್ದಂತೆ ದ್ವಿಚಕ್ರ ವಾಹನ, ಬೈಕ್ ಹಾಗೂ ಎರಡು ಮೊಬೈಲ್ ಜಪ್ತಿ ಮಾಡಲಾಗಿದೆ. ಖಾತೆ ವಹಿವಾಟು ಸ್ಥಗಿತಗೊಳಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

# ವಾರ್ಡ್ ರಚನೆ ಪ್ರಶ್ನಿಸಿ ರಿಟ್ ಅರ್ಜಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವಾರ್ಡ್‌ಗಳನ್ನು ರಚಿಸಿ 2022ರ ಜುಲೈ 14ರಂದು ಹೊರಡಿಸಿರುವ ಅಧಿಸೂಚನೆ ರದ್ದುಪಡಿಸಿ ಹೊಸದಾಗಿ ವಾರ್ಡ್‌ಗಳನ್ನು ರಚಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು’ ಎಂದು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದೆ.

ಈ ಸಂಬಂಧ ವಕೀಲ ಎಸ್. ಇಸ್ಮಾಯಿಲ್ ಜಬೀವುಲ್ಲಾ ಅವರು ಸಲ್ಲಿಸಿರುವ ಈ ರಿಟ್ ಅರ್ಜಿ ಇನ್ನಷ್ಟೇ ವಿಚಾರಣೆಗೆ ಬರಬೇಕಿದೆ. ಅರ್ಜಿಯಲ್ಲಿ ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಬೆಂಗಳೂರು ನಗರ ಜಿಲ್ಲಾಧಿಕಾರಿ, ಸೀಮಾ ನಿರ್ಣಯ ಆಯೋಗದ ಅಧ್ಯಕ್ಷ, ಬಿಬಿಎಂಪಿ ಮುಖ್ಯ ಆಯುಕ್ತ ಹಾಗೂ ರಾಜ್ಯ ಚುನಾವಣಾ ಆಯೋಗವನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ.

ವಾರ್ಡ್‌ಗಳ ಕರಡು ಪುನರ್ ವಿಂಗಡಣೆಯನ್ನು 2022ರ ಜೂನ್ 23ರಂದು ಪ್ರಕಟಿಸಲಾಗಿತ್ತು. ಅರ್ಜಿದಾರರು ಜುಲೈ 7ರಂದು ಇದಕ್ಕೆ ಆಕ್ಷೇಪಣೆ ಸಲ್ಲಿಸಿದ್ದರು. ಸರ್ಕಾರ ಮನವಿಯನ್ನು ಪರಿಗಣಿಸಿದ ಕಾರಣ ಅರ್ಜಿದಾರರು ಸುಪ್ರೀಂ ಕೋರ್ಟ್ ಮೊರೆಹೋಗಿದ್ದರು. ವಿವಾದವನ್ನು ಹೈಕೋರ್ಟ್‌ನಲ್ಲೇ ಬಗೆಹರಿಸಿಕೊಳ್ಳುವಂತೆ ಸುಪ್ರೀಂಕೋರ್ಟ್ ಸೂಚಿಸಿತ್ತು. ಈ ಹಿನ್ನೆಲೆಯಲ್ಲಿ ಅರ್ಜಿದಾರರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

# ಡಿ.ಕೆ.ಶಿವಕುಮಾರ್ ಅರ್ಜಿ: ಆಕ್ಷೇಪಣೆಗೆ ಸಮಯ ಕೋರಿದ ಸಿಬಿಐ

**ಬೆಂಗಳೂರು:** ಆದಾಯ ಮೀರಿದ ಆಸ್ತಿ ಗಳಿಕೆ ಆರೋಪಕ್ಕೆ ಸಂಬಂಧಿಸಿದಂತೆ ಸಿಬಿಐ ದಾಖಲಿಸಿರುವ ಎಫ್‌ಐಆರ್ ರದ್ದು ಕೋರಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ, ಆಕ್ಷೇಪಣೆ ಸಲ್ಲಿಸಲು ಇನ್ನಷ್ಟು ಸಮಯಾವಕಾಶ ಬೇಕು ಎಂದು ಸಿಬಿಐ ಹೈಕೋರ್ಟ್‌ಗೆ ಮನವಿ ಮಾಡಿದೆ.

ಈ ಸಂಬಂಧ ಡಿ.ಕೆ.ಶಿವಕುಮಾರ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಸಿಬಿಐ ಪರ ವಕೀಲ ಪಿ.ಪ್ರಸನ್ನಕುಮಾರ್, ‘ಅರ್ಜಿ ಅಧ್ಯಯನಕ್ಕೆ ಇನ್ನೂ ಒಂದಿಷ್ಟು ಸಮಯ ಬೇಕು. ಆದ್ದರಿಂದ, ಆಕ್ಷೇಪಣೆ ಸಲ್ಲಿಸಲು ಇನ್ನಷ್ಟು ಕಾಲಾವಕಾಶ ನೀಡಬೇಕು’ ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ವಿಚಾರಣೆಯನ್ನು ಇದೇ 29ಕ್ಕೆ ಮುಂದೂಡಿದೆ.

**ಯಾವುದೀ ಅರ್ಜಿ?:** ‘ನನ್ನ ವಿರುದ್ಧ 2020ರ ಅಕ್ಟೋಬರ್ 3ರಂದು ಭ್ರಷ್ಟಾಚಾರ ನಿಗ್ರಹ ತಡೆ ಕಾಯ್ದೆ–1988ರ ಕಲಂ 13 (2), 13 (1)(ಇ) ಅಡಿಯಲ್ಲಿ ದಾಖಲಿಸಲಾಗಿರುವ ಎಫ್‌ಐಆರ್ ಕಾನೂನು ಬಾಹಿರವಾಗಿದೆ. ಈ ಪ್ರಕರಣದ ಎಫ್‌ಐಆರ್‌ನಲ್ಲಿ ನನ್ನ ಕುಟುಂಬದ ಸದಸ್ಯರ ಹೆಸರನ್ನೂ ಸೇರ್ಪಡೆ ಮಾಡಿರುವುದು ತಪ್ಪು. ಭ್ರಷ್ಟಾಚಾರ ನಿಗ್ರಹ ತಡೆ ಕಾಯ್ದೆ ಕೇವಲ ಸಾರ್ವಜನಿಕ ಸೇವಕರಿಗೆ ಮಾತ್ರವೇ ಅನ್ವಯ ಆಗುತ್ತದೆ. ಕುಟುಂಬದ ಸದಸ್ಯರ ವಿರುದ್ಧವೂ ಸಿಬಿಐ ಪ್ರಕರಣ ದಾಖಲಿಸಿರುವುದು ಕಾನೂನಿಗೆ ವಿರೋಧವಾದುದು. ಆದ್ದರಿಂದ, ಎಫ್‌ಐಆರ್ ರದ್ದುಗೊಳಿಸಬೇಕು’ ಎಂದು ಶಿವಕುಮಾರ್ ಅರ್ಜಿಯಲ್ಲಿ ಕೋರಿದ್ದಾರೆ.

## ಸಂಕ್ಷಿಪ್ತ ಸುದ್ದಿ

### ಬಾಂಗ್ಲಾ ಗಡಿ: ಬಿಎಸ್‌ಎಫ್ ಯೋಧನ ಹತ್ಯೆ

**ಕೋಲ್ಕತ್ತ:** ಪಶ್ಚಿಮ ಬಂಗಾಳದ ನಾದಿಯಾ ಜಿಲ್ಲೆಯ ಬಾಂಗ್ಲಾದೇಶದ ಗಡಿ ಪ್ರದೇಶದ ಬಳಿ ಸೋಮವಾರ ಕಳ್ಳಸಾಗಣೆದಾರರು ಬಿಎಸ್‌ಎಫ್ ಯೋಧನ ಮೇಲೆ ಗುಂಡು ಹಾರಿಸಿ ಹತ್ಯೆಗೈದಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಫೆನ್ಸಿಡಿಲ್ ಕೆಮ್ಮಿನ ಸಿರಪ್‌ಗಳನ್ನು ಸಂಗ್ರಹಿಸಲಾಗಿರುವ ಕುರಿತು ದೊರೆತ ಖಚಿತ ಸುಳಿವಿನ ಮೇರೆಗೆ ಬಿಎಸ್‌ಎಫ್ ತಂಡವು ಛಾಪ್ರಾ ಪ್ರದೇಶದಲ್ಲಿ ಮನೆಯ ಮೇಲೆ ದಾಳಿ ನಡೆಸಿತು. ಈ ವೇಳೆ ಕಳ್ಳಸಾಗಣೆದಾರರ ಗುಂಪು ಹಾರಿಸಿದ ಗುಂಡಿಗೆ ಯೋಧ ಸಾವಿಗೀಡಾಗಿದ್ದಾನೆ.

### ‘ಉಕ್ರೇನ್‌ಗೆ ರಾಕೆಟ್, ಶಸ್ತ್ರಾಸ್ತ್ರ ಪೂರೈಕೆ’

**ವಾಷಿಂಗ್ಟನ್:** ಅಮೆರಿಕ ಅಧ್ಯಕ್ಷ ಜೋ ಬೈಡನ್ ಸರ್ಕಾರವು ಉಕ್ರೇನ್‌ಗೆ ಶತಕೋಟಿ ಮೊತ್ತದ ಮಿಲಿಟರಿ ಸಹಾಯವನ್ನು ನೀಡುವುದಾಗಿ ಸೋಮವಾರ ಘೋಷಿಸಿದೆ.

ಉಕ್ರೇನ್‌ನ ಪಡೆಗಳಿಗೆ ರಕ್ಷಣಾ ಇಲಾಖೆಯಿಂದ ನೇರವಾಗಿ ದೊಡ್ಡ ರಾಕೆಟ್‌ಗಳು, ಮದ್ದುಗುಂಡುಗಳು ಮತ್ತು ಶಸ್ತ್ರಾಸ್ತ್ರಗಳು ಪೂರೈಕೆ ಆಗಲಿವೆ ಎಂದು ಅಮೆರಿಕವು ಭರವಸೆ ನೀಡಿದೆ.

ಉಕ್ರೇನ್ ಪಡೆಗಳು ನಡೆಸುತ್ತಿರುವ ಪ್ರತಿದಾಳಿಯಿಂದ ರಕ್ಷಿಸಿಕೊಳ್ಳಲು ದಕ್ಷಿಣ ಬಂದರು ನಗರಗಳ ದಿಕ್ಕಿನಲ್ಲಿ ರಷ್ಯಾ ಪಡೆಗಳು ಚಲಿಸುತ್ತಿವೆ ಎಂಬ ಮಾಹಿತಿ ದೊರೆತ ಬಳಿಕ ಅಮೆರಿಕವು, ಉಕ್ರೇನ್‌ಗೆ ಮತ್ತೆ ಹೊಸದಾಗಿ ಶಸ್ತ್ರಾಸ್ತ್ರ ಪೂರೈಸುವುದಾಗಿ ಹೇಳಿದೆ.

# ಐಎಎಸ್, ಕೆಎಎಸ್: ಕ್ಲಾಸಿಕ್ ಸಂಸ್ಥೆಯಲ್ಲಿ ಉಚಿತ ತರಬೇತಿ

**ಧಾರವಾಡ:** ಸ್ವಾತಂತ್ರ್ಯದ ಅಮೃತ ಮಹೋತ್ಸವ ಹಾಗೂ ಕ್ಲಾಸಿಕ್ ಕೆಎಎಸ್/ಐಎಎಸ್ ಸ್ಟಡಿ ಸರ್ಕಲ್ ಸಂಸ್ಥೆಯ ‘ಬೆಳ್ಳಿಹಬ್ಬ’ದ ಅಂಗವಾಗಿ ಐಎಎಸ್, ಕೆಎಎಸ್ ಮತ್ತು ಬ್ಯಾಂಕಿಂಗ್ ಪರೀಕ್ಷೆಗೆ ಉಚಿತ ತರಬೇತಿ ನೀಡಲು ಸಂಸ್ಥೆಯು ತೀರ್ಮಾನಿಸಿದೆ.

ಪ್ರತಿಯೊಂದು ಕೋರ್ಸ್‌ಗೆ ತಲಾ 50 ಅಭ್ಯರ್ಥಿಗಳನ್ನು ಕ್ಲಾಸಿಕ್ ಸಂಸ್ಥೆಯ ಧಾರವಾಡ ಕೇಂದ್ರದಲ್ಲಿ ನಡೆಯುವ ಲಿಖಿತ ಪ್ರವೇಶ ಪರೀಕ್ಷೆ ಮೂಲಕ ಆಯ್ಕೆ ಮಾಡಿಕೊಳ್ಳಲಾಗುವುದು. ಆಸಕ್ತ ಅಭ್ಯರ್ಥಿಗಳು ನೋಂದಣಿಗಾಗಿ ತಮ್ಮ ಮೊಬೈಲ್ ಪ್ಲೇ ಸ್ಟೋರ್‌ನಿಂದ ಕ್ಲಾಸಿಕ್ ಎಜ್ಯುಕೇಶನ್ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ಆ.13ರೊಳಗೆ ಹೆಸರು ನೋಂದಾಯಿಸಿಕೊಳ್ಳಬೇಕು ಎಂದು ಸಂಸ್ಥೆಯ ಅಧ್ಯಕ್ಷ ಲಕ್ಷ್ಮಣ ಎಸ್. ಉಪ್ಪಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇತ್ತೀಚೆಗೆ ಪ್ರಕಟಗೊಂಡ 2019ನೇ ಸಾಲಿನ ಗೆಜೆಟೆಡ್ ಪ್ರೋಬೆಷನರ್ಸ್ (ಕೆಎಎಸ್) ಮುಖ್ಯ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ವ್ಯಕ್ತಿತ್ವ ಪರೀಕ್ಷೆಗೆ ಆಯ್ಕೆಯಾದವರಿಗಾಗಿ ಅಗಸ್ಟ್ 13, 14 ಹಾಗೂ 15 ರಂದು 3 ದಿನಗಳ ಕಾಲ ‘ಉಚಿತ ಅಣಕು ಸಂದರ್ಶನ’ ಹಮ್ಮಿಕೊಳ್ಳಲಾಗಿದೆ. ಅಭ್ಯರ್ಥಿಗಳು ತಮ್ಮ ಮುಖ್ಯ ಪರೀಕ್ಷೆಯ ಪ್ರವೇಶ ಪತ್ರದ ಜೆರಾಕ್ಸ್ ಪ್ರತಿ ಹಾಗೂ ಒಂದು ಫೋಟೊದೊಂದಿಗೆ ಧಾರವಾಡದ ಸಪ್ತಾಪುರ ಸರ್ಕಲ್ ಹತ್ತಿರದ ಕ್ಲಾಸಿಕ್ ಸಂಸ್ಥೆಯ ಕೇಂದ್ರಕ್ಕೆ ಹಾಜರಾಗಬೇಕು. ಹೆಚ್ಚಿನ ಮಾಹಿತಿಗಾಗಿ 99805 52080/81 ಸಂಪರ್ಕಿಸಬಹುದು ಎಂದು ಅವರು ತಿಳಿಸಿದ್ದಾರೆ.

ಬ್ಯಾಡರಹಳ್ಳಿಯಲ್ಲಿ ಕುಟುಂಬದ ಐವರ ಆತ್ಮಹತ್ಯೆ ಪ್ರಕರಣ

# ಅಳಿಯನಿಗೆ 'ಸುಪ್ರೀಂ' ಜಾಮೀನು

ಪ್ರಜಾವಾಣಿ ವಾರ್ತೆ

**ನವದೆಹಲಿ:** ಬೆಂಗಳೂರಿನ ಬ್ಯಾಡರಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಒಂದೇ ಕುಟುಂಬದ ನಾಲ್ವರ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪ ಎದುರಿಸುತ್ತಿದ್ದ ಅಳಿಯನಿಗೆ (ಸಾಫ್ಟ್‌ವೇರ್ ಎಂಜಿನಿಯರ್) ಸುಪ್ರೀಂಕೋರ್ಟ್ ಸೋಮವಾರ ಜಾಮೀನು ನೀಡಿದೆ.

ತಿಗಳರಪಾಳ್ಯದಲ್ಲಿ ಭಾರತಿ (51), ಅವರ ಮಕ್ಕಳಾದ ಸಿಂಚನಾ (34), ಸಿಂಧುರಾಣಿ (33) ಹಾಗೂ ಮಧುಸಾಗರ್ (25) ಕಳೆದ ವರ್ಷ ಸೆಪ್ಟೆಂಬರ್ ತಿಂಗಳಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಸಿಂಧೂರಾಣಿ ಅವರ ಒಂಬತ್ತು ತಿಂಗಳ ಮಗು ಸಹ ಮೃತಪಟ್ಟ ಸ್ಥಿತಿಯಲ್ಲಿ ಪತ್ತೆಯಾಗಿತ್ತು.



'ಮಗುವಿನದ್ದು ಕೊಲೆ' ಎಂಬುದು ಮರಣೋತ್ತರ ಪರೀಕ್ಷೆಯಿಂದ ದೃಢಪಟ್ಟಿತ್ತು.

ನಾಲ್ವರ ಆತ್ಮಹತ್ಯೆ ಪ್ರಕರಣದ ತನಿಖೆ ಪೂರ್ಣಗೊಳಿಸಿದ್ದ ಬ್ಯಾಡರಹಳ್ಳಿ ಪೊಲೀಸರು, ಭಾರತಿ ಅವರ ಪತಿಯಾದ ಪತ್ರಕರ್ತ ಹಲ್ಲೇಗೆರೆ ಶಂಕರ್ ಹಾಗೂ ಇಬ್ಬರು ಅಳಿಯಂದಿರ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು, ಅಳಿಯ ಇ.ಎಸ್.ಪ್ರವೀಣ್ ಕುಮಾರ್ ಅವರನ್ನು 2021ರ ಅಕ್ಟೋಬರ್ 1ರಂದು ಬಂಧಿಸಿದ್ದರು. ಪ್ರವೀಣ್ ಕುಮಾರ್ ಜಾಮೀನು ಅರ್ಜಿಯನ್ನು ಕರ್ನಾಟಕ ಹೈಕೋರ್ಟ್ ವಜಾ ಮಾಡಿತ್ತು.

ಸುಪ್ರೀಂಕೋರ್ಟ್‌ನ ನ್ಯಾಯ-ಮೂರ್ತಿಗಳಾದ ದಿನೇಶ್ ಮಹೇಶ್ವರಿ ಹಾಗೂ ಸುಧಾಂಶು ಧುಲಿಯಾ ಅವರನ್ನು ಒಳಗೊಂಡ ಪೀಠವು ಅರ್ಜಿಯ ವಿಚಾರಣೆ ನಡೆಸಿ ಜಾಮೀನು ಅರ್ಜಿಯನ್ನು ಅಂಗೀಕರಿಸಿತು.

ಅರ್ಜಿದಾರರ ಪರ ಹಿರಿಯ ವಕೀಲ ವೇಣುಗೋಪಾಲ ಗೌಡ ಹಾಗೂ ವಕೀಲ ಬಾಲಾಜಿ ಶ್ರೀನಿವಾಸನ್ ವಾದಿಸಿದರು. ಕರ್ನಾಟಕ ಸರ್ಕಾರದ ಪರವಾಗಿ ವಿ.ಎನ್.ರಘುಪತಿ ವಾದ ಮಂಡಿಸಿದರು. ಅರ್ಜಿದಾರರ ಕಿರಿಯ ಮಗುವು ತಾಯಿಯನ್ನು ಕಳೆದುಕೊಂಡಿದೆ ಹಾಗೂ ತಂದೆಯು ಪೊಲೀಸ್ ವಶದ-ಲ್ಲಿದ್ದಾರೆ. ಹಾಗಾಗಿ, ತಂದೆಗೆ ಜಾಮೀನು ನೀಡಬೇಕು ಎಂದು ವೇಣುಗೋಪಾಲ ಗೌಡ ಮನವಿ ಮಾಡಿದರು.

ಇದೊಂದು ದುರದೃಷ್ಟಕರ ಘಟನೆ. ಅರ್ಜಿದಾರನ ಪತ್ನಿ ಸೇರಿದಂತೆ ಕುಟುಂಬದ ನಾಲ್ವರು ಸದಸ್ಯರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ನ್ಯಾಯಾಲಯವು ಆದೇಶದಲ್ಲಿ ಉಲ್ಲೇಖಿಸಿದೆ.

---

ಪಾರ್ಸೆಲ್‌ನಲ್ಲಿ ಡ್ರಗ್ಸ್ ಪತ್ತೆ ಬಳಿಕ ಈ ನಿಯಮ

ಯಾವುದೇ ಪಾರ್ಸೆಲ್ ಪಡೆಯಬೇಕಾದರೆ, ವಾರದ ಮುಂಚೆಯೇ ಜೈಲಿನ ಮುಖ್ಯ ಅಧೀಕ್ಷಕರಿಂದ ಅನುಮತಿ ಪಡೆಯಬೇಕು

## ಜೈಲಿನಲ್ಲಿ ಹೊಸ ನಿಯಮ ಪಾರ್ಸೆಲ್‌ಗೆ ಅನುಮತಿ ಕಡ್ಡಾಯ

**ಬೆಂಗಳೂರು:** ನಗರದ ಪರಪ್ಪನ ಅಗ್ರಹಾರ ಕಾರಾಗೃಹಕ್ಕೆ ಇತ್ತೀಚೆಗೆ ಬಂದಿದ್ದ ಕೊರಿಯರ್ ಪಾರ್ಸೆಲ್‌ನಲ್ಲಿ ಡ್ರಗ್ಸ್ ಪತ್ತೆಯಾಗಿದ್ದು, ಈ ಬಗ್ಗೆ ಪ್ರಕರಣ ದಾಖಲಾಗಿದೆ. ಇದರ ಬೆನ್ನಲ್ಲೇ ಜೈಲಿನಲ್ಲಿ ಹೊಸ ನಿಯಮ ರೂಪಿಸಲಾಗಿದ್ದು, ಕೊರಿಯರ್ ಪಾರ್ಸೆಲ್ ಕಳುಹಿಸಲು ಹಾಗೂ ಪಡೆಯಲು ಅಧೀಕ್ಷಕರ ಅನುಮತಿ ಕಡ್ಡಾಯಗೊಳಿಸಲಾಗಿದೆ.

ಈ ಬಗ್ಗೆ ಸಿಬ್ಬಂದಿಗೆ ಸೂಚನೆ ನೀಡಿರುವ ಜೈಲಿನ ಮುಖ್ಯ ಅಧೀಕ್ಷಕ, 'ಅನುಮತಿ ಇಲ್ಲದ ಕೊರಿಯರ್ ಪಾರ್ಸೆಲ್‌ಗಳನ್ನು ಜೈಲಿನ ಸಿಬ್ಬಂದಿ ಸ್ವೀಕರಿಸಬಾರದು' ಎಂದಿದ್ದಾರೆ.

'ಪಾರ್ಸೆಲ್‌ನಲ್ಲಿ ಏನಿರುತ್ತೆ? ಎಂಬುದನ್ನು ಜೈಲಿನ ಮುಖ್ಯ ಅಧೀಕ್ಷಕರಿಗೆ ತಿಳಿಸಬೇಕು. ಅನುಮತಿ ಪಡೆಯದಿದ್ದರೆ, ಪಾರ್ಸೆಲ್ ವಾಪಸು ಕಳುಹಿಸಲಾಗುವುದು. ಈ ಬಗ್ಗೆ ಕೈದಿಗಳು, ಸಂಬಂಧಿಕರು ಹಾಗೂ ಇತರರಿಗೆ ತಿಳಿಸಬೇಕು' ಎಂದೂ ಹೇಳಿದ್ದಾರೆ.

---

ಸಂಕ್ಷಿಪ್ತ ಸುದ್ದಿ

### ಉಪ ಲೋಕಾಯುಕ್ತ–1ರ ಹುದ್ದೆ ಭರ್ತಿ ಕೋರಿ ಪಿಐಎಲ್: ನೋಟಿಸ್

**ಬೆಂಗಳೂರು:** 'ಖಾಲಿಯಿರುವ ಉಪ ಲೋಕಾಯುಕ್ತ-1ರ ಹುದ್ದೆಯನ್ನು ತುರ್ತಾಗಿ ಭರ್ತಿ ಮಾಡಲು ನಿರ್ದೇಶಿಸಬೇಕು' ಎಂದು ಕೋರಲಾಗಿರುವ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ವಕೀಲ ಎಸ್.ಉಮಾಪತಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ಪ್ರತಿವಾದಿಗಳಾದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ (ಸೇವಾ ನಿಯಮಗಳು) ಇಲಾಖೆ ಹೆಚ್ಚುವರಿ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ, ಆಕ್ಷೇಪಣೆ ಸಲ್ಲಿಸುವಂತೆ ನಿರ್ದೇಶಿಸಿ ವಿಚಾರಣೆ ಮುಂದೂಡಿದೆ.

ಲೋಕಾಯುಕ್ತರಾಗಿದ್ದ ನಿವೃತ್ತ ನ್ಯಾಯಮೂರ್ತಿ ಎಸ್.ವಿಶ್ವನಾಥ್ ಶೆಟ್ಟಿ 2022ರ ಜನವರಿ ಕೊನೆಯಲ್ಲಿ ನಿವೃತ್ತಿ ಹೊಂದಿದ್ದರು. ಈ ಹುದ್ದೆಗೆ ಉಪ ಲೋಕಾಯುಕ್ತ-1ರ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ್ ಅವರನ್ನು ನೇಮಕ ಮಾಡಲಾಗಿತ್ತು. ಈ ಕಾರಣದಿಂದ 2022ರ ಜೂನ್ 14ರಿಂದ ಉಪ ಲೋಕಾಯುಕ್ತ-1 ಹುದ್ದೆ ಖಾಲಿಯಿದೆ.

### ಅಫ್ಗಾನಿಸ್ತಾನ: ನಿಗೂಢ ಸ್ಫೋಟ, ಟಿಟಿಪಿ ಕಮಾಂಡರ್ ಸಾವು

**ಇಸ್ಲಾಮಾಬಾದ್ (ಪಿಟಿಐ):** ಪೂರ್ವ ಅಫ್ಗಾನಿಸ್ತಾನದ ಪಕ್ತಿಕಾ ಪ್ರಾಂತ್ಯದಲ್ಲಿ ನಡೆದ ನಿಗೂಢ ಸ್ಫೋಟವೊಂದರಲ್ಲಿ ತೆಹ್ರೀಕ್– ಎ– ತಾಲಿಬಾನ್ ಪಾಕಿಸ್ತಾನ (ಟಿಟಿಪಿ) ಉಗ್ರ ಸಂಘಟನೆಯ ಉನ್ನತ-ಮಟ್ಟದ ಕಮಾಂಡರ್ ಒಮರ್ ಖಾಲಿದ್ ಖೊರಾಸಾನಿ ಮತ್ತು 3 ನಾಯಕರು ಸಾವಿಗೀಡಾಗಿದ್ದಾರೆ ಎಂದು ಸೋಮವಾರ ಪಾಕಿಸ್ತಾನದ ಮಾಧ್ಯಮವೊಂದು ವರದಿ ಮಾಡಿದೆ.

---

# 'ನಿವೃತ್ತರ ತಾಳ್ಮೆ ಪರೀಕ್ಷಿಸುತ್ತಿರುವ ಕೇಂದ್ರ'

ಪಿಂಚಣಿ ಹೆಚ್ಚಳಕ್ಕಾಗಿ ದೆಹಲಿ ಚಲೋ • ರಾಮಲೀಲಾ ಮೈದಾನದಲ್ಲಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಪಿಂಚಣಿ ಹೆಚ್ಚಳಕ್ಕೆ ಆಗ್ರಹಿಸಿ ಪಿಂಚಣಿದಾರರ ಹೋರಾಟದ ರಾಷ್ಟ್ರೀಯ ಸಂಘರ್ಷ ಸಮಿತಿಯ ನೇತೃತ್ವದಲ್ಲಿ ದೆಹಲಿ ಚಲೊ ಹಾಗೂ ರಾಮಲೀಲಾ ಮೈದಾನದಲ್ಲಿ ಪ್ರತಿಭಟನಾ ಸಮಾವೇಶ ಸೋಮವಾರ ನಡೆಯಿತು.

ಈ ಹೋರಾಟದಲ್ಲಿ ದೇಶದ ಎಲ್ಲ ರಾಜ್ಯಗಳಿಂದ 6 ಸಾವಿರಕ್ಕೂ ಹೆಚ್ಚು ನಿವೃತ್ತ ಪಿಂಚಣಿದಾರರು ಪಾಲ್ಗೊಂಡಿದ್ದರು. ಕರ್ನಾಟಕದಿಂದ 300 ಪಿಂಚಣಿದಾರರು ಭಾಗವಹಿಸಿದ್ದರು.

ರಾಷ್ಟ್ರೀಯ ಸಂಘರ್ಷ ಸಮಿತಿ ಅಧ್ಯಕ್ಷ ಅಶೋಕ್ ರಾವತ್ ಮಾತನಾಡಿ, 'ಕೇಂದ್ರ ಸರ್ಕಾರವು ನಿವೃತ್ತ ನೌಕರರ ತಾಳ್ಮೆಯನ್ನು ಪರೀಕ್ಷೆ ಮಾಡುತ್ತಿದೆ. ಇನ್ನಷ್ಟು ದಿನ ಕಾಯಲು ನಾವು ಸಿದ್ಧರಿಲ್ಲ' ಎಂದರು.

ಇಪಿಎಸ್–95 ಕೆಎಸ್‌ಆರ್‌ಟಿಸಿ ಹಾಗೂ ಬಿಎಂಟಿಸಿ ನಿವೃತ್ತ ನೌಕರರ ಸಂಘಟನೆಯ ಪದಾಧಿಕಾರಿಗಳು ಪ್ರತಿಭಟನೆಯಲ್ಲಿ ಭಾಗವಹಿಸಿದರು

'ಈ ಸಂಸತ್ ಅಧಿವೇಶನದಲ್ಲಿ ನಮ್ಮ ಪ್ರಮುಖ ಬೇಡಿಕೆಯಾದ ಮಾಸಿಕ ಪಿಂಚಣಿ ₹7,500, ತುಟ್ಟಿಭತ್ಯೆ ಹಾಗೂ ವೈದ್ಯಕೀಯ ಭತ್ಯೆ ಹೆಚ್ಚಳಕ್ಕೆ ತೀರ್ಮಾನ ತೆಗೆದುಕೊಳ್ಳಬೇಕಿತ್ತು. ಆದರೆ, ಈ ಕೆಲಸವನ್ನು ಸರ್ಕಾರ ಮಾಡಿಲ್ಲ. ಮುಂದಿನ ದಿನಗಳಲ್ಲಿ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸಲಾಗುವುದು' ಎಂದು ಅವರು ಎಚ್ಚರಿಸಿದರು.

ಇಪಿಎಸ್-95 ಕೆಎಸ್‌ಆರ್‌ಟಿಸಿ ಹಾಗೂ ಬಿಎಂಟಿಸಿ ನಿವೃತ್ತ ನೌಕರರ ಸಂಘಟನೆಯ ಕಾರ್ಯಾಧ್ಯಕ್ಷ ನಂಜುಂಡೇಗೌಡ ಮಾತನಾಡಿ, 'ಪಿಂಚಣಿಗೆ ಸಂಬಂಧಿಸಿದ ಮೇಲ್ಮನವಿ ವಿಚಾರಣೆ ಸುಪ್ರೀಂ ಕೋರ್ಟ್‌ನಲ್ಲಿ ಆಗಸ್ಟ್ 10ರಂದು ನಡೆಯಲಿದ್ದು, ನಿವೃತ್ತ ನೌಕರರ ಪರವಾಗಿ ತೀರ್ಪು ಬರುವ ವಿಶ್ವಾಸ ಇದೆ' ಎಂದರು.

ಸಂಘಟನೆಯ ಉಪಾಧ್ಯಕ್ಷ ಆರ್. ಸುಬ್ಬಣ್ಣ ಮಾತನಾಡಿ, 'ಸರ್ಕಾರ ಈಗಲಾದರೂ ಎಚ್ಚೆತ್ತುಕೊಂಡು ನಿವೃತ್ತ ನೌಕರರಿಗೆ ಕನಿಷ್ಠ ಪಿಂಚಣಿಯನ್ನು ನಿಗದಿ ಮಾಡಬೇಕು' ಎಂದರು.

---

# 'ಜಾಯ್ ಐಸ್‌ಕ್ರೀಂ ಕಂಪನಿಗೇ ಜಮೀನು'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೆಂಗಳೂರು ಪೂರ್ವ ತಾಲ್ಲೂಕಿನ ಪಟ್ಟಂದೂರು ಅಗ್ರಹಾರದಲ್ಲಿ ಜಾಯ್ ಐಸ್ ಕ್ರೀಂ ಕಂಪನಿಗೆ ನೀಡಲಾಗಿದ್ದ 3.2 ಜಮೀನು ವಾಪಸು ಪಡೆಯಲು ಸರ್ಕಾರದ ಮುಖ್ಯ ಕಾರ್ಯದರ್ಶಿ ನೀಡಿದ್ದ ಆದೇಶ ರದ್ದುಪಡಿಸಿದ್ದ ಏಕಸದಸ್ಯ ನ್ಯಾಯಪೀಠದ ತೀರ್ಪನ್ನು ಹೈಕೋರ್ಟ್ ವಿಭಾಗೀಯ ನ್ಯಾಯಪೀಠ ಎತ್ತಿಹಿಡಿದಿದೆ.

ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಿ ರಾಜ್ಯ ಸರ್ಕಾರ ಮತ್ತು ಸಮಾಜ ಪರಿವರ್ತನಾ ಸಮುದಾಯ ಸಲ್ಲಿಸಿದ್ದ ಮೇಲ್ಮನವಿಗಳನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

'ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು (ಕೆಐಎಡಿಬಿ), ಜಾಯ್ ಐಸ್ ಕ್ರೀಂ ಕಂಪನಿಗೆ ನಿಯಮಬಾಹಿರವಾಗಿ ಜಮೀನು ಮಂಜೂರು ಮಾಡಿತ್ತು ಎಂಬುದನ್ನು ಸಾಬೀತುಪಡಿಸಲು ಯಾವುದೇ ದಾಖಲೆಗಳಿಲ್ಲ. ಕೈಗಾರಿಕಾ ಪ್ರದೇಶದಲ್ಲಿ ವಸತಿ ಸಂಕೀರ್ಣ ನಿರ್ಮಾಣವು ಕಾನೂನಿಗೆ ವಿರುದ್ಧವಾಗಿದೆ ಎಂಬ ವಾದವನ್ನು ಒಪ್ಪಲು ಸಾಧ್ಯವಿಲ್ಲ' ಎಂದು ವಿಭಾಗೀಯ ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

**ಪ್ರಕರಣವೇನು?:** ಕೆ.ಆರ್.ಪುರಂ ಹೋಬಳಿಯ ಪಟ್ಟಂದೂರು ಅಗ್ರಹಾರ ಗ್ರಾಮದಲ್ಲಿ ಕೆಐಎಡಿಬಿ ವತಿಯಿಂದ ಸರ್ವೆ ನಂ 42ರಲ್ಲಿ 3 ಎಕರೆ 23 ಗುಂಟೆ ಜಮೀನನ್ನು ಜಾಯ್ ಐಸ್ ಕ್ರೀಂ ಕಂಪನಿಗೆ ನೀಡಲಾಗಿತ್ತು. ಈ ಪ್ರದೇಶವು ಇಳಿಜಾರು ಪ್ರದೇಶವಾಗಿದ್ದು ಇದನ್ನು ಉದ್ಯಾನವನನ್ನಾಗಿ ಅಭಿವೃದ್ಧಿಪಡಿಸುವುದಾಗಿ ಕೋರಿದ್ದ ಕಾರಣ ಹಲವು ಷರತ್ತುಗಳೊಂದಿಗೆ ಕೆಐಎಡಿಬಿ 16 ವರ್ಷಗಳ ಗುತ್ತಿಗೆ ಆಧಾರದ ಮೇರೆಗೆ ಈ ಜಮೀನನ್ನು ಕಂಪನಿಗೆ 1981ರಲ್ಲಿ ಮಂಜೂರು ಮಾಡಿತ್ತು.

ಒಪ್ಪಂದದ ಅನುಸಾರ 16 ವರ್ಷಗಳ ನಂತರ ಜಮೀನನ್ನು ಸರ್ಕಾರಕ್ಕೆ ಮರಳಿಸಿದ ಜಾಯ್ ಐಸ್‌ಕ್ರೀಂ ಕಂಪನಿಯು 2006ರಲ್ಲಿ ಪುನಃ ಕಾರ್ಖಾನೆ ಆರಂಭಿಸುವುದಕ್ಕಾಗಿ ಜಮೀನು ನೀಡುವಂತೆ ಕೋರಿತು. ಈ ಮನವಿಯನ್ನು ಪುರಸ್ಕರಿಸಿದ ಅಂದಿನ ಬೆಂಗಳೂರು ನಗರ ಜಿಲ್ಲಾಧಿಕಾರಿ ಕಂಪನಿಗೆ ಜಮೀನು ಮಂಜೂರು ಮಾಡಿದರು. ಜಾಯ್ ಐಸ್‌ಕ್ರೀಂ ಕಂಪನಿಯು ಇದನ್ನು ಪಡೆದ 39 ದಿನಗಳಲ್ಲೇ ಪ್ರೆಸ್ಟೀಜ್ ಬಿಲ್ಡರ್ಸ್‌ಗೆ ಮಾರಾಟ ಮಾಡಿತ್ತು.

ಈ ಕುರಿತಂತೆ ಸಮಾಜ ಪರಿವರ್ತನಾ ಸಮುದಾಯ ಬೆಂಗಳೂರು ಜಿಲ್ಲಾಧಿಕಾರಿಗೆ ದೂರು ನೀಡಿತ್ತು. ಈ ದೂರಿನ ಅನ್ವಯ ಜಾಯ್ ಐಸ್‌ಕ್ರೀಂ ಕಂಪನಿಗೆ ನೀಡಲಾಗಿದ್ದ ಜಮೀನನ್ನು ಜಿಲ್ಲಾಧಿಕಾರಿ ವಾಪಸು ಪಡೆದಿದ್ದರು. ಕಂಪನಿ ಇದನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಿತ್ತು.

---

ದೇವಸಂದ್ರ ಮುಖ್ಯರಸ್ತೆಯಲ್ಲಿ ವಾಹನ ಸವಾರರಿಗೆ ತೊಂದರೆ

# ಮ್ಯಾನ್‌ಹೋಲ್‌ನಿಂದ ಕೊಳಚೆ ನೀರು

ಪ್ರಜಾವಾಣಿ ವಾರ್ತೆ

**ಕೆ.ಆರ್.ಪುರ:** ಹೂಡಿ ಮತ್ತು ಬೆಳತೂರು ಕಡೆಗೆ ಸಂಪರ್ಕ ಕಲ್ಪಿಸುವ ದೇವಸಂದ್ರ ಮುಖ್ಯರಸ್ತೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಸಮೀಪದ ಕಾವೇರಿ ಬೇಕರಿ ಮುಂಭಾಗದಲ್ಲಿ ಮ್ಯಾನ್‌ಹೋಲ್‌ಗಳು ಉಕ್ಕಿ ಕೊಳಚೆ ನೀರು ರಸ್ತೆ ಮೇಲೆ ಹರಿಯುತ್ತಿರುವು-ದರಿಂದ ಸಾರ್ವಜನಿಕರು ಸಂಚರಿಸಲು ಹೈರಾಣಾಗಿದ್ದಾರೆ.

ಒಂದು ವಾರದಿಂದ ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದ ಒಳಚರಂಡಿಗೆ ಅಳವಡಿಸಿರುವ ಮ್ಯಾನ್ ಹೋಲ್‌ಗಳ ಕಲುಷಿತ ನೀರು ರಸ್ತೆ ಮೇಲೆ ಹರಿಯುತ್ತಿರುವ ಪರಿಣಾಮ ರಸ್ತೆ-ಯುದ್ದಕ್ಕೂ ದೊಡ್ಡ ದೊಡ್ಡ ಗುಂಡಿಗಳು ನಿರ್ಮಾಣವಾಗಿ, ನಿತ್ಯ ಸಂಚರಿಸುವ ಸಾರ್ವಜನಿಕರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ.

ರಸ್ತೆ ತುಂಬೆಲ್ಲ ಗುಂಡಿಗಳು ಬಿದ್ದಿರುವುದರಿಂದ ಇಲ್ಲಿನ ಹದಗೆಟ್ಟ ರಸ್ತೆಯಲ್ಲಿ ಸಂಚರಿಸುವ ವಾಹನ

ದೇವಸಂದ್ರ ಮುಖ್ಯರಸ್ತೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಸಮೀಪದ ಕಾವೇರಿ ಬೇಕರಿ ಮುಂಭಾಗದಲ್ಲಿ ಮ್ಯಾನ್‌ಹೋಲ್‌ಗಳು ಉಕ್ಕಿ ಕೊಳಚೆ ನೀರು ರಸ್ತೆ ಮೇಲೆ ಹರಿಯುತ್ತಿದೆ

ಸವಾರರು ಗುಂಡಿ ತಪ್ಪಿಸುವ ಧಾವಂತದಲ್ಲಿ ಜಾರಿ ಬಿದ್ದು ಕೈಕಾಲು ಮುರಿದುಕೊಂಡು ಆಸ್ಪತ್ರೆಗೆ ಸೇರುವಂಥ ಸನ್ನಿವೇಶ ನಿರ್ಮಾಣವಾಗಿದೆ ಎಂದು ವಾಹನ ಸವಾರ ರಮೇಶ್ ಅವರು ದೂರಿದರು.

ಮಳೆಗಾಲದ ವೇಳೆ ನೀರು ಸರಾಗವಾಗಿ ಹರಿಯದೇ ರಸ್ತೆ ಮೇಲೆ ಬರುತ್ತಿದೆ. ಇದರಿಂದ ಸಾರ್ವಜನಿಕರು ತೀವ್ರ ತೊಂದರೆ ಎದುರಿಸುವಂತಾಗಿದೆ. ಕಲುಷಿತ ನೀರಿನಿಂದ ಕೆಟ್ಟ ವಾಸನೆ ಬರುತ್ತಿದೆ. ಇದರಿಂದ ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ಸ್ಥಿತಿ ಇದೆ ಎಂದರು.

ದೇವಸಂದ್ರದ ಮುಖ್ಯರಸ್ತೆಯಿಂದಲೇ ಐಟಿ-ಬಿಟಿ ಸಂಸ್ಥೆಗಳಿಗೆ ಕೇಂದ್ರ ಬಿಂದುವಾಗಿರುವ ವೈಟ್‌ಫೀಲ್ಡ್‌ನ, ಐಟಿಪಿಎಲ್‌ಗೆ ಸಂಚಾರ ಮಾಡಬೇಕಿದೆ. ಪ್ರತಿದಿನ ಲಕ್ಷಾಂತರ ವಾಹನಗಳು ಸಂಚರಿಸುತ್ತವೆ. ಆದರೆ, ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಸ್ಥಳೀಯ ಜನಪ್ರತಿನಿಧಿಗಳು ಇತ್ತ ಗಮನಹರಿಸುತ್ತಿಲ್ಲ ಎಂದು ಸ್ಥಳೀಯ ಮುನಿರಾಜು ಹೇಳಿದರು.

ವಿದ್ಯಾರ್ಥಿನಿ ಸನ್ನಿಧಿ (ಒಳಚಿತ್ರ) ಹಳ್ಳದ ಪ್ರವಾಹದಲ್ಲಿ ಕಾಲುಜಾರಿ ಬಿದ್ದ ಕಾಲುಸಂಕ (ಮೊದಲನೇ ಚಿತ್ರ). ಬೆಳಗಾವಿಯ ಓಂ ನಗರದಲ್ಲಿ ಸೋಮವಾರ ಸುರಿದ ಮಳೆಯಿಂದ ಜನವಸತಿ ಪ್ರದೇಶ ಜಲಾವೃತಗೊಂಡಿತು (ಮಧ್ಯ). ಕಳಸ ತಾಲ್ಲೂಕಿನ ಜಾಂಬಳೆಯ ಬಳಿ ಸೇತುವೆ ಮೇಲೆ ನೀರು ಹರಿಯುತ್ತಿದೆ

### ಬೆಳಗಾವಿ: ಕೆಲವೆಡೆ ಜನವಸತಿ ಪ್ರದೇಶ ಜಲಾವೃತ • ಕಾಲುಸಂಕದಿಂದ ಬಿದ್ದು ಕೊಚ್ಚಿಹೋದ ಬಾಲಕಿ

# ಸೇತುವೆ ಮುಳುಗಡೆ, ಸಂಚಾರ ಸ್ಥಗಿತ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದ ಕೆಲ ಜಿಲ್ಲೆಗಳಲ್ಲಿ ಧಾರಾಕಾರ ಮಳೆ ಸೋಮವಾರವೂ ಮುಂದುವರಿದಿದೆ. ಹಲವೆಡೆ ಮನೆಗಳು ಕುಸಿದು ಬಿದ್ದಿವೆ. ಸೇತುವೆಗಳು ಮುಳುಗಡೆಯಾಗಿದ್ದು, ಸಂಚಾರ ಬಂದ್ ಆಗಿದೆ.

ಉಡುಪಿ ಜಿಲ್ಲೆ ಬೈಂದೂರು ಸಮೀಪದ ಕಾಲ್ತೋಡು ಗ್ರಾಮದ ಬಿಜಮಕ್ಕಿ ಬಳಿ ಸಂಜೆ ಶಾಲೆಯಿಂದ ಮನೆಗೆ ಮರಳುತ್ತಿದ್ದ ಚಪ್ಪರಿಕೆ ಸರ್ಕಾರಿ ಪ್ರಾಥಮಿಕ ಶಾಲೆಯ 2ನೇ ತರಗತಿ ವಿದ್ಯಾರ್ಥಿನಿ ಬೊಳಂಬಳ್ಳಿ ಮಕ್ಕಿ ಮನೆಯ ಸನ್ನಿಧಿ ಪ್ರದೀಪ ಪೂಜಾರಿ (7) ಕಾಲುಸಂಕ ದಾಟುವಾಗ ಆಯ ತಪ್ಪಿ ಹಳ್ಳಕ್ಕೆ ಬಿದ್ದು ಕೊಚ್ಚಿಕೊಂಡು ಹೋಗಿದ್ದಾಳೆ. ಮಳೆಯಿಂದಾಗಿ ಶೋಧ ಕಾರ್ಯಕ್ಕೆ ಅಡ್ಡಿಯುಂಟಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ಕಳಸ ತಾಲ್ಲೂಕಿನ ಜಾಂಬಳೆ ಪ್ರದೇಶದಲ್ಲಿ ಸೇತುವೆ ಮೇಲೆ ನೀರು ಹರಿಯುತ್ತಿದ್ದು, ಕಳಸ- ಕುದುರೆಮುಖ ಮಾರ್ಗದಲ್ಲಿ ಸಂಚಾರ ಬಂದ್ ಆಗಿದೆ. ಮೂಡಿಗೆರೆ ತಾಲ್ಲೂಕಿನ ಬಣಕಲ್‌ನ ಆರೋಗ್ಯ ಸಿಬ್ಬಂದಿ ವಸತಿ ಗೃಹ ಮತ್ತು ಉರ್ದು ಪ್ರಾಥಮಿಕ ಶಾಲೆ ಶೌಚಾಲಯದ ಮೇಲೆ ವೃಕ್ಷ ಉರುಳಿದೆ. ಹಾನಿಗೊಳಗಾದ ಪ್ರದೇಶದಲ್ಲಿ ಧರೆ ಕುಸಿದಿದೆ.

ಕಲ್ಯಾಣ ಕರ್ನಾಟಕದ ಕಲಬುರಗಿ, ಬೀದರ್, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಉತ್ತಮ ಮಳೆಯಾಗಿದೆ. ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನಲ್ಲಿರುವ ಕೃಷ್ಣದೇವರಾಯನ ಸಮಾಧಿ ಮುಳುಗುವ ಹಂತ ತಲುಪಿದೆ. ಗಂಗಾವತಿ–ಕಂಪ್ಲಿ ಸೇತುವೆ ಮೇಲೆ ರಸ್ತೆ ವಾಹನಗಳ ಸಂಚಾರ ಸ್ಥಗಿತಗೊಂಡಿದೆ.

**ಬೆಳಗಾವಿಯಲ್ಲಿ ಮನೆ ಕುಸಿತ:** ಬೆಳಗಾವಿ ನಗರ ಹಾಗೂ ಜಿಲ್ಲೆಯಲ್ಲಿ ನಾಲ್ಕು ಮನೆಗಳು ಕುಸಿದಿವೆ. ಜನವಸತಿ ಪ್ರದೇಶ ಜಲಾವೃತಗೊಂಡಿದ್ದು, ರಸ್ತೆಗಳಲ್ಲಿ ನೀರು ಹೊಳೆಯಂತೆ ಹರಿದು, ಮನೆಗಳೊಳಗೆ ನುಗ್ಗಿದೆ. ಅನಗೋಳ ಎಂಬಲ್ಲಿ ಎರಡು ಅಂತಸ್ತಿನ ಕಟ್ಟಡ ನೆಲಕ್ಕುರುಳಿದೆ.

ಓಂ ನಗರ ಹಾಗೂ ಕೇಶವ ನಗರದ ಜನವಸತಿ ಪ್ರದೇಶ ಇಡೀ ದಿನ ಜಲಾವೃತಗೊಂಡಿತ್ತು. ಚಿಕ್ಕೋಡಿಯ ನಾಲ್ಕು, ಗೋಕಾಕದ ಒಂದು ಕಿರು ಸೇತುವೆ ಮುಳುಗಡೆಯಾಗಿವೆ. ನಿಪ್ಪಾಣಿ ತಾಲ್ಲೂಕಿನ ಬಹುತೇಕ ಸೇತುವೆಗಳು ಎರಡನೇ ಬಾರಿ ಜಲಾವೃತ ಗೊಂಡಿವೆ. ಕಾರದಗಾ-ಭೋಜ ಸೇತುವೆಯೂ ಜಲಾವೃತ ಗೊಂಡು ಸಂಚಾರ ಸ್ಥಗಿತ ಗೊಂಡಿದೆ. ತಾಲ್ಲೂಕಿನ ಹುನ್ನರಗಿ ಗ್ರಾಮದ ಲಕ್ಷ್ಮೀ-ನಾರಾಯಣ ಮಂದಿರ ದಲ್ಲಿ ವೇದಗಂಗಾ ನದಿ ನೀರು ನುಗ್ಗಿದೆ.

ವೇದಗಂಗಾ ಮತ್ತು ದೂಧಗಂಗಾ ನದಿಗಳಲ್ಲಿ ನೀರಿನ ಹರಿವು ಹೆಚ್ಚಾಗಿ ನೂರಾರು ಎಕರೆ ಹೊಲಗದ್ದೆಗಳಲ್ಲಿ ನೀರು ನಿಂತು ಬೆಳೆ ನಷ್ಟವಾಗಿದೆ.

ಶಿವಮೊಗ್ಗ ಜಿಲ್ಲೆಯ ಭದ್ರಾ, ಲಿಂಗನಮಕ್ಕಿ, ತುಂಗಾ ಜಲಾಶಯಗಳ ಒಳ ಹರಿವು ಏರಿಕೆ ಆಗಿದೆ.

ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನ ಉಕ್ಕಡಗಾತ್ರಿ ಸಂಪರ್ಕಿಸುವ ಹೊಳ್ಳಾಪುರ ರಸ್ತೆ ಸಂಪರ್ಕ ಕಡಿತ ಗೊಂಡಿದೆ. ಬಸವಾಪಟ್ಟಣ ಸಮೀಪದ ನೆಲ್ಲೂರಿನ ತಾಂಡಾದ ಹದ್ದಿನಲ್ಲಿ ಭೂ ಕುಸಿತ ಉಂಟಾಗಿದೆ. ಚನ್ನಗಿರಿ ತಾಲ್ಲೂಕಿನ ಮುದಿಗೆರೆ ಗ್ರಾಮದ ದೊಡ್ಡ ಕೆರೆ ತುಂಬಿ ಕೋಡಿ ಬಿದ್ದಿದೆ.

ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನಲ್ಲಿ ಮಳೆ ಮುಂದುವರಿದಿದೆ. ಚನ್ನರಾಯಪಟ್ಟಣ ತಾಲ್ಲೂಕಿನ ಹಿರೀಸಾವೆಯಿಂದ ತೂಬಿನಕೆರೆ ಸಂಪರ್ಕ ರಸ್ತೆ ಹಳ್ಳದ ನೀರಿಗೆ ಕೊಚ್ಚಿ ಹೋಗಿದೆ.

ವಿಜಯಪುರ ಜಿಲ್ಲೆಯ ಆಲಮೇಲ ತಾಲ್ಲೂಕಿನ ಕಡ್ಲೇವಾಡ (ಪಿಎ) ಗ್ರಾಮದಲ್ಲಿ ಮನೆ ಚಾವಣಿ ಕುಸಿದು ವೃದ್ಧೆ ಹಾಗೂ ಬಾಲಕಿ ಮಣ್ಣಿನ ಅವಶೇಷದಡಿ ಸಿಲುಕಿ ಗಾಯಗೊಂಡಿದ್ದಾರೆ. ನವಲಗುಂದ ತಾಲ್ಲೂಕಿನ ಬೆಣ್ಣಿ ಹಳ್ಳ ಹಾಗೂ ತುಪ್ಪರಿ ಹಳ್ಳ ತುಂಬಿ ಹರಿಯುತ್ತಿದೆ.

ಕಂಪ್ಲಿ-ಗಂಗಾವತಿ ಸೇತುವೆಗೆ ಸಮನಾಗಿ ನೀರು ಹರಿಯುತ್ತಿರುವುದರಿಂದ ಸೇತುವೆ ಮೇಲೆ ವಾಹನ ಸಂಚಾರ ನಿರ್ಬಂಧಿಸಿದೆ. ವೆಂಕಟಾಪುರ ಕ್ಯಾಂಪ್ ಸಮೀಪ ತುರ್ತಾ ಉಪಕಾಲುವೆ ಒಡೆದಿದ್ದು, ಅಪಾರ ಪ್ರಮಾಣದ ನೀರು ಪೋಲಾಗುತ್ತಿದೆ. ಆನೆಗೊಂದಿ ಭಾಗದ ಹಿಂದೆಯೇ ಹಂಪಿಯ ಸ್ನಾನಘಟ್ಟ, ಕರ್ಮ ಮಂಟಪ, ಪುರಂದರದಾಸರ ಮಂಟಪ, ಚಕ್ರತೀರ್ಥ, ವಿಜಯನಗರ ಕಾಲದ ಕಾಲು ಸೇತುವೆ ಸ್ಮಾರಕಗಳು ಮುಳುಗಿವೆ.

ಉತ್ತರ ಕನ್ನಡದ ಮುಂಡಗೋಡ ತಾಲ್ಲೂಕಿನ ಪಾಳಾದಲ್ಲಿ ದೊಡ್ಡ ಕೆರೆ ಕೋಡಿ ಬಿದ್ದಿದೆ. ಸುಮಾರು 70 ಎಕರೆ ಗದ್ದೆಯಲ್ಲಿ ನೀರು ನಿಂತಿದೆ.

### ಸಂಚಾರಕ್ಕೆ ರಬ್ಬರ್ ದೋಣಿ ಬಳಕೆ

**ಮಡಿಕೇರಿ:** ಕೊಡಗು ಜಿಲ್ಲೆಯಲ್ಲಿ ನದಿ, ತೊರೆಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿದ್ದು, ಹವಾಮಾನ ಇಲಾಖೆ ಆರೆಂಜ್ ಅಲರ್ಟ್ ಘೋಷಿಸಿದೆ. ಭಾಗಮಂಡಲ–ನಾಪೋಕ್ಲು ರಸ್ತೆ ಜಲಾವೃತಗೊಂಡಿದ್ದು, ಜನಸಂಚಾರಕ್ಕೆ ರಬ್ಬರ್ ದೋಣಿಯನ್ನು ಬಳಸಲಾಗುತ್ತಿದೆ. ಮಡಿಕೇರಿ-ಸೋಮವಾರಪೇಟೆ ರಾಜ್ಯ ಹೆದ್ದಾರಿಯ ಕುಂಬೂರು ಗ್ರಾಮದ ಬಳಿ ಭೂಕುಸಿತವಾಗಿದೆ. ಭಾಗಮಂಡಲ- ಕರಿಕೆ ರಸ್ತೆಯಲ್ಲಿ ಮತ್ತೆ ಭೂಮಿ ಕುಸಿದಿದೆ.

ಲಕ್ಷ್ಮಣತೀರ್ಥ ನದಿ ಪ್ರವಾಹ ಹೆಚ್ಚಾಗಿದೆ. ನದಿ ಬದಿಯ ಗದ್ದೆಗಳು ಜಲಾವೃತವಾಗಿವೆ. ಮಡಿಕೇರಿ- ವಿರಾಜಪೇಟೆ ಸಂಪರ್ಕಿಸುವ ಬೇತ್ರಿ ಸೇತುವೆಯಲ್ಲಿ ಕಾವೇರಿ ನದಿ ನೀರು ಅಪಾಯದಮಟ್ಟ ಮೀರಿ ಹರಿಯುತ್ತಿದ್ದರೆ, ಮಡಿಕೇರಿ ತಾಲ್ಲೂಕಿನ ಕೊಯನಾಡು ಸೇತುವೆ ಬಳಿ ಪಯಸ್ವಿನಿ ನದಿ ಭೋರ್ಗರೆಯುತ್ತಿದೆ.

### ಮಳೆ ವಿವರ ಸೆಂ.ಮೀ.

| ಸ್ಥಳ | ಸೆಂ.ಮೀ. |
|---|---|
| **ಚಿಕ್ಕಮಗಳೂರು** | |
| ಕೆರೆಕಟ್ಟೆ | 16.3 |
| ಹೊಸಕೆರೆ | 14.3 |
| ಕೊಟ್ಟಿಗೆಹಾರ | 12.3 |
| ಹಿರೇಬೈಲು | 11 |
| ಕಮ್ಮರಡಿ | 10.5 |
| **ಶಿವಮೊಗ್ಗ** | |
| ಯಡೂರು | 15.8 |
| ಮಾಣಿ | 15.2 |
| ಆಗುಂಬೆ | 14.8 |
| **ಕೊಡಗು** | |
| ಟಿ.ಶೆಟ್ಟಿಗೇರಿ | 14 |
| ಗಾಳಿಬೀಡು | 13 |
| ಬೆಂಗೂರು | 13 |
| ಭಾಗಮಂಡಲ | 12.5 |
| ಬಲ್ಲಮಾವಟಿ | 12 |
| ಮದೆ | 12 |
| **ಹಾಸನ** | |
| ಹೆತ್ತೂರು | 15.2 |
| ಹಾನಬಾಳು | 13 |
| ಯಸಳೂರು | 11.2 |
| ಸಕಲೇಶಪುರ | 10.6 |

### ಆರು ಜಿಲ್ಲೆಗಳಲ್ಲಿ 'ಆರೆಂಜ್ ಅಲರ್ಟ್'

**ಬೆಂಗಳೂರು:** ಕರಾವಳಿ ಹಾಗೂ ಒಳನಾಡು ವ್ಯಾಪ್ತಿಯ ಜಿಲ್ಲೆಗಳಲ್ಲಿ ಮುಂದಿನ ಮೂರು ದಿನ ಗುಡುಗು ಸಹಿತ ಭಾರಿ ಮಳೆ ಸುರಿಯಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಉತ್ತರ ಕನ್ನಡ, ಶಿವಮೊಗ್ಗ, ದಕ್ಷಿಣ ಕನ್ನಡ, ಕೊಡಗು, ಉಡುಪಿ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಮಂಗಳವಾರ 'ಆರೆಂಜ್ ಅಲರ್ಟ್' ನೀಡಲಾಗಿದೆ. ಬೆಳಗಾವಿ ಹಾಗೂ ಕಲಬುರ್ಗಿ ಜಿಲ್ಲೆಯಲ್ಲಿ 'ಯೆಲ್ಲೋ ಅಲರ್ಟ್' ಘೋಷಿಸಲಾಗಿದೆ.

### ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

| ಜಲಾಶಯ | ಗರಿಷ್ಠ ಮಟ್ಟ (ಅಡಿಗಳಲ್ಲಿ) | ಇಂದಿನ ಮಟ್ಟ | ಒಳಹರಿವು (ಕ್ಯುಸೆಕ್‌ಗಳಲ್ಲಿ) | ಹೊರಹರಿವು (ಕ್ಯುಸೆಕ್‌ಗಳಲ್ಲಿ) |
|---|---|---|---|---|
| ಕೆ ಆರ್ ಎಸ್* | 124.80 | 122.74 | 87,462 | 97,876 |
| ಹಾರಂಗಿ | 2,859 | 2,855.42 | 13,860 | 10,000 |
| ಕಬಿನಿ | 2,284 | 2,283.40 | 34,175 | 38,000 |
| ಹೇಮಾವತಿ | 2,922 | 2,921 | 28,741 | 29,800 |
| ಲಿಂಗನಮಕ್ಕಿ | 1,819 | 1,803 | 38,301 | 674 |
| ಸೂಪಾ (ಮೀ) | 564 | 543.30 | 15,965 | - |
| ಮಾಣಿ | 595 | 586 | 7,553 | - |
| ತುಂಗಭದ್ರಾ | 1,633 | 1,631.89 | 1,08,648 | 1,05,909 |
| ಮಲಪ್ರಭಾ | 2,079.50 | 2,071.40 | 4,194 | 294 |
| ಘಟಪ್ರಭಾ | 2,175 | 2,162.28 | 13,084 | 166 |
| ಭದ್ರಾ | 186 | 183 | 40,194 | 41,386 |
| ಆಲಮಟ್ಟಿ (ಮೀ) | 519.60 | 519.27 | 74,977 | 1,00,000 |
| ನಾರಾಯಣಪುರ (ಮೀ) | 492.25 | 491.76 | 70,000 | 80,620 |

* ನೆಲಮಟ್ಟದಿಂದ

# ಅತಿವೃಷ್ಟಿ ಪ್ರದೇಶದ ಜನರಿಗೆ 'ಕಾಳಜಿ ಕಿಟ್'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮಳೆ ಮತ್ತು ಪ್ರವಾಹ ಪೀಡಿತ ಪ್ರದೇಶಗಳ ಕಾಳಜಿ ಕೇಂದ್ರಗಳಲ್ಲಿ ಆಶ್ರಯ ಪಡೆಯದೇ ಸ್ನೇಹಿತರು ಅಥವಾ ಸಂಬಂಧಿಕರ ಮನೆಗಳಲ್ಲಿ ಉಳಿದುಕೊಳ್ಳುವ ಕುಟುಂಬಗಳಿಗೆ ಆಹಾರ–ಧಾನ್ಯ ಒಳಗೊಂಡ 'ಕಾಳಜಿ ಕಿಟ್' ವಿತರಿಸಲಾಗುವುದು ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಕಾಳಜಿ ಕೇಂದ್ರಗಳಲ್ಲಿ ಆಶ್ರಯ ಪಡೆದು ಬಳಿಕ ಮರಳಿ ಮನೆಗಳಿಗೆ ಹೋದವರಿಗೂ, ಮನೆಗಳನ್ನು ಸುಸ್ಥಿತಿಗೆ ತರುವವರೆಗೆ ಕಾಳಜಿ ಕಿಟ್‌ಗಳನ್ನು ನೀಡಲಾಗುವುದು ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಕಾಳಜಿ ಕಿಟ್ ಮೂಲಕ 10 ಕೆ.ಜಿ. ಅಕ್ಕಿ, ತೊಗರಿಬೇಳೆ, ಉಪ್ಪು, ಸಕ್ಕರೆ, ಅಡುಗೆ ಎಣ್ಣೆ, ಖಾರದಪುಡಿ, ಸಾಸಿವೆ, ಜೀರಿಗೆ, ಸಾಂಬಾರ್‌ಪುಡಿ, ಟೀಪುಡಿ, ಅರಿಶಿನಪುಡಿ ನೀಡಲಾಗುವುದು. ಗಂಜಿ ಬದಲಿಗೆ ಚಪಾತಿ, ಪಲ್ಯ, ಅನ್ನ, ಸಾಂಬಾರ್, ಮೊಟ್ಟೆ ಕೊಡಲೂ ಸೂಚಿಸಿದ್ದೇನೆ. ಟೂತ್ ಬ್ರಷ್, ಪೇಸ್ಟ್, ಟವಲ್ ಕೂಡ ನೀಡುತ್ತಿದ್ದೇವೆ' ಎಂದರು.

**1.37 ಲಕ್ಷ ಹೆಕ್ಟೇರ್ ಬೆಳೆ ಹಾನಿ:** ಎರಡು ತಿಂಗಳು ಸುರಿದ ಮಳೆ ಮತ್ತು ಪ್ರವಾಹದಿಂದ ಈವರೆಗೆ ಒಟ್ಟು 1,37,029 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಗಳು ನಾಶವಾಗಿದ್ದು, ಮಳೆ ಮುಗಿಯುತ್ತಿದ್ದಂತೆ ಬೆಳೆ ನಷ್ಟದ ಅಂದಾಜು ಮಾಡಿ ಪರಿಹಾರಕ್ಕಾಗಿ ಕೇಂದ್ರಕ್ಕೆ ಮನವಿ ಸಲ್ಲಿಸಲಾಗುವುದು ಎಂದು ಹೇಳಿದರು.

ಕೃಷಿ ಬೆಳೆಗಳು 1,29,087 ಹೆಕ್ಟೇರ್ ಮತ್ತು ತೋಟಗಾರಿಕಾ ಬೆಳೆಗಳು 7,942 ಹೆಕ್ಟೇರ್‌ನಷ್ಟು ನಾಶವಾಗಿದೆ. 14 ಜಿಲ್ಲೆಗಳು ಮತ್ತು 161 ಗ್ರಾಮಗಳು ಪ್ರವಾಹ ಪೀಡಿತವಾಗಿವೆ. ಒಟ್ಟು 73 ಮಂದಿ ಸಾವನ್ನಪ್ಪಿದ್ದಾರೆ ಎಂದರು.

ಬೆಳೆ ಹಾನಿ ಪರಿಹಾರ ಸಹಾಯಧನವನ್ನು ಪರಿಷ್ಕರಿಸಲಾಗಿದ್ದು, ಮಳೆಯಾಶ್ರಿತ ಪ್ರದೇಶದಲ್ಲಿ ಪ್ರತಿ ಹೆಕ್ಟರ್‌ಗೆ ₹13,800, ನೀರಾವರಿ ಪ್ರದೇಶದಲ್ಲಿ ಪ್ರತಿ ಹೆಕ್ಟೇರ್‌ಗೆ ₹25,500 ಮತ್ತು ಬಹುವಾರ್ಷಿಕ ಬೆಳೆ ಪ್ರದೇಶದಲ್ಲಿ ಪ್ರತಿ ಹೆಕ್ಟೇರ್‌ಗೆ ₹28,000 ನಿಗದಿ ಮಾಡಲಾಗಿದೆ ಎಂದರು.

**ಹಕ್ಕು ಪತ್ರ:** ಕೆಆರ್‌ಎಸ್ ಅಣೆಕಟ್ಟು ನಿರ್ಮಿಸಲು ಬಂದು 60 ವರ್ಷಗಳಿಂದ ಶ್ರೀರಂಗಪಟ್ಟಣದಲ್ಲೇ ಉಳಿದಿರುವ 700 ಮಂದಿಗೆ ಭೂಮಿಯ ಹಕ್ಕು ಪತ್ರ ನೀಡಲು ತೀರ್ಮಾನಿಸಲಾಗಿದೆ. ಅಲ್ಲದೇ, ರಾಜ್ಯದ 3,277 ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳೆಂದು ಘೋಷಿಸಲಾಗುವುದು. ಆ ಪೈಕಿ 1134 ತಾಂಡಾಗಳಿಗೆ ಸಂಬಂಧಿಸಿದಂತೆ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ ಎಂದರು.

## ಮೂಲ ಸೌಕರ್ಯಕ್ಕೆ ಹಾನಿ

ರಾಜ್ಯದಲ್ಲಿ 11,768 ಕಿ.ಮೀ ರಸ್ತೆ, 1,152 ಸೇತುವೆ, ಕಿರು ಸೇತುವೆಗಳು, 4,561 ಶಾಲೆಗಳು, 2,249 ಅಂಗನವಾಡಿ ಕೇಂದ್ರ ಗಳು, 17,066 ವಿದ್ಯುತ್ ಕಂಬಗಳು ಹಾನಿಗೊಳಗಾಗಿವೆ ಎಂದು ಸಚಿವ ಅಶೋಕ ತಿಳಿಸಿದರು.

ಪ್ರವಾಹ ಪರಿಹಾರಕ್ಕಾಗಿ 26 ಜಿಲ್ಲೆಗಳಿಗೆ ಜುಲೈ 8 ರಂದು ₹55 ಕೋಟಿ, ಆಗಸ್ಟ್ 4 ರಂದು ಮನೆಗಳ ಹಾನಿ ಪರಿಹಾರಕ್ಕಾಗಿ ₹300 ಕೋಟಿ ಹಾಗೂ ಆ.6 ರಂದು 21 ಜಿಲ್ಲೆಗಳಿಗೆ ಒಟ್ಟು ₹200 ಕೋಟಿ ಬಿಡುಗಡೆ ಮಾಡಲಾಗಿದೆ.

'2021ರಲ್ಲಿ ಅತಿವೃಷ್ಟಿಯಿಂದ 14,93,811 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿ ಆಗಿತ್ತು. ಒಟ್ಟು 18.52 ಲಕ್ಷ ರೈತರಿಗೆ ₹2,446.08 ಕೋಟಿ ಪರಿಹಾರ ನೀಡಲಾಗಿದೆ' ಎಂದರು.

# ನೀರಿನಲ್ಲಿ ಶವ ಹೊತ್ತೊಯ್ದು ಸಂಸ್ಕಾರ

ಪ್ರಜಾವಾಣಿ ವಾರ್ತೆ



ಶ್ರೀರಂಗಪಟ್ಟಣ ತಾಲ್ಲೂಕಿನ ಮಹದೇವಪುರ ಬಳಿ ಕಾವೇರಿ ನದಿಯ ಪ್ರವಾಹದಿಂದ ಸ್ಮಶಾನದ ಸಂಪರ್ಕ ರಸ್ತೆ ಮುಳುಗಡೆಯಾಗಿದ್ದು, ಭಾನುವಾರ ಶವವನ್ನು ನೀರಿನಲ್ಲೇ ಹೊತ್ತೊಯ್ದು ಸಂಸ್ಕಾರ ಮಾಡಲಾಯಿತು

**ಶ್ರೀರಂಗಪಟ್ಟಣ:** ತಾಲ್ಲೂಕಿನ ಮಹದೇವಪುರದ ಸ್ಮಶಾನ ರಸ್ತೆ ಕಾವೇರಿ ನದಿಯ ಪ್ರವಾಹದಲ್ಲಿ ಮುಳುಗಿದ್ದು, ಅನಾರೋಗ್ಯದಿಂದ ಮೃತಪಟ್ಟ ಗ್ರಾಮದ ಸುಲೋಚನಾ ಅವರ ಮೃತದೇಹವನ್ನು ಭಾನುವಾರ ಬಂಧುಗಳು ಅಪಾಯವನ್ನೂ ಲೆಕ್ಕಿಸದೆ ಎದೆ ಮಟ್ಟದ ನೀರಿನಲ್ಲೇ ಹೊತ್ತೊಯ್ದು ಸಂಸ್ಕಾರ ಮಾಡಿದರು. ಅದರ ವಿಡಿಯೋ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು.

ಗ್ರಾಮದ ನಾಯಕ ಜನಾಂಗದವರು ನದಿ ತೀರದಲ್ಲಿ ಶವ ಸಂಸ್ಕಾರ ಮಾಡುವ ವಾಡಿಕೆ ಇದೆ. ಸ್ಮಶಾನದ ಸಂಪರ್ಕ ಮಾರ್ಗ ಜಲಾವೃತವಾಗಿದ್ದು, ರಭಸವಾಗಿ ನೀರು ಹರಿಯುತ್ತಿದೆ. ಗ್ರಾಮದ ಬೋರೆಯಲ್ಲಿ ನಾಯಕ ಜನಾಂಗಕ್ಕೆ ಸ್ಮಶಾನ ಜಾಗ ಮೀಸಲಿಡಲಾಗಿದೆ. ಆದರೆ, ಅದು ಜನವಸತಿ ಸ್ಥಳದಿಂದ ದೂರದಲ್ಲಿರುವುದರಿಂದ, ತಲೆಮಾರುಗಳಿಂದಲೂ ಹೊಳೆ ತೀರದಲ್ಲೇ ಅಂತ್ಯಕ್ರಿಯೆ ಮಾಡುತ್ತಿದ್ದಾರೆ.

'ಸ್ಮಶಾನದ ಜಾಗದಲ್ಲಿ ನೀರು ಇಲ್ಲ. ಅಲ್ಲಿಗೆ ತೆರಳುವ ಮಾರ್ಗವಷ್ಟೇ ಜಲಾವೃತವಾಗಿತ್ತು. ಸ್ವಲ್ಪ ದೂರ ನೀರಿನಲ್ಲಿ ತೆರಳಿ ಶವಸಂಸ್ಕಾರ ಮಾಡಲಾಯಿತು' ಎಂದು ಗ್ರಾಮಸ್ಥರು ತಿಳಿಸಿದರು.

'ನದಿ ತೀರದಲ್ಲಿ ನಿಷೇಧಾಜ್ಞೆ ಜಾರಿಯಲ್ಲಿದೆ. ಪ್ರವಾಹದ ನೀರಿನಲ್ಲಿ ಶವ ಸಾಗಿಸಿದ ಬಗ್ಗೆ ಸ್ಥಳೀಯ ಪೊಲೀಸರಿಂದ ಮಾಹಿತಿ ಪಡೆಯಲಾಗುವುದು' ಎಂದು ಎಎಸ್‌ಪಿ ವೇಣುಗೋಪಾಲ್ ತಿಳಿಸಿದರು.


**ಕರ್ನಾಟಕ ಸರ್ಕಾರ**

**ಲೋಕೋಪಯೋಗಿ ಇಲಾಖೆ**

**ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಮೈಸೂರು ವಿಭಾಗ, ಮೈಸೂರು.**

www:eemys@kpwd.gov.in ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 0821–2420810

**ಕೆಳಗೆ ಸೂಚಿಸಿರುವ ಅಲ್ಪಾವದಿ ಐಟಂವಾರು ಟೆಂಡರ್ ಪ್ರಕಟಣೆಗಳ ಅಧಿಸೂಚನೆ ದಿನಾಂಕ: 05.08.2022**

ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್‌ರವರಿಂದ ಈ ವಿಭಾಗ ವ್ಯಾಪ್ತಿಯ ಈ ಕೆಳಗಿನಂತೆ ಐಟಂವಾರು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದ್ದು, ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (http://eproc.karnataka.gov.in) ಸಂಜೆ 4:00ರ ವರೆಗೆ ಈ ಕೆಳಗಿನಂತೆ ಸಲ್ಲಿಸಬಹುದಾಗಿರುತ್ತದೆ. ಕನಿಷ್ಠ ಟೆಂಡರ್‌ಗಿಟ್ಟ ಮೊತ್ತ ರೂ.8.91 ಲಕ್ಷಗಳು ಹಾಗೂ ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ ರೂ.312.16 ಲಕ್ಷಗಳಾಗಿರುತ್ತದೆ. ಕನಿಷ್ಠ ಇ.ಎಂ.ಡಿ ರೂ. 0.223 ಲಕ್ಷ ಹಾಗು ಗರಿಷ್ಠ ಇ.ಎಂ.ಡಿ ಮೊತ್ತ ರೂ 4.68 ಲಕ್ಷಗಳಾಗಿರುತ್ತದೆ. ಟೆಂಡರ್ ಪೂರ್ವಭಾವಿ ಸಭೆಯನ್ನು ದಿನಾಂಕ: 16.08.2022 ರ ಬೆಳಿಗ್ಗೆ 11.30 ಕ್ಕೆ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ನಡೆಸಲಾಗುವುದು. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

| ಕ್ರಮ ಸಂಖ್ಯೆ | ಟೆಂಡರ್ ಪ್ರಕಟಣೆ ಸಂಖ್ಯೆ | ಟೆಂಡರ್ ಪ್ರಕಟಣೆಯಲ್ಲಿನ ಕಾಮಗಾರಿಗಳ ಕ್ರಮ ಸಂಖ್ಯೆ | ಕರೆಯ/ಕಾರಿಗೆಂಡಂ ಸಂಖ್ಯೆ | ಗುತ್ತಿಗೆದಾರರ ಅರ್ಹತೆ | ಮೀಸಲಾತಿ ವಿವರ | ಕೊನೆಯ ದಿನಾಂಕ |
|---|---|---|---|---|---|---|
| 1. | 09/2021–22 | 01 | ಕರೆ–4 | 4ನೇ ದರ್ಜೆ & ಮೇಲ್ಪಟ್ಟು | - | 08.08.2022 |
| 2. | 07/2022–23 | 13 | ಕರೆ–1 | ಕ್ರಸಂ 1–12 3ನೇ ದರ್ಜೆ & ಮೇಲ್ಪಟ್ಟು ಹಾಗೂ ಕ್ರಸಂ–13 2ನೇ ದರ್ಜೆ& ಮೇಲ್ಪಟ್ಟು | ಕ್ರಸಂ–1 ಮತ್ತು3 ಪರಿಶಿಷ್ಟ ಜಾತಿ ಹಾಗೂ ಕ್ರಸಂ–2 ಪರಿಶಿಷ್ಟ ಪಂಗಡ | ಕ್ರಸಂ 1 ರಿಂದ 12 18.08.2022 & ಕ್ರಸಂ 13ಕ್ಕೆ 25.08.2022 |

**ಕಾರ್ಯಪಾಲಕ ಇಂಜಿನಿಯರ್,**
**ಲೋಕೋಪಯೋಗಿ ಇಲಾಖೆ,**
**ಮೈಸೂರು ವಿಭಾಗ, ಮೈಸೂರು.**

**ಕರ್ನಾಟಕ ಗೃಹ ಮಂಡಳಿ**

ಕರ್ನಾಟಕ ಗೃಹ ಮಂಡಳಿ ಸಮುದಾಯದ ನಿರ್ಮಾಣದತ್ತ

ಗೃಹ ಆಯುಕ್ತರವರ ಕಛೇರಿ, 3ನೇ ಮತ್ತು 4ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560009 ದೂರವಾಣಿ: 080–22273511–16

ಸಂಖ್ಯೆ: ಕಗೃಮಂ/ಹಂಚಿಕೆ/2022–23 ದಿನಾಂಕ: 08.08.2022

**ತಿದ್ದುಪಡಿ ಪ್ರಕಟಣೆ**

ಕರ್ನಾಟಕ ಗೃಹ ಮಂಡಳಿ ವತಿಯಿಂದ ದಾವಣಗೆರೆ ಜಿಲ್ಲೆ, ಹರಿಹರ–ಶೇರಾಪುರ ಬಡಾವಣೆ ಹಾಗೂ ಗದಗ ಜಿಲ್ಲೆ ಮುಂಡರಗಿ ಬಡಾವಣೆಗಳಲ್ಲಿ ಅಭಿವೃದ್ಧಿಪಡಿಸಿರುವ ನಿವೇಶನಗಳನ್ನು ಅರ್ಜಿದಾರರುಗಳಿಗೆ ಇ–ಲಾಟರಿ ಮುಖಾಂತರ ಹಂಚಿಕೆ ಮಾಡಲು ದಿನಾಂಕ: 16–07–2022 ರಂದು ಪ್ರಜಾವಾಣಿ ಮತ್ತು ವಿಜಯ ಕರ್ನಾಟಕ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗಿದ್ದ, ಇ–ಲಾಟರಿ ನಡೆಯುವ ಸ್ಥಳ ಮತ್ತು ವೇಳಾಪಟ್ಟಿಯನ್ನು ಕಾರಣಾಂತರಗಳಿಂದ ಈ ಕೆಳಕಂಡಂತೆ ತಿದ್ದುಪಡಿ ಮಾಡಲಾಗಿರುತ್ತದೆ.

| ಕ್ರ. ಸಂ | ಜಿಲ್ಲೆ | ಬಡಾವಣೆಯ ಹೆಸರು | ಈ ಹಿಂದೆ ನಿಗಧಿಪಡಿಸಲಾಗಿದ್ದ ಇ–ಲಾಟರಿ ದಿನಾಂಕ ಮತ್ತು ಸ್ಥಳ | ಪ್ರಸ್ತುತ ನಿಗಧಿಪಡಿಸಿರುವ ಇ–ಲಾಟರಿ ದಿನಾಂಕ ಮತ್ತು ಸ್ಥಳ |
|---|---|---|---|---|
| 1 | ದಾವಣಗೆರೆ | ಹರಿಹರ–ಶೇರಾಪುರ | 17–08–2022, ಹರಿಹರ–ಶೇರಾಪುರ ಸಮಯ: ಬೆಳಗ್ಗೆ 11.00 ಗಂಟೆ | 17–08–2022 ರಂದು ಬೆಳಗ್ಗೆ 11.00 ಗಂಟೆ, ಕೇಂದ್ರ ಕಛೇರಿ, ಕ.ಗೃ.ಮಂ, ಕಾವೇರಿ ಭವನ, ಬೆಂಗಳೂರು |
| 2 | ಗದಗ | ಮುಂಡರಗಿ | 18–08–2022, ಮುಂಡರಗಿ ಸಮಯ: ಮಧ್ಯಾಹ್ನ 03.00 ಗಂಟೆ | 18–08–2022 ರಂದು ಸಮಯ ಮಧ್ಯಾಹ್ನ 3.00 ಗಂಟೆ, ಕೇಂದ್ರ ಕಛೇರಿ, ಕ.ಗೃ.ಮಂ, ಕಾವೇರಿ ಭವನ, ಬೆಂಗಳೂರು |

ಸಹಿ/– ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

DIPR/CP/1729/Zenkar/2022-23

ಕರ್ನಾಟಕ ಸರ್ಕಾರ

**ಗಣಿ ಮತ್ತು ಭೂವಿಜ್ಞಾನ ಇಲಾಖೆ**

#49, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560 001. ಇ–ಮೇಲ್: dir-mines@karnataka.gov.in

ಸಂ: ಡಿಎಂಜಿ–17012/22/2021/2022–23 ದಿನಾಂಕ: 08.08.2022

ಸಿ.ನಂ: 652857

**ಅಧಿಸೂಚನೆ ಮತ್ತು ಟೆಂಡರ್ ಆಹ್ವಾನಿಸುವ ಪ್ರಕಟಣೆ**

**"ಸುಣ್ಣದ ಕಲ್ಲಿನ ಗಣಿಗಾರಿಕೆಗೆ ಗಣಿ ಗುತ್ತಿಗೆ ನೀಡಲು ಬಿಡ್‌ಗಳ ಆಹ್ವಾನ"**

Mines and Minerals (Development and Regulation) Act, 1957 ರ ಸೆಕ್ಷನ್ 10(ಬಿ) ಅಡಿಯಲ್ಲಿ ಪ್ರದತ್ತವಾದ ಅಧಿಕಾರದಂತೆ ಮತ್ತು the Minerals (Evidence of Mineral Contents) Rules, 2015 and the Mineral (Auction) Rules, 2015 and Mineral (Auction) Amendment Rules, 2015 ಮತ್ತು ಆದರಡಿಯಾದ ತಿದ್ದುಪಡಿಗಳ ಅನುಗುಣವಾಗಿ ಕರ್ನಾಟಕ ಸರ್ಕಾರವು ಸುಣ್ಣದ ಕಲ್ಲಿನ ಗಣಿ ಗುತ್ತಿಗೆಗಳನ್ನು ನೀಡಲು ಎಲೆಕ್ಟ್ರಾನಿಕ್ ಹರಾಜಿಗೆ ಒಳಪಡಿಸಲು ಹೊಸ ಪ್ರದೇಶಗಳನ್ನು ಗುರುತಿಸಿದೆ.

ಯಾವುದೇ ವ್ಯಕ್ತಿ, ಸಂಸ್ಥೆ, ಕಂಪನಿಯು ಟೆಂಡರ್ ದಾಖಲೆಯಲ್ಲಿ ನಮೂದಿಸಿರುವ ಅರ್ಹತೆಗಳನ್ನು ಹೊಂದಿರುವವರು ಹರಾಜಿನಲ್ಲಿ ಭಾಗವಹಿಸಬಹುದಾಗಿರುತ್ತದೆ. ಹರಾಜಿಗೆ ಒಳಪಡಿಸಿದ ಪ್ರದೇಶಗಳ ವಿವರ ಈ ಕೆಳಕಂಡಂತಿದೆ.

| ಕ್ರ.ಸಂ. | ಬ್ಲಾಕ್ ಹೆಸರು | ವಿಸ್ತೀರ್ಣ (ಹೆ.ಗಳಲ್ಲಿ) | ಅಂದಾಜಿಸಲಾದ ಖನಿಜ ಸಂಪನ್ಮೂಲ (ಎಂಎಂಟಿ) |
|---|---|---|---|
| 1. | ಉಡಗಿ ಸುಣ್ಣದ ಕಲ್ಲಿನ ಬ್ಲಾಕ್ | 646.34 | 459.41 |

ಮೇಲಿನ ಪಟ್ಟಿಯಲ್ಲಿ ತಿಳಿಸಿರುವ ಬ್ಲಾಕ್‌ಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಆಹ್ವಾನಿಸಲಾಗಿದೆ. ಆನ್‌ಲೈನ್‌ನಲ್ಲಿ ಸಲ್ಲಿಸಬೇಕಾದ ತಾಂತ್ರಿಕ ಬಿಡ್‌ಗಳ ಹೊರತಾಗಿ, ಬಿಡ್ಡುದಾರರು ತಮ್ಮ ತಾಂತ್ರಿಕ ಬಿಡ್‌ಗಳ ಮೂಲ ಭೌತಿಕ ಪ್ರತಿಗಳನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರಕ್ಕೆ ಅಂದರೆ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರಿಗೆ ಸಲ್ಲಿಸಬೇಕಾಗುತ್ತದೆ.

ಅರ್ಹತಾ ನಿಬಂಧನೆಗಳು, ನಿಯಮ ಹಾಗೂ ನಿಬಂಧನೆಗಳು, ಎಲೆಕ್ಟ್ರಾನಿಕ್ ಹರಾಜಿನಲ್ಲಿ ಭಾಗವಹಿಸಬೇಕಾದ ದಿನಾಂಕ ಮತ್ತು ಸಮಯಗಳ ವಿವರಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ನೀಡಲಾಗಿರುತ್ತದೆ. ಟೆಂಡರ್ ದಸ್ತಾವೇಜುಗಳು, ಪ್ರಕಟಣೆಗಳು, ನವೀಕರಣಗಳು ಮತ್ತು ಇ–ಹರಾಜು ಪ್ರಕ್ರಿಯೆಗೆ ಸಂಬಂಧಿಸಿದ ಇತರೆ ವಿವರಗಳು ಎಂಎಸ್‌ಟಿಸಿ ನಿಯಮಿತ (https://www.mstcecommerce.com/auctionhome/mlcl/index.jsp) ದಲ್ಲಿ ಮಾತ್ರ ಎಲೆಕ್ಟ್ರಾನಿಕ್ ರೂಪದಲ್ಲಿ ಲಭ್ಯವಾಗುವುದು.

ಆಸಕ್ತಿಯುಳ್ಳ ಮತ್ತು ಅರ್ಹ ಬಿಡ್ಡುದಾರರು ಮೇಲ್ಕಂಡ ವೆಬ್‌ಸೈಟ್‌ನಲ್ಲಿ ನೊಂದಣಿ ಮಾಡಿಕೊಳ್ಳಬೇಕು. ಇ–ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ನೊಂದಣಿ ಮಾಡಿಕೊಂಡ ಬಿಡ್ಡುದಾರರು ಲಾಗಿನ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ಪಡೆಯಬಹುದು. ಟೆಂಡರ್ ದಸ್ತಾವೇಜು ಮಾದರಿ ಮತ್ತು ಬ್ಲಾಕ್‌ನ ಕುರಿತಾದ ಸಾರಾಂಶಗಳು ಎಂಎಸ್‌ಟಿಸಿ ನಿಯಮಿತದ ವೆಬ್‌ಸೈಟ್ (https://www.mstcecommerce.com/ auctionhome/mlcl/index.jsp) ನಲ್ಲಿ ಉಚಿತವಾಗಿ ಲಭ್ಯವಿದೆ. ಬಿಡ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ನೊಂದಣಿ ಮಾಡಿಕೊಂಡ ಬಿಡ್ಡುದಾರರು ಟೆಂಡರ್ ದಸ್ತಾವೇಜಿನಲ್ಲಿ ಸೂಚಿಸಿರುವ ಹಣ ರೂ.5,00,000/– (ಐದು ಲಕ್ಷ ರೂಪಾಯಿಗಳು ಮಾತ್ರ) + ಜಿಎಸ್‌ಟಿ ಪಾವತಿಸುವ ಮೂಲಕ ಸಂಬಂಧಪಟ್ಟ ಗಣಿ ಬ್ಲಾಕ್‌ನ ಟೆಂಡರ್ ದಸ್ತಾವೇಜುಗಳನ್ನು ಎಂಎಸ್‌ಟಿಸಿ ನಿಯಮಿತದ ವೆಬ್‌ಸೈಟ್‌ನಿಂದ ಪಡೆಯಬಹುದು.

ಟೆಂಡರ್ ದಸ್ತಾವೇಜುಗಳನ್ನು ದಿನಾಂಕ: 10.08.2022 ರಿಂದ ಆಸಕ್ತ ಬಿಡ್‌ದಾರರಿಗೆ ಮೇಲ್ಕಂಡ ಎಂ.ಎಸ್.ಟಿ.ಸಿ ವೆಬ್‌ಸೈಟ್ ನಲ್ಲಿ ಲಭ್ಯವಿದ್ದು ದಿನಾಂಕ: 12.09.2022 ಟೆಂಡರ್ ಮಾರಾಟದ ಕೊನೆಯ ದಿನವಾಗಿರುತ್ತದೆ. ತಾಂತ್ರಿಕ ಹಾಗೂ ಬಿಡ್ ಮೊತ್ತ ನಮೂದಿಸಿದ ಪ್ರಸ್ತಾವನೆಯನ್ನು ಎಂ.ಎಸ್.ಟಿ.ಸಿ ವೆಬ್ ಸೈಟ್‌ನಲ್ಲಿ ದಿನಾಂಕ: 19.09.2022 ರ 17.00 ಗಂಟೆಗೆ ಅಥವಾ ಅದರೊಳಗೆ ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್‌ಗಳ ಮೂಲ ಭೌತಿಕ ಪ್ರತಿಗಳನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರಕ್ಕೆ ಅಂದರೆ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರಿಗೆ ದಿನಾಂಕ: 19.09.2022 ರ 17.00 ಗಂಟೆಗೆ ಅಥವಾ ಅದರೊಳಗೆ ಸಲ್ಲಿಸಬೇಕಾಗುತ್ತದೆ.

ಸಹಿ/–
ನಿರ್ದೇಶಕರು

DIPR/CP/1720/Zenkar/2022-23

ಕರ್ನಾಟಕ ಸರ್ಕಾರ

**ಮಕ್ಕಳ ರಕ್ಷಣಾ ನಿರ್ದೇಶನಾಲಯ**

3ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕಗೋಪುರ, ಡಾ|| ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು–560001, ಇ–ಮೇಲ್:icps.kar@gmail.com ದೂರವಾಣಿ ಸಂಖ್ಯೆ: 080–22867383

ಸಂಖ್ಯೆ: ದಿನಾಂಕ: 08.08.2022

**ಅಧಿಸೂಚನೆ**

ಕರ್ನಾಟಕ ರಾಜ್ಯದಲ್ಲಿ ಮಕ್ಕಳ ಕಲ್ಯಾಣ ಸಮಿತಿಗಳಿಗೆ ಅಧ್ಯಕ್ಷರು ಮತ್ತು ಸದಸ್ಯರುಗಳು ಹಾಗೂ ಬಾಲನ್ಯಾಯ ಮಂಡಳಿಗೆ ಸಮಾಜಕಾರ್ಯಕರ್ತ ಸದಸ್ಯರುಗಳ ಆಯ್ಕೆ ಸಂಬಂಧ ಅರ್ಜಿಯನ್ನು ಆಹ್ವಾನಿಸಲಾಗಿದೆ.

**ಕರ್ನಾಟಕ ರಾಜ್ಯದ 31 ಜಿಲ್ಲೆಗಳಲ್ಲಿ ಖಾಲಿಯಿರುವ ಮಕ್ಕಳ ಕಲ್ಯಾಣ ಸಮಿತಿಗಳಿಗೆ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು** ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ, 2015ರ ಸೆಕ್ಷನ್ 27ರನ್ವಯ ಹಾಗೂ ಮಾದರಿ ನಿಯಮಗಳು, 2016ರ ನಿಯಮ 15(3)ರನ್ವಯ ಮತ್ತು **ಬಾಲನ್ಯಾಯ ಮಂಡಳಿಗಳಿಗೆ ಸಮಾಜ ಕಾರ್ಯಕರ್ತ ಸದಸ್ಯರುಗಳನ್ನು** ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ, 2015ರ ಸೆಕ್ಷನ್ 4 ರನ್ವಯ ಹಾಗೂ ಮಾದರಿ ನಿಯಮಗಳು, 2016ರ ನಿಯಮ 4(3) ರನ್ವಯಆಯ್ಕೆ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಮಕ್ಕಳ ರಕ್ಷಣಾ ನಿರ್ದೇಶನಾಲಯದಿಂದ, ದಿನಾಂಕ:13.10.2020 ಮತ್ತು 30.01.2021ರಂದು ಮಕ್ಕಳ ಕಲ್ಯಾಣ ಸಮಿತಿಗಳಿಗೆ ಹಾಗೂ ಬಾಲನ್ಯಾಯ ಮಂಡಳಿಗಳಿಗೆ ಅಧ್ಯಕ್ಷರು/ಸದಸ್ಯರುಗಳನ್ನು ಆಯ್ಕೆ ಮಾಡುವ ಸಂಬಂಧ ಅರ್ಜಿಗಳನ್ನು ಆಹ್ವಾನಿಸಿ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ.

ಸದರಿ ಪ್ರಕಟಣೆಗಳ ಕುರಿತು ಕೆಲವು ಖಾಸಗಿ ಜಾಲತಾಣ (ವೆಬ್‌ಪೋರ್ಟಲ್)/ಕೆರಿಯರ್ ಪೋರ್ಟಲ್‌ಗಳಲ್ಲಿ, ಈ ಸಮಿತಿಗಳ ಅಧ್ಯಕ್ಷರು/ಸದಸ್ಯರುಗಳ ಆಯ್ಕೆಗೆ ಸಂಬಂಧಿಸಿದ ವಿದ್ಯಾರ್ಹತೆ ಕುರಿತು ನೀಡಿದ ಪ್ರಕಟಣೆಯು ಅಸ್ಪಷ್ಟತೆ/ಗೊಂದಲಗಳನ್ನು ಉಂಟುಮಾಡಿರುತ್ತದೆ. ಇದಲ್ಲದೆಮಕ್ಕಳ ರಕ್ಷಣಾ ನಿರ್ದೇಶನಾಲಯದಿಂದ ಮಕ್ಕಳ ಕಲ್ಯಾಣ ಸಮಿತಿಗಳನ್ನು ಮತ್ತು ಬಾಲನ್ಯಾಯ ಮಂಡಳಿಗಳನ್ನು ಹೊಸದಾಗಿ ರಚಿಸಲಾಗುತ್ತಿದೆ.**ಈ ಹಿನ್ನೆಲೆಯಲ್ಲಿ ಸದರಿ ಪ್ರಕಟಣೆಗಳಿಗೆ ಪೂರಕವಾಗಿ ಮಕ್ಕಳ ರಕ್ಷಣಾ ನಿರ್ದೇಶನಾಲಯದಿಂದ ಅಧ್ಯಕ್ಷರು/ಸದಸ್ಯರುಗಳ ಆಯ್ಕೆಗೆ ಅರ್ಜಿಗಳನ್ನು ಆಹ್ವಾನಿಸಿ ಮತ್ತೊಮ್ಮೆ ಈ ಪ್ರಕಟಣೆಯನ್ನು ಹೊರಡಿಸಲಾಗಿದೆ.**

ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳ ಮತ್ತು ಬಾಲನ್ಯಾಯ ಮಂಡಳಿಯ ಸಮಾಜ ಕಾರ್ಯಕರ್ತ ಸದಸ್ಯರುಗಳಿಗೆ ಒಂದು ಸಭೆಯ ಉಪಸ್ಥಿತಿಗೆ ರೂ.1500/–ಗಳಂತೆ ಗೌರವಧನ ಪಾವತಿಸಲಾಗುವುದು.ಈ ಗೌರವಧನವು ಉಪಸ್ಥಿತಿ ಭತ್ಯೆ, ಪ್ರಯಾಣ ಭತ್ಯೆ ಮತ್ತು ರಾಜ್ಯ ಸರ್ಕಾರವು ನಿಗದಿಪಡಿಸುವ ಇನ್ನಿತರೆ ಭತ್ಯೆಗಳನ್ನು ಒಳಗೊಂಡಿರುತ್ತದೆ.

**ಮೇಲ್ಕಂಡ ಅಧ್ಯಕ್ಷರು/ಸದಸ್ಯರುಗಳಿಗೆ ಅರ್ಜಿ ಸಲ್ಲಿಸಲು ಅರ್ಹತಾ ಮಾನದಂಡಗಳು ಈ ಕೆಳಕಂಡಂತಿರುತ್ತವೆ.**

| ಹುದ್ದೆಯ ಹೆಸರು | ಅಧಿಕಾರಾವಧಿ | ಅರ್ಹತಾ ಮಾನದಂಡ ಮತ್ತು ವಯೋಮಾನ |
|---|---|---|
| ಬಾಲನ್ಯಾಯ ಮಂಡಳಿಯ ಸಮಾಜ ಕಾರ್ಯಕರ್ತ ಸದಸ್ಯರುಗಳು | 3 ವರ್ಷ | ಬಾಲನ್ಯಾಯ (ಮಕ್ಕಳ ಪಾಲನೆ ಮತ್ತುರಕ್ಷಣೆ) ಕಾಯ್ದೆ, 2015ರ ಸೆಕ್ಷನ್ 4ರನ್ವಯ ಹಾಗೂ ಮಾದರಿ ನಿಯಮಗಳು, 2016ರ ನಿಯಮ 4(3)ರನ್ವಯ: **ಅರ್ಜಿದಾರರು 35 ವರ್ಷಕ್ಕಿಂತ ಕಡಿಮೆ** ವಯಸ್ಸಿನವರಾಗಿರಬಾರದು **ಮತ್ತು** ಮಕ್ಕಳೊಂದಿಗೆ ಸಕ್ರಿಯವಾಗಿ ಶಿಕ್ಷಣ, ಆರೋಗ್ಯ, ಅಥವಾ ಕಲ್ಯಾಣ ಕ್ಷೇತ್ರಗಳಲ್ಲಿ **ಕನಿಷ್ಠ 7 ವರ್ಷಗಳ ಕಾರ್ಯಾನುಭವವನ್ನು** ಹೊಂದಿರತಕ್ಕದ್ದು. **ಅಥವಾ** **ಅರ್ಜಿದಾರರು 35 ವರ್ಷಕ್ಕಿಂತ ಕಡಿಮೆ** ವಯಸ್ಸಿನವರಾಗಿರಬಾರದು **ಮತ್ತು** ಮಕ್ಕಳ ಮನಃಶಾಸ್ತ್ರ (ಚೈಲ್ಡ್ ಸೈಕಾಲಜಿ) ಅಥವಾ ಮನೋರೋಗ ಚಿಕಿತ್ಸೆ (ಸೈಕಿಯಾಟ್ರಿ) ಅಥವಾ ಸಮಾಜ ಶಾಸ್ತ್ರ(ಸೋಶಿಯಾಲಜಿ) ಅಥವಾ ಕಾನೂನು ಕ್ಷೇತ್ರದಲ್ಲಿ ಪದವಿಯನ್ನು ಹೊಂದಿ ವೃತ್ತಿಪರರಾಗಿರತಕ್ಕದ್ದು. |
| ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರು/ಸದಸ್ಯರು | 3 ವರ್ಷಗಳು | ಬಾಲನ್ಯಾಯ (ಮಕ್ಕಳ ಪಾಲನೆ ಮತ್ತುರಕ್ಷಣೆ) ಕಾಯ್ದೆ, 2015ರ ಸೆಕ್ಷನ್ 27ರನ್ವಯ ಹಾಗೂ ಮಾದರಿ ನಿಯಮಗಳು, 2016ರ ನಿಯಮ 15(3)ರನ್ವಯ: **ಅರ್ಜಿದಾರರು 35 ವರ್ಷ** ವಯಸ್ಸನ್ನು ಮೀರಿರತಕ್ಕದ್ದು **ಮತ್ತು** ಮಕ್ಕಳೊಂದಿಗೆ ಸಕ್ರಿಯವಾಗಿ ಶಿಕ್ಷಣ, ಆರೋಗ್ಯ,ಅಥವಾ ಕಲ್ಯಾಣ ಕ್ಷೇತ್ರಗಳಲ್ಲಿ **ಕನಿಷ್ಠ 7 ವರ್ಷಗಳ ಕಾರ್ಯಾನುಭವವನ್ನು** ಹೊಂದಿರತಕ್ಕದ್ದು. **ಅಥವಾ** **ಅರ್ಜಿದಾರರು 35 ವರ್ಷ** ವಯಸ್ಸನ್ನು ಮೀರಿರತಕ್ಕದ್ದು **ಮತ್ತು** ಮಕ್ಕಳ ಮನಃಶಾಸ್ತ್ರ (ಚೈಲ್ಡ್ ಸೈಕಾಲಜಿ) ಅಥವಾ ಮನೋರೋಗ ಚಿಕಿತ್ಸೆ (ಸೈಕಿಯಾಟ್ರಿ) ಅಥವಾ ಸಮಾಜ ಕಾರ್ಯಕರ್ತ (ಸೋಶಿಯಲ್ ವರ್ಕ್) ಅಥವಾ ಸಮಾಜ ಶಾಸ್ತ್ರ(ಸೋಶಿಯಾಲಜಿ) ಅಥವಾ ಮಾನವ ಅಭಿವೃದ್ಧಿ(ಹ್ಯೂಮನ್ ಡೆವೆಲಪ್‌ಮೆಂಟ್) ಅಥವಾ ಕಾನೂನು ಕ್ಷೇತ್ರದಲ್ಲಿ **ಪದವಿಯನ್ನು ಹೊಂದಿ ವೃತ್ತಿಪರರಾಗಿರತಕ್ಕದ್ದು** ಅಥವಾ ನಿವೃತ್ತ ನ್ಯಾಯಿಕ ಅಧಿಕಾರಿಯಾಗಿರತಕ್ಕದ್ದು. |

ಅರ್ಜಿಗಳನ್ನು ದಿನಾಂಕ:14.07.2022 ರಿಂದ 16.08.2022ರವರೆಗೆ ಸ್ವೀಕರಿಸಲಾಗುವುದು. ಅರ್ಜಿದಾರರು ಅರ್ಜಿಗಳನ್ನು ನಿಗಧಿತ ನಮೂನೆಯಲ್ಲಿ ದಿನಾಂಕ:16.08.2022ರ ಸಂಜೆ 5:30ರೊಳಗೆ ಮುದ್ದಾಮ್ ಅಥವಾ ಅಂಚೆ(ರಿಜಿಸ್ಟರ್ ಪೋಸ್ಟ್) ಮೂಲಕ ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ ಮತ್ತು ಸದಸ್ಯ ಕಾರ್ಯದರ್ಶಿ, ರಾಜ್ಯ ಮಟ್ಟದಆಯ್ಕೆ ಸಮಿತಿ, 3ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕಗೋಪುರ, ಡಾ. ಬಿ.ಆರ್‌ಅಂಬೇಡ್ಕರ್ ವೀಧಿ, ಬೆಂಗಳೂರು–560001 ಇವರಿಗೆ ಸಲ್ಲಿಸತಕ್ಕದ್ದು:

**ವಿಶೇಷ ಸೂಚನೆ:** 1. ಅಭ್ಯರ್ಥಿಗಳು ಮಕ್ಕಳ ಕಲ್ಯಾಣ ಸಮಿತಿ ಹಾಗೂ ಬಾಲನ್ಯಾಯ ಮಂಡಳಿಯ ಅಧ್ಯಕ್ಷರು/ಸದಸ್ಯರುಗಳ ಆಯ್ಕೆ ಸಂಬಂಧ, ಈ ಹಿಂದೆ ನಿರ್ದೇಶನಾಲಯದಿಂದ ನೀಡಿದ ಪ್ರಕಟಣೆ ದಿನಾಂಕ:13.10.2020 ಮತ್ತು 30.01.2021 ರನ್ವಯ ಈಗಾಗಲೇ ಅರ್ಜಿ ಸಲ್ಲಿಸಿದ್ದಲ್ಲಿ, ಮತ್ತೊಮ್ಮೆ ಅರ್ಜಿಯನ್ನು ಸಲ್ಲಿಸುವ ಅಗತ್ಯವಿರುವುದಿಲ್ಲ. 2) ಬಾಲನ್ಯಾಯ ಮಂಡಳಿ ಮತ್ತು ಮಕ್ಕಳ ಕಲ್ಯಾಣ ಸಮಿತಿಗೆ ನಿಗಧಿಪಡಿಸಿರುವ ಅರ್ಜಿ ನಮೂನೆಯು ಎಲ್ಲಾ ಜಿಲ್ಲೆಗಳ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳಲ್ಲಿ ಲಭ್ಯವಿರುತ್ತದೆ ಮತ್ತು ಮಕ್ಕಳ ರಕ್ಷಣಾ ನಿರ್ದೇಶನಾಲಯದ ವೆಬ್‌ಸೈಟ್ www.icps.karnataka.gov.in ನಲ್ಲಿ ಸಹ ಲಭ್ಯವಿರುತ್ತದೆ. 3) ಅಪೂರ್ಣ ಅರ್ಜಿಗಳು ಅಥವಾ ನಿಗಧಿತ ದಿನಾಂಕದ ನಂತರ ಸ್ವೀಕೃತವಾದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. 4) ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ ಮತ್ತು ಸದಸ್ಯ ಕಾರ್ಯದರ್ಶಿ, ರಾಜ್ಯ ಮಟ್ಟದ ಆಯ್ಕೆ ಸಮಿತಿ ಇವರು ಯಾವುದೇ ಕಾರಣವನ್ನು ನೀಡದೆ ಅರ್ಜಿಯನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ. 5) ಸಂದರ್ಶನಕ್ಕೆ ಆಯ್ಕೆ ಮಾಡಲಾದ ಅಭ್ಯರ್ಥಿಗಳಿಗೆ ಸಂದರ್ಶನದ ದಿನಾಂಕದೊಂದಿಗೆ ಮಾಹಿತಿಯನ್ನು ತಿಳಿಸಲಾಗುವುದು ಮತ್ತು ಪಟ್ಟಿಯನ್ನು (Short listed) **ನಿರ್ದೇಶನಾಲಯದ ವೆಬ್‌ಸೈಟ್ www.icps.karnataka.gov.in**ರಲ್ಲಿ ಪ್ರಕಟಿಸಲಾಗುವುದು. ಅರ್ಜಿದಾರರು ಹೆಚ್ಚಿನ ಮಾಹಿತಿಯನ್ನು ಸಂಬಂಧಪಟ್ಟ **ಜಿಲ್ಲೆಗಳ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳನ್ನು** ಸಂಪರ್ಕಿಸಿ ಪಡೆಯಬಹುದಾಗಿದೆ. 6) ಅರ್ಜಿದಾರರು ಜಿಲ್ಲಾ ಮಟ್ಟದಲ್ಲಿ ಹೆಚ್ಚಿನ ಮಾಹಿತಿಗಾಗಿ ಸಂಬಂಧಿಸಿದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಇವರನ್ನು ಸಂಪರ್ಕಿಸತಕ್ಕದ್ದು. ವಿಳಾಸ ಹಾಗೂ ದೂರವಾಣಿ ಸಂಖ್ಯೆಯು www.icps.karnataka.gov.in ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ. 7) ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ ಇವರನ್ನು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸತಕ್ಕದ್ದು. ಕಛೇರಿ ಸಂಖ್ಯೆ:080–22867383., ಯೋಜನಾ ನಿರ್ದೇಶಕರು: 9342585300., ಕಾರ್ಯಕ್ರಮ ಅಧಿಕಾರಿ: 9740399666., ಇ–ಮೇಲ್:icps.kar@gmail.com 8) **ಮಕ್ಕಳ ರಕ್ಷಣಾ ನಿರ್ದೇಶನಾಲಯವು ಯಾವುದೇ ಇತರೆ ಖಾಸಗಿ ವೆಬ್ ಪೋರ್ಟಲ್/ಕೆರಿಯರ್ ಪೋರ್ಟಲ್ ಅಥವಾ ಇನ್ನಿತರೆ ಯಾವುದೇ ಮಾಧ್ಯಮದಿಂದ ಪ್ರಕಟಿಸಲಾದ ಮಾಹಿತಿಗಳಿಗೆ ಜವಾಬ್ದಾರಿಯಾಗಿರುವುದಿಲ್ಲ.**

ವಾಸಾಸಂಇ/ವಿಜಯಪುರ/353/ಎಂಸಿಎ/2022–23 ಸಹಿ/– ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ, ಬೆಂಗಳೂರು

ಸತತ 7ನೇ ಬಾರಿ ಅವಧಿಗೆ ಮುನ್ನ ಮುಂದೂಡಿಕೆ; ಪ್ರತಿಪಕ್ಷಗಳ ಆಕ್ರೋಶ

# ಸಂಸತ್ತಿನ ಮುಂಗಾರು ಅಧಿವೇಶನಕ್ಕೆ ತೆರೆ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಬೆಲೆ ಏರಿಕೆ ವಿಷಯವನ್ನು ಚರ್ಚೆಗೆ ಎತ್ತಿಕೊಳ್ಳುವ ವಿಚಾರದಲ್ಲಿ ಉಂಟಾದ ಗದ್ದಲ, ರಾಷ್ಟ್ರಪತಿ ಹಾಗೂ ಉಪರಾಷ್ಟ್ರಪತಿ ಚುನಾವಣೆ, ಪ್ರತಿಪಕ್ಷಗಳ ಒಡಕು ಬಹಿರಂಗಗೊಂಡ ಹಲವು ವಿದ್ಯಮಾನಗಳೊಂದಿಗೆ ಸಂಸತ್ತಿನ ಮುಂಗಾರು ಅಧಿವೇಶನಕ್ಕೆ ಅವಧಿಗೂ ಮುನ್ನವೇ ಸೋಮವಾರ ತೆರೆ ಬಿದ್ದಿದೆ. ಉಭಯ ಸದನಗಳನ್ನು ಅನಿರ್ದಿಷ್ಟಾವಧಿಗೆ ಮುಂದೂಡಿಕೆ ಮಾಡಲಾಗಿದೆ. ನಿಗದಿಗಿಂತಲೂ ಮೊದಲೇ ಅಧಿವೇಶನ ಕೊನೆಗೊಳ್ಳುತ್ತಿರುವುದು ಇದು ಸತತ ಏಳನೇ ಬಾರಿ.

ಮಂಗಳವಾರ ಮೊಹರಂ ಹಾಗೂ ಗುರುವಾರ ರಕ್ಷಾಬಂಧನ ಹಬ್ಬಗಳಿಗೆ ರಜೆಯಿದೆ. ಈ ಮಧ್ಯೆ ಎರಡು ದಿನಗಳ ಅಧಿವೇಶನ ನಡೆಸಲು ಕಾಲಾವಕಾಶವಿತ್ತು. ಆದರೆ, ಅವಧಿಗೂ ಮುನ್ನವೇ ಅಧಿವೇಶವನ್ನು ಮುಕ್ತಾಯಗೊಳಿಸಲು ಸರ್ಕಾರ ನಿರ್ಧರಿಸಿತು. ಅವಧಿಗೆ ಮುನ್ನವೇ ಅಧಿವೇಶನವನ್ನು ಮುಂದೂಡಿರುವುದಕ್ಕೆ ಪ್ರತಿಪಕ್ಷಗಳು ಆಕ್ಷೇಪ ವ್ಯಕ್ತಪಡಿಸಿವೆ. ಟ್ವೀಟ್ ಮಾಡಿರುವ ಟಿಎಂಸಿ ಸಂಸದ ಡೆರೆಕ್ ಒಬ್ರಿಯಾನ್, ‘2020ರ ಬಜೆಟ್ ಅಧಿವೇಶನದಿಂದ ಆರಂಭವಾಗಿ, ಏಳನೇ ಬಾರಿ ಹೀಗಾಗುತ್ತಿದೆ. ಸಂಸತ್ತಿನ ಅಣಕ ಮಾಡುವುದನ್ನು ನಿಲ್ಲಿಸಿ’ ಎಂದು ಹೇಳಿದರು.

ಪ್ರತಿಪಕ್ಷಗಳ ಸಂಸದರು ಸೋಮವಾರ ಲೋಕಸಭೆಯ ಕಲಾಪ ಬಹಿಷ್ಕರಿಸಿ ಹೊರನಡೆದರು–ಪಿಟಿಐ ಚಿತ್ರ

### ಯಾವ ಮಸೂದೆ ಅಂಗೀಕಾರ?

32 ಮಸೂದೆಗಳಿಗೆ ಅಂಗೀಕಾರ ಪಡೆಯಲು ಸರ್ಕಾರ ಉದ್ದೇಶಿಸಿತ್ತು. ಈ ಪೈಕಿ ರಾಜ್ಯಸಭೆಯು ಏಳು ಹಾಗೂ ಲೋಕಸಭೆಯು ಐದು ಮಸೂದೆಗಳಿಗಷ್ಟೇ ಅಂಗೀಕಾರ ನೀಡಿದವು. ವೈಯಕ್ತಿಕ ದತ್ತಾಂಶ ಭದ್ರತೆ ಮಸೂದೆಯನ್ನು ಸರ್ಕಾರ ಹಿಂಪಡೆಯಿತು. ನವೀಕರಿಸಬಹುದಾದ ಇಂಧನಗಳ ಬಳಕೆ ಪ್ರೋತ್ಸಾಹಿಸುವ ಮಸೂದೆ; ನ್ಯೂಡೆಲ್ಲಿ ಇಂಟರ್‌ನ್ಯಾಷನಲ್ ಆರ್‌ಬಿಟ್ರೇಷನ್ ಸೆಂಟರ್ ಅನ್ನು ಇಂಡಿಯಾ ಇಂಟರ್‌ನ್ಯಾಷನಲ್ ಆರ್‌ಬಿಟ್ರೇಷನ್ ಸೆಂಟರ್ ಎಂದು ಬದಲಾಯಿಸುವ ಮಸೂದೆ; ಹಾಗೂ ನ್ಯಾಷನಲ್ ರೈಲ್ ಅಂಡ್ ಟ್ರಾನ್ಸ್‌ಪೋರ್ಟೇಷನ್ ಯೂನಿವರ್ಸಿಟಿ ಅನ್ನು ಗತಿಶಕ್ತಿ ವಿಶ್ವವಿದ್ಯಾಲಯ ಹೆಸರಿನ ಸ್ವಾಯತ್ತ ಸಂಸ್ಥೆಯಾಗಿ ಪರಿವರ್ತಿಸುವ ಮಸೂದೆಗಳಿಗೆ ಒಪ್ಪಿಗೆ ನೀಡಲಾಯಿತು. ವಿದ್ಯುತ್ ತಿದ್ದುಪಡಿ ಮಸೂದೆ 2022 ಅನ್ನು ಸಂಸದೀಯ ಸ್ಥಾಯಿಸಮಿತಿ ಪರಿಶೀಲನೆಗೆ ಒಪ್ಪಿಸಲಾಯಿತು.

ಲೋಕಸಭೆಯು 44 ಗಂಟೆ (ಶೇ 48) ಹಾಗೂ ರಾಜ್ಯಸಭೆಯು 38 ಗಂಟೆ (ಶೇ 44) ಅವಧಿಯ ಕಲಾಪ ನಡೆಸಲು ಮಾತ್ರ ಸಾಧ್ಯವಾಗಿದೆ. ಗದ್ದಲದ ಕಾರಣದಿಂದ 47 ಗಂಟೆಗಳಷ್ಟು ಅವಧಿಯ ಕಲಾಪ ವ್ಯರ್ಥವಾಗಿದೆ.

## ವೆಂಕಯ್ಯಗೆ ಭಾವುಕ ಬೀಳ್ಕೊಡುಗೆ

**ನವದೆಹಲಿ (ಪಿಟಿಐ):** ಸಭಾಪತಿಯಾಗಿ ಸದನವನ್ನು ಸಮರ್ಥವಾಗಿ ಮುನ್ನಡೆಸಿದ್ದಾರೆ ಹಾಗೂ ಸ್ಥಳೀಯ ಭಾಷೆಗಳಲ್ಲಿ ಮಾತನಾಡಲು ಪ್ರೋತ್ಸಾಹ ನೀಡಿದ್ದಾರೆ ಎಂದು ಎಂ. ವೆಂಕಯ್ಯ ನಾಯ್ಡು ಅವರನ್ನು ರಾಜ್ಯಸಭಾ ಸದಸ್ಯರು ಪಕ್ಷಭೇದ ಮರೆತು ಪ್ರಶಂಸಿಸಿದರು. ನಾಯ್ಡು ಅವರ ಅಧಿಕಾರಾವಧಿ ಆಗಸ್ಟ್ 10ರಂದು ಮುಕ್ತಾಯವಾಗಲಿದ್ದು, ರಾಜ್ಯಸಭೆಯಲ್ಲಿ ಸೋಮವಾರ ಅವರಿಗೆ ಬೀಳ್ಕೊಡುಗೆ ನೀಡಲಾಯಿತು.

ತಮ್ಮ ಅನುಭವಗಳನ್ನು ಆತ್ಮಚರಿತ್ರೆ ರೂಪದಲ್ಲಿ ಹೊರತರುವಂತೆ ಹಲವು ಸಂಸದರು ನಾಯ್ಡು ಅವರನ್ನು ಆಗ್ರಹಿಸಿದರು. ಒತ್ತಡದ ನಡುವೆಯೂ ನಾಯ್ಡು ಅವರು ಸದನವನ್ನು ತೂಗಿಸಿಕೊಂಡು ಹೋದ ವೈಖರಿಯನ್ನು ರಾಜ್ಯಸಭೆ ಪ್ರತಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಶ್ಲಾಘಿಸಿದರು. ‘ಮಹಿಳಾ ಮೀಸಲಾತಿ ಮಸೂದೆಯಲ್ಲಿ ಒಮ್ಮತ ಮೂಡಿಸಲು ನಾಯ್ಡು ಮುಂದಾಗಿದ್ದರು. ಅವರು ಉಳಿಸಿಹೋದ ಕೆಲಸವನ್ನು ಸರ್ಕಾರ ಪೂರ್ಣಗೊಳಿಸಲಿ’ ಎಂದು ಖರ್ಗೆ ಆಶಿಸಿದರು.

ನಾಯ್ಡು ಅವರು ಸದನದ ಉತ್ಪಾದಕತೆಯನ್ನು ಹೆಚ್ಚಿಸಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದರು. ‘ಸರ್ಕಾರವು ಪ್ರಸ್ತಾವಗಳನ್ನು ಇರಿಸಲು, ಪ್ರತಿಪಕ್ಷಗಳು ವಿರೋಧ ವ್ಯಕ್ತಪಡಿಸಲು ಹಾಗೂ ಸದನದಲ್ಲಿ ಚರ್ಚೆಗಳು ನಡೆಯಲು ಅವಕಾಶ ನೀಡುವ ಮೂಲಕ ನಾಯ್ಡು ಅವರು ಸದನದ ತತ್ವಗಳನ್ನು ಪಾಲಿಸಿದ್ದಾರೆ’ ಎಂದು ಪ್ರಧಾನಿ ಹೇಳಿದ್ದಾರೆ.

ತೃಣಮೂಲ ಕಾಂಗ್ರೆಸ್ ಸದಸ್ಯ ಡೆರೆಕ್ ಒಬ್ರಿಯಾನ್ ಅವರು ನಾಯ್ಡು ಅವರ ಬಾಲ್ಯದ ಕಷ್ಟದ ದಿನಗಳನ್ನು ನೆನಪಿಸಿಕೊಂಡಾಗ, ಸಭಾಪತಿ ಭಾವುಕರಾದರು.

**ರಾಷ್ಟ್ರಪತಿ ಹುದ್ದೆಗೆ ಎಂದೂ ಆಸೆಪಟ್ಟಿಲ್ಲ. ಭಿನ್ನಮತೀಯನಾಗಿ ಎಂದಿಗೂ ಗುರುತಿಸಿಕೊಂಡಿಲ್ಲ. ಭಾರವಾದ ಹೃದಯದಿಂದಲೇ ಬಿಜೆಪಿ ಬಿಟ್ಟಿದ್ದೆ**

**ಎಂ. ವೆಂಕಯ್ಯ ನಾಯ್ಡು,** ಸಭಾಪತಿ

### ‘ಮಸಾಲೆ ದೋಸೆ ಇಷ್ಟ’

ವೆಂಕಯ್ಯ ನಾಯ್ಡು ಅವರ ಜತೆಗಿನ ಒಡನಾಟ ನೆನಪಿಸಿಕೊಂಡ ಕೇಂದ್ರ ಸಂಸದೀಯ ವ್ಯವಹಾರ ಸಚಿವ ಪ್ರಲ್ಹಾದ ಜೋಶಿ, ‘ನಾಯ್ಡು ಅವರು ಬೆಂಗಳೂರಿನ ಜನಾರ್ದನ ಹೋಟೆಲ್‌ನ ಮಸಾಲೆ ದೋಸೆಯನ್ನು ಬಹಳ ಇಷ್ಟಪಡುತ್ತಿದ್ದರು’ ಎಂದು ಮೆಲುಕು ಹಾಕಿದರು.

ರಾಜ್ಯಸಭೆಯಲ್ಲಿ ಸೋಮವಾರ ಕನ್ನಡದಲ್ಲಿ ವಿದಾಯ ಭಾಷಣ ಮಾಡಿದ ಜೋಶಿ, ‘ನಾಯ್ಡು ಅವರು ಉಪರಾಷ್ಟ್ರಪತಿ ಆಗುವ ಮೊದಲು ಬೆಂಗಳೂರಿಗೆ ಬಂದಾಗಲೆಲ್ಲ ಗಾಂಧಿನಗರ ಜನಾರ್ದನ ಹೋಟೆಲ್‌ನಲ್ಲಿ ಉಳಿಯಲು ಹಾಗೂ ಮಸಾಲೆ ದೋಸೆ ತಿನ್ನಲು ಆದ್ಯತೆ ನೀಡುತ್ತಿದ್ದರು’ ಎಂದು ಹೇಳಿದರು.

### ಸುದ್ದಿ 2 ನಿಮಿಷ

## ‘ಸರ್ಕಾರದ ವಿರುದ್ಧ ಕ್ವಿಟ್ ಇಂಡಿಯಾ ಮಾದರಿಯ ಚಳವಳಿ ಅಗತ್ಯವಿದೆ’

**ನವದೆಹಲಿ (ಪಿಟಿಐ):** ‘ಈಗಿನ ಸರ್ವಾಧಿಕಾರಿ ಸರ್ಕಾರದ ವಿರುದ್ಧ ಕ್ವಿಟ್ ಇಂಡಿಯಾ ಮಾದರಿಯ ಚಳವಳಿಯೊಂದನ್ನು ನಡೆಸುವ ಅಗತ್ಯವಿದೆ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೋಮವಾರ ಹೇಳಿದ್ದಾರೆ.

ಕ್ವಿಟ್ ಇಂಡಿಯಾ ಚಳವಳಿಯ 80ನೇ ವರ್ಷಾಚರಣೆ ಹಿನ್ನೆಲೆಯಲ್ಲಿ ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಪೋಸ್ಟ್‌ವೊಂದನ್ನು ಪ್ರಕಟಿಸಿರುವ ಅವರು, ‘1942ರ ಆಗಸ್ಟ್ 8ರಂದು ಆಗಿನ ಬಾಂಬೆಯಲ್ಲಿ ನಡೆದಿದ್ದ ಚಳವಳಿಯು ಬ್ರಿಟಿಷರ ನಿದ್ದೆಗೆಡಿಸಿತ್ತು. ಈಗ ದೇಶದ ರಕ್ಷಣೆಗಾಗಿ ಅಂತಹ ಚಳವಳಿಯೊಂದರ ಅಗತ್ಯ ಹೆಚ್ಚಿದೆ. ಸರ್ವಾಧಿಕಾರ, ನಿರುದ್ಯೋಗ ಮತ್ತು ಹಣದುಬ್ಬರವನ್ನು ಭಾರತದಿಂದಲೇ ಕಿತ್ತೊಗೆಯಬೇಕಿದೆ’ ಎಂದು ಕಿಡಿಕಾರಿದ್ದಾರೆ.

‘1942ರ ಆಗಸ್ಟ್ 8ರಂದು ಗೊವಾಲಿಯಾ ಟ್ಯಾಂಕ್ ಮೈದಾನದಲ್ಲಿ ಸಾಗರೋಪಾದಿಯಲ್ಲಿ ಜನ ಸೇರಿದ್ದರು. ಆಗ ಗಾಂಧೀಜಿ ‘ಮಾಡು ಇಲ್ಲವೆ ಮಡಿ’ ಎಂಬ ಘೋಷವಾಕ್ಯ ಪ್ರಕಟಿಸಿದ್ದರು. ಜನರು ತಮ್ಮ ಜೀವವನ್ನೂ ಲೆಕ್ಕಿಸದೆ ಆ ಚಳವಳಿಯಲ್ಲಿ ಪಾಲ್ಗೊಂಡಿದ್ದರು. ಈ ಪೈಕಿ 940 ಮಂದಿ ಹುತಾತ್ಮರಾಗಿದ್ದರು. ಸಾವಿರಾರು ಮಂದಿ ಬಂಧನಕ್ಕೊಳಗಾಗಿ ಜೈಲು ಸೇರಿದ್ದರು. ದೇಶಕ್ಕಾಗಿ ಪ್ರಾಣ ತೆತ್ತ ಸ್ವಾತಂತ್ರ್ಯ ಸೇನಾನಿಗಳಿಗೆ ನನ್ನ ನಮನಗಳು’ ಎಂದಿದ್ದಾರೆ.

## ರಾಜಸ್ಥಾನ ದೇವಸ್ಥಾನದಲ್ಲಿ ಕಾಲ್ತುಳಿತ: ಮೂವರ ಸಾವು

**ಸಿಕರ್, ರಾಜಸ್ಥಾನ (ಪಿಟಿಐ):** ಇಲ್ಲಿನ ಪ್ರಸಿದ್ಧ ಖತು ಶ್ಯಾಮ್ ಜಿ ದೇವಸ್ಥಾನದ ಹೊರಗೆ ಸೋಮವಾರ ಬೆಳಗಿನ ಜಾವ ಪ್ರಾರ್ಥನೆಗಾಗಿ ಬಾಗಿಲು ತೆರೆಯುತ್ತಿದ್ದಂತೆ ಸರತಿ ಸಾಲಿನಲ್ಲಿ ನಿಂತಿದ್ದ ಸಾವಿರಾರು ಜನರು ಒಳ ನುಗ್ಗಲು ಯತ್ನಿಸಿದ ವೇಳೆ ನೂಕುನುಗ್ಗಲು ಉಂಟಾಗಿ ಮೂವರು ಮಹಿಳೆಯರು ಮೃತಪಟ್ಟು, ನಾಲ್ವರು ಗಾಯಗೊಂಡಿದ್ದಾರೆ.

'ಗ್ಯಾರಸ್' ದಿನದ ಅಂಗವಾಗಿ ದರ್ಶನ ಪಡೆಯಲು ರಾಜಸ್ಥಾನ ಮತ್ತು ನೆರೆ ರಾಜ್ಯಗಳ ಭಕ್ತರು ದೇಗುಲದ ಆವರಣದಲ್ಲಿ ಸರದಿ ಸಾಲಿನಲ್ಲಿ ನಿಂತಿದ್ದರು. ಬೆಳಗಿನ ಜಾವ 4.30ಕ್ಕೆ ಬಾಗಿಲು ತೆರೆಯುತ್ತಿದ್ದಂತೆ ನೂಕುನುಗ್ಗಲು ಉಂಟಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ಕುತೂಹಲ ಮೂಡಿಸಿದ ಬಿಹಾರ ರಾಜಕಾರಣ • ಆರ್‌ಜೆಡಿ ಸಮರ್ಥನೆ

# ‘ಜೆಡಿಯು ಬೆಂಬಲಿಸದೆ, ಬೇರೆ ಆಯ್ಕೆ ಏನಿದೆ?’

**ಪಟ್ನಾ (ಪಿಟಿಐ):** ‘ಬಿಜೆಪಿ ನೇತೃತ್ವದ ಎನ್‌ಡಿಎಯನ್ನು ಜೆಡಿಯು ತೊರೆಯುವುದಾದರೆ, ಅವರ ಜತೆ ಕೈಜೋಡಿಸುವುದನ್ನು ಬಿಟ್ಟು ನಮ್ಮ ಎದುರು ಬೇರೆ ಯಾವ ಆಯ್ಕೆ ಇದೆ?’ ಜೆಡಿಯುಗೆ ಬೆಂಬಲ ಸೂಚಿಸುತ್ತೇವೆ ಎಂಬುದನ್ನು ಆರ್‌ಜೆಡಿ ಹೇಳಿರುವ ಬಗೆ ಇದು.

ನಿತೀಶ್

ಬಿಜೆಪಿ ಮತ್ತು ಜೆಡಿಯು ಮಧ್ಯೆ ಸಂಬಂಧ ಹಳಸಿದ ಬೆನ್ನಲ್ಲೇ ರಾಜ್ಯದಲ್ಲಿ ಹೊಸ ರಾಜಕೀಯ ಸಮೀಕರಣಗಳು ಮುನ್ನೆಲೆಗೆ ಬರುತ್ತಿವೆ. ಆರ್‌ಜೆಡಿ ತನ್ನ ಎಲ್ಲಾ ಶಾಸಕರಿಗೆ ಪಟ್ನಾಕ್ಕೆ ಬರುವಂತೆ ಸೂಚಿಸಿದೆ. ಜೆಡಿಯು ಮುಖಂಡರು ಸಹ ತಮ್ಮ ಶಾಸಕರ ಜತೆಗೆ ಫೋನ್‌ನಲ್ಲಿ ಒಂದು ಸುತ್ತಿನ ಮಾತುಕತೆ ನಡೆಸಿದ್ದಾರೆ. ಕಾಂಗ್ರೆಸ್ ಸಹ ಪಟ್ನಾಗೆ ಬರುವಂತೆ ತನ್ನ ಎಲ್ಲಾ ಶಾಸಕರಿಗೆ ಸೂಚನೆ ನೀಡಿದೆ.

ಮಹಾರಾಷ್ಟ್ರದ ಶಿವಸೇನಾದಲ್ಲಿ ಒಡಕು ಮೂಡಿಸಿ, ಸರ್ಕಾರ ಬದಲಿಸಿದ ರೀತಿಯಲ್ಲಿಯೇ ಬಿಹಾರದಲ್ಲೂ ಸರ್ಕಾರ ಬದಲಿಸಲು ಬಿಜೆಪಿ ಸಂಚು ಹೂಡಿದೆ. ಇದಕ್ಕಾಗಿ ಜೆಡಿಯುನಲ್ಲಿ ಒಡಕು ಮೂಡಿಸಲು ಸಿದ್ಧತೆ ನಡೆಸಿದೆ ಎಂದು ಜೆಡಿಯು ನಾಯಕರು ಆರೋಪಿಸಿದ್ದಾರೆ. ಬಿಜೆಪಿ ಬಗೆಗಿನ ಅಸಮಾಧಾನವನ್ನು ಮುಖ್ಯಮಂತ್ರಿ ಮತ್ತು ಜೆಡಿಯು ಮುಖ್ಯಸ್ಥ ನಿತೀಶ್ ಕುಮಾರ್ ಹಲವು ಬಾರಿ ಬಹಿರಂಗವಾಗಿಯೇ ಹೊರಹಾಕಿದ್ದಾರೆ.

ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರ ಬೀಳ್ಕೊಡುಗೆ ಸಮಾರಂಭಕ್ಕೆ, ನೂತನ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಅಧಿಕಾರ ಸ್ವೀಕಾರ ಸಮಾರಂಭಕ್ಕೆ ನಿತೀಶ್ ಗೈರುಹಾಜರಾಗಿದ್ದರು. ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ನೀತಿ ಆಯೋಗವು ಭಾನುವಾರ ನಡೆಸಿದ ಮುಖ್ಯಮಂತ್ರಿಗಳ ಸಭೆಗೂ ನಿತೀಶ್ ಹಾಜರಾಗಿರಲಿಲ್ಲ.

ಬೆಲೆ ಏರಿಕೆ ವಿರುದ್ಧ ಆರ್‌ಜೆಡಿ ಈಚೆಗೆ ನಡೆಸಿದ್ದ ಪ್ರತಿಭಟನೆಯನ್ನು ಜೆಡಿಯು ಬೆಂಬಲಿಸಿತ್ತು. ಈಗ ಎರಡೂ ಪಕ್ಷಗಳು ರಾಜ್ಯದ ರಾಜಕೀಯ ಸ್ಥಿತಿಯ ಬಗ್ಗೆ ಚರ್ಚಿಸಲು ಒಂದೇ ದಿನ ಸಭೆ ಕರೆದಿವೆ.

ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಆರ್‌ಜೆಡಿ ರಾಷ್ಟ್ರೀಯ ಉಪಾಧ್ಯಕ್ಷ ಶಿವಾನಂದ ತಿವಾರಿ, ‘ಎರಡೂ ಪಕ್ಷಗಳು ಒಂದೇ ದಿನ ಸಭೆ ಕರೆದಿವೆ. ಎರಡೂ ಪಕ್ಷಗಳ ಬಲಾಬಲವು, ಸರಳ ಬಹುಮತ ಸಾಬೀತಿಗೆ ಸಾಕಾಗುತ್ತದೆ ಎಂಬುದು ಗಮನಿಸಬೇಕಾದ ಅಂಶ. ಚುನಾವಣೆ ಹತ್ತಿರದಲ್ಲಿ ಇಲ್ಲದೇ ಇರುವ ಸಂದರ್ಭದಲ್ಲಿ ಈ ಸಭೆಗಳು ಮಹತ್ವ ಪಡೆದುಕೊಂಡಿವೆ’ ಎಂದು ಹೇಳಿದ್ದಾರೆ.

**ಪಕ್ಷಗಳ ಬಲಾಬಲ:** ಜೆಡಿಯುನಲ್ಲಿ 45 ಶಾಸಕರಿದ್ದರೆ ಆರ್‌ಜೆಡಿಯಲ್ಲಿ 79 ಶಾಸಕರಿದ್ದಾರೆ, ಬಿಹಾರ ವಿಧಾನಸಭೆಯಲ್ಲೇ ಅತ್ಯಂತ ದೊಡ್ಡ ಪಕ್ಷ ಎನಿಸಿದೆ. ಎರಡೂ ಪಕ್ಷಗಳು ಒಟ್ಟಾದರೆ 124 ಶಾಸಕರ ಬಲ ಆ ಮೈತ್ರಿಗೆ ದೊರೆಯಲಿದೆ. ಇನ್ನು ಕಾಂಗ್ರೆಸ್ (19 ಶಾಸಕರು) ಮತ್ತು ಎಡಪಕ್ಷಗಳು (16 ಶಾಸಕರು) ಸಹ ಬೆಂಬಲ ನೀಡುವುದಾಗಿ ಹೇಳಿವೆ.

### ಬಿಕ್ಕಟ್ಟಿಗೆ ಕಾರಣಗಳು...

‘ಜೆಡಿಯು ಅನ್ನು ಮುಗಿಸಲು ಬಿಜೆಪಿ ಸಂಚು ರೂಪಿಸುತ್ತಿದೆ’ ಎಂಬ ಆರೋಪವನ್ನು ಜೆಡಿಯು ಮಾಡಿದೆ. ಈ ಆತಂಕವೇ ಬಿಜೆಪಿಯಿಂದ ಜೆಡಿಯು ಅಂತರ ಕಾಯ್ದುಕೊಳ್ಳಲು ಕಾರಣ ಎಂದು ವಿಶ್ಲೇಷಿಸಲಾಗಿದೆ.

ಜೆಡಿಯು ರಾಷ್ಟ್ರೀಯ ಅಧ್ಯಕ್ಷ ಮತ್ತು ರಾಜ್ಯಸಭಾ ಸದಸ್ಯ ಆರ್‌ಸಿಪಿ ಸಿಂಗ್ ಅವರಿಗೆ ಬಿಜೆಪಿಯು ಕೇಂದ್ರ ಸರ್ಕಾರದಲ್ಲಿ ಸಚಿವ ಸ್ಥಾನವನ್ನು ನೀಡಿತ್ತು. ಪಕ್ಷದ ಮುಖ್ಯಸ್ಥ ನಿತೀಶ್ ಕುಮಾರ್ ಅವರ ಒಪ್ಪಿಗೆ ಪಡೆಯದೆಯೇ, ಬಿಜೆಪಿಯ ಅಮಿತ್ ಶಾ ಅವರು ಆರ್‌ಸಿಪಿ ಸಿಂಗ್ ಅವರಿಗೆ ಸಚಿವ ಸ್ಥಾನ ನೀಡಿದ್ದರು. ಅದನ್ನು, ಜೆಡಿಯುವನ್ನು ಹತ್ತಿಕ್ಕುವ ಯತ್ನ ಎಂದು ವಿಶ್ಲೇಷಿಸಲಾಗಿತ್ತು ಎಂದು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಲಲನ್ ಹೇಳಿದ್ದಾರೆ.

ಹಾಗಾಗಿಯೇ ಆರ್‌ಸಿಪಿ ಸಿಂಗ್ ಅವರ ರಾಜ್ಯಸಭಾ ಅವಧಿ ಮುಗಿದರೂ, ಅವರ ಮರು ಆಯ್ಕೆಗೆ ಜೆಡಿಯು ಆಸಕ್ತಿ ವಹಿಸಲಿಲ್ಲ. ಆರ್‌ಸಿಪಿ ಸಿಂಗ್ ಪಕ್ಷದ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದಾರೆ.

15 ದಿನಗಳ ಹಿಂದೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಪಕ್ಷದ ಕಾರ್ಯಕಾರಿಣಿಗಾಗಿ ಬಿಹಾರದಲ್ಲಿ ಇದ್ದರು. ಅಲ್ಲಿ ಅವರು, ‘ಬಿಜೆಪಿ ಮಾತ್ರವೇ ಉಳಿಯಲಿದೆ. ಬೇರೆಲ್ಲಾ ಪಕ್ಷಗಳು ಮರೆಯಾಗಲಿವೆ’ ಎಂದು ಹೇಳಿದ್ದರು. ಇದನ್ನು ಎಚ್ಚರಿಕೆ ಗಂಟೆ ಎಂದು ಜೆಡಿಯು ಪರಿಗಣಿಸಿದೆ. ಹಾಗಾಗಿ ಬಿಜೆಪಿಯಿಂದ ದೂರ ಕಾಯ್ದುಕೊಳ್ಳಲು ಮುಂದಾಗಿದೆ ಎಂದು ವಿಶ್ಲೇಷಿಸಲಾಗಿದೆ.

## ‘8ನೇ ವೇತನ ಆಯೋಗದ ರಚನೆ ಪ್ರಸ್ತಾವವಿಲ್ಲ’

**ನವದೆಹಲಿ (ಪಿಟಿಐ):** ಕೇಂದ್ರ ಸರ್ಕಾರಿ ನೌಕರರಿಗೆ 8ನೇ ವೇತನ ಆಯೋಗವನ್ನು ರಚಿಸಲು ಸರ್ಕಾರ ಚಿಂತನೆ ನಡೆಸಿಲ್ಲ ಎಂದು ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಸೋಮವಾರ ಲೋಕಸಭೆಗೆ ತಿಳಿಸಿದರು.




### ಸಂಕ್ಷಿಪ್ತ ಸುದ್ದಿ

## ಇಂದು ‘ಮಹಾ’ ಸಂಪುಟ ವಿಸ್ತರಣೆ

**ಮುಂಬೈ (ಪಿಟಿಐ):** ಏಕನಾಥ ಶಿಂದೆ ನೇತೃತ್ವದ ಮಹಾರಾಷ್ಟ್ರ ಸರ್ಕಾರದ ಬಹುನಿರೀಕ್ಷಿತ ಸಂಪುಟ ವಿಸ್ತರಣೆ ಮಂಗಳವಾರ ನಡೆಯಲಿದೆ ಎಂದು ಬಿಜೆಪಿ ಹಿರಿಯ ನಾಯಕರೊಬ್ಬರು ತಿಳಿಸಿದ್ದಾರೆ.

‘ಮಂಗಳವಾರ ಮುಂಬೈನಲ್ಲಿ ಸಂಪುಟ ವಿಸ್ತರಣೆ ನಡೆಯಲಿದೆ. ಸಚಿವ ಸಂಪುಟದಲ್ಲಿ ಯಾರೆಲ್ಲಾ ಇರುತ್ತಾರೆ ಎಂಬುದರ ಬಗ್ಗೆ ಯಾವುದೇ ವಿವರಗಳನ್ನು ಬಹಿರಂಗಪಡಿಸಲಾರೆ’ ಎಂದು ಅವರು ಹೇಳಿದ್ದಾರೆ.

ಮಹಾರಾಷ್ಟ್ರದಲ್ಲಿ ಅಧಿಕಾರದಲ್ಲಿದ್ದ ಮಹಾ ವಿಕಾಸ ಆಘಾಡಿ (ಶಿವಸೇನಾ, ಕಾಂಗ್ರೆಸ್ ಮತ್ತು ಎನ್‌ಸಿಪಿ) ಸರ್ಕಾರದ ವಿರುದ್ಧ ಶಿಂದೆ ನೇತೃತ್ವದಲ್ಲಿ ಶಿವಸೇನಾದ ಹಲವು ಶಾಸಕರು ಬಂಡಾಯ ಸಾರಿದ್ದರು. ಬಳಿಕ, ಶಿಂದೆ ಅವರು ಬಿಜೆಪಿ ಬೆಂಬಲದೊಂದಿಗೆ ಜೂನ್ 30ರಂದು ಮುಖ್ಯಮಂತ್ರಿಯಾಗಿ, ಫಡಣವೀಸ್ ಉಪಮುಖ್ಯಮಂತ್ರಿಯಾಗಿ ಪ್ರಮಾಣ ಸ್ವೀಕರಿಸಿದ್ದಾರೆ.

## ಯುಜಿಸಿ–ನೆಟ್ 2ನೇ ಹಂತದ ಪರೀಕ್ಷೆ ಸೆ.20, 30ಕ್ಕೆ

**ನವದೆಹಲಿ (ಪಿಟಿಐ):** ಇದೇ 12 ಮತ್ತು 14ರಂದು ನಡೆಯಬೇಕಿದ್ದ ಯುಜಿಸಿ–ಎನ್‌ಇಟಿ (ನೆಟ್) 2ನೇ ಹಂತದ ಪರೀಕ್ಷೆಯನ್ನು ಮುಂದೂಡಲಾಗಿದ್ದು, ಈ ಪರೀಕ್ಷೆ ಸೆಪ್ಟೆಂಬರ್ 20 ಮತ್ತು 30ರಂದು ನಡೆಯಲಿದೆ.

ಮೊದಲ ಹಂತದ ‘ನೆಟ್’ ಪರೀಕ್ಷೆ ಜುಲೈ 9, 11 ಮತ್ತು 12ರಂದು 33 ವಿವಿಧ ವಿಷಯಗಳಲ್ಲಿ ನಡೆದಿತ್ತು. 2ನೇ ಹಂತದ ಪರೀಕ್ಷೆಯು 64 ವಿವಿಧ ವಿಷಯಗಳಿಗೆ ಸಂಬಂಧಿಸಿ ನಡೆಯಲಿದೆ ಎಂದು ಅಧಿಕೃತ ಹೇಳಿಕೆ ತಿಳಿಸಿದೆ.

## ಬುಲ್ಡೋಜರ್ ಬಳಸಿ ಒತ್ತುವರಿ ಕಟ್ಟಡ ತೆರವು

**ನೊಯ್ಡಾ (ಪಿಟಿಐ):** ತಲೆಮರೆಸಿಕೊಂಡಿರುವ ಬಿಜೆಪಿ ಮುಖಂಡ ಎಂದು ಹೇಳಿಕೊಳ್ಳುವ ಶ್ರೀಕಾಂತ್ ತ್ಯಾಗಿ ಒತ್ತುವರಿ ಮಾಡಿರುವ ನೊಯ್ಡಾ ನಿವಾಸದ ಜಾಗವನ್ನು ಉತ್ತರ ಪ್ರದೇಶದ ಅಧಿಕಾರಿಗಳು ಸೋಮವಾರ ಬೆಳಿಗ್ಗೆ ಬುಲ್ಡೋಜರ್ ಬಳಸಿ ತೆರವುಗೊಳಿಸಿದರು. ನೊಯ್ಡಾ ಪ್ರಾಧಿಕಾರ ಬೆಳಿಗ್ಗೆ 9 ಗಂಟೆ ಸುಮಾರಿಗೆ ಕಾರ್ಯಾಚರಣೆ ನಡೆಸಿ, ನಗರದ ಸೆಕ್ಟರ್ 93ಬಿಯಲ್ಲಿರುವ ಗ್ರ್ಯಾಂಡ್ ಓಮ್ಯಾಕ್ಸ್ ಸೊಸೈಟಿಯಲ್ಲಿರುವ ತ್ಯಾಗಿ ಅವರ ನೆಲ ಮಹಡಿ ಅಪಾರ್ಟ್‌ಮೆಂಟ್‌ನ ಹೊರಗಿನ ಅಕ್ರಮ ಕಟ್ಟಡಗಳನ್ನು ಕೆಡವಿದೆ ಎಂದು ಅಧಿಕಾರಿ ಪಿಟಿಐಗೆ ತಿಳಿಸಿದ್ದಾರೆ.

## ಲೈಂಗಿಕ ಕಾರ್ಯಕರ್ತೆಯರಿಗೆ ವಿನಾಯಿತಿ ಇಲ್ಲ

**ನವದೆಹಲಿ (ಪಿಟಿಐ):** ‘ಕಾನೂನು ಉಲ್ಲಂಘಿಸುವ ಲೈಂಗಿಕ ಕಾರ್ಯಕರ್ತೆಯರಿಗೆ ವಿಶೇಷ ವಿನಾಯಿತಿ ನೀಡಲಾಗದು. ಸಾಮಾನ್ಯ ನಾಗರಿಕರಂತೆ ಅವರು ಕೂಡ ಶಿಕ್ಷೆ ಅನುಭವಿಸಲೇಬೇಕು’ ಎಂದು ದೆಹಲಿ ಹೈಕೋರ್ಟ್ ಹೇಳಿದೆ. ಅಪ್ರಾಪ್ತ ಬಾಲಕಿಯನ್ನು ಅಪಹರಿಸಿ ವೇಶ್ಯಾವಾಟಿಕೆಗೆ ತಳ್ಳಿದ ಆರೋಪದ ಮೇಲೆ ಬಂಧಿಯಾಗಿರುವ ಲೈಂಗಿಕ ಕಾರ್ಯಕರ್ತೆಯೊಬ್ಬರು ಮಧ್ಯಂತರ ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿ ನ್ಯಾಯಮೂರ್ತಿ ವಜಾಗೊಳಿಸಿದರು.

## ಸಂಜಯ ರಾವುತ್ 14 ದಿನ ನ್ಯಾಯಾಂಗ ಬಂಧನಕ್ಕೆ

**ಮುಂಬೈ (ಪಿಟಿಐ):** ಪತ್ರಾ ಚಾಳ್ ಭೂಹಗರಣದ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಶಿವಸೇನಾ ಸಂಸದ ಸಂಜಯ ರಾವುತ್ ಅವರನ್ನು ಇಲ್ಲಿನ ವಿಶೇಷ ನ್ಯಾಯಾಲಯ 14 ದಿನಗಳ ಕಾಲ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಇದೇ ವೇಳೆ, ರಾವುತ್ ಅವರಿಗೆ ಮನೆ ಊಟ ಮತ್ತು ಔಷಧಿಗಳನ್ನು ನೀಡಲು ಕೋರ್ಟ್ ಅನುಮತಿ ನೀಡಿದೆ. ಆದರೆ ಮನೆಯಿಂದ ಹಾಸಿಗೆ ತರುವುದಕ್ಕೆ ನ್ಯಾಯಾಲಯ ಅನುಮತಿ ನೀಡಿಲ್ಲ.

ಹಗರಣಕ್ಕೆ ಸಂಬಂಧಿಸಿದಂತೆ ರಾವುತ್ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಇದೇ 1ರಂದು ತನ್ನ ವಶಕ್ಕೆ ಪಡೆದಿತ್ತು. ಕಸ್ಟಡಿ ಅವಧಿ ಸೋಮವಾರ ಕೊನೆಗೊಂಡಿದ್ದು, ಇನ್ನಷ್ಟು ದಿನ ಕಸ್ಟಡಿಯ ಅಗತ್ಯ ಇಲ್ಲ ಎಂದು ಇ.ಡಿ ತಿಳಿಸಿದ ಮೇರೆಗೆ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು.

# ಜೆಇಇ ಮೇನ್ ಪರೀಕ್ಷೆ: 24 ಅಭ್ಯರ್ಥಿಗಳಿಗೆ ಪೂರ್ಣ ಅಂಕ

**ನವದೆಹಲಿ (ಪಿಟಿಐ):** ಅಖಿಲ ಭಾರತ ಮಟ್ಟದಲ್ಲಿ ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶಕ್ಕೆ ನಡೆದಿದ್ದ ಜೆಇಇ ಮೇನ್ (2022) ಪರೀಕ್ಷೆಯ ಫಲಿತಾಂಶ ಸೋಮವಾರ ಪ್ರಕಟವಾಗಿದ್ದು, ಕರ್ನಾಟಕದ ಬೊಯಾ ಹರೇನ್ ಸಾತ್ವಿಕ್ ಸೇರಿದಂತೆ ಒಟ್ಟು 24 ವಿದ್ಯಾರ್ಥಿಗಳು ಪೂರ್ಣ (100) ಅಂಕಗಳನ್ನು ಪಡೆದಿದ್ದಾರೆ ಎಂದು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ತಿಳಿಸಿದೆ.

ಮೂಲತಃ ಆಂಧ್ರಪ್ರದೇಶದ ಹಿಂದೂಪುರದವರಾದ ಸಾತ್ವಿಕ್ ಅವರು, ಬೆಂಗಳೂರಿನ ಶಂಕರನಗರದ ನಾರಾಯಣ ಕೋ ಸಿಂಧೂ ಭವನ್ ಶಾಲೆಯ ವಿದ್ಯಾರ್ಥಿ. ಇವರು ಮೊದಲ ಆವೃತ್ತಿಯಲ್ಲೂ ಪೂರ್ಣ ಅಂಕ ಪಡೆದಿದ್ದರು.

ಆಂಧ್ರ ಪ್ರದೇಶ ಮತ್ತು ತೆಲಂಗಾಣದ ತಲಾ ಐವರು, ರಾಜಸ್ಥಾನದ ನಾಲ್ವರು, ಉತ್ತರ ಪ್ರದೇಶದ ಇಬ್ಬರು, ಕರ್ನಾಟಕ, ಹರಿಯಾಣ, ಮಹಾರಾಷ್ಟ್ರ, ಅಸ್ಸಾಂ, ಬಿಹಾರ, ಪಂಜಾಬ್, ಕೇರಳ, ಜಾರ್ಖಂಡ್ ರಾಜ್ಯಗಳ ತಲಾ ಒಬ್ಬರು ಅಭ್ಯರ್ಥಿಗಳು ಅತ್ಯುನ್ನತ ಅಂಕಗಳನ್ನು ಪಡೆದಿದ್ದಾರೆ. ಒಟ್ಟಾರೆ ಐವರು ಅಭ್ಯರ್ಥಿಗಳ ಫಲಿತಾಂಶವನ್ನು ಎನ್‌ಟಿಎ ತಡೆಹಿಡಿದಿದೆ.

ಒಟ್ಟಾರೆ ಎರಡು ಆವೃತ್ತಿಗಳ ಜೆಇಇ ಮೇನ್ಸ್ ಪರೀಕ್ಷೆಗೆ ಹೆಸರು ನೋಂದಾಯಿಸಿದ್ದ 10.26 ಲಕ್ಷ ಅಭ್ಯರ್ಥಿಗಳ ಪೈಕಿ 9.05 ಲಕ್ಷ ಅಭ್ಯರ್ಥಿಗಳು ಹಾಜರಾಗಿದ್ದಾರೆ. ಈ ಪೈಕಿ 4.04 ಲಕ್ಷ ಅಭ್ಯರ್ಥಿಗಳು ಎರಡೂ ಆವೃತ್ತಿಯ ಪರೀಕ್ಷೆಗಳನ್ನು ಬರೆದಿದ್ದರು.

ದೇಶದ 440 ಹಾಗೂ ವಿದೇಶಗಳಲ್ಲಿನ 17 ನಗರಗಳ ಒಟ್ಟಾರೆ 622 ಕೇಂದ್ರಗಳಲ್ಲಿ ಪರೀಕ್ಷೆಗಳನ್ನು ನಡೆಸಲಾಗಿತ್ತು. ಒಟ್ಟಾರೆ 13 ಭಾಷೆಗಳಲ್ಲಿ (ಅಸ್ಸಾಮಿ, ಬೆಂಗಾಳಿ, ಇಂಗ್ಲಿಷ್, ಗುಜರಾತಿ, ಹಿಂದಿ, ಕನ್ನಡ, ಮಲಯಾಳಂ, ಮರಾಠಿ, ಒಡಿಯಾ, ಪಂಜಾಬಿ, ತಮಿಳು, ತೆಲುಗು ಮತ್ತು ಉರ್ದು) ಪರೀಕ್ಷೆಗಳು ಜರುಗಿದ್ದವು. ಮೊದಲ ಆವೃತ್ತಿಯ ಪರೀಕ್ಷೆಯಲ್ಲಿ ಅತ್ಯುನ್ನತ ಅಂಕಗಳನ್ನು ಪಡೆದುಕೊಂಡಿದ್ದ ಹಲವು ವಿದ್ಯಾರ್ಥಿಗಳು ಎರಡನೇ ಆವೃತ್ತಿಯಲ್ಲೂ ಹೆಚ್ಚು ಅಂಕಗಳನ್ನು ಪಡೆದುಕೊಂಡಿದ್ದಾರೆ.

ಜೆಇಇ ಮೇನ್ ಪರೀಕ್ಷೆಯ ಎರಡನೇ ಆವೃತ್ತಿಯ ಪರೀಕ್ಷೆಗಳು ಜುಲೈನಲ್ಲಿ ಜರುಗಿದ್ದರೆ, ಮೊದಲ ಆವೃತ್ತಿಯ ಪರೀಕ್ಷೆಗಳು ಜೂನ್‌ನಲ್ಲಿ ನಡೆದಿದ್ದವು. ಎರಡೂ ಆವೃತ್ತಿಗಳಲ್ಲಿ ಪರೀಕ್ಷೆ ಬರೆದ ಅಭ್ಯರ್ಥಿಗಳ ಅಂಕಗಳಲ್ಲಿ ಯಾವುದು ಹೆಚ್ಚಿದೆಯೋ ಅದನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಿದೆ ಎಂದು ಎನ್‌ಟಿಎ ತಿಳಿಸಿದೆ.

## ಜೆಇಇ: ಬೆಂಗಳೂರು ವಿದ್ಯಾರ್ಥಿಗೆ 10ನೇ ರ‍್ಯಾಂಕ್

**ಬೆಂಗಳೂರು:** ಅಖಿಲ ಭಾರತ ಮಟ್ಟದಲ್ಲಿ ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶಕ್ಕೆ ನಡೆದಿದ್ದ ಜೆಇಇ ಮೇನ್ (2022) ಪರೀಕ್ಷೆಯಲ್ಲಿ ನಗರದ ಬೊಯಾ ಹರೇನ್ ಸಾತ್ವಿಕ್ ಪೂರ್ಣ (100) ಅಂಕಗಳನ್ನು ಪಡೆದಿದ್ದಾರೆ.

ರಾಷ್ಟ್ರಮಟ್ಟದಲ್ಲಿ 10ನೇ ರ‍್ಯಾಂಕ್ ಪಡೆದಿರುವ ಸಾತ್ವಿಕ್, ರಾಜ್ಯಕ್ಕೆ ಮೊದಲ ಸ್ಥಾನ ಪಡೆದಿದ್ದಾರೆ. ಜತೆಗೆ, ಸಂಪೂರ್ಣ 100 ಅಂಕಗಳನ್ನು ಪಡೆದಿರುವ ಕರ್ನಾಟಕ ಏಕೈಕ ವಿದ್ಯಾರ್ಥಿಯಾಗಿದ್ದಾರೆ.

ಸಾತ್ವಿಕ್, ಬೆಂಗಳೂರಿನ ಸಹಕಾರ ನಗರದಲ್ಲಿರುವ ‘ನಾರಾಯಣ ಕೊ ಸಿಂಧುಭವನ’ ಶಾಲೆಯ ವಿದ್ಯಾರ್ಥಿಯಾಗಿದ್ದಾರೆ. ಇದೇ ಶಾಲೆಯ ವಿ. ಮಹೇಶ್‌ಕುಮಾರ್ ಮತ್ತು ಶಿಷಿಕ್ ಆರ್.ಕೆ. ಅವರು ಕ್ರಮವಾಗಿ ಅಖಿಲ ಭಾರತ ಮಟ್ಟದಲ್ಲಿ 47 ಮತ್ತು 56 ರ‍್ಯಾಂಕ್‌ಗಳನ್ನು ಪಡೆದಿದ್ದಾರೆ.

ಇವರು ಭಾರತೀಯ ತಂತ್ರಜ್ಞಾನ ಸಂಸ್ಥೆ-ಬಾಂಬೆಯಲ್ಲಿ ಕಂಪ್ಯೂಟರ್ ವಿಜ್ಞಾನ ಅಧ್ಯಯನ ಕೈಗೊಳ್ಳುವ ಅಭಿಲಾಷೆ ಹೊಂದಿದ್ದಾರೆ.

ಸಾತ್ವಿಕ್, ಆಂಧ್ರಪ್ರದೇಶದ ಹಿಂದೂಪುರದವರು. ಇವರ ತಂದೆ ದೈಹಿಕ ಶಿಕ್ಷಣ ಶಿಕ್ಷಕರಾಗಿದ್ದು, ತಾಯಿ ಹಿಂದೂಪುರದಲ್ಲಿ ಶಿಕ್ಷಕಿಯಾಗಿದ್ದಾರೆ.

## 30 ಅಭ್ಯರ್ಥಿಗಳ ಒಎಂಆರ್ ಪರಿಶೀಲನೆ: ಕೆಇಎ

**ಬೆಂಗಳೂರು:** ಸರ್ಕಾರಿ ಪದವಿ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪರೀಕ್ಷೆಯ ಭೂಗೋಳ ವಿಜ್ಞಾನದ ಪ್ರಶ್ನೆಗಳ ಸೋರಿಕೆ ಪ್ರಕರಣದ ತನಿಖೆ ನಡೆಸುತ್ತಿರುವ ಸಿಸಿಬಿ ಅಧಿಕಾರಿಗಳು, ಸುಮಾರು 30 ಅಭ್ಯರ್ಥಿಗಳ ಒಎಂಆರ್ ಪ್ರತಿಗಳನ್ನು ಸುಪರ್ದಿಗೆ ಪಡೆದು ಪರಿಶೀಲನೆ ನಡೆಸುತ್ತಿದ್ದಾರೆ.

ನೇಮಕಾತಿ ಪ್ರಕ್ರಿಯೆ ನಡೆಸುತ್ತಿರುವ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ), ಪರೀಕ್ಷೆ ಬರೆದಿದ್ದ ಅಭ್ಯರ್ಥಿಗಳ ಅಂಕಗಳ ಪಟ್ಟಿ ಇತ್ತೀಚೆಗೆ ಬಿಡುಗಡೆ ಮಾಡಿದೆ. ಈ ಬೆನ್ನಲ್ಲೇ ಸಿಸಿಬಿ ಪೊಲೀಸರು, ಅಭ್ಯರ್ಥಿಗಳ ಒಎಂಆರ್ ಅಸಲಿ ಪ್ರತಿ ಪಡೆದು ತನಿಖೆ ಮುಂದುವರಿಸಿದ್ದಾರೆ.

'ಮಾರ್ಚ್ 14ರಂದು ನಡೆದಿದ್ದ ಭೂಗೋಳ ವಿಜ್ಞಾನ ವಿಷಯ ಪರೀಕ್ಷೆಯ 18 ಪ್ರಶ್ನೆಗಳು, ಪರೀಕ್ಷೆಗೂ ಮುನ್ನವೇ ಸೋರಿಕೆ ಆಗಿದ್ದವು. ಈ ಬಗ್ಗೆ ಮಲ್ಲೇಶ್ವರ ಠಾಣೆಗೆ ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ ದೂರು ನೀಡಿದ್ದರು. ಪ್ರಶ್ನೆಗಳನ್ನು ಸೋರಿಕೆ ಮಾಡಿದ್ದ ಆರೋಪದಡಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ ಕುಲಸಚಿವರಾಗಿದ್ದ (ಮೌಲ್ಯಮಾಪನ) ಪ್ರೊ. ಎಚ್. ನಾಗರಾಜ್ ಹಾಗೂ ಅವರ ಪಿಎಚ್.ಡಿ ವಿದ್ಯಾರ್ಥಿ ಆರ್. ಸೌಮ್ಯಾ ಅವರನ್ನು ಬಂಧಿಸಲಾಗಿತ್ತು’ ಎಂದು ಸಿಸಿಬಿ ಮೂಲಗಳು ಹೇಳಿವೆ.

**ಸದ್ಯಕ್ಕೆ ಲಭ್ಯವಾಗದ ಪುರಾವೆ:** ‘ಪ್ರಕರಣದಲ್ಲಿ ಎಚ್. ನಾಗರಾಜ್ ಹಾಗೂ ಸೌಮ್ಯಾ ಅವರನ್ನು ಮಾತ್ರ ಬಂಧಿಸಲಾಗಿದ್ದು, ಇಬ್ಬರ ವಿರುದ್ಧ ತಿಂಗಳ ಹಿಂದೆಯೇ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. ಕೃತ್ಯದಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ಮತ್ತಷ್ಟು ಆರೋಪಿಗಳ ವಿಚಾರಣೆ ಮಾಡಲಾಗಿದ್ದು, ಅವರ ವಿರುದ್ಧ ಸದ್ಯಕ್ಕೆ ಪುರಾವೆಗಳು ಸಿಕ್ಕಿಲ್ಲ’ ಎಂದು ಸಿಸಿಬಿಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

‘ಎಸಿಪಿ ನೇತೃತ್ವದ ತಂಡ ಪ್ರಕರಣದ ಬಗ್ಗೆ ಮಾಹಿತಿ ಸಂಗ್ರಹಿಸುತ್ತಿದೆ. ಇದುವರೆಗೂ 30 ಅಭ್ಯರ್ಥಿಗಳ ಬಗ್ಗೆ ಅನುಮಾನ ಬಂದಿತ್ತು. ಹೀಗಾಗಿ, ಅವರ ಒಎಂಆರ್ ತರಿಸಿಕೊಂಡು ಪರಿಶೀಲಿಸಲಾಗುತ್ತಿದೆ. ಇದೇ ಒಎಂಆರ್ ಪ್ರತಿಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೂ ಕಳುಹಿಸಲಾಗಿದೆ’ ಎಂದು ಹೇಳಿದರು.

# ‘ಒಂದು ಕೋಟಿ ಮನೆಗಳಲ್ಲಿ ರಾಷ್ಟ್ರ ಧ್ವಜ ಹಾರಿಸುವ ಗುರಿ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದಲ್ಲಿ ಸುಮಾರು 1 ಕೋಟಿಗೂ ಹೆಚ್ಚು ಮನೆಗಳಲ್ಲಿ ತ್ರಿವರ್ಣ ಧ್ವಜವನ್ನು ಹಾರಿಸುವ ಗುರಿ ಹೊಂದಲಾಗಿದ್ದು, ಈಗಾಗಲೇ ಧ್ವಜ ವಿತರಣೆ ಕಾರ್ಯ ನಡೆಯುತ್ತಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ಹಮ್ಮಿಕೊಳ್ಳಲಾದ ಮನೆ– ಮನೆಯಲ್ಲಿ ರಾಷ್ಟ ಧ್ವಜ ಹಾರಿಸುವ ‘ಹರ್ ಘರ್ ತಿರಂಗ’ ಅಭಿಯಾನದ ಕುರಿತು ಸೋಮವಾರ ವಿಡಿಯೊ ಕಾನ್ಫರೆನ್ಸ್ ಮೂಲಕ ಅಧಿಕಾರಿಗಳ ಸಭೆ ನಡೆಸಿದ ಅವರು, ಆಗಸ್ಟ್ 13 ರಂದೇ ಧ್ವಜಹಾರಿಸುವ ಮೂಲಕ ಸ್ವಾತಂತ್ರ್ಯ ಮಹೋತ್ಸವದ ಸಂಭ್ರಮದ ವಾತಾವರಣ ನಿರ್ಮಾಣವಾಗಬೇಕು ಎಂದು ಅವರು ಸೂಚಿಸಿದರು.

ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಸರ್ಕಾರಿ ಕಚೇರಿಗಳಲ್ಲಿ ಈ ಮೂರು ದಿನಗಳಂದು ಪ್ರತಿ ದಿನ ಬೆಳಿಗ್ಗೆ ಧ್ವಜಾರೋಹಣ ಮಾಡಿ, ಸಂಜೆ ಇಳಿಸಬೇಕು. ಆದರೆ, ಮನೆ– ಮನೆಗಳಲ್ಲಿ ಆಗಸ್ಟ್ 13 ರಂದು ಧ್ವಜಾರೋಹಣ ಮಾಡಿದರೆ, ಆ.15 ರವರೆಗೆ ಇರಿಸಬಹುದಾಗಿದೆ ಎಂದು ತಿಳಿಸಿದರು.

ಮುಖ್ಯ ಕಾರ್ಯದರ್ಶಿಗಳು ಮತ್ತೊಮ್ಮೆ ಜಿಲ್ಲಾಧಿಕಾರಿಗಳೊಂದಿಗೆ ಸಭೆ ನಡೆಸಿ, ನಿಗದಿತ ಗುರಿ ಸಾಧಿಸಲು ಜಿಲ್ಲಾಡಳಿತಗಳಿಗೆ ಮಾರ್ಗದರ್ಶನ ನೀಡಬೇಕು. ಇದರೊಂದಿಗೆ ಕ್ವಿಟ್ ಇಂಡಿಯಾ ಚಳವಳಿಯ ಸ್ಮರಣಾರ್ಥ, ಆಯಾ ಜಿಲ್ಲೆಗಳ ಸ್ವಾತಂತ್ರ್ಯ ಹೋರಾಟಗಾರರನ್ನು ಆಗಸ್ಟ್ 9 ರಿಂದ 14ರ ನಡುವೆ, ಅವರ ಮನೆಗಳಿಗೇ ತೆರಳಿ ಸನ್ಮಾನಿಸಬೇಕು. ಜಿಲ್ಲಾ ಉಸ್ತುವಾರಿ ಸಚಿವರೂ ಇದರಲ್ಲಿ ಭಾಗಿಯಾಗುವಂತೆ ಬೊಮ್ಮಾಯಿ ಸೂಚಿಸಿದರು.

### ಅಜ್ಞಾನದ ಬಾವುಟ ಹಾರಿಸಿದರು: ಬಿಜೆಪಿ ಕಿಡಿ

**ಬೆಂಗಳೂರು:** ‘ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಉದ್ದೇಶಪೂರ್ವಕವಾಗಿ ರಾಷ್ಟ್ರಧ್ವಜದ ಬಣ್ಣವನ್ನು ಕೆಂಪು, ಬಿಳಿ, ಹಸಿರು ಎಂದು ಹೇಳುವ ಮೂಲಕ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ರಾಷ್ಟ್ರಕ್ಕೆ ಅಪಮಾನ ಮಾಡಿದ್ದಾರೆ’ ಎಂದು ಬಿಜೆಪಿ ಕಿಡಿ ಕಾರಿದೆ.

‘ಕೇಸರಿಯನ್ನು ವಿರೋಧಿಸುವ ಸಿದ್ದರಾಮಯ್ಯಗೆ ಭಯೋತ್ಪಾದಕ ಕೆಂಪು ಹೆಚ್ಚು ಪ್ರೀತಿ. ಆಡಳಿತದ ಹಪಾಹಪಿಯಿಂದ ರಕ್ತ ಬಯಸುವ ಕಾಂಗ್ರೆಸ್‌ನ ದೇಶ ವಿರೋಧಿ ನೀತಿಯ ಭಾಗವಿದು. ಈ ಮೂಲಕ ಅಜ್ಞಾನದ ಬಾವುಟ ಹಾರಿಸಿದ್ದಾರೆ’ ಎಂದು ಬಿಜೆಪಿ ಟ್ವೀಟ್ ಮಾಡಿದೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರೂ ಟೀಕಿಸಿದ್ದು, ‘ನಿದ್ರೆಯಲ್ಲಿಯೂ ಕೇಸರಿ ಬಣ್ಣವನ್ನು ದ್ವೇಷಿಸುವ ಸಿದ್ದರಾಮಯ್ಯ ಅವರು, ತಮ್ಮ ಭಾಷಣದಲ್ಲಿಯೂ ಅದನ್ನೇ ಮುಂದುವರಿಸಿದ್ದಾರೆ. ರಾಷ್ಟ್ರಧ್ವಜದಲ್ಲಿರುವ ಕೇಸರಿ ವರ್ಣದ ವಿರುದ್ಧ ಇವರ ದ್ವೇಷವನ್ನು ದೇಶಭಕ್ತರು ಸಹಿಸುವುದಿಲ್ಲ’ ಎಂದಿದ್ದಾರೆ. ‘ರಾಷ್ಟ್ರಧ್ವಜದ ಬಗ್ಗೆ ನಿಮಗಿರುವ ಗೌರವ ಎಷ್ಟೆಂಬುದು ನಿಮ್ಮ ಭಾಷಣದಿಂದಲೇ ಅರ್ಥವಾಗುತ್ತದೆ, ಧ್ವಜದ ಬಣ್ಣ ಕೆಂಪು, ಬಿಳಿ, ಹಸಿರು ಎಂದಿದ್ದೀರಿ. ನಿಮ್ಮ ರಾಷ್ಟ್ರಭಕ್ತಿಯ ಜ್ಞಾನ ಅಸದಳ’ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್‌ಕುಮಾರ್ ಕುಟುಕಿದ್ದಾರೆ.

## ‘ಕೌನ್ಸೆಲಿಂಗ್ ಪ್ರಕ್ರಿಯೆ ಸದ್ಯಕ್ಕಿಲ್ಲ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಕ್ರಮ ಪ್ರಶ್ನಿಸಲಾದ ಅರ್ಜಿಯ ಮುಂದಿನ ವಿಚಾರಣೆ ದಿನಾಂಕದವರೆಗೂ 2022ನೇ ಸಾಲಿನಲ್ಲಿ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ನೈಜ ಕೌನ್ಸೆಲಿಂಗ್ ಪ್ರಕ್ರಿಯೆ ಆರಂಭಿಸುವುದಿಲ್ಲ’ ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

2020–21ನೇ ಸಾಲಿನ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಪರಿಗಣಿಸದೇ ಇರುವ ಕೆಇಎ ಕ್ರಮ ಪ್ರಶ್ನಿಸಿ ಗೌರಿಬಿದನೂರು ತಾಲ್ಲೂಕಿನ ವೈಚಕೂರಹಳ್ಳಿಯ ವೈ.ಎಚ್.ಕೀರ್ತನಾ ಸೇರಿದಂತೆ 13 ವಿದ್ಯಾರ್ಥಿಗಳು ಸಲ್ಲಿಸಿರುವ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಎಸ್.ಆರ್. ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲ ಡಿ.ಆರ್. ರವಿಶಂಕರ್, ‘ಈ ಬಾರಿಯ ವೃತ್ತಿಪರ ಕೋರ್ಸ್‌ಗಳ ಪ್ರವೇಶಾತಿಗೆ 2021–2022ನೇ ಶೈಕ್ಷಣಿಕ ವರ್ಷದ ದ್ವಿತೀಯ ಪಿಯು ಅಂಕಗಳು ಅನ್ವಯ ಆಗುವುದಿಲ್ಲ ಎಂದು ಕೆಇಎ ಹೇಳಿದೆ. ಸರ್ಕಾರ ಈ ಕುರಿತಂತೆ ಕಾಯ್ದೆಗೆ ತಿದ್ದುಪಡಿ ಮಾಡದೇ ಆದೇಶ ಜಾರಿಗೆ ಮುಂದಾಗಿದೆ. ಈಗಾಗಲೇ ಪರೀಕ್ಷೆಗಳೆಲ್ಲಾ ಮುಗಿದಿದ್ದು, ಫಲಿತಾಂಶ ಪ್ರಕಟವಾಗಿರುವಾಗ ಕೆಇಎ ತನ್ನ ನಿಯಮ ಬದಲಿಸಲು ಆಗದು. ಆದ್ದರಿಂದ, 2020–21, 2021–22ನೇ ಸಾಲಿನಲ್ಲಿ ವಿದ್ಯಾರ್ಥಿಗಳು ಪಡೆದಿರುವ ಅಂಕಗಳನ್ನು ಆಧರಿಸಿ ರ‍್ಯಾಂಕ್ ಪ್ರಕಟಿಸಬೇಕು’ ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸರ್ಕಾರದ ಪರ ಹಾಜರಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಧ್ಯಾನ್ ಚಿನ್ನಪ್ಪ, ‘ವೃತ್ತಿಪರ ಕೋರ್ಸ್‌ಗಳ 2022ನೇ ಸಾಲಿನ ಪ್ರವೇಶಾತಿಗೆ ನೈಜ ಕೌನ್ಸೆಲಿಂಗ್ ಪ್ರಕ್ರಿಯೆ ಇನ್ನೂ ಆರಂಭವಾಗಿಲ್ಲ. ದಾಖಲೆಗಳ ಪರಿಶೀಲನಾ ಪ್ರಕ್ರಿಯೆ ಇನ್ನೂ ಆರಂಭಿಕ ಹಂತದಲ್ಲಿದೆ. ಈ ಅರ್ಜಿ ಕುರಿತ ಮುಂದಿನ ವಿಚಾರಣೆಯವರೆಗೆ ಕೆಇಎ ನೈಜ ಕೌನ್ಸೆಲಿಂಗ್ ಪ್ರಕ್ರಿಯೆ ಆರಂಭಿಸುವುದಿಲ್ಲ’ ಎಂದು ಮೌಖಿಕವಾಗಿ ತಿಳಿಸಿದರು.

ಇದನ್ನು ದಾಖಲಿಸಿಕೊಂಡ ನ್ಯಾಯಪೀಠ, ‘ದಾಖಲೆಗಳನ್ನು ಪರಿಶೀಲಿಸುವ ಕೆಇಎ ಕ್ರಮ ಅರ್ಜಿದಾರ ವಿದ್ಯಾರ್ಥಿಗಳ ಹಕ್ಕು ಮತ್ತು ವಾದಕ್ಕೆ ತೊಂದರೆ ಉಂಟು ಮಾಡುವಂತೆ ಇರಬಾರದು. ಇದು ನ್ಯಾಯಾಲಯದ ಮುಂದಿನ ಆದೇಶಕ್ಕೆ ಒಳಪಟ್ಟಿರುತ್ತದೆ. ಈ ಅರ್ಜಿಗೆ ಏನಾದರೂ ಆಕ್ಷೇಪಣೆ ಸಲ್ಲಿಸಬಹುದಾಗಿದ್ದರೆ ಮುಂದಿನ ವಿಚಾರಣೆಯೊಳಗೆ ಸಲ್ಲಿಸಿ’ ಎಂದು ಕೆಇಎಗೆ ಸೂಚಿಸಿ ವಿಚಾರಣೆಯನ್ನು ಇದೇ 18ಕ್ಕೆ ಮುಂದೂಡಿತು.

## ನಾವಿಕಾಗೆ ಮಧ್ಯಂತರ ರಕ್ಷಣೆ ನೀಡಿದ ‘ಸುಪ್ರೀಂ’

**ನವದೆಹಲಿ (ಪಿಟಿಐ):** ಬಿಜೆಪಿಯ ಮಾಜಿ ವಕ್ತಾರೆ ನೂಪುರ್ ಶರ್ಮಾ ಅವರು ಟಿ.ವಿಯ ಚರ್ಚೆಯೊಂದರಲ್ಲಿ ಪ್ರವಾದಿ ಮಹಮ್ಮದ್ ಅವರ ಕುರಿತು ವಿವಾದಾತ್ಮಕ ಹೇಳಿಕೆ ನೀಡಿದ್ದ ಸಂದರ್ಭದಲ್ಲಿ ಸುದ್ದಿ ನಿರೂಪಣೆ ಮಾಡುತ್ತಿದ್ದ ನಾವಿಕಾ ಕುಮಾರ್ ಅವರಿಗೆ ಸುಪ್ರೀಂ ಕೋರ್ಟ್ ಮಧ್ಯಂತರ ರಕ್ಷಣೆ ನೀಡಿ ಸೋಮವಾರ ಆದೇಶಿಸಿದೆ.

ಈ ಕುರಿತು ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೃಷ್ಣ ಮುರಾರಿ ಮತ್ತು ಹಿಮಾ ಕೊಹ್ಲಿ ಅವರನ್ನೊಳಗೊಂಡ ಪೀಠವು, ನಾವಿಕಾ ಅವರ ವಿರುದ್ಧ ಯಾವುದೇ ಬಲವಂತದ ಕ್ರಮ ಕೈಗೊಳ್ಳದಂತೆ ಸೂಚಿಸಿ, ಕೇಂದ್ರ ಸರ್ಕಾರ, ಪಶ್ಚಿಮ ಬಂಗಾಳ ಸರ್ಕಾರ ಮತ್ತು ಇತರ ಅರ್ಜಿದಾರರಿಗೆ ನೋಟಿಸ್ ಜಾರಿಗೊಳಿಸಿತು.

ಎಚ್ಚರ!

# ನೆನಪು ಮತ್ತು ಕಲಿಕೆಗಳ ಸಾಂಗತ್ಯ

ನೆನಪಿನ ಶಕ್ತಿಯನ್ನು ವೈಜ್ಞಾನಿಕ ತರಬೇತಿಯ ಮೂಲಕ ಯಾರು ಬೇಕಾದರೂ ಗಳಿಸಬಹುದು; ಇದಕ್ಕೆ ಬೇಕಾಗಿರುವುದು ನಿರಂತರ ಪರಿಶ್ರಮ...



**ಡಾ. ಕಿರಣ್ ವಿ. ಎಸ್.**

‘ಪ್ರಪಂಚದಲ್ಲಿ ಇರೋದೆಲ್ಲ ನೆನಪಿರುತ್ತದೆ - ಪಠ್ಯ-ಪಾಠ ಒಂದು ಬಿಟ್ಟು’ ಎನ್ನುವುದು ಮಕ್ಕಳ ಬಗ್ಗೆ ಅನೇಕ ಪೋಷಕರ ಅಳಲು.

‘ಪಾಪ ಮಗು ಎಷ್ಟೊಂದು ಸಾರಿ ಪಾಠ ಓದಿದರೂ ಪರೀಕ್ಷೆ ವೇಳೆಗೆ ನೆನಪೇ ಉಳಿಯೋದಿಲ್ಲ’ ಎಂದು ಪೇಚಾಡುವವರೂ ಇದ್ದಾರೆ.

ಮಕ್ಕಳ ನೆನಪಿನ ಶಕ್ತಿಯನ್ನೇ ಮುಖ್ಯವಾಗಿ ಪರೀಕ್ಷಿಸಲು ನಿರ್ಮಾಣವಾಗಿರುವ ನಮ್ಮ ಪರೀಕ್ಷಾ ವ್ಯವಸ್ಥೆ ಈ ಸಂಕಟಗಳಿಗೆ ಮತ್ತಷ್ಟು ಇಂಬು ನೀಡುತ್ತದೆ. ಕಲಿಕೆ ಎಂಬುದು ಯಾವುದೇ ವಿಷಯದ ಮೂಲತತ್ತ್ವಗಳ ಸರಿಯಾದ ಗ್ರಹಿಕೆ ಎಂದು ಅನಾದಿಕಾಲದಿಂದ ಹೇಳಲಾಗಿದೆ. ಆದರೆ ಈಗಲೂ ನಮ್ಮ ದೇಶದ ಶಿಕ್ಷಣವ್ಯವಸ್ಥೆ ವಿದ್ಯಾರ್ಥಿಯ ಬಾಯಿಪಾಠದ ಸಾಮರ್ಥ್ಯವನ್ನು ಬಹುವಾಗಿ ಓರೆಹಚ್ಚುತ್ತದೆ. ನೆನಪಿನ ಶಕ್ತಿಯ ಕುರಿತಾಗಿ ಆಧುನಿಕ ವಿಜ್ಞಾನ ಏನು ಹೇಳುತ್ತದೆ? ಕಲಿಕೆಯ ಬಗೆಗಿನ ಅಧ್ಯಯನಗಳು ತೋರುವ ದಾರಿ ಯಾವುದು? ಇದರ ಬಗ್ಗೆ ಒಂದು ಜಿಜ್ಞಾಸೆ.

ಪ್ರಪಂಚದ ಹಲವಾರು ದೇಶಗಳಲ್ಲಿ ‘ನೆನಪಿನ ಶಕ್ತಿಯ ಸ್ಪರ್ಧೆಗಳು’ ನಡೆಯುತ್ತವೆ. ನೂರಾರು ಅಪರಿಚಿತ ವ್ಯಕ್ತಿಗಳ ಛಾಯಾಚಿತ್ರಗಳನ್ನು ಒಂದರ ಹಿಂದೆ ಮತ್ತೊಂದರಂತೆ ಕೆಲವು ಕ್ಷಣಗಳ ಕಾಲ ತೋರಿಸಿ, ಸ್ವಲ್ಪ ಕಾಲದ ನಂತರ ಅವುಗಳನ್ನು ಗುರುತಿಸುವುದು; ಪರಸ್ಪರ ಸಂಬಂಧವಿಲ್ಲದ ನೂರಾರು ಪದಗಳನ್ನು ಒಮ್ಮೆ ಕೇಳಿ, ಕೆಲವು ನಿಮಿಷಗಳ ನಂತರ ಅಂತೆಯೇ ಹೇಳುವುದು; ದೊಡ್ಡ ಸಂಖ್ಯೆಗಳನ್ನು ನಿಖರವಾಗಿ ಪುನರುಚ್ಚರಿಸುವುದು; ಒಂದು ಕಟ್ಟು ಇಸ್ಪೀಟು ಎಲೆಗಳನ್ನು ಚೆನ್ನಾಗಿ ಕಲೆಸಿ ಒಮ್ಮೆ ತೋರಿದಾಗ, ಸ್ಪರ್ಧಿ ಅದೇ ಅನುಕ್ರಮದಲ್ಲಿ ಯಾವ್ಯಾವ ಎಲೆಗಳು ಇವೆಯೆಂದು ಹೇಳುವುದು - ಹೀಗೆ ಹಲವಾರು ವಿಧದ ಸ್ಪರ್ಧೆಗಳು ನೆನಪಿನ ಶಕ್ತಿಗೆ ಕುರುಹಾಗಿ ಪರೀಕ್ಷೆಗೆ ಒಳಪಡುತ್ತವೆ. ಒಂದರ ಹಿಂದೊಂದರಂತೆ ಹೇಳಿದ ನೂರಾರು ಪದಗಳನ್ನು ಕೇಳಿದ ಮೇಲೆ ಹದಿನೈದು ನಿಮಿಷಗಳ ನಂತರ ಅವೆಲ್ಲವನ್ನೂ ಯಥಾವತ್ತಾಗಿ ಮತ್ತೆ ಹೇಳುವ ಸ್ಪರ್ಧಿಗಳನ್ನು ನೋಡಿದರೆ, ‘ಇವರೆಲ್ಲಾ ಹುಟ್ಟಿನಿಂದಲೇ ಅಪಾರ ನೆನಪಿನ ಶಕ್ತಿಯ ಸಿದ್ಧಿಯನ್ನು ಪಡೆದಿರುತ್ತಾರೆ’ ಎನಿಸುವುದು ಸಾಮಾನ್ಯ. ಆದರೆ ವಾಸ್ತವ ಹಾಗಿಲ್ಲ. 2005ನೆಯ ಇಸವಿಯಲ್ಲಿ ಅಮೆರಿಕಾದಲ್ಲಿ ನಡೆದ ಇಂತಹ ಸ್ಪರ್ಧೆಯನ್ನು ವರದಿ ಮಾಡಲು ಹೋಗಿದ್ದ ಜೋಶುವಾ ಫ್ರೊಯರ್ ಎಂಬ 23 ವರ್ಷ ವಯಸ್ಸಿನ ಪತ್ರಕರ್ತರೊಬ್ಬರು ವಿಜೇತರ ಜೊತೆ ಸಂದರ್ಶನ ಮಾಡುವಾಗ, ಅವರೆಲ್ಲರೂ ಇಂತಹ ಸ್ಪರ್ಧೆಗೆ ತರಬೇತಿ ಪಡೆದದ್ದನ್ನು ಕೇಳಿ ನಿಬ್ಬೆರಗಾದರು. ಅಂದರೆ, ಅಸಾಧಾರಣ ನೆನಪಿನ ಶಕ್ತಿ ಎನ್ನುವುದು ದೈವದತ್ತವಾಗಿ ಬಂದ ಪ್ರತಿಭೆ ಅಲ್ಲವೆಂದೂ, ಅದು ಕಠಿಣ ಪರಿಶ್ರಮದ ಸಾಧನೆಯೆಂದೂ ತಿಳಿಯಿತು. ಇದನ್ನು ಪರೀಕ್ಷಿಸಲು ಫ್ರೊಯರ್ ಬ್ರಿಟನ್ನಿನ ‘ನೆನಪಿನ ಶಕ್ತಿಯ ಗ್ರಾಂಡ್ ಮಾಸ್ಟರ್’ ಎಂದು ಖ್ಯಾತರಾದ ಎಡ್ ಕುಕ್ ಅವರಲ್ಲಿ ತರಬೇತಿಗೆ ಸೇರಿದರು. ಅಲ್ಲಿನ ವ್ಯವಸ್ಥಿತ ತರಬೇತಿಯ ಮೂಲಕ ತಯಾರಾಗಿ, ಮರುವರ್ಷ 2006ರ ನೆನಪಿನ ಶಕ್ತಿಯ ಸ್ಪರ್ಧೆಗಳಲ್ಲಿ ಭಾಗವಹಿಸಿ, ಚೆನ್ನಾಗಿ ಕಲೆಸಿದ 52 ಇಸ್ಪೀಟು ಎಲೆಗಳ ಸರಣಿಯನ್ನು ಕೇವಲ ಒಂದು ನೂರು ಸೆಕೆಂಡುಗಳ ಕಾಲ ನೋಡಿ, ಅದೇ ಅನುಕ್ರಮದಲ್ಲಿ ಒಂದೂ ತಪ್ಪಿಲ್ಲದಂತೆ ಹೇಳಿ, ಸ್ಪರ್ಧೆಯ ವಿಜೇತರೂ ಆದರು! ತಮ್ಮ ಈ ಕುತೂಹಲಕಾರಿ ಅನುಭವದ ಪ್ರಯಾಣವನ್ನು ಅವರು ‘Moonwalking with Einstein’ ಎನ್ನುವ ಪುಸ್ತಕದಲ್ಲಿ ಬರೆದಿದ್ದಾರೆ; ನೆನಪಿನ ಶಕ್ತಿಯ ಬಗ್ಗೆ ಹಲವಾರು ಹೊಸನೋಟಗಳನ್ನು, ಒಳಸುಳಿಗಳನ್ನು ಚರ್ಚಿಸಿದ್ದಾರೆ.



ನೆನಪಿನ ಶಕ್ತಿಯನ್ನು ವೈಜ್ಞಾನಿಕ ತರಬೇತಿಯ ಮೂಲಕ ಯಾರು ಬೇಕಾದರೂ ಗಳಿಸಬಹುದು ಎಂದಾಯಿತು. ನಮ್ಮ ಮಿದುಳಿನಲ್ಲಿ ಅಪಾರವಾದ ಸಂಗತಿಗಳನ್ನು ದಾಖಲಿಸಬಹುದು. ಅದನ್ನು ವ್ಯವಸ್ಥಿತವಾಗಿ ಮರುಕಳಿಕೆ ಮಾಡುವುದು ನೆನಪಿನ ಶಕ್ತಿ ಎನಿಸಿಕೊಳ್ಳುತ್ತದೆ; ಇದನ್ನು ಕ್ರಮಬದ್ಧವಾಗಿ ಮಾಡಿದಷ್ಟೂ ನೆನಪು ಹರಿತವಾಗುತ್ತದೆ. ಈ ಬಗ್ಗೆ ವಿಜ್ಞಾನಿಗಳು ಸಂಶೋಧನೆಗಳನ್ನು ನಡೆಸಿದ್ದಾರೆ. ಇಂತಹ ಒಂದು ಅಧ್ಯಯನದಲ್ಲಿ ಸರಿಸುಮಾರು ಒಂದೇ ಓದಿನ ಮಟ್ಟದ ವಿದ್ಯಾರ್ಥಿಗಳ ಎರಡು ಗುಂಪುಗಳನ್ನು ಮಾಡಲಾಯಿತು. ಈ ವಿದ್ಯಾರ್ಥಿಗಳು ನಿಯಮಿತವಾಗಿ ಕಲಿಯುವ ವಿಷಯಗಳಿಗೆ ಯಾವುದೇ ನೇರ ಸಂಬಂಧವಿಲ್ಲದ ಒಂದು ಪುಟದಷ್ಟು ಮಾಹಿತಿಯ ಹಲವಾರು ಪ್ರತಿಗಳನ್ನು ಅಧ್ಯಯನ ತಂಡ ಮುದ್ರಿಸಿ ಇರಿಸಿಕೊಂಡಿತ್ತು.

ಮೊದಲನೆಯ ಗುಂಪಿನ ವಿದ್ಯಾರ್ಥಿಗಳಲ್ಲಿ ಪ್ರತಿಯೊಬ್ಬರಿಗೂ ಇಂತಹ ಮಾಹಿತಿಯ ಒಂದೊಂದು ಪ್ರತಿಯನ್ನು ನೀಡಿ, ಇಪ್ಪತ್ತು ನಿಮಿಷಗಳ ಕಾಲ ಅದನ್ನು ಪದೇಪದೇ ಸಾಧ್ಯವಾದಷ್ಟು ಬಾರಿ ಓದಿಕೊಳ್ಳಲು ಹೇಳಲಾಯಿತು. ಎರಡನೆಯ ಗುಂಪಿಗೆ ಕೂಡ ಅದೇ ಮಾಹಿತಿಯ ಒಂದೊಂದು ಪ್ರತಿಯನ್ನು ನೀಡಿ, ಓದಲು ಕೇವಲ ಐದು ನಿಮಿಷಗಳ ಅವಧಿ ನೀಡಲಾಯಿತು. ಅವಧಿ ಮುಗಿದ ಕೂಡಲೇ ಆ ಪ್ರತಿಗಳನ್ನು ಪ್ರತಿಯೊಬ್ಬರಿಂದಲೂ ಹಿಂಪಡೆಯಲಾಯಿತು. ಇಪ್ಪತ್ತು ನಿಮಿಷಗಳ ನಂತರ ಮೊದಲು ಗುಂಪು ನಿರ್ಗಮಿಸಿದಾಗ ಎರಡನೆಯ ಗುಂಪಿಗೆ ಖಾಲಿ ಹಾಳೆಗಳನ್ನು ನೀಡಿ, ತಮಗೆ ನೆನಪಿರುವಷ್ಟು ಮಾಹಿತಿಯನ್ನು ಅದರಲ್ಲಿ ಬರೆಯುವಂತೆ ಹೇಳಲಾಯಿತು. ಕೆಲವು ನಿಮಿಷಗಳ ನಂತರ ಅವರು ಬರೆದಿರುವುದನ್ನು ವಾಪಸ್ ಪಡೆದು, ಮತ್ತೊಂದು ಖಾಲಿ ಹಾಳೆಯ ಮೇಲೆ ಮತ್ತೊಮ್ಮೆ ನೆನಪಿರುವಷ್ಟನ್ನು ಬರೆಯಲು ಹೇಳಿದರು. ಇದೇ ಪ್ರಕ್ರಿಯೆಯನ್ನು ಮೂರನೆಯ ಬಾರಿಯೂ ಮಾಡಿದರು. ಯಾರು ಎಷ್ಟು ಬರೆದರೆಂಬ ಯಾವುದೇ ವಿವರಣೆಯನ್ನೂ ಯಾರಿಗೂ ನೀಡಲಿಲ್ಲ. ಕೆಲವು ದಿನಗಳ ನಂತರ ಆ ಎರಡೂ ಗುಂಪಿನ ವಿದ್ಯಾರ್ಥಿಗಳನ್ನು ಕರೆಸಿ, ಖಾಲಿ ಹಾಳೆಯ ಮೇಲೆ ಹಿಂದೆ ಓದಿದ್ದ ಮಾಹಿತಿಯನ್ನು ನೆನಪಿರುವಷ್ಟು ಬರೆಯಲು ಹೇಳಿದರು. ಇಪ್ಪತ್ತು ನಿಮಿಷಗಳ ಕಾಲ ಮಾಹಿತಿಯನ್ನು ಪದೇಪದೇ ಓದಿದ್ದ ಮೊದಲನೆಯ ಗುಂಪಿನ ವಿದ್ಯಾರ್ಥಿಗಳು ಸರಾಸರಿ ಶೇಕಡ ನಲವತ್ತು ಭಾಗ ಬರೆದಿದ್ದರು. ಅಚ್ಚರಿ ಎನ್ನುವಂತೆ, ಕೇವಲ ಐದು ನಿಮಿಷಗಳ ಕಾಲ ಮಾಹಿತಿಯನ್ನು ಓದಿ, ಮೂರು ಬಾರಿ ಅದನ್ನು ಮರುಕಳಿಕೆ ಮಾಡಿದ್ದ ಎರಡನೆಯ ಗುಂಪಿನ ವಿದ್ಯಾರ್ಥಿಗಳು ಸರಾಸರಿ ಶೇಕಡ ಅರವತ್ತೆರಡು ಭಾಗದ ಮಾಹಿತಿಯನ್ನು ಬರೆದಿದ್ದರು.

ಇಂತಹುದೇ ಅಧ್ಯಯನಗಳು ಅನೇಕ ವಿಧಾನಗಳಲ್ಲಿ ನಡೆದಿವೆ. ಪ್ರತಿಬಾರಿಯೂ ಪದೇಪದೇ ಓದುವುದಕ್ಕಿಂತ, ಓದಿನ ಮರುಕಳಿಕೆಯಿಂದ ಲಾಭವನ್ನು ಗಳಿಸಬಹುದು. ಓದಿದ್ದನ್ನು ಮೆಲುಕು ಹಾಕುವುದು ಸರಳವಾದರೂ ಪರಿಣಾಮಕಾರಿ ಕಲಿಕೆಯ ವಿಧಾನ ಎಂದು ತಜ್ಞರ ಅಭಿಪ್ರಾಯ. ಆದರೆ ನಮ್ಮ ವ್ಯವಸ್ಥೆಯಲ್ಲಿ ಇದರ ಬಳಕೆ ಕಡಿಮೆ. ಓದಿದ್ದನ್ನೇ ಮತ್ತೆ ಮತ್ತೆ ಓದಲು ಇರುವ ಪ್ರೋತ್ಸಾಹ, ಅದರ ವ್ಯವಸ್ಥಿತ ಮೆಲುಕು ಹಾಕುವುದರಲ್ಲಿ ಇಲ್ಲ. ಈ ವಿಧಾನ ಶಾಲೆಯಿಂದ ಹಿಡಿದು ಕಾಲೇಜು ವಿದ್ಯಾರ್ಥಿಗಳವರೆಗೆ ಪ್ರತಿಯೊಂದು ವಯೋಮಾನದವರಿಗೂ ಸಾಫಲ್ಯ ನೀಡುತ್ತದೆ. ಹೀಗೆ ಮೆಲುಕು ಹಾಕುವುದನ್ನು ಕಾಲಕಾಲಕ್ಕೆ ಆಗಾಗ ಮಾಡುವುದು ಹೆಚ್ಚು ಪರಿಣಾಮಕಾರಿ. ಸಮರ್ಥವಾಗಿ ಬಳಸಿಕೊಂಡರೆ ಓದಿನ ಕುರಿತಾದ ಆಸಕ್ತಿ ಹೆಚ್ಚಿ, ಕಲಿಕೆಯ ಆಳ ಮತ್ತು ವಿಸ್ತಾರಗಳೂ ಹೆಚ್ಚುತ್ತವೆ ಎಂದು ಸಾಬೀತಾಗಿದೆ.

ನಿರಂತರ ಕಲಿಕೆಯ, ತಾನು ಕಲಿತದ್ದನ್ನು ಮತ್ತೊಬ್ಬರಿಗೆ ಹೇಳಿಕೊಡುವ ವಿಧಾನಗಳನ್ನು ಅಳವಡಿಸಿಕೊಂಡಿರುವ ಶಿಕ್ಷಣ ವ್ಯವಸ್ಥೆ ನಮ್ಮ ಆಧುನಿಕ ಕಲಿಕೆಯ ಸೂಕ್ಷ್ಮತೆಯನ್ನು, ಸಾಮರ್ಥ್ಯವನ್ನು ಹೆಚ್ಚಿಸಬಲ್ಲವು ಎಂಬುದು ವೈಜ್ಞಾನಿಕವಾಗಿ ಧೃಢಪಟ್ಟಿದೆ. ಇದಕ್ಕೆ ಪೂರಕವಾದ ಕಲಿಕೆಯ ಪದ್ದತಿಗಳನ್ನು ಅಳವಡಿಸಿಕೊಳ್ಳಬಲ್ಲ ವಿಧಾನಗಳನ್ನು ಶಿಕ್ಷಣನೀತಿಯಲ್ಲಿ ಸೇರ್ಪಡೆಗೊಳಿಸುವುದು ಸೂಕ್ತ. ಆರಂಭದ ಹಂತದಿಂದಲೇ ಕಲಿಯುವಿಕೆ ಮತ್ತು ಕಲಿಸುವಿಕೆ ಜೊತೆಗೂಡಿ ಸಾಗಿದರೆ ಸಮಾಜಕ್ಕೆ ಉತ್ತಮ ಶಿಕ್ಷಕರನ್ನು ನೀಡುವ ಸಾಧ್ಯತೆಗಳು ವೃದ್ಧಿಸುತ್ತವೆ. ಈ ನಿಟ್ಟಿನಲ್ಲಿ ನಮ್ಮ ಶಿಕ್ಷಣನೀತಿ ಗಮನ ಹರಿಸಬೇಕಿದೆ.

# ಪುಟ್ಟ ಮನಸ್ಸುಗಳು ಗಮನಿಸುತ್ತಿವೆ!

**ಡಾ. ಕೆ. ಎಸ್. ಶುಭ್ರತಾ**

ಜಗತ್ತಿನಲ್ಲಿ ಎರಡು ವಿಷಯಗಳಿಗೆ ‘ಸರ್ಟಿಫೈಡ್ ಕೋರ್ಸ್’ಗಳಿಲ್ಲವಂತೆ! ಯಾವುದೆಂದು ಅಚ್ಚರಿ ಪಡುತ್ತಿರುವಿರಾ? ಮದುವೆಯಾಗಲು ಮತ್ತು ಮಕ್ಕಳನ್ನು ಬೆಳೆಸಲು.

ಹೌದು, ಮಕ್ಕಳನ್ನು ಬೆಳೆಸುವ ರೀತಿಗೆ, ಪೋಷಕತ್ವ ಎನ್ನುತ್ತೇವೆ. ಮಕ್ಕಳನ್ನು ಬೆಳೆಸುವ ರೀತಿಯಲ್ಲಿ ಮಾದರಿಯಾದದ್ದು ‘Authoritative Parenting’ ಎಂದು ಮನಃಶಾಸ್ತ್ರದ ಅಧ್ಯಯನಗಳು ಹೇಳುತ್ತವೆ. ಆದರೆ ಪ್ರತಿಯೊಂದು ಮಗುವಿನ ಸ್ವಭಾವದಲ್ಲೂ ವ್ಯತ್ಯಾಸಗಳು ಇರುವುದರಿಂದ, ಆ ಕುಟುಂಬಕ್ಕೆ ತಕ್ಕಂತೆ, ಪರಿಸ್ಥಿತಿಗೆ ಅನುಗುಣವಾಗಿ, ಪೋಷಕರ ವರ್ತನೆಯಲ್ಲಿ ಬದಲಾವಣೆ ಮಾಡಿಕೊಳ್ಳಬೇಕಾಗುತ್ತದೆ.

ಪೋಷಕರು ಅತಿ ಕಠಿಣವಾಗಿದ್ದರೂ ಸಮಸ್ಯೆಯೇ. ಹಾಗೆಯೇ, ಮಕ್ಕಳು ಕೇಳಿದ್ದನ್ನೆಲ್ಲಾ ಕೊಡಿಸಿ, ಹೇಳಿದ್ದನ್ನೆಲ್ಲಾ ಕೇಳಿದರೆ ಕೂಡ ತೊಂದರೆಯೇ. ಅದೇ ಇನ್ನೊಂದು ಬದಿಯಲ್ಲಿ, ಮಗುವಿನ ಕಡೆ ನಿರ್ಲಕ್ಷ್ಯ ಮಾಡುವುದು; ಹೊಡೆಯುವುದು ಮುಂತಾದವುಗಳನ್ನು ಮಾಡಿದರೆ ಮತ್ತಷ್ಟು ಸಮಸ್ಯೆಗಳಿಗೆ ಎಡ ಮಾಡುತ್ತದೆ. ಮಾದರಿ ಪೋಷಕರಾಗಲು ನಾವೇನೂ ದೇವಮಾನವರಲ್ಲ, ಮಾದರಿ ವ್ಯಕ್ತಿಗಳಲ್ಲ. ಮೇಲೆ ಹೇಳಿದಂತೆ ಯಾವ ಹೊಸ ತಂದೆ-ತಾಯಿಗೂ ಮೊದಲೇ ಇದರ ಬಗ್ಗೆ ಪೂರ್ವಾನುಭವವಿರುವುದಿಲ್ಲ. ಪ್ರಸಿದ್ಧ ಸುಭಾಷಿತವೊಂದು ಹೀಗೆ ಹೇಳುತ್ತದೆ:‘ಲಾಲಯೇತ್ ಪಂಚವರ್ಷಾಣಿ, ದಶ ವರ್ಷಾಣಿ ತಾಡಯೇತ್, ಪ್ರಾಪ್ತೇತು ಷೋಡಶೇ ವರ್ಷೇ ಪುತ್ರಂ ಮಿತ್ರಂವದಾಚರೇತ್’’. ‘ಐದು ವರ್ಷಗಳ ತನಕ ಮಕ್ಕಳನ್ನು ಮುದ್ದು ಮಾಡಬೇಕು, ಹತ್ತು ವರ್ಷಗಳಾಗುವ ತನಕ ಶಿಕ್ಷೆಯ ಮೂಲಕ ಕಲಿಸಬೇಕು, ಹದಿನಾರು ವರ್ಷಗಳಾಗುತ್ತಿದ್ದಂತೆಯೇ ಮಗುವನ್ನು ಸ್ನೇಹಿತನಂತೆ ನೋಡಬೇಕು.’ ಸ್ಪರ್ಧಾತ್ಮಕ ಜಗತ್ತು, ತಂತ್ರಜ್ಞಾನ ಹಾಸುಹೊಕ್ಕಾಗಿರುವ ನಮ್ಮ ಜೀವನ ಮತ್ತು ಮನಃಶಾಸ್ತ್ರದ ತಿಳಿವಳಿಕೆ – ಇವುಗಳಿಂದ ನಾವು ಮಕ್ಕಳನ್ನು ಬೆಳೆಸುವ ರೀತಿಯನ್ನು ಬದಲಾಯಿಸಿಕೊಳ್ಳಲೇಬೇಕಾದ ಪರಿಸ್ಥಿತಿ ಬಂದೊದಗಿದೆ.

**ಪೋಷಕರು ಅತಿ ಕಠಿಣವಾಗಿದ್ದರೂ ಸಮಸ್ಯೆಯೇ; ತುಂಬ ಉದಾರವಾಗಿದ್ದರೂ ಸಮಸ್ಯೆಯೇ...**

ನಮ್ಮ ದೇಶದದಲ್ಲಿ ತಂದೆ/ತಾಯಿ, ಮಕ್ಕಳು ಕಡೇ ಪಕ್ಷ 18 ವರ್ಷಗಳಾಗುವ ತನಕ ಒಂದೇ ಮನೆಯಲ್ಲಿ ಇರುವುದೇ ಹೆಚ್ಚು. ಪೋಷಕತ್ವದ ಮುಖ್ಯ ಆಯಾಮ ಪೋಷಕರನ್ನು ನೋಡಿ, ಅವರ ಆಚಾರ-ವಿಚಾರಗಳನ್ನು ಗಮನಿಸಿ ಮಕ್ಕಳು ಮೈರೂಢಿಸಿಕೊಳ್ಳುವ ಮೌಲ್ಯಗಳು. ಆದುದರಿಂದ, ನಮ್ಮ ಆಚಾರ-ವಿಚಾರಗಳ ಬಗ್ಗೆ ನಾವು ಯಾವಾಗಲೂ ಎಚ್ಚರದಿಂದಿರಬೇಕು. ಸುಮಾರು 2-3 ವರ್ಷಗಳಷ್ಟು ಪುಟ್ಟ ಮಗುವೂ ತಂದೆ-ತಾಯಿಯ ವರ್ತನೆ, ಮಾತನಾಡುವ ರೀತಿಯನ್ನು ಅನುಕರಣೆ ಮಾಡುತ್ತದೆ. ನಿಧಾನವಾಗಿ ಆ ಅಭ್ಯಾಸಗಳನ್ನು ತನ್ನದಾಗಿ ಮಾಡಿಕೊಳ್ಳುತ್ತದೆ. ಇದಕ್ಕೆ ‘Modelling’ ಎಂದು ಕರೆಯುತ್ತೇವೆ.

**ವರ್ತನೆಯಲ್ಲಿ ಕಿರಿಕಿರಿ:** ಯಾವಾಗಲೂ ಮನಸ್ಸು ಸಿಟ್ಟಿನಲ್ಲಿರುವುದು, ಸಿಡಿಮಿಡಿ ಎನ್ನುವುದು, ಬೈಯುವಾಗ ಕೆಟ್ಟ ಶಬ್ದಗಳನ್ನು ಉಪಯೋಗಿಸುವುದು, ದೈಹಿಕ ದೌರ್ಜನ್ಯ ನಡೆಸುವುದು.

**ಸಂಶಯದ ಸ್ವಭಾವ:** ಎಲ್ಲ ವ್ಯಕ್ತಿಗಳನ್ನು ಅನುಮಾನದಿಂದ ನೋಡುವುದು, ಬೇರೆಯವರ ವರ್ತನೆ ಬಗ್ಗೆ, ಉದ್ದೇಶದ ಬಗ್ಗೆ ಸಂಶಯ ವ್ಯಕ್ತಪಡಿಸುವುದು. ಯಾರಲ್ಲಿಯೂ ನಂಬಿಕೆ ಇಡದಿರುವುದು.

**ಅಶಿಸ್ತು:** ಮನೆಯನ್ನು, ನಮ್ಮ ವಸ್ತುಗಳನ್ನು ಸ್ವಚ್ಛವಾಗಿಡದೇ ಇರುವುದು, ಸುತ್ತಮುತ್ತ ಹರಡಿಕೊಂಡಿರುವುದು; ವೈಯಕ್ತಿಕ ಶುಚಿತ್ವವನ್ನು ಕಾಪಾಡಿಕೊಳ್ಳದಿರುವುದು.

**ಹತಾಶೆ:** ಯಾವಾಗಲೂ ಹತಾಶೆಯ ಭಾವನೆಯಲ್ಲಿ ಮಂಕಾಗಿರುವುದು. ಭವಿಷ್ಯದ ಬಗ್ಗೆ ನಿರಾಶಾದಾಯಕವಾಗಿ ಯೋಚಿಸುವುದು.

**ನಿರ್ಲಕ್ಷ್ಯ:** ಕುಟುಂಬದವರ ಬಗ್ಗೆ ಕಾಳಜಿ ವ್ಯಕ್ತಪಡಿಸದೇ ಇರುವುದು, ಮನೆಯಲ್ಲಿರುವ ವೃದ್ಧರಿಗೆ ಗೌರವ ಕೊಡದೇ ಹೀನಾಯವಾಗಿ ನೋಡುವುದು.

ಮೇಲೆ ಹೇಳಿದ ಆಚಾರ-ವಿಚಾರಗಳು ನಕಾರಾತ್ಮಕವಾದದ್ದಾದರೆ ನಮ್ಮ ಕೆಲವು ಸಕಾರಾತ್ಮಕ ನಡತೆಗಳೂ ಮಕ್ಕಳ ಮನಸ್ಸಿನ ಮೇಲೆ ಪರಿಣಾಮ ಬೀರಿ, ಅವರು ಮುಂದಿನ ಜೀವನದಲ್ಲಿ ಕರಗತ ಮಾಡಿಕೊಂಡು ಒಳ್ಳೆಯದಾಗುತ್ತದೆ.

**ಸಮಯಪಾಲನೆ:** ಸಮಯದ ಮಿತಿ ಬಗ್ಗೆ ತಿಳಿದಿರುವುದು, ಕಾರ್ಯಕ್ರಮಗಳಿಗೆ ಸರಿಯಾದ ಸಮಯಕ್ಕೆ ಹೋಗುವುದು, ತಡವಾದಾಗ ಒಂದು ಮಾತು ಮುಂಚಿತವಾಗಿ ತಿಳಿಸುವುದು.

**ಉದಾರತೆ:** ಮನಸ್ಸು ಉದಾರವಾಗಿದ್ದರೆ, ನಮ್ಮ ವರ್ತನೆಯಲ್ಲೂ ಅದನ್ನು ಕಾಣಬಹುದು. ಇತರರಿಗೆ ಸಹಾಯ ಮಾಡಲು, ನಾವೇನೂ ಶ್ರೀಮಂತರಾಗಿರಬೇಕೆಂದಿಲ್ಲ. ಇರುವುದರಲ್ಲೇ ಅಗತ್ಯವಿರುವವರಿಗೆ ಸಹಾಯ ಮಾಡಬಹುದು. ಆಹಾರ, ಬಟ್ಟೆ, ಹಣ ಇತ್ಯಾದಿ ಯಾವುದರ ಮೂಲಕವಾದರೂ ಸಾಧ್ಯವಿದೆ.

**ಪ್ರಸನ್ನವಾಗಿರುವುದು:** ಬೆಳಿಗ್ಗೆ ಏಳುವಾಗ ನಗುತ್ತಾ ‘ಶುಭಮುಂಜಾನೆ’ ಹೇಳಿ ಏಳುವುದು, ಸಮಾಧಾನಿಯಾಗಿ ಸಂತಸದಿಂದ ದಿನನಿತ್ಯದ ಕೆಲಸಗಳನ್ನು ಮಾಡುವುದು, ಅತಿಯಾದ ಒತ್ತಡ ತೆಗೆದುಕೊಳ್ಳದೇ ಜವಾಬ್ದಾರಿಗಳನ್ನು ನಿರ್ವಹಿಸುವುದು.

**ಕ್ಷಮಿಸುವುದು:** ಸಂಸಾರದಲ್ಲಿ ಮಾತುಗಳು ಬರುತ್ತವೆ, ಜಗಳಗಳು ಆಗುತ್ತವೆ, ಸಂಬಂಧಿಕರ ಜೊತೆ ಮನಸ್ತಾಪಗಳಿರುತ್ತವೆ. ಆದರೆ ಯಾರೊಂದಿಗೂ ದೀರ್ಘ ಕಾಲದ ಹಗೆಯನ್ನು ಸಾಧಿಸದೇ ರಾಜಿ ಮಾಡಿಕೊಂಡು ನಾವೇ ಕ್ಷಮಾಪಣೆ ಕೇಳಿಯೋ ಅಥವಾ ನಾವೇ ಅವರನ್ನು ದೊಡ್ಡ ಮನಸ್ಸಿನಿಂದ ಕ್ಷಮಿಸಿಯೋ, ಇತ್ಯರ್ಥ ಮಾಡಿಕೊಳ್ಳುವುದು.

ನೆನಪಿಡಿ! ಆ ಪುಟ್ಟ ಕಣ್ಣುಗಳು ನಿಮ್ಮನ್ನೇ ನೋಡುತ್ತಿರುತ್ತವೆ. ಆ ಪುಟ್ಟ ಕೈಗಳು ನೀವು ಮಾಡುವ ಕೆಲಸವನ್ನೇ ಮಾಡಲಿಚ್ಛಿಸುತ್ತವೆ. ಆ ಪುಟ್ಟ ಮನಸ್ಸು, ತನ್ನ ಅಪ್ಪ ಮತ್ತು ಅಮ್ಮನನ್ನೇ ‘ಜಗತ್ತು’ ಎಂದು ನಂಬಿರುತ್ತದೆ. ಈ ಜಗತ್ತಿನಲ್ಲಿ ನಡೆಯುವ ಆಟವೇ ಆ ಪುಟ್ಟ ಮನಸ್ಸಿಗೆ ಪಾಠವಾಗಿರುತ್ತದೆ. ಪಾಠವನ್ನೇ ಸರಿಯಾಗಿ ಕಲಿಸದೇ ಮಕ್ಕಳು ದಾರಿ ತಪ್ಪಿದರೆ? ಈ ಜಗತ್ತನ್ನೇ ದೂಷಿಸಬೇಕಷ್ಟೇ!

# ಸ್ನಾನವೂ ಒಂದು ಚಿಕಿತ್ಸೆಯೇ

**ಡಾ. ವಿಜಯಲಕ್ಷ್ಮಿ ಪಿ.**

**ನಮ್ಮ ಹಿರಿಯರ** ದಿನಚರಿ ಹೀಗಿರುತ್ತಿತ್ತು: ಬೆಳಗ್ಗೆ ಸೂರ್ಯೋದಯಕ್ಕಿಂತ ಮೊದಲೇ ಎದ್ದು, ನಿತ್ಯಕರ್ಮಗಳನ್ನು ಮುಗಿಸಿ, ಮುಖ ತೊಳೆದು, ಸ್ನಾನ ಮಾಡಿ, ದೇವತಾರ್ಚನೆ ಮಾಡಿ ನಂತರ ಇತರ ಕೆಲಸಗಳ ಕಡೆಗೆ ಗಮನ ಕೊಡುವುದು.

ಸ್ನಾನ ಎನ್ನುವುದು ಅನಿವಾರ್ಯವಾದ ನಿತ್ಯಕರ್ಮ. ಆದರೆ ಇಂದು ಸ್ನಾನ ಎನ್ನುವುದು ದೇಹದ ಕೊಳೆಯನ್ನು ತೆಗೆಯಲು ಇರುವ ಸಾಧನ. ಆದ್ದರಿಂದ ಅದಕ್ಕೆ ಯಾವುದೇ ನಿಯಮಗಳಿಲ್ಲ. ಬೆಳಗ್ಗೆ ತಿಂಡಿ ತಿಂದು, ಬೆಳಗಿನ ಕೆಲಸ ಮುಗಿಸಿ ಮಧ್ಯಾಹ್ನ, ವ್ಯಾಯಾಮ ಮಾಡಿದ ನಂತರ, ಸಂಜೆ ಹೊತ್ತಿನಲ್ಲಿ, ರಾತ್ರಿ ಮಲಗುವ ಮೊದಲು – ಹೀಗೆ ಒಂದು ನಿರ್ದಿಷ್ಟವಾದ ಕಾಲವೇ ಇಲ್ಲ. ಆದರೆ ನಮ್ಮ ಪೂರ್ವಜರು ಎಲ್ಲ ದೈನಂದಿನ ಕ್ರಿಯೆಗಳೂ ಆರೋಗ್ಯಕ್ಕೆ ಪೂರಕವಾಗಿರುವಂತೆ ಕೆಲವು ನಿಯಮಗಳನ್ನು ಆಚರಿಸುತ್ತಿದ್ದರು. ಅದಕ್ಕೆ ಶಾಸ್ತ್ರ, ಪುರಾಣ ಸಂಪ್ರದಾಯಗಳ ಲೇಪನವನ್ನು ಕೊಟ್ಟು ಸಾಮಾನ್ಯರೂ ಆಚರಿಸುವಂತೆ ನೋಡಿಕೊಳ್ಳುತ್ತಿದ್ದರು. ಆದರೆ ನಿಯಮವೇ ಇಲ್ಲದ ಜೀವನ ನಡೆಸುವಾಗ ಪ್ರತಿಯೊಂದೂ ಪ್ರಶ್ನೆಯಾಗಿಯೇ ಉಳಿಯುತ್ತದೆ.

ಸ್ನಾನ ಮಾಡುವಾಗ ಪಾಲಿಸಲೇಬೇಕಾದ ನಿಯಮವೆಂದರೆ ತಿಂದ ಆಹಾರವು ಜೀರ್ಣವಾಗಿ ಹೊಟ್ಟೆ ಖಾಲಿ ಇರುವುದು. ಆದರೆ ಹಸಿವೆ ಪ್ರಾರಂಭವಾಗಿರಬಾರದು. ಇದರ ಲಕ್ಷಣವನ್ನು ಗಮನಿಸುವುದು ಸಾಧ್ಯವಿಲ್ಲವೆಂದೇ ಹಿರಿಯರು ಬೆಳಗ್ಗೆಯೇ ಸ್ನಾನ ಮಾಡಲು ಹೇಳುತ್ತಿದ್ದುದು. ಆಹಾರ ಸೇವಿಸಿದ ನಂತರ ಸ್ನಾನ ಮಾಡುವುದರಿಂದ, ಆಹಾರವು ಸಂಪೂರ್ಣವಾಗಿ ಪರಿಣಾಮವಾಗದೆ, ದೇಹಲ್ಲೋ ಉಳಿದು ಅಜೀರ್ಣ, ಅಮ್ಲಪಿತ್ತ, ಚರ್ಮರೋಗ, ಕರುಳಿಗೆ ಸಂಬಂಧಪಟ್ಟ ಅನೇಕ ರೋಗಗಳು, ಗಂಟುನೋವು, ಗಡ್ಡೆಗಳಾಗಲು ಕಾರಣವಾಗುತ್ತದೆ. ಎಲ್ಲರಿಗೂ ಎಲ್ಲಾ ರೋಗಗಳೂ ಬರುತ್ತವೆ – ಎಂದಲ್ಲದಿದ್ದರೂ ಅವರವರ ಪ್ರದೇಶ, ವಾತಾವರಣ, ದೈನಂದಿನ ಚಟುವಟುಕೆಗಳನ್ನು ಅನುಸರಿಸಿಕೊಂಡು ಅಮ್ಲಪಿತ್ತದಿಂದ ಹಿಡಿದು ಕ್ಯಾನ್ಸರ್‌ವರೆಗೂ ಬೇರೆ ಬೇರೆ ರೀತಿಯ ರೋಗಗಳ ಉತ್ಪತ್ತಿಗೆ ಕಾರಣವಾಗುತ್ತದೆ.

## ಅತಿ ಬಿಸಿನೀರೂ ಬೇಡ ಅತಿ ತಣ್ಣೀರೂ ಬೇಡ

ಕಾಲಕ್ಕೆ ತಕ್ಕಂತೆ ಹದಾ ಬಿಸಿನೀರಿನಲ್ಲಿ ಸ್ನಾನ ಮಾಡುವುದು ಆರೋಗ್ಯಕರ. ಅತಿ ಬಿಸಿನೀರು ಅಥವಾ ಅತಿ ತಂಪಾದ ನೀರಿನ ಸ್ನಾನ ಅನಾರೋಗ್ಯಕರ. ಅತಿಯಾದ ಬಿಸಿನೀರಿನ ಸ್ನಾನವು ತಲೆನೋವು, ತಲೆಸುತ್ತುವಿಕೆಗೆ ಕಾರಣವಾದರೆ, ಅತಿಯಾದ ತಣ್ಣೀರಿನ ಸ್ನಾನ ನೆಗಡಿ, ಕೆಮ್ಮು, ಜ್ವರ, ಮೂಗು ಕಟ್ಟುವುದು, ಸ್ವರ ಹಾಳಾಗುವುದು, ಅಸ್ತಮಾ ಮುಂತಾದ ರೋಗಗಳಿಗೆ ಕಾರಣವಾಗುತ್ತದೆ, ಮೊದಲೇ ಇದ್ದವರಿಗೆ ಹೆಚ್ಚಾಗುತ್ತದೆ. ಜ್ವರ ಇರುವಾಗ ಸ್ನಾನ ಮಾಡುವುದು ಬೇರೇ ಬೇರೇ ಅನೇಕ ರೋಗಗಳ ಉತ್ಪತ್ತಿಗೆ ಕಾರಣವಾಗುತ್ತದೆ. ಜ್ವರ ಬಿಟ್ಟು ಒಂದು ದಿನದ ನಂತರ ಸ್ನಾನ ಮಾಡಿದರೆ ಜ್ವರ ಮರುಕಳಿಸುವಿಕೆ ಇರುವುದಿಲ್ಲ.

**ಸರಿಯಾದ ಕ್ರಮದಿಂದ ಸ್ನಾನ ಮಾಡಿದರೆ ದೇಹಕ್ಕಾಗುವ ಲಾಭಗಳು:** ನಿದ್ರೆ, ತೂಕಡಿಕೆಯನ್ನು ದೂರಮಾಡಿ ಶರೀರಕ್ಕೆ ಉತ್ಸಾಹ, ಉಲ್ಲಾಸವನ್ನು ತರುತ್ತದೆ. ಜೊತೆಗೆ ಶರೀರವನ್ನು ಶುಭ್ರಗೊಳಿಸಿ ಮೈಕಾಂತಿಯನ್ನು ಹೆಚ್ಚಿಸುತ್ತದೆ. ಶರೀರವನ್ನು ಸುಗಂಧಗೊಳಿಸುತ್ತದೆ; ಜೊತೆಗೆ ಮೈ ನವೆ, ನೋವುಗಳಿಗೂ ಉಪಶಮನ ನೀಡುತ್ತದೆ. ಆದರೆ ಅಜೀರ್ಣವಾದಾಗ ಅಥವಾ ಹೊಟ್ಟೆಯಲ್ಲಿ ಆಹಾರ ಇರುವಾಗ ಸ್ನಾನ ಮಾಡಿದರೆ ಮೈ ತುರಿಕೆಯ ಉತ್ಪತ್ತಿಯಾಗಲು ಕಾರಣವಾಗುತ್ತದೆ.

ಸರಿಯಾದ ಕ್ರಮದಲ್ಲಿ ಮಾಡಿದ ಸ್ನಾನವು ಹಸಿವೆಯನ್ನು ಉತ್ಪತ್ತಿ ಮಾಡಿ ಬಾಯಿರುಚಿಯನ್ನು ತಂದು ಕೊಡುತ್ತದೆ. ಹಸಿವೆಯಾಗುತ್ತದೆ, ಆದರೆ ಆಹಾರ ರುಚಿಸುವುದಿಲ್ಲ – ಎಂದು ದೂರುವವರು, ರಾತ್ರಿ 8 ಗಂಟೆಯ ಒಳಗೆ ಆಹಾರವನ್ನು ಸೇವಿಸಿ ಬೆಳಗ್ಗೆ ಸೂರ್ಯೋದಯಕ್ಕೆ ಮೊದಲೇ ಎದ್ದು ಹದವಾದ ಬಿಸಿನೀರಿನಲ್ಲಿ ಸ್ನಾನ ಮಾಡುವುದರಿಂದ ಬಾಯಿರುಚಿಯ ಉತ್ಪತ್ತಿಯಾಗುತ್ತದೆ. ಅಲ್ಲದೆ ಮಲಪ್ರವೃತ್ತಿ ಸಕಾಲದಲ್ಲಿ ಸರಿಯಾಗಿ ಆಗಲು ಬಿಸಿನೀರಿನ ಸ್ನಾನ ಕಾರಣವಾಗುತ್ತದೆ.

ಬಿಸಿಲಿಂದ ಬಂದ ಕೂಡಲೇ ಸ್ನಾನ ಮಾಡಬಾರದು ಎಂಬುದು ನಮ್ಮ ಹಿರಿಯರ ಹೇಳಿಕೆ. ಇಷ್ಟು ಮಾತ್ರವಲ್ಲ. ಅತಿ ಶ್ರಮದ ಕೆಲಸ ಮಾಡಿದ ತಕ್ಷಣ, ಬೆವರುವಷ್ಟು ವ್ಯಾಯಾಮ ಮಾಡಿಬಂದು, ಆಟವಾಡಿ ಬಂದು, ಆಹಾರ ಸೇವಿಸಿದ ತಕ್ಷಣ ಸ್ನಾನ ಮಾಡಬಾರದು. ದೇಹದ ಒಳಗಿನ ಸಮತ್ವದಂತೆ, ದೇಹದ ಹೊರಗೂ, ಚರ್ಮದ ರಕ್ತಪರಿಚಲನೆ ಮತ್ತು ಇತರ ಕ್ರಿಯೆಗಳು ಸಮಸ್ಥಿತಿಯಲ್ಲಿರುವಾಗ ಸ್ನಾನ ಮಾಡಬೇಕು. ಇಲ್ಲದಿದ್ದರೆ ಸೂಕ್ಷ್ಮರಕ್ತನಾಳಗಳು ಒಡೆಯುವಂತೆ ಮಾಡಿ, ಅತಿ ರಕ್ತಸ್ರಾವ, ಚರ್ಮ ಒರಟಾಗುವಿಕೆ, ರಕ್ತದೊತ್ತಡ ಹೆಚ್ಚಾಗುವುದು, ತಲೆಸುತ್ತುವಿಕೆ, ತಲೆನೋವು, ಮೈ ತುರಿಕೆ, ಮಲಬದ್ಧತೆ, ದೇಹದ ನೀರಿನಂಶದಲ್ಲಿ ವ್ಯತ್ಯಯ ಉಂಟಾಗಿ ಬೆವರು, ಮೂತ್ರಸಂಬಂಧಿ ತೊಂದರೆಗಳಿಗೆ ಕಾರಣವಾಗುತ್ತದೆ.

ರಾತ್ರಿ ಮಲಗುವಾಗ ಸ್ನಾಮಾಡುವುದು, ರಾತ್ರಿ ಊಟವಾದ ನಂತರ ಸ್ನಾನ ಮಾಡುವುದು ಉತ್ಸಾಹವನ್ನು ತರುತ್ತದೆ ಎಂದೆನಿಸಿದರೂ, ಅನಾರೋಗ್ಯಕ್ಕೆ ಮೂಲವಾಗುತ್ತದೆ. ದೇಹ ಶ್ರಮವಾಗಿದ್ದರೆ ರಾತ್ರಿ ಊಟಕ್ಕೆ ಮೊದಲು ಸ್ನಾನ ಮಾಡುವುದು ಆರೋಗ್ಯಕರ. ಬೇಸಗೆಯಲ್ಲಿ ತಣ್ಣೀರಿನ ಸ್ನಾನ ಹಿತಕರವಾದರೂ ಚಳಿಗಾಲದಲ್ಲಿ ಹಿತಕರವಲ್ಲ. ಚಳಿಗಾಲದಲ್ಲಾದರೂ ಬಾವಿ, ಹೊಳೆ, ನದಿ ನೀರಿನ ಸ್ನಾನ ಹೆಚ್ಚು ತೊಂದರೆ ಮಾಡುವುದಿಲ್ಲ. ಆದರೆ ಟ್ಯಾಂಕು, ಸಂಪುಗಳಲ್ಲಿ ಹಿಡಿದಿಟ್ಟ ನೀರಿನ ತಣ್ಣೀರು ಸ್ನಾನ ಅನಾರೋಗ್ಯಕರ. ಹಾಗಾಗಿ ಇಡೀ ವರ್ಷವೂ ಅತಿ ಬಿಸಿಯೂ ಅಲ್ಲದ, ಅತಿ ತಂಪೂ ಅಲ್ಲದ, ಬೆಚ್ಚಗಿನ ನೀರಿನ ಸ್ನಾನ ಆರೋಗ್ಯಕರ. ಬಿಸಿನೀರಿನ ಸ್ನಾನ ಮಾಡುವಾಗ ಮೊದಲು ಕಾಲಿಗೆ ನೀರನ್ನು ಹಾಕಿ ನಂತರ ಮೈಗೆ ನೀರನ್ನು ಹಾಕಿ, ನಂತರ ತಲೆಗೆ ಸ್ನಾನ ಮಾಡುವುದರಿಂದ ತಲೆಗೆ ರಕ್ತದೊತ್ತಡ ಹೆಚ್ಚುವುದನ್ನು ತಡೆದು, ಸ್ನಾನದ ನಂತರ ಅನುಭವಿಸುವ ತಲೆನೋವು, ತಲೆ ತಿರುಗುವಿಕೆ, ತಲೆ ನೆವೆ, ಮೈಕೈ ಊದಿದಂತೆ ಭಾಸವಾಗುವುದು, ಸೀನು ಬರುವುದು, ಕಣ್ಣು ಕೆಂಪಾಗುವುದು – ಹೀಗೆ ಅನೇಕ ತೊಂದರೆಗಳಿಂದ ದೂರವಿರಬಹುದು. ಅದೇ ತಣ್ಣೀರಿನಲ್ಲಿ ಸ್ನಾನ ಮಾಡುವಾಗ ಒಮ್ಮೆಗೇ ತಲೆಗೆ ನೀರು ಹಾಕುವುದರಿಂದ ಮೈ ಕೊಡವಿದಂತಾಗಿ ಅತಿಯಾದ ತಂಪು ದೇಹಕ್ಕೆ ಸೇರದೆ, ಕಫ ತಲೆಯಲ್ಲಿ ಉಳಿಯದೆ, ಚರ್ಮವೂ ಉತ್ತೇಜನಗೊಂಡು, ದೇಹಾರೋಗ್ಯವನ್ನು ಕಾಪಾಡುತ್ತದೆ.

ಇಂದ್ರಿಯಗಳನ್ನು ಸುಸ್ಥಿತಿಯಲ್ಲಿ ಕಾಪಾಡಿಕೊಳ್ಳಲು, ಮನಸ್ಸನ್ನು ಪ್ರಸನ್ನವಾಗಿರಿಸಲು, ಸ್ನಾನಕ್ಕೆ ಮೊದಲು ಎಳ್ಳೆಣ್ಣೆ, ಅಥವಾ ಕೊಬ್ಬರಿ ಎಣ್ಣೆ, ಇಲ್ಲವೇ ಆಯಾಯ ಪ್ರದೇಶದಲ್ಲಿ ನಿತ್ಯೋಪಯೋಗಿ ಎಣ್ಣೆಗಳಲ್ಲಿ ಯಾವುದಾದರೂ ಒಂದನ್ನು ಮೈಗೆ ಹಚ್ಚಿ, ಬಿಸಿನೀರಿನ ಸ್ನಾನ ಮಾಡುವುದು ಒಳ್ಳೆಯದು. ಕಡೆ ಪಕ್ಷ ನಿತ್ಯವೂ ಅಂಗಾಲಿಗೆ, ಅಂಗೈಗಳಿಗೆ, ಕಿವಿಗೆ, ನೆತ್ತಿಗೆ ಎಣ್ಣೆ ಹಚ್ಚಿ ಹದಾ ಬಿಸಿನೀರಿನ ಸ್ನಾನ ಮಾಡುವುದು, ದೇಹದ ರೋಗಕ್ಷಮತೆಯ ಸಾಮರ್ಥ್ಯವನ್ನು ಹೆಚ್ಚಿಸುವುದರ ಜೊತೆಗೆ, ಕಿವುಡಾಗುವಿಕೆ, ಕಣ್ಣಿನ ತೊಂದರೆಗಳು, ಚರ್ಮ ಸುಕ್ಕಾಗುವಿಕೆ, ಕಪ್ಪಾಗುವುದನ್ನು ತಡೆಗಟ್ಟಿ, ಯೌವನವನ್ನು ಕಾಪಾಡುವಲ್ಲಿ ದಿನಚರಿಯ ಪ್ರಮುಖ ಅಂಗವಾಗಿದೆ.

ವ್ಯಾಯಮ ಮಾಡಿ, ದಣಿದು, ಬೆವರು ಸುರಿಸಿ ಬಂದು ತಕ್ಷಣವೇ ಸ್ನಾನ ಮಾಡುವುದಕ್ಕಿಂತ, ಸ್ವಲ್ಪ ಸುಧಾರಿಸಿಕೊಂಡು, ಮೈ-ಕೈಗಳಿಗೆ ಒಣಚೂರ್ಣಗಳಿಂದ – ಎಂದರೆ ತ್ರಿಫಲಾ, ಸೀಗೇಕಾಯಿ, ಅರಿಶಿನ, ಅನುಕೂಲವಿದ್ದವರು, ಶ್ರೀಗಂಧ, ಅಗರು, ಮುಲ್ತಾನಿ ಮಿಟ್ಟಿ – ಇವುಗಳಲ್ಲಿ ಒಂದೋ ಎರಡೋ ಅಥವಾ ಎಲ್ಲವನ್ನು ಸೇರಿಸಿ ಮೈಕೈಯನ್ನು ಚೆನ್ನಾಗಿ ತಿಕ್ಕಿ ಮೈ ಬೆವರನ್ನೆಲ್ಲಾ ತೆಗೆದು, ನಂತರ ಎಣ್ಣೆಯನ್ನು ಹಚ್ಚಿ, ಸ್ನಾನ ಮಾಡುವುದರಿಂದ ದೇಹದಾರ್ಢ್ಯತೆಯನ್ನು ಕಾಪಾಡಿಕೊಳ್ಳುವುದರ ಜೊತೆಗೆ, ದೇಹದ ಸೌಂದರ್ಯವನ್ನೂ ಕಾಪಾಡಿಕೊಳ್ಳಬಹುದು. ಮುಖ್ಯವಾಗಿ ವ್ಯಾಯಾಮದ ವ್ಯತ್ಯಾಸದಿಂದ ಅಡ್ಡಪರಿಣಾಮವಾಗಿ ಆಗುವ, ಹೃದಯಾಘಾತವೇ ಮೊದಲಾದ ಹೃದಯಸಂಬಂಧಿ, ರಕ್ತ ಮತ್ತು ರಕ್ತನಾಳ ಸಂಬಂಧಿ ರೋಗಗಳಿಂದ ದೂರವಿರಬಹುದು.

ವಿವೇಚನೆಯಿಂದ ಮಾಡುವ ಸ್ನಾನ ಆರೋಗ್ಯಕರ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

# ಅಭಿಮತ



❦ ಸುಭಾಷಿತ ❦

ಯಾರು ಪ್ರೀತಿಸುತ್ತಾರೋ ಅವರಿಗೆ ಮಾತ್ರ ತಿದ್ದುವ, ಶಿಕ್ಷಿಸುವ ಅಧಿಕಾರ ಉಂಟು.

-ರವೀಂದ್ರನಾಥ ಟ್ಯಾಗೋರ್

## ಮೀಸಲಾತಿಯಲ್ಲಿ ತಾರತಮ್ಯ: ತಪ್ಪು ತಿದ್ದಿಕೊಳ್ಳಲು ಇನ್ನೂ ಕಾಲ ಮಿಂಚಿಲ್ಲ

**ಬೃಹತ್** ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಚುನಾವಣೆಗಾಗಿ ವಾರ್ಡ್‌ವಾರು ಮೀಸಲಾತಿಯನ್ನು ನಿಗದಿ ಮಾಡಿ ರಾಜ್ಯ ಸರ್ಕಾರ ಪ್ರಕಟಿಸಿರುವ ಕರಡು ಪಟ್ಟಿಗೆ ತೀವ್ರವಾದ ಆಕ್ಷೇಪ ವ್ಯಕ್ತವಾಗಿದೆ ಮತ್ತು ಈ ಆಕ್ಷೇಪಕ್ಕೆ ಸೂಕ್ತ ಕಾರಣವೂ ಇದೆ. ಏಕೆಂದರೆ, ಮೀಸಲಾತಿ ನಿಗದಿ ಮಾಡಿರುವ ಕ್ರಮವು ತಾರತಮ್ಯದಿಂದ ಕೂಡಿರುವುದು ಮೇಲ್ನೋಟಕ್ಕೇ ಎದ್ದು ಕಾಣುತ್ತಿದೆ. ವಿರೋಧ ಪಕ್ಷದ ಪ್ರಮುಖ ಅಭ್ಯರ್ಥಿಗಳ ಗೆಲುವಿನ ಅವಕಾಶವನ್ನು ತಪ್ಪಿಸುವಂತಿರುವ ಮತ್ತು ಮೀಸಲಾತಿ ಪಟ್ಟಿಯು ತಾರತಮ್ಯದಿಂದ ಕೂಡಿದೆ ಎಂದು ದೂರಿ ಯಾರಾದರೂ ಕೋರ್ಟ್ ಮೆಟ್ಟಿಲೇರಿದರೆ, ಅದರಿಂದ ಚುನಾವಣೆ ಮುಂದೂಡಿಕೆಗೆ ಸಹಾಯವಾಗುತ್ತದೆ ಎನ್ನುವ ತಂತ್ರ ಈ ಕ್ರಮದ ಹಿಂದಿರುವುದು ಸುಸ್ಪಷ್ಟ. ಸಂವಿಧಾನವು ಚುನಾವಣೆಯಲ್ಲಿ ಎಲ್ಲ ಸಮುದಾಯದವರಿಗೆ, ಅದರಲ್ಲೂ ವಿಶೇಷವಾಗಿ ಮಹಿಳೆಯರಿಗೆ ಸೂಕ್ತ ಪ್ರಾತಿನಿಧ್ಯವನ್ನು ಕಲ್ಪಿಸಲು ಮೀಸಲಾತಿ ಸೌಲಭ್ಯ ಒದಗಿಸಿದೆ. ಆದರೆ, ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರವು ಅದನ್ನು ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳಲು ಹವಣಿಸುತ್ತಿರುವಂತೆ ತೋರುತ್ತಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಸಂಖ್ಯೆಗೆ ಅನುಗುಣವಾಗಿ ಆಯಾ ಕ್ಷೇತ್ರಗಳ ಮೀಸಲಾತಿ ನಿಗದಿ ಮಾಡಬೇಕು ಎನ್ನುವುದು ಸಂವಿಧಾನದ ನಿಯಮ. ನಗರಾಭಿವೃದ್ಧಿ ಇಲಾಖೆಯಲ್ಲಿ ಕೆಲಸ ಮಾಡಿದ ನಿವೃತ್ತ ಅಧಿಕಾರಿಗಳ ತಂಡವೊಂದು ಹಾಲಿ ಮೀಸಲಾತಿ ಪಟ್ಟಿಯನ್ನು ಸಮಗ್ರವಾಗಿ ಪರಿಶೀಲಿಸಿದ್ದು, 187 ವಾರ್ಡ್‌ಗಳಲ್ಲಿ ನಿಗದಿ ಮಾಡಿದ ಮೀಸಲಾತಿಯು ನಿಯಮಗಳಿಗೆ ಅನುಗುಣವಾಗಿಲ್ಲ ಎಂದು ಅಭಿಪ್ರಾಯಪಟ್ಟಿದೆ. ಉದಾಹರಣೆಗೆ, ಮಹದೇವಪುರ ವಿಧಾನಸಭಾ ಕ್ಷೇತ್ರವು ಪರಿಶಿಷ್ಟ ಜಾತಿಗೆ ಮೀಸಲಾಗಿದೆ. ಆದರೆ, ಬಿಬಿಎಂಪಿಯ ಅಲ್ಲಿನ 13 ವಾರ್ಡ್‌ಗಳ ಪೈಕಿ ಒಂದನ್ನು ಮಾತ್ರ ಆ ಸಮುದಾಯಕ್ಕಾಗಿ ಮೀಸಲಿಡಲಾಗಿದೆ. ಹಾಗೆಯೇ ಕಾಂಗ್ರೆಸ್ ಪಕ್ಷದ ಶಾಸಕರು ಪ್ರತಿನಿಧಿಸುವ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯ 93 ವಾರ್ಡ್‌ಗಳ ಪೈಕಿ 76 ವಾರ್ಡ್‌ಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಕಲ್ಪಿಸಲಾಗಿದೆ. ರಾಜಕೀಯ ಲೆಕ್ಕಾಚಾರವೊಂದನ್ನು ಬಿಟ್ಟು ಈ ತೀರ್ಮಾನಗಳಲ್ಲಿ ಬೇರೆ ಯಾವ ತರ್ಕವೂ ಇಲ್ಲ ಎನ್ನುವುದರಲ್ಲಿ ಯಾವುದೇ ಅನುಮಾನ ಇಲ್ಲ.

ಬಿಬಿಎಂಪಿ ಚುನಾವಣೆಗೆ ಮೀಸಲಾತಿ ನಿಗದಿ ಪ್ರಕ್ರಿಯೆಯು ಪಕ್ಷ ರಾಜಕೀಯದ ಲಾಭ–ನಷ್ಟಗಳಿಂದ ದೂರ ಇರಬೇಕು, ಪಾರದರ್ಶಕವಾಗಿ ಆಗಬೇಕು

ಗಾಂಧಿನಗರದ ಎಲ್ಲಾ ವಾರ್ಡ್‌ಗಳನ್ನು, ಜಯನಗರ ಹಾಗೂ ಚಾಮರಾಜಪೇಟೆ ಕ್ಷೇತ್ರಗಳ ತಲಾ ಆರು ವಾರ್ಡ್‌ಗಳಲ್ಲಿ ತಲಾ ಐದು ವಾರ್ಡ್‌ಗಳನ್ನು ಮತ್ತು ಬಿಟಿಎಂ ಲೇಔಟ್‌ನ ಒಂಬತ್ತರಲ್ಲಿ ಎಂಟು ವಾರ್ಡ್‌ಗಳನ್ನು ಮಹಿಳಾ ಅಭ್ಯರ್ಥಿಗಳಿಗೆ ಮೀಸಲಿಡಲಾಗಿದೆ. ಈ ವಿಧಾನಸಭಾ ಕ್ಷೇತ್ರಗಳನ್ನು ಪ್ರತಿನಿಧಿಸುವವರು ಕಾಂಗ್ರೆಸ್ ಶಾಸಕರು. ಈ ಕ್ಷೇತ್ರಗಳಲ್ಲಿ ಗೆಲ್ಲಬಹುದಾದ ವಿರೋಧ ಪಕ್ಷದ ಪ್ರಮುಖ ಅಭ್ಯರ್ಥಿಗಳನ್ನು ಹಣಿಯಲು ಮೀಸಲಾತಿಯ ‘ಅಸ್ತ್ರ’ವನ್ನು ಈ ರೀತಿ ಪ್ರಯೋಗಿಸಲಾಗಿದೆ. ಚುನಾವಣೆಯನ್ನು ಆಡಳಿತಾರೂಢ ಬಿಜೆಪಿಯು ರಾಜಕೀಯವಾಗಿ ಎದುರಿಸಬೇಕೇ ವಿನಾ ಈ ರೀತಿ ಅನ್ಯಮಾರ್ಗ ಹಿಡಿಯುವ ಮೂಲಕವಲ್ಲ. ಯಲಹಂಕ, ಮಲ್ಲೇಶ್ವರ, ಪುಲಿಕೇಶಿನಗರ, ಪದ್ಮನಾಭನಗರ ವಿಧಾನಸಭಾ ಕ್ಷೇತ್ರಗಳ ಯಾವ ವಾರ್ಡ್‌ನಲ್ಲೂ ಜನಸಂಖ್ಯೆಗೆ ಅನುಗುಣವಾಗಿ ಮೀಸಲು ನಿಗದಿಯಾಗಿಲ್ಲ ಎಂದೂ ದೂರಲಾಗಿದೆ. ಮೀಸಲಾತಿಗೆ ಸಂಬಂಧಿಸಿದ ಎಲ್ಲ ದೂರು–ಆಕ್ಷೇಪಗಳಿಗೆ ಸೂಕ್ತ ಸ್ಪಷ್ಟನೆ ನೀಡಬೇಕಾದುದು ನಗರಾಭಿವೃದ್ಧಿ ಇಲಾಖೆಯ ಹೊಣೆ. ಈಗಲೂ ಕಾಲ ಮಿಂಚಿಲ್ಲ. ಇದು ಇನ್ನೂ ಕರಡು ಪಟ್ಟಿ. ಅನ್ಯಾಯವನ್ನು ಸರಿಪಡಿಸಿ, ತಾರತಮ್ಯ ಹೋಗಲಾಡಿಸಿ ಸಮರ್ಪಕವಾದ ಮೀಸಲಾತಿ ಪಟ್ಟಿಯನ್ನು ಸಿದ್ಧಪಡಿಸುವ ಕೆಲಸವನ್ನು ನಗರಾಭಿವೃದ್ಧಿ ಇಲಾಖೆಯು ಮುತುವರ್ಜಿಯಿಂದ ಮಾಡಬೇಕು. ಪಕ್ಷಪಾತವಿಲ್ಲದೆ ಈ ಕೆಲಸ ನಡೆಯಲು ಇರುವ ಎಲ್ಲಾ ಅಡೆತಡೆಗಳನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಿವಾರಣೆ ಮಾಡಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪ್ರತಿನಿಧಿಗಳಾಗಲೀ ಮಹಿಳಾ ಪ್ರತಿನಿಧಿಗಳಾಗಲೀ ಯಾವುದಾದರೂ ಕೆಲವೇ ಕೆಲವು ವಿಧಾನಸಭಾ ಕ್ಷೇತ್ರಗಳಿಗೆ ಸೀಮಿತಗೊಂಡು, ಮಿಕ್ಕ ಕಡೆಗಳಲ್ಲಿ ಅವರ ಪ್ರಾತಿನಿಧ್ಯವೇ ಇಲ್ಲದಂತಾಗಬಾರದು. ಜರಡಿಯಿಂದ ಬೀಳುವ ನೀರಿನಂತೆ ಎಲ್ಲ ಕಡೆಗಳಲ್ಲೂ ಈ ಸಮುದಾಯಗಳಿಗೆ ಸಮಾನ ಅವಕಾಶ ಸಿಗಬೇಕು ಎನ್ನುವುದು ಸಂವಿಧಾನದ ಆಶಯ. ಅದನ್ನು ಪರಿಪಾಲಿಸುವುದು ಸರ್ಕಾರದ ಕರ್ತವ್ಯ. ಬಿಬಿಎಂಪಿಗೆ ಚುನಾವಣೆ ನಡೆಸುವಾಗಲೆಲ್ಲ, ವಾರ್ಡ್‌ಗಳಿಗೆ ಪಾಳಿ ಪ್ರಕಾರದ ಮೀಸಲಾತಿಯನ್ನು ನಿಗದಿ ಮಾಡಬೇಕು. ಹಾಗಾದಾಗ ಆಕ್ಷೇಪಗಳಿಗೆ ಅವಕಾಶ ಇರುವುದಿಲ್ಲ. ಬಹು ಸಮಯದಿಂದ ಚುನಾಯಿತ ಕೌನ್ಸಿಲ್ ಇಲ್ಲದೆ ಕಾಲ ದೂಡುತ್ತಿರುವ ಬಿಬಿಎಂಪಿಗೆ ಚುನಾವಣೆಯನ್ನು ನಡೆಸಲು ತಾರತಮ್ಯದ ಮೀಸಲಾತಿ ಕಂಟಕವಾಗಬಾರದು. ಮೀಸಲಾತಿ ನಿಗದಿ ಪ್ರಕ್ರಿಯೆಯು ಪಕ್ಷ ರಾಜಕೀಯದ ಲಾಭ–ನಷ್ಟಗಳಿಂದ ದೂರ ಇರಬೇಕು, ಅದನ್ನು ನಗರಾಭಿವೃದ್ಧಿ ಇಲಾಖೆಯ ವಿವೇಚನೆಗೇ ಬಿಡಬೇಕು. ಈ ಹಿಂದೆ ಅಧಿಕಾರದಲ್ಲಿದ್ದಾಗ ಮೀಸಲಾತಿ ನಿಗದಿ ಮಾಡುವಲ್ಲಿ ತಾರತಮ್ಯ ಮಾಡಿದ ಆರೋಪವನ್ನು ಕಾಂಗ್ರೆಸ್ ಪಕ್ಷ ಕೂಡ ಎದುರಿಸಿದ್ದಿದೆ. ನಿಯಮದಂತೆ ನಡೆದುಕೊಳ್ಳುವುದೊಂದೇ ಎಲ್ಲರೂ ಪಾಲಿಸಬೇಕಾದ ನ್ಯಾಯದ ಹಾದಿ. ಇಲ್ಲದಿದ್ದರೆ ಇಂತಹ ತಾರತಮ್ಯದ ನಿಲುವಿಗೆ, ಅನ್ಯಾಯದ ಕ್ರಮಗಳಿಗೆ ಕೊನೆಯೆಂಬುದೇ ಇರುವುದಿಲ್ಲ. ಅಧಿಕಾರದ ಅಮಲು ಏರಿಸಿಕೊಂಡು ನ್ಯಾಯದ ಹಾದಿಯಿಂದ ದೂರ ಸರಿಯಲು ಹಂಬಲಿಸುವವರಿಗೆ ಮತದಾರರೇ ಬುದ್ಧಿ ಕಲಿಸುತ್ತಾರೆ.

### ದಿನದ ಟ್ವೀಟ್

#### ಭಾಷೆ ಮತ್ತು ಸಿನಿಮಾ

**ತಾತ ಮತ್ತು ತಮಿಳುನಾಡಿನ ಮಾಜಿ ಸಿಎಂ: ಹಿಂದಿಯು ಯಾವುದೇ ಸ್ವರೂಪದಲ್ಲಿ ತಮಿಳುನಾಡು ಪ್ರವೇಶಿಸಲು ಅವಕಾಶ ಕೊಡುವುದಿಲ್ಲ. ಮೊಮ್ಮಗ ಮತ್ತು ಹಾಲಿ ಶಾಸಕ: ನಟ ಅಮೀರ್ ಖಾನ್ ಅವರ ಹಿಂದಿ ಸಿನಿಮಾ ‘ಲಾಲ್ ಸಿಂಗ್ ಛಡ್ಡಾ’ ಅನ್ನು ತಮಿಳುನಾಡಿನಲ್ಲಿ ನಾವು ವಿತರಣೆ ಮಾಡುತ್ತಿದ್ದೇವೆ. ನೀತಿ: ರಾಜಕೀಯಕ್ಕಿಂತ ವ್ಯಾಪಾರ ದೊಡ್ಡದು.**

**ಕೆ. ಅಣ್ಣಾಮಲೈ,** ಬಿಜೆಪಿಯ ತಮಿಳುನಾಡು ರಾಜ್ಯ ಘಟಕದ ಅಧ್ಯಕ್ಷ

### ಕಿಡಿನುಡಿ

**ಬಿಹಾರದ ಆಡಳಿತಾರೂಢ ಮಿತ್ರಪಕ್ಷಗಳಾದ ಜೆಡಿಯು ಮತ್ತು ಬಿಜೆಪಿ ನಡುವೆ ಬಿಕ್ಕಟ್ಟು ಉದ್ಭವಿಸಿದೆ. ಜೆಡಿಯುನಲ್ಲಿ ‘ಶಿವಸೇನಾ ರೀತಿಯ ಸರ್ಜರಿ’ ನಡೆಯಬಹುದಾದ ಆತಂಕವನ್ನು ಎದುರಿಸುತ್ತಿರುವ ಮುಖ್ಯಮಂತ್ರಿ ನಿತೀಶ್ ಕುಮಾರ್, ಬಿಜೆಪಿ ಜೊತೆಗಿನ ಸಂಬಂಧ ಕಡಿದುಕೊಳ್ಳಬಯಸಿದ್ದಾರೆ ಎಂಬ ಗುಸುಗುಸು ಕೇಳಿ ಬರುತ್ತಿದೆ. ಶಸ್ತ್ರಚಿಕಿತ್ಸಕರು ತನಿಖಾ ಸಂಸ್ಥೆಗಳ ಬೆಂಬಲದೊಂದಿಗೆ ತಮ್ಮ ಉದ್ದನೆಯ ಚಾಕುಗಳೊಂದಿಗೆ ಸಜ್ಜಾಗುತ್ತಿದ್ದಾರೆ ಎಂದು ಯಾರಾದರೂ ಭಾವಿಸಬಹುದು!**

**ಎಂ.ಕೆ. ವೇಣು,** ಪತ್ರಕರ್ತ

### 25 ವರ್ಷಗಳ ಹಿಂದೆ

ಶನಿವಾರ, 9-8-1997

● **ಕಾರ್ನಾಡ, ಅಶ್ವತ್ಥ, ಶ್ರೀಕಂಠನ್‌ಗೆ ರಾಜ್ಯದ ಪ್ರತಿಷ್ಠಿತ ಪ್ರಶಸ್ತಿ**

**ಬೆಂಗಳೂರು, ಆ. 8**– ರಾಜ್ಯ ಸರ್ಕಾರದ, 1996–97ನೇ ಸಾಲಿನ ಪ್ರತಿಷ್ಠಿತ ಡಾ. ಗುಬ್ಬಿ ವೀರಣ್ಣ ಪ್ರಶಸ್ತಿಗೆ ಖ್ಯಾತ ನಾಟಕಕಾರ ಹಾಗೂ ಹವ್ಯಾಸಿ ರಂಗ ಕಲಾವಿದ ಡಾ. ಗಿರೀಶ ಕಾರ್ನಾಡ ಅವರನ್ನು ಮತ್ತು ಕನಕ–ಪುರಂದರ ಪ್ರಶಸ್ತಿಗೆ ಹಿರಿಯ ಕಲಾವಿದ ವಿದ್ವಾನ್ ಆರ್.ಕೆ. ಶ್ರೀಕಂಠನ್ ಅವರನ್ನು ಆಯ್ಕೆ ಮಾಡಲಾಗಿದೆ.

ಅದೇ ರೀತಿ ಇನ್ನೆರಡು ಪ್ರತಿಷ್ಠಿತ ಪ್ರಶಸ್ತಿಗಳಾದ ಸಂತ ಶಿಶುನಾಳ ಷರೀಫ ಪ್ರಶಸ್ತಿಗೆ ಸುಗಮ ಸಂಗೀತಗಾರ ಸಿ. ಅಶ್ವತ್ಥ ಅವರನ್ನು ಹಾಗೂ ಜಕಣಾಚಾರಿ ಪ್ರಶಸ್ತಿಗೆ ಶಿಲ್ಪಕಲಾ ಕ್ಷೇತ್ರದಲ್ಲಿ ಅನುಪಮ ಸೇವೆ ಸಲ್ಲಿಸಿರುವ ಸಾಂಪ್ರದಾಯಿಕ ಶಿಲ್ಪಿ ನೀಲಕಂಠಾಚಾರ್ಯ ಅವರನ್ನು ಆಯ್ಕೆ ಮಾಡಲಾಗಿದೆ.

● **ಆಲಮಟ್ಟಿ, ಕಾವೇರಿ ವಿವಾದ ಸುಪ್ರೀಂ ಕೋರ್ಟ್ ಕಳವಳ**

**ನವದೆಹಲಿ, ಆ. 8 (ಪಿಟಿಐ)**– ಆಲಮಟ್ಟಿ, ಕಾವೇರಿ ವಿವಾದಗಳಂಥ ಅಂತರರಾಜ್ಯ ಜಲವಿವಾದಗಳು ಹೆಚ್ಚುತ್ತಿರುವ ಬಗ್ಗೆ ಸುಪ್ರೀಂ ಕೋರ್ಟ್ ಇಂದು ತೀವ್ರ ಕಳವಳ ವ್ಯಕ್ತಪಡಿಸಿದೆ.

### 50 ವರ್ಷಗಳ ಹಿಂದೆ

ಬುಧವಾರ, 9-8-1972

● **ಬೆಲೆ ಏರಿಕೆ: ಸರ್ಕಾರದ ಕ್ರಮಗಳ ಬಗ್ಗೆ ವಿರೋಧ ಪಕ್ಷಗಳ ಅತೃಪ್ತಿ**

**ನವದೆಹಲಿ, ಆ. 8**– ಆಹಾರಧಾನ್ಯಗಳ ಬೆಲೆ ಪರಿಸ್ಥಿತಿ ವಿಷಯದಲ್ಲಿ ಸರ್ಕಾರ ವ್ಯವಹರಿಸುತ್ತಿರುವ ರೀತಿ ಬಗ್ಗೆ ವಿರೋಧ ಪಕ್ಷಗಳ ಸದಸ್ಯರೆಲ್ಲರೂ ಹೆಚ್ಚು ಕಡಿಮೆ ತಮ್ಮ ಅತೃಪ್ತಿ ವ್ಯಕ್ತಪಡಿಸಿದ್ದಾರೆ.

ಬಳಕೆದಾರರಿಗೆ ಪರಿಹಾರ ಒದಗಿಸಲು ಅಗತ್ಯ ವಸ್ತುಗಳ ಪಡಿತರ ವ್ಯವಸ್ಥೆಯನ್ನು ಜಾರಿಗೆ ತರುವಂತೆ ಸಿಪಿಐ ಮತ್ತು ಸೋಷಲಿಸ್ಟ್ ಪಕ್ಷದವರೂ ಸೇರಿ ಕೆಲವು ಮಂದಿ ಸದಸ್ಯರು ಸಲಹೆ ಮಾಡಿದ್ದಾರೆ.

● **ಇಂದಿರಾ ದೈವ ನಂಬಿಕೆ**

**ಮುಂಬೈ, ಆ. 8**– ಪ್ರಧಾನಿ ಇಂದಿರಾ ಗಾಂಧಿ ಅವರಿಗೆ ದೇವರಲ್ಲಿ ನಂಬಿಕೆ ಇದೆ. ಆದರೆ, ಜ್ಯೋತಿಷದಲ್ಲಿ ಇಲ್ಲ.

‘ಇಲಸ್ಟ್ರೇಟೆಡ್ ವೀಕ್ಲಿ’ ಪತ್ರಿಕೆಯ ಸ್ವಾತಂತ್ರ್ಯೋತ್ಸವ ವಿಶೇಷಾಂಕಕ್ಕೆ ಖುಷವಂತ್ ಸಿಂಗ್ ಅವರಿಗೆ ನೀಡಿದ ಸಂದರ್ಶನದಲ್ಲಿ ಪ್ರಧಾನಿಯವರು ‘ನನಗೆ ದೇವರಲ್ಲಿ ನಂಬಿಕೆ ಇದೆಯಾದರೂ, ಗಡ್ಡ ಧರಿಸಿ ಕುಳಿತ ಮನುಷ್ಯನ ರೂಪದಲ್ಲಿಲ್ಲ...’ ಎಂದರು.

‘ಜ್ಯೋತಿಷದಲ್ಲಿ ನಿಮಗೆ ನಂಬಿಕೆ ಇದೆಯೇ?’ ಎಂಬ ಪ್ರಶ್ನೆಗೆ, ‘ಇಲ್ಲ, ಎಳ್ಳಷ್ಟೂ ಇಲ್ಲ. ಜ್ಯೋತಿಷವನ್ನು ನಂಬಿ ಅದರ ಆಧಾರದ ಮೇಲೆ ಯಾರೂ ತಮ್ಮ ಕೆಲಸ ಕಾರ್ಯ ನಿರ್ವಹಿಸಬಾರದು. ಆದರೆ, ಜನತೆ ಜ್ಯೋತಿಷದಲ್ಲಿ ಆಸಕ್ತಿ ಹೊಂದಿ ಅದರ ಬೆನ್ನು ಹತ್ತಿದರೆ ನನ್ನದೇನೂ ಅಭ್ಯಂತರವಿಲ್ಲ’ ಎಂದು ಪ್ರಧಾನಿ ಖಚಿತವಾಗಿ ಹೇಳಿದರು.

ಕಠಿಣ ನಿಯಮಗಳಿಂದಾಗಿ ಕಾನೂನುಬಾಹಿರ ವ್ಯವಹಾರಗಳಿಗೆ ಕುಮ್ಮಕ್ಕು?

## ಬಾಡಿಗೆ ತಾಯ್ತನ: ಮತ್ತಷ್ಟು ಪ್ರಶ್ನೆ

ವಿಶ್ಲೇಷಣೆ

ಡಾ. ಗೀತಾ ಕೃಷ್ಣಮೂರ್ತಿ

**ಸಾರ್ವಜನಿಕರ** ಗಮನವನ್ನು ಅಷ್ಟಾಗಿ ಸೆಳೆಯದ, ಸಾರ್ವಜನಿಕ ಚರ್ಚೆಗೆ ವಸ್ತುವಾಗದ, ಆದರೆ ನೂರಾರು ಜನರ ವೈಯಕ್ತಿಕ ಬದುಕಿನ ಮೇಲೆ ಪ್ರಭಾವ ಬೀರುವ ಬಾಡಿಗೆ ತಾಯ್ತನದ (ಸರೊಗಸಿ) ವಿಷಯಕ್ಕೆ ಸಂಬಂಧಪಟ್ಟಂತೆ ಆಸಕ್ತಿಕರ ಪ್ರಕರಣವೊಂದು ದೆಹಲಿ ಹೈಕೋರ್ಟ್‌ನಲ್ಲಿ ಇತ್ತೀಚೆಗೆ ದಾಖಲಾಗಿದೆ. ಅದಕ್ಕೆ ಕಾರಣ, ಬಾಡಿಗೆ ತಾಯ್ತನದ ಕಾನೂನಿಗೆ ಈಚೆಗೆ ಮಾಡಿರುವ ತಿದ್ದುಪಡಿ.

ಬಾಡಿಗೆ ತಾಯ್ತನ ಎಂದರೆ ಮಹಿಳೆ ತನ್ನದಲ್ಲದ ಭ್ರೂಣವನ್ನು ತನ್ನ ಗರ್ಭದಲ್ಲಿ ಪೂರ್ಣಾವಧಿಗೆ ಇಟ್ಟುಕೊಂಡು, ಪೊರೆದು ಮಗುವನ್ನು ಹೆತ್ತು ಕೊಡುವುದು, ಎಂದರೆ, ತನ್ನ ಗರ್ಭವನ್ನು ಇತರರಿಗೆ ಬಾಡಿಗೆಗೆ ಕೊಡುವುದು. ಈ ಕೆಲಸಕ್ಕಾಗಿ ಮಹಿಳೆ ಹಣ ಪಡೆಯುವುದರಿಂದ ಇದು ‘ಬಾಡಿಗೆ ತಾಯ್ತನ’. ಒಂದಲ್ಲ ಒಂದು ಕಾರಣಕ್ಕಾಗಿ ಮಗುವನ್ನು ಪಡೆಯಲು ಅಶಕ್ತರಾದ ದಂಪತಿ, ತಮ್ಮದೇ ಮಗುವನ್ನು ಪಡೆಯಲು ಈ ಬಾಡಿಗೆ ತಾಯ್ತನದ ಆಯ್ಕೆಯು ಪರ್ಯಾಯ ಮಾರ್ಗ.

ಭಾರತದಲ್ಲಿ ಬಾಡಿಗೆ ಗರ್ಭಗಳು ಕಡಿಮೆ ಬೆಲೆಗೆ ದೊರೆಯುತ್ತವೆ ಎಂಬ ಕಾರಣಕ್ಕೆ, ಮಗುವನ್ನು ಪಡೆಯಲು ಇಚ್ಛಿಸುವ ವಿದೇಶಿಯರಿಗೆ ಭಾರತವು ಆಪ್ತವಾದ ಆಯ್ಕೆಯ ತಾಣವಾಯಿತು. ಪರಿಣಾಮವಾಗಿ, ಇದು ಒಂದು ವ್ಯಾಪಾರವಾಯಿತು. ಈ ವ್ಯಾಪಾರಕ್ಕೆ ದಲ್ಲಾಳಿಗಳ ಪ್ರವೇಶವಾಗಿ, ದಂಧೆಯಾಗಿ ಬೆಳೆಯಲು ಹೆಚ್ಚು ಕಾಲ ಬೇಕಾಗಲಿಲ್ಲ. ಇಲ್ಲಿ ಶೋಷಣೆಗೆ ಒಳಗಾಗಿದ್ದು ಮತ್ತೆ ಮಹಿಳೆಯರೇ!

ಇಂಥ ಶೋಷಣೆಯನ್ನು ತಪ್ಪಿಸಲು, ಬಾಡಿಗೆ ತಾಯ್ತನಕ್ಕೆ ಸಂಬಂಧಿಸಿದಂತೆ, ಬಾಡಿಗೆ ತಾಯ್ತನ (ನಿಯಂತ್ರಣ) ಕಾಯ್ದೆಯನ್ನು 2019ರಲ್ಲಿ ಜಾರಿಗೆ ತರಲಾಯಿತು. ಇದರ ಉದ್ದೇಶವು ಬಾಡಿಗೆ ತಾಯಂದಿರ ಮೇಲಿನ ಶೋಷಣೆಯನ್ನು ತಪ್ಪಿಸುವುದು ಮತ್ತು ವಾಣಿಜ್ಯೋದ್ಯಮವಾಗಿ ಬೆಳೆದ ಬಾಡಿಗೆ ತಾಯ್ತನದ ಅನೈತಿಕ ಬಳಕೆಯನ್ನು ತಪ್ಪಿಸುವುದು. ಈ ಕಾನೂನಿಗೆ ಈಚೆಗೆ, 2021ರ ಡಿಸೆಂಬರ್‌ನಲ್ಲಿ ತಿದ್ದುಪಡಿ ಮಾಡಲಾಯಿತು. ಅದರಲ್ಲಿ, ವಾಣಿಜ್ಯ ಉದ್ದೇಶದ ಬಾಡಿಗೆ ತಾಯ್ತನವನ್ನು ನಿಷೇಧಿಸಲಾಯಿತು ಮತ್ತು ಅವಿವಾಹಿತ ಪುರುಷರು ಬಾಡಿಗೆ ತಾಯ್ತನದ ಮೂಲಕ ಮಗುವನ್ನು ಪಡೆಯುವುದನ್ನು ನಿಷೇಧಿಸಲಾಯಿತು. ಬಾಡಿಗೆ ತಾಯ್ತನ (ನಿಯಂತ್ರಣ) ಅಧಿನಿಯಮದ ಪ್ರಕಾರ, ವಿವಾಹಿತ ದಂಪತಿ ತಮ್ಮದೇ ಆದ ಮಗುವನ್ನು ಹೊಂದಿರದಿದ್ದರೆ, ವೈದ್ಯಕೀಯ ಕಾರಣಗಳಿಗಾಗಿ ಮಾತ್ರ ಬಾಡಿಗೆ ತಾಯ್ತನದ ಮೂಲಕ ಮಗುವನ್ನು ಪಡೆಯಲು ಅವಕಾಶವಿದೆ. ಒಬ್ಬಂಟಿ ಮಹಿಳೆ ಬಾಡಿಗೆ ತಾಯ್ತನದ ಮೂಲಕ ಮಗುವನ್ನು ಪಡೆಯಬೇಕಾದರೆ, ಆಕೆಯು ವಿಧವೆ ಅಥವಾ ವಿಚ್ಛೇದಿತೆಯಾಗಿರಬೇಕು, 35ರಿಂದ 45 ವರ್ಷದೊಳಗಿನ ವಯೋಮಾನದವಳಾಗಿರಬೇಕು. ಒಬ್ಬಂಟಿ ಪುರುಷ, ಸಲಿಂಗ ದಂಪತಿ ಮತ್ತು ಸಹಜೀವನ ನಡೆಸುತ್ತಿರುವ ಜೋಡಿಗಳು ಬಾಡಿಗೆ ತಾಯ್ತನದ ಮೂಲಕ ಮಗುವನ್ನು ಪಡೆಯಲು ಅನರ್ಹರಾಗುತ್ತವೆ. ಈ ತಿದ್ದುಪಡಿಯಿಂದಾಗಿ, ಬಾಡಿಗೆ ಗರ್ಭದ ಮೂಲಕ ಮಗುವನ್ನು ಪಡೆಯಲು ಇಚ್ಛಿಸುವ ಅನೇಕ ವರ್ಗದ ಜನರಿಗೆ ಅದು ಸಾಧ್ಯವಾಗುತ್ತಿಲ್ಲ.

ತನ್ನದೇ ಮಗು ಪಡೆಯಬೇಕೆಂದು ಹಂಬಲಿಸಿದ, ದೆಹಲಿ ನ್ಯಾಯಾಲಯದಲ್ಲಿ ವಕೀಲರಾಗಿರುವ ಕರಣ್ ಬಾಲ್‌ರಾಜ್ ಮೆಹತಾ ಅವರು ಕಾನೂನಿನ ನಿರ್ಬಂಧಕ್ಕೆ ಒಳಪಟ್ಟ ಇಂಥ ಒಂದು ವರ್ಗಕ್ಕೆ ಸೇರಿದವರು, ಒಬ್ಬಂಟಿ ಪುರುಷ. ಕಾನೂನಿನ ಈ ತಿದ್ದುಪಡಿ ಅವರ ಆಸೆಗೆ ತಣ್ಣೀರೆರಚಿದೆ. ‘ಮಗುವನ್ನು ಪಡೆಯುವ ಬಯಕೆಯು ಹೆಂಗಸರಿಗೆ ಮಾತ್ರ ಸೀಮಿತ ಎಂದು ಜಗತ್ತು ತಿಳಿದಂತಿದೆ. ಆದರೆ ತನ್ನದೇ ಮಗುವನ್ನು ಪಡೆಯಬೇಕೆಂಬ ಬಯಕೆಗೆ ಸ್ತ್ರೀ, ಪುರುಷರೆಂಬ ವ್ಯತ್ಯಾಸವಿಲ್ಲ’ ಎನ್ನುತ್ತಾರೆ ಇವರು. ಈ ರೀತಿ ಅನರ್ಹಗೊಳಿಸಿರುವುದು ನ್ಯಾಯಸಮ್ಮತ ಅಲ್ಲ ಎನ್ನುವ ಮೆಹತಾ, ಕಾನೂನಿನಲ್ಲಿ ಮಾಡಿರುವ ಈ ತಾರತಮ್ಯವನ್ನು ಪ್ರಶ್ನಿಸಿ ದೆಹಲಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಹಾಗೆಯೇ, ಇವರ ಜೊತೆಯಲ್ಲಿ ಎರಡನೇ ಅರ್ಜಿದಾರರಾಗಿ ಪೂಜಾ (ಹೆಸರನ್ನು ಬದಲಿಸಲಾಗಿದೆ) ಎಂಬ ಮಹಿಳೆಯೂ ನ್ಯಾಯಾಲಯದ ಮೆಟ್ಟಿಲೇರಿದ್ದಾರೆ. ಈಕೆ ಎರಡನೇ ಮಗುವಿಗೆ ಗರ್ಭ ಧರಿಸಿದಾಗ ಗರ್ಭಪಾತವಾಗಿದ್ದು, ಬಹಳಷ್ಟು ತೊಂದರೆಗಳಿಗೆ ಒಳಗಾಗಿದ್ದರು. ಹಾಗಾಗಿ ಮತ್ತೆ ಗರ್ಭ ಧರಿಸುವುದೆಂದರೆ, ಆಕೆಗೆ ಭಯಮಿಶ್ರಿತ ಹಿಂಜರಿಕೆ. ಆದರೆ, ಇರುವ ಒಬ್ಬ ಮಗಳು ಒಬ್ಬಂಟಿಯಾಗಬಾರದು ಎಂಬ ಕಾರಣಕ್ಕೆ ಮತ್ತೊಂದು ಮಗುವನ್ನು ಬಾಡಿಗೆ ತಾಯ್ತನದ ಮೂಲಕ ಪಡೆಯಬೇಕು ಎಂಬುದು ಅವರ ಆಸೆಯಾಗಿತ್ತು. ಆದರೆ ಅವರ ಆಸೆಗೆ ‘ದಂಪತಿಗೆ ಒಂದು ಮಗುವಿದ್ದರೆ, ಬಾಡಿಗೆ ಗರ್ಭದ ಮೂಲಕ ಇನ್ನೊಂದು ಮಗುವನ್ನು ಪಡೆಯಲು ಅನರ್ಹರಾಗುತ್ತಾರೆ’ ಎಂದು ಈ ಕಾನೂನಿಗೆ ಮಾಡಿರುವ ಈಚಿನ ತಿದ್ದುಪಡಿ ಅಡ್ಡಿಬಂದಿದೆ. ‘ಮಗು ಬೇಕೇ ಬೇಡವೇ ಎಂಬುದು ಮತ್ತು ಮಗುವನ್ನು ಯಾವಾಗ ಪಡೆಯಬೇಕು ಮತ್ತು ಹೇಗೆ ಪಡೆಯಬೇಕು ಎಂಬುದು ಮಹಿಳೆಯ ಆಯ್ಕೆಯಾಗಿರಬೇಕು. ಅನೇಕರಿಗೆ ತಂದೆಯಾಗುವ ಅಥವಾ ತಾಯಿಯಾಗುವ ಆಸೆ ಇರುತ್ತದೆ. ಆದರೆ, ಸಹಜ ರೀತಿಯಲ್ಲಿ ಮಗುವನ್ನು ಪಡೆಯಲು ಸಾಧ್ಯವಿರುವುದಿಲ್ಲ’ ಎಂಬುದು ಇವರ ಅಭಿಪ್ರಾಯ.

ಬಾಡಿಗೆ ತಾಯ್ತನವು ಕಾನೂನಿನ ಅಂಕೆಗೆ ಒಳಪಡುವ ಮುನ್ನ, ಬಡ ಮಹಿಳೆಯರಿಗೆ ಹಣದ ಆಮಿಷ ತೋರಿಸಿ ಬಾಡಿಗೆ ತಾಯ್ತನಕ್ಕಾಗಿ ಬಳಸಿಕೊಂಡು, ಕರಾರಿನಂತೆ ಕೊಡಬೇಕಾದ ಹಣವನ್ನೂ ಕೊಡದೆ ಅವರನ್ನು ಶೋಷಿಸಲಾಗುತ್ತಿತ್ತು. ಅದನ್ನು ತಪ್ಪಿಸುವುದಕ್ಕಾಗಿ, ಈ ತಿದ್ದುಪಡಿಯ ಮೂಲಕ, ಹಣ ಗಳಿಕೆಯ ಉದ್ದೇಶದಿಂದ ನಡೆಯುವ ಬಾಡಿಗೆ ತಾಯ್ತನವನ್ನು ಸಂಪೂರ್ಣವಾಗಿ ನಿಷೇಧಿಸಲಾಯಿತು. ಈ ‘ಪರೋಪಕಾರಿ ಬಾಡಿಗೆ ತಾಯ್ತನ’ದಲ್ಲಿ (ಆಲ್‌ಟ್ರೂಯಿಸ್ಟಿಕ್ ಸರೊಗಸಿ), ಬಾಡಿಗೆ ತಾಯಿಯ ವೈದ್ಯಕೀಯ ಖರ್ಚು ಮತ್ತು ಆರೋಗ್ಯ ವಿಮಾ ಕಂತುಗಳನ್ನಷ್ಟೇ ಮಗುವನ್ನು ಪಡೆಯಲು ಇಚ್ಛಿಸುವವರು ಭರಿಸಬೇಕಾಗುತ್ತದೆ.

ಈ ಕಾನೂನಿನಲ್ಲಿ ಸೇರ್ಪಡೆಯಾಗಿರುವ ಈ ಉಪಬಂಧಗಳು, ವ್ಯಕ್ತಿಯ ಮೂಲಭೂತ ಹಕ್ಕನ್ನು ಕಸಿದುಕೊಳ್ಳುತ್ತವೆ ಎಂಬುದೂ ಈ ತಿದ್ದುಪಡಿಗಳ ವಿರುದ್ಧ ವ್ಯಕ್ತವಾಗಿರುವ ಆಕ್ರೋಶಕ್ಕೆ ಕಾರಣವಾಗಿದೆ. ಆದರೂ, ಈ ಪ್ರಕರಣ ಸದ್ದು ಮಾಡದಿರುವುದಕ್ಕೆ ಕಾರಣ, ಇದು ಮಹಿಳೆಯರಿಗೆ ಸಂಬಂಧಿಸಿದುದು ಎಂಬುದೇ!

ಮಹಿಳೆಯರು ಮಾತ್ರ ಗರ್ಭ ಧರಿಸಬಲ್ಲರು. ಇದು ಪ್ರಕೃತಿಯ ನಿಯಮ. ಈ ಕಾರಣಕ್ಕೆ, ತಾಯ್ತನ, ಬಂಜೆತನ, ಬಸಿರು, ಬಾಣಂತನ ಇವೆಲ್ಲ ಮಹಿಳೆಯರಿಗಷ್ಟೇ ಸಂಬಂಧಿಸಿದವು ಎಂಬಂತೆ, ಆ ಬಗೆಗಿನ ಚರ್ಚೆಗಳಲ್ಲಿ ಪುರುಷ ವರ್ಗ ಒಂದು ರೀತಿಯ ನಿರಾಸಕ್ತಿ ತೋರುವುದೋ ಇಲ್ಲ ನಿರುಮ್ಮಳವಾಗಿರುವುದೋ ಹೊಸದಲ್ಲ. ಇದರರ್ಥ, ಜಗತ್ತಿನ ಜನಸಂಖ್ಯೆಯ ಸರಿಸುಮಾರು ಅರ್ಧದಷ್ಟಿರುವ ಮಹಿಳೆಯರಿಗೆ ಸಂಬಂಧಿಸಿದ ಯಾವುದೇ ವಿಷಯ ತಮ್ಮ ಹಾಗೂ ತಮ್ಮ ಕುಟುಂಬದ ಮೇಲೆ ನೇರ ಪರಿಣಾಮ ಬೀರುತ್ತದೆ ಎಂಬುದರ ಅರಿವು ಅವರಿಗೆ ಇಲ್ಲವೆಂದಲ್ಲ. ಆದರೂ ಒಂದು ಬಗೆಯ ನಿರ್ಲಕ್ಷ್ಯ.

ಲಂಡನ್ನಿನ ಕಿಂಗ್ಸ್ ಕಾಲೇಜಿನ ಕಾನೂನು ಮತ್ತು ನ್ಯಾಯ ವಿಭಾಗದಲ್ಲಿ ಪ್ರಾಧ್ಯಾಪಕರಾಗಿರುವ ಡಾ. ಪ್ರತಿಭಾ ಕೋಟೀಶ್ವರನ್, ಭಾರತದ ಬಾಡಿಗೆ ತಾಯ್ತನದ ಕಾನೂನನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡಿದ್ದಾರೆ. ಅವರ ಪ್ರಕಾರ, ಈ ಕಾನೂನು ಅನೇಕ ತಾರತಮ್ಯಗಳಿಂದ ಕೂಡಿದೆ, ಮಗುವನ್ನು ಪಡೆಯುವ ಹಂಬಲವುಳ್ಳ ಅನೇಕ ವರ್ಗದ ಜನರನ್ನು ಇದು ನಿರ್ಬಂಧಿಸಿದೆ, ಬಾಡಿಗೆ ತಾಯಂದಿರ ಸೇವೆಯ ಬೆಲೆಯನ್ನು ಕಡೆಗಣಿಸಿದೆ ಮತ್ತು ಈ ಕಾನೂನಿನ ಉಲ್ಲಂಘನೆಯನ್ನು ಅಪರಾಧವನ್ನಾಗಿಸಿದೆ. ಇದರಿಂದ, ನ್ಯಾಯಬದ್ಧವಾಗಿ ನಡೆಯುತ್ತಿದ್ದ ಬಾಡಿಗೆ ತಾಯ್ತನದ ವ್ಯವಹಾರವು ಕದ್ದುಮುಚ್ಚಿ ನಡೆಯುತ್ತದಾದ್ದರಿಂದ, ಕಾನೂನುಬಾಹಿರ ವ್ಯವಹಾರಗಳಿಗೆ ಉತ್ತೇಜನ ದೊರೆಯುತ್ತದೆ.

ಈ ಕಾನೂನಿನ ಉಪಬಂಧಗಳು, ಭಾರತದ ಸಂವಿಧಾನದ 14ನೇ ವಿಧಿ ಅಡಿಯಲ್ಲಿ ಪ್ರದತ್ತವಾದ ಸಮಾನತೆಯ ಹಕ್ಕನ್ನು ಮತ್ತು 21ನೇ ವಿಧಿ ಅಡಿಯಲ್ಲಿ ಪ್ರದತ್ತವಾದ ಖಾಸಗಿತನದ ಹಕ್ಕನ್ನು ಉಲ್ಲಂಘಿಸುತ್ತವೆ. ಭಿನ್ನ ಲಿಂಗ ದಂಪತಿಗಳು ಬಾಡಿಗೆ ತಾಯ್ತನದ ಮೂಲಕ ಮಗುವನ್ನು ಪಡೆಯಲು ಅರ್ಹರು ಎನ್ನುವುದಾದರೆ, ಅವಿವಾಹಿತ ಪುರುಷರು, ಸಹಜೀವನ ನಡೆಸುವ ದಂಪತಿಗಳು, ಸಲಿಂಗಿ ದಂಪತಿಗಳು ಏಕೆ ಅನರ್ಹರು ಎಂಬುದು ಇವರ ಪ್ರಶ್ನೆ.

ವಿವಾಹವಾಗದೇ ಉಳಿಯುವವರ ಸಂಖ್ಯೆ ಮತ್ತು ವಿವಾಹದ ನಂತರವೂ ಗರ್ಭಧಾರಣೆಯ ಕಷ್ಟದ ಅವಧಿಯನ್ನು ಅನುಭವಿಸಲು ತಯಾರಿಲ್ಲದ ಮಹಿಳೆಯರ ಸಂಖ್ಯೆ ಹೆಚ್ಚುತ್ತಿರುವ ಈ ಕಾಲದಲ್ಲಿ ಈ ಪ್ರಶ್ನೆಗಳು ಹೆಚ್ಚು ಪ್ರಸ್ತುತ.

### ಚುರುಮುರಿ

## ಸಾಲಭೈರವರು

● ಲಿಂಗರಾಜು ಡಿ.ಎಸ್.

**‘ಬೆಂಗಳೂರೇಲಿ** ಮಳೆ ಬಂದ್ರೆ ಕಾರು ಉಪಯೋಗಕ್ಕಿಲ್ಲ ಸಾ! ಅದುಕ್ಕೇ ನಾನು ಟ್ರಾಕ್ಟರ್ ತಗಬೇಕು ಅಂತಿದ್ದೀನಿ. ನೀವೇ ಜಾಮೀನಾಗಿ ನಿಮ್ಮ ಬ್ಯಾಂಕೇಲಿ ಸಾಲ ಕೊಡ್ಸಿ’ ಅಂತ ತುರೇಮಣೆಗೆ ಕೇಳಿದೆ.

‘ನಿನಗೆ ಜಾಮೀನಾಗಿ ನನ್ನ ಆಸ್ತಿ ಹರಾಜಿಗೆ ಬಂದ್ರೆ ಬೀಜೆಪಿ ಥರಾ ನಿದ್ದೆಗೆಡಿಸಿಕೋ ಅಂದೀಯಾ!’ ತುರೇಮಣೆ ಸಿದ್ದರಾಮೋತ್ಸವದ ನಗು ನಕ್ಕರು.

‘ಐದು ವರ್ಸದೇಲಿ ಬ್ಯಾಂಕುಗಳು ಸಾವ್ಕಾರ್ರು ತಗಂಡಿದ್ದ 9.91 ಲಕ್ಷ ಕೋಟಿಯಷ್ಟು ಸಾಲದ ವಸೂಲಾತಿಯನ್ನ ಬಹುತೇಕ ಕೈಬಿಟ್ಟವಂತೆ! ಇವುಕ್ಕೆಲ್ಲಾ ಜಾಮೀನುದಾರರು ಇರನಿಲ್ವೇನೋ?’ ಅಂತು ಯಂಟಪ್ಪಣ್ಣ.

‘ರೈತರು ಐದು ಲಕ್ಸದ ಸಣ್ಣ ಸಾಲ ಕೇಳಿದ್ರೆ ‘ನಿನಗೆ ತೀರಿಸೋ ಯೇಗ್ತೆ ಇಲ್ಲ’ ಅಂತ ನಮ್ಮಪ್ಪನಾಣೆ ಕೊಡಲ್ಲ. ‘ನಮ್ಮೂರ ಗದ್ದೆ ಬೈಲಲ್ಲಿ ವಜ್ರದ ಫ್ಯಾಕ್ಟರಿ ಮಾಡ್ತೀನಿ, ಸಾವಿರಾರು ಜನಕ್ಕೆ ಕೆಲಸ ಸಿಕ್ತದೆ, ಎರಡು ಸಾವಿರ ಕೋಟಿ ರೂಪಾಯಿ ಸಾಲ ಕೊಡ್ರಿ’ ಅಂತ ಪುಂಗಿದ್ರೆ ಜಾಮೀನೇ ಇಲ್ದೆ ಸಾಲ ಸಿಕ್ತದೆ’ ಅಂದ್ರು.

‘ದೊಡ್ಡ ಮನುಸ್ರು ಸಾಲ ತೀರಿಸಕಾಗದಿದ್ರೆ ಸರ್ಕಾರ ಕನಿಕರ ತೋರಿಸಿ ನಮ್ಮ ದುಡ್ಡು ಬ್ಯಾಂಕಿಗೆ ಕೊಟ್ಟು ಸಾಲ ತೀರಿಸ್ತದಂತೆ!’ ಅಂತ ಚಂದ್ರು ಸರ್ಕಾರದ ದುಃಖಪ್ರಾರಬ್ಧ ವಿವರಿಸಿದ.

‘ಸರ್ಕಾರಗಳೂ ಪೈಪೋಟಿ ಮ್ಯಾಲೆ ಸಾಲ ಎತ್ತತವೆ. ಇಂಥಾ ಸಾಲಗಾರಿಕೆಯಿಂದ ನಮ್ಮ ಮ್ಯಾಲೆ ಲಕ್ಷಗಟ್ಟಲೇ ಸಾಲ ಅದುಗಿಕಂಡದೆ. ಸಾಲಕ್ಕೆ ಯಾರ್ಯಾರೋ ನಾಮ ಇಕ್ಕಿ ದೇಸ ಬುಟ್ಟು ಓಡೋದ್ರೆ ದೇಸದ ಜನದ ಮ್ಯಾಲೆ ತಲಾ 7,280 ರುಪಾಯಿ ಹೊಸ ಸಾಲ ಬಂದು ಅಮರಿಕ್ಯತಲ್ಲೋ’ ಅಂತು ಯಂಟಪ್ಪಣ್ಣ.

ರೈತರು ಸಾಲ ತೀರಿಸಲಾರದೆ ಪರಿತಪಿಸ್ತಿರುವಾಗ ಜಿಲ್ಲೆ, ತಾಲ್ಲೂಕಲ್ಲಿ ಕೋಲ್ಡ್ ಸ್ಟೋರೇಜ್ ಮಾಡಿ ಗೊಬ್ಬರ, ಒಳ್ಳೇ ಬಿತ್ತನೆ ಬೀಜ ಕೊಟ್ಟು ಅನುಕೂಲ ಮಾಡೋ ಬದಲು ಯಾರ್ಯಾರದ್ದೋ ಸಾಲ ತೀರಿಸೋ ಸರ್ಕಾರದ ಕಾರುಬಾರು ನೋಡಿ ಕಣ್ಣಿಂದ ಸಾಲಭಾಷ್ಪಗಳು ಉದುರಿದವು.

### ಸಂಗತ

## ‘ಧೂಮಲೀಲೆ’ ತಡೆಗೆ ಹೊಸ ತಂತ್ರ

ಮಾದಕ ದ್ರವ್ಯಗಳ ನಿಯಂತ್ರಣಕ್ಕೆ ಆಡಳಿತ ವ್ಯವಸ್ಥೆ ಕೈಗೊಳ್ಳುವ ಕ್ರಮಗಳು ಗಮನಾರ್ಹ ಪರಿಣಾಮ ಬೀರುತ್ತವೆ ಎಂಬುದು ಅಧ್ಯಯನಗಳಿಂದ ಕಂಡುಬಂದಿದೆ

● ಡಾ. ಕೆ.ಎಸ್.ಪವಿತ್ರ

**ನ್ಯೂಜಿಲೆಂಡ್‌ನಲ್ಲಿ** ಭವಿಷ್ಯದ ಪೀಳಿಗೆಯನ್ನು ಧೂಮಮುಕ್ತವಾಗಿಸುವ ಹೊಸ ತಂತ್ರಕ್ಕೆ ಮುಂದಡಿ ಇಡಲಾಗಿದೆ. 18 ವರ್ಷದ ಗಡಿ ತಲುಪಿದರೂ 2008ರ ನಂತರ ಹುಟ್ಟಿದವರ್‍ಯಾರೂ ಸಿಗರೇಟು ಖರೀದಿಸುವ ಹಾಗಿಲ್ಲ. ಜಗತ್ತಿನಲ್ಲಿಯೇ ‘ಪ್ರಥಮ’ ಎನ್ನಬಹುದಾದ ಈ ಹೊಸ ತಂತ್ರವನ್ನು ಮಿಶ್ರಭಾವದಿಂದ ಜನ ಸ್ವೀಕರಿಸಿದ್ದಾರೆ. ತಂತ್ರದ ಹೊಸತನದ ಬಗ್ಗೆ ಒಂದೆಡೆ ಮೆಚ್ಚುಗೆ, ಇನ್ನೊಂದೆಡೆ, ಯಾವ ವಿಧದಲ್ಲೂ ಪರೀಕ್ಷೆಗೆ ಒಳಗಾಗದ ಈ ಪ್ರಯೋಗಾತ್ಮಕ ತಂತ್ರದ ಬಗ್ಗೆ ಜನರಲ್ಲಿ ಅನುಮಾನ ಮೂಡಿದೆ.

ಧೂಮಪಾನ ಮಾಡಬಹುದಾದ ವಯಸ್ಸನ್ನು ಏರಿಸುವುದಷ್ಟೇ ಅಲ್ಲ, ಇನ್ನೂ ಕೆಲವು ಕ್ರಮಗಳನ್ನು ನ್ಯೂಜಿಲೆಂಡ್‌ನ ಆಡಳಿತ ವ್ಯವಸ್ಥೆ ಜಾರಿಗೆ ತರಲಿದೆ. ಸಿಗರೇಟುಗಳಲ್ಲಿರುವ ನಿಕೋಟಿನ್ ಪ್ರಮಾಣವನ್ನು ಗಣನೀಯವಾಗಿ ಇಳಿಸಲಾಗುತ್ತಿದೆ. ಈವರೆಗೆ ಸೂಪರ್ ಮಾರ್ಕೆಟ್‌ಗಳು- ಮೂಲೆ ಅಂಗಡಿಗಳಲ್ಲಿ ವ್ಯಾಪಕವಾಗಿ ದೊರಕುತ್ತಿದ್ದ ಸಿಗರೇಟು, ಇನ್ನು ಮುಂದೆ ‘ಸ್ಪೆಷಾಲಿಟಿ ಟೊಬ್ಯಾಕೊ ಸ್ಟೋರ್’ಗಳಲ್ಲಿ ಮಾತ್ರ ದೊರಕಲಿದೆ. ಈ ಎಲ್ಲ ಉಪಕ್ರಮಗಳಿಂದಾಗಿ, 2025ರ ಹೊತ್ತಿಗೆ ನ್ಯೂಜಿಲೆಂಡ್‌ನ ಶೇಕಡ 5ರಷ್ಟು ಜನ ಮಾತ್ರ ಧೂಮಪಾನಿಗಳಾಗಿರುತ್ತಾರೆ ಎಂಬ ನಿರೀಕ್ಷೆ ಇದೆ.

ಮಾದಕದ್ರವ್ಯ ವ್ಯಸನಕ್ಕೆ ಸಂಬಂಧಿಸಿದಂತೆ ವಿಶ್ವ ಆರೋಗ್ಯ ಸಂಸ್ಥೆಯು ಸಾಮಾಜಿಕ-ಕಾನೂನು ಕ್ರಮಗಳನ್ನು ಚಿಕಿತ್ಸೆಯ ಜೊತೆಗೇ ಕೈಗೊಳ್ಳಬೇಕೆಂದು ಸೂಚಿಸುತ್ತದೆ. ಅಪಾಯವನ್ನು ಕಡಿಮೆ ಮಾಡುವ ತಂತ್ರಗಳ ಬಗ್ಗೆ ನಮ್ಮ ಗಮನ ಸೆಳೆಯುತ್ತದೆ. ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧ, 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಧೂಮಪಾನ ನಿರ್ಬಂಧ, ಶಾಲಾ ತಾಣಗಳ ಸುತ್ತಮುತ್ತ ತಂಬಾಕು ಉತ್ಪನ್ನಗಳ ಮಾರಾಟಕ್ಕೆ ನಿರ್ಬಂಧ, ಆರೋಗ್ಯಕ್ಕೆ ತಂಬಾಕು ತಂದೊಡ್ಡುವ ಅಪಾಯದ ಕುರಿತು ಅದರ ಉತ್ಪನ್ನದ ಪ್ಯಾಕೆಟ್‌ಗಳ ಮೇಲೆ ಎಚ್ಚರಿಕೆ, ಜಾಹೀರಾತು ನಿಷೇಧ ಇವೆಲ್ಲ ನಾವು ನಮ್ಮ ಭಾರತೀಯ ಕಾನೂನಿನಲ್ಲಿ ನೋಡಿರುವಂತಹವೇ. ಇವೆಲ್ಲದರ ನಡುವೆಯೂ ಶೇಕಡ 29ರಷ್ಟು ಭಾರತೀಯರು, ಅಂದರೆ 26.7 ಕೋಟಿ ಜನ ತಂಬಾಕು ಉತ್ಪನ್ನಗಳನ್ನು ಉಪಯೋಗಿಸುವವರೇ. ಭಾರತವು ಜಗತ್ತಿನ ಎರಡನೇ ಅತಿ ಹೆಚ್ಚು ಉತ್ಪಾದಕ ಮತ್ತು ಬಳಕೆದಾರ ರಾಷ್ಟ್ರ. 2017-18ರ ಅಂಕಿ-ಅಂಶಗಳ ಪ್ರಕಾರ, ತಂಬಾಕು ತಂದೊಡ್ಡುವ ವಿವಿಧ ಕಾಯಿಲೆಗಳಿಂದ ಉಂಟಾಗಿರುವ ಆರ್ಥಿಕ ಹೊರೆ ₹ 1.77 ಲಕ್ಷ ಕೋಟಿ.

ಆದರೂ ಆಡಳಿತ ವ್ಯವಸ್ಥೆಯು ಮಾದಕ ದ್ರವ್ಯಗಳ ನಿಯಂತ್ರಣಕ್ಕೆ ಕೈಗೊಳ್ಳುವ ಕ್ರಮಗಳು ಗಮನಾರ್ಹ ಪರಿಣಾಮ ಬೀರುತ್ತವೆ ಎಂಬುದು ಅಧ್ಯಯನಗಳಿಂದ ಕಂಡುಬಂದಿದೆ. ಸರ್ಕಾರದ ಕ್ರಮಗಳು ‘ಅರೆ ಮನಸ್ಸಿನಿಂದ’, ‘ಗಂಭೀರವಲ್ಲದ’, ‘ಕಾಗದದ ಮೇಲಷ್ಟೇ ನಿಲ್ಲುವ ಕ್ರಮಗಳು’ ಎಂದು ಜನರು ಮಾತನಾಡಬಹುದು. ಆದರೆ ಧೂಮಪಾನದ ಬಗೆಗಿನ ಸಮಾಜದ ಧೋರಣೆಯಲ್ಲಿ ಈ ಕ್ರಮಗಳು ಹಂತ ಹಂತವಾಗಿ ಸುಧಾರಣೆ ತರುತ್ತಿರುವುದನ್ನು ಗ್ಲೋಬಲ್ ಯೂತ್ ಟೊಬ್ಯಾಕೊ ಸರ್ವೆ– ಜಿವೈಟಿಎಸ್ ಗುರುತಿಸಿದೆ. 2003, 2006, 2009 ಮತ್ತು 2019ರ ಅಂಕಿ-ಅಂಶಗಳಲ್ಲಿ ಇದು ಸುಸ್ಪಷ್ಟ.

ತಂಬಾಕು ಉಪಯೋಗಿಸುವವರ ಸಂಖ್ಯೆಯಲ್ಲಿ ಇಳಿಕೆ, ಮನೆಯಲ್ಲಿ ತಂಬಾಕಿನ ಹೊಗೆಯಲ್ಲಿ ಇಳಿಕೆ, ವಯಸ್ಸಿನ ಕಾರಣ ಸಿಗರೇಟು ಮಾರುವುದಕ್ಕೆ ನಿರಾಕರಿಸುವ ಧೋರಣೆಯಲ್ಲಿ ಹೆಚ್ಚಳ ಕಂಡುಬಂದಿರುವುದು ಉಲ್ಲೇಖಾರ್ಹ. ಸಮೂಹ ಮಾಧ್ಯಮಗಳಲ್ಲಿ ತಂಬಾಕಿನ ವಿರುದ್ಧದ ಸಂದೇಶಗಳನ್ನು ಶೇಕಡ 52ರಷ್ಟು ವಿದ್ಯಾರ್ಥಿಗಳು ಗಮನಿಸಿದ್ದರು ಎನ್ನುವುದೂ ಮುಖ್ಯವೇ.

ನಿಯಮಗಳ ಅಲಕ್ಷ್ಯವೂ ಭಾರತೀಯರಾದ ನಮಗೆ ಸಹಜವೇ! ಬೆಂಗಳೂರು ಏರ್‌ಪೋರ್ಟ್‌ನ ‘ಸ್ಮೋಕಿಂಗ್ ಕ್ಯಾಬಿನ್’ನಲ್ಲಿ ಕುಳಿತ ಕೆಲವರು ಅದರ ಬಾಗಿಲು ತೆರೆದೇ ಇರುವಂತೆ ಬಾಗಿಲಿನ ಸೆನ್ಸಾರ್‌ಗೆ ಕೈ ಅಡ್ಡ ಹಿಡಿಯುತ್ತಾರೆ, ತಾವೇ ಬಾಗಿಲಿನ ಮುಂದೆ ನಿಲ್ಲುತ್ತಾರೆ ಏಕೆ?! ಕ್ಯಾಬಿನ್ ಒಳಗೆ ತಾಜಾ ಗಾಳಿ ಬರಬೇಕೆಂದು! ‘ಸ್ಮೋಕ್ ಕ್ಯಾಬಿನ್’ ನಿರ್ಮಿಸುವ ಉದ್ದೇಶವನ್ನೇ ಈ ವ್ಯಕ್ತಿಗಳು ನಿರರ್ಥಕಗೊಳಿಸಿಬಿಡುತ್ತಾರೆ. ‘ಸ್ಮೋಕ್ ಕ್ಯಾಬಿನ್’ ಉದ್ದೇಶವೇ ಧೂಮಪಾನಿಗಳು ಹೊರಬಿಡುವ ಹೊಗೆಯಿಂದ ಇತರರಿಗೆ ಹಾನಿಯಾಗಬಾರದು ಮತ್ತು ಧೂಮಪಾನಿಗಳಿಗೆ ‘ಬೇಕೆಂದರೆ ನೀವು ಸೇದಿದ ಹೊಗೆಯನ್ನು ನೀವೇ ಸೇವಿಸಿ, ಸಾಧ್ಯವಿಲ್ಲ ಎಂದಾದರೆ ಹೊರಬನ್ನಿ, ಆಗ ಧೂಮಪಾನ ಮಾಡುವಂತಿಲ್ಲ’ ಎಂಬಂತೆ ಕಟ್ಟು ಮಾಡುವುದು. ಯಾವುದಾದರೊಂದು ಉಪಾಯದಿಂದ ಬಾಗಿಲನ್ನು ತೆರೆದಿಟ್ಟೇ ತಮ್ಮ ಧೂಮಪಾನ ಮುಂದುವರಿಸುವುದರಿಂದ ಎರಡೂ ಉದ್ದೇಶಗಳು ಸಂಪೂರ್ಣವಾಗಿ ವಿಫಲವಾಗುತ್ತವೆ.

ಇಲ್ಲಿ ಕಾನೂನು ಮಾತ್ರ ಏನು ಮಾಡೀತು?! ಆಗ ಬೇಕಾದದ್ದು, ಸುತ್ತಲಿರುವ ನಾಗರಿಕರು ಕೈಜೋಡಿಸಿ, ತಪ್ಪನ್ನು ತಡೆಯುವ ಕಾರ್ಯ, ತಪ್ಪನ್ನು ಸಂಬಂಧಪಟ್ಟವರ ಗಮನಕ್ಕೆ ತಂದು ಕಾನೂನನ್ನು ಸರಿಯಾಗಿ ಜಾರಿ ಮಾಡುವ ನಾಗರಿಕ ಬದ್ಧತೆ.

ನ್ಯೂಜಿಲೆಂಡ್‌ನಲ್ಲಿ ಸಿಗರೇಟ್‌ಗಳ ಮೇಲೆ ತೆರಿಗೆ ಎಷ್ಟು ಹೆಚ್ಚೆಂದರೆ, ಒಂದು ಪ್ಯಾಕ್ ಸಿಗರೇಟ್‌ಗೆ 20 ಯು.ಎಸ್. ಡಾಲರ್‌ಗಳು. ಹಾಗಾಗಿ, ಕಾಳಸಂತೆ ಈಗಲೇ ಅಲ್ಲಿ ಜೋರಾಗಿಯೇ ಇದೆ! ಆದರೂ ನ್ಯೂಜಿಲೆಂಡ್ ಕೈಗೊಂಡಿರುವ ದಿಟ್ಟ ಕ್ರಮಗಳ ಹಿಂದೆ, ಈಗಾಗಲೇ ಶೇಕಡ 85ರಷ್ಟಿರುವ ‘ಧೂಮಮುಕ್ತ’ ಜನಸಂಖ್ಯೆ ಜೊತೆಗಿದೆ. ಅಂತಹ ಕ್ರಮಗಳು ಭಾರತದಲ್ಲಿಯೂ ಒಂದು ದಿನ ಬರಬಹುದೇ? ಕಾದು ನೋಡಬೇಕು.

### ವಾಚಕರ ವಾಣಿ

#### ತಾರತಮ್ಯ ಕ್ರಮದಿಂದ ಆರ್ಥಿಕ ಅಸಮಾನತೆ

ಪ್ರಧಾನಮಂತ್ರಿಯವರು ಹೂಡಿಕೆದಾರರನ್ನು ವೆಲ್ತ್ ಕ್ರಿಯೇಟರ್ಸ್ ಎಂದು ಕರೆದಿದ್ದಾರೆ. ಆದರೆ, ಅವರ ಪಾತ್ರ ಸಂಪತ್ತಿನ ಸೃಷ್ಟಿಗೆ ಮಾತ್ರ ಸೀಮಿತವಾಗಿದೆಯೇ? ವಾಣಿಜ್ಯ ಬ್ಯಾಂಕುಗಳು ಎಂಟು ವರ್ಷಗಳಲ್ಲಿ (2013ರಿಂದ 2021) ಬೆರಳೆಣಿಕೆಯಷ್ಟು ಉದ್ದಿಮೆದಾರರ ಒಟ್ಟು ₹ 10.8 ಲಕ್ಷ ಕೋಟಿ ಸಾಲವನ್ನು ತಮ್ಮ ಅಡಾವೆ ಪತ್ರದಿಂದ ರೈಟ್‌ಆಫ್ ಮಾಡಿವೆ. ಕಳೆದ ದಶಕದಲ್ಲಿ ಬ್ಯಾಂಕುಗಳು ರೈಟ್‌ಆಫ್ ಮಾಡಿದ ಕೃಷಿ ಸಾಲ ₹ 4.7 ಲಕ್ಷ ಕೋಟಿ.

ಬಡವರಿಗೆ ಉಚಿತವಾಗಿ ಸವಲತ್ತುಗಳನ್ನು ನೀಡುವ ಕ್ರಮವನ್ನು ನಮ್ಮ ಪ್ರಧಾನಿ ‘ಪುಕ್ಕಟೆ ಕಾಣಿಕೆ’ (ಫ್ರೀಬೀಸ್) ಎಂದು ಅಣಕವಾಡಿದ್ದಾರೆ. ತಮ್ಮ ಆಡಳಿತಾವಧಿಯಲ್ಲಿ ಜಮಾಖರ್ಚು ಖಾತೆಯಿಂದ ಹೂಡಿಕೆದಾರರ ₹ 10.8 ಲಕ್ಷ ಕೋಟಿ ಸಾಲವನ್ನು ವಾಣಿಜ್ಯ ಬ್ಯಾಂಕುಗಳು ರೈಟ್‌ಆಫ್ ಮಾಡಿರುವುದನ್ನು ಏನೆಂದು ಕರೆಯುತ್ತಾರೆ ಎಂಬುದನ್ನು ಕಾದು ನೋಡಬೇಕಾಗಿದೆ. ಬಡವರು, ರೈತರು, ಕಾರ್ಮಿಕರು ಮುಂತಾದ ದುರ್ಬಲ ವರ್ಗಗಳಿಗೆ ನೀಡುವ ಸೌಲಭ್ಯಗಳನ್ನು ‘ಅನುತ್ಪಾದಕ’ ಎಂದೂ ಕೈಗಾರಿಕೋದ್ಯಮಿಗಳಿಗೆ ನೀಡುವ ಸೌಲಭ್ಯಗಳನ್ನು ‘ಉತ್ಪಾದಕ’ ಎಂದೂ ಪರಿಗಣಿಸುವ ಕ್ರಮ ಪ್ರಚಲಿತದಲ್ಲಿದೆ. ಹಾಗಾದರೆ ಬ್ಯಾಂಕುಗಳು ರೈಟ್‌ಆಫ್ ಮಾಡಿರುವ ಮೊತ್ತ ಉತ್ಪಾದಕವೇ? ಸಾಲ ನೀಡಿಕೆಯಲ್ಲಿ ಬಡವರು- ಶ್ರೀಮಂತರು ಎಂದು ತಾರತಮ್ಯ ಮಾಡುವ ಮತ್ತು ರೈಟ್‌ಆಫ್ ಕ್ರಮವು ಆರ್ಥಿಕತೆಯಲ್ಲಿ ಅಸಮಾನತೆಯನ್ನು ಹೆಚ್ಚಿಸುತ್ತವೆ.

**ಟಿ.ಆರ್.ಚಂದ್ರಶೇಖರ,** ಬೆಂಗಳೂರು

#### ರಾಷ್ಟ್ರಧ್ವಜ: ಅರಿವು ಮೂಡಿಸಿ

ಸ್ವಾತಂತ್ರ್ಯದ 75ನೇ ವರ್ಷದ ಅಂಗವಾಗಿ ‘ಹರ್ ಘರ್ ತಿರಂಗಾ’ ಕಾರ್ಯಕ್ರಮವನ್ನು ಸರ್ಕಾರ ಹಮ್ಮಿಕೊಂಡಿದ್ದು, ಪ್ರತಿಯೊಬ್ಬರ ಮನೆಯ ಮೇಲೆ ರಾಷ್ಟ್ರಧ್ವಜವನ್ನು ಹಾರಿಸುವಂತೆ ಕೋರಿದೆ. ಎಲ್ಲರಿಗೂ ರಾಷ್ಟ್ರಧ್ವಜ ಸುಲಭವಾಗಿ ಲಭ್ಯವಾಗುವಂತೆ ಕಡಿಮೆ ದರದಲ್ಲಿ ಮಾರಾಟ ಮಾಡುತ್ತಿದೆ. ಅಲ್ಲದೆ ಹಾರಾಟದ ನಿಯಮಾವಳಿಗಳಿಗೆ ಸಹ ತಿದ್ದುಪಡಿ ತರಲಾಗಿದೆ. ಈ ಸಮಯದಲ್ಲಿ ರಾಷ್ಟ್ರಧ್ವಜದಲ್ಲಿನ ಕೇಸರಿ, ಬಿಳಿ, ಹಸಿರು ಬಣ್ಣಗಳ ಬಗ್ಗೆ, ಧ್ವಜದ ಮಧ್ಯದಲ್ಲಿ ಇರುವ ಅಶೋಕ ಚಕ್ರದ ಬಗ್ಗೆ ದಿನಪತ್ರಿಕೆಗಳು, ವಿವಿಧ ದೃಶ್ಯಮಾಧ್ಯಮಗಳ ಜೊತೆಗೆ ಭಿತ್ತಿಪತ್ರಗಳ ಮುಖೇನ ಸಹ ಅಗತ್ಯ ತಿಳಿವಳಿಕೆ ನೀಡುವುದು ಹೆಚ್ಚು ಸೂಕ್ತ.

**ಕೆ.ಪ್ರಭಾಕರ,** ಬೆಂಗಳೂರು

#### ಕಾಸ್ಮಿಕ್ ಬೇಡ, ಕಾಸ್ಮೆಟಿಕ್ಕೇ ಇರಲಿ

ಕರ್ನಾಟಕದ ಸವಿತಾ ಸಮಾಜದ ಅಭಿವೃದ್ಧಿ ನಿಗಮದವರು ಸೌಂದರ್ಯ ಪ್ರಸಾಧನಗಳ (ಕಾಸ್ಮೆಟಿಕ್) ಉತ್ಪಾದನೆ, ಅಭಿವೃದ್ಧಿಗೆಂದು ಬೆಂಗಳೂರಿನ ಬಳಿ 150 ಎಕರೆ ಜಾಗದಲ್ಲಿ ‘ಕಾಸ್ಮಿಕ್ ಪಾರ್ಕ್’ ರೂಪಿಸುವುದಾಗಿ ಹೇಳಿದ್ದಾರೆ. ಅವರ ಯತ್ನಕ್ಕೆ ಜೈ ಎನ್ನೋಣ. ಆದರೆ ‘ಕಾಸ್ಮಿಕ್’ ಎಂದರೆ ನಭೋಮಂಡಲದ ಗೆಲಾಕ್ಸಿ, ನಕ್ಷತ್ರಪುಂಜ, ಕಪ್ಪುರಂಧ್ರ, ಗುರುತ್ವತರಂಗ, ನ್ಯೂಟ್ರಿನೊಧಾರೆಗಳ ಬಹುದೊಡ್ಡ ಬ್ರಹ್ಮಾಂಡ ಎಂಬ ಅರ್ಥವಿದೆ. ಹೇನು, ಮೊಡವೆ, ಹೊಟ್ಟು, ಸುಕ್ಕುಗಳ ನಿವಾರಣೆಯ ಟೆಕ್ನಾಲಜಿಗೆ ಆ ಕಾಸ್ಮಿಕ್ ಹೆಸರನ್ನು ಎಳೆತರುವುದು ಸೂಕ್ತವಲ್ಲ.

ನಮ್ಮ ನಡುವಣ ತಾರೆಯರ ಮುಖಾರವಿಂದದ ಕಪ್ಪುಕುಳಿಗಳನ್ನೂ ನೆರೆಗೂದಲನ್ನೂ ಮುದಿನೆರಿಗೆಗಳನ್ನೂ ಸರಿಪಡಿಸುವುದು ಶ್ಲಾಘನೀಯವೇ ಹೌದಾದರೂ ಅದಕ್ಕೆ ಬೇಕಾದ ಸಂಶೋಧನಾ ವಲಯಕ್ಕೆ ಬೇಕಿದ್ದರೆ ‘ಸೌಂದರ್ಯ ಪಾರ್ಕ್’ ಎಂತಲೋ ‘ನವಯೌವನ ವನ’ ಎಂತಲೋ ಹೆಸರಿಡಬೇಕೆ ವಿನಾ ಆ ವಿಶಾಲವಿಶ್ವವನ್ನು ಈ ಮಟ್ಟಕ್ಕೆ ಇಳಿಸುವುದು ತರವಲ್ಲ.

**ಅದಿತಿ ಜಿ.,** ಬಾಣಾವರ

#### ಫಲಾನುಭವಿಗಳ ಆಯ್ಕೆ ಪಾರದರ್ಶಕವಾಗಿರಲಿ

ಜಾತಿ, ಸಮುದಾಯ ಕೇಂದ್ರಿತ ನಿಗಮಗಳಲ್ಲಿ ಭ್ರಷ್ಟಾಚಾರ ಇರುವುದನ್ನು, ‘ಬಡವರ ಹಣ: ಬಲಾಢ್ಯರ ಕಲ್ಯಾಣ’ ಎಂಬ ವಿಶೇಷ ವರದಿಗೆ (ಪ್ರ.ವಾ., ಆ. 8) ಸಂಬಂಧಿಸಿದ ಪ್ರತಿಕ್ರಿಯೆಯಲ್ಲಿ ಸಮಾಜ ಕಲ್ಯಾಣ ಸಚಿವರೇ ಒಪ್ಪಿಕೊಂಡಿದ್ದಾರೆ. ಫಲಾನುಭವಿಗಳನ್ನು ಅರ್ಹತೆ ಮತ್ತು ಆದ್ಯತೆ ಮೇಲೆ ಆಯ್ಕೆ ಮಾಡುವುದು ಬಿಟ್ಟು ಶಾಸಕರನ್ನು ಆಯ್ಕೆ ಸಮಿತಿ ಅಧ್ಯಕ್ಷರನ್ನಾಗಿ ಮಾಡುವುದರಿಂದ ಪಕ್ಷದ ಹಿಂಬಾಲಕರು ಹಾಗೂ ಮಧ್ಯವರ್ತಿಗಳಿಗೆ ಅಧಿಕಾರ ಕೊಟ್ಟಂತಾಗಿದೆ. ಇದರಿಂದ ಯೋಜನೆಯ ಉಪಯೋಗ ನಿಜವಾದ ಫಲಾನುಭವಿಗಳನ್ನು ತಲುಪುತ್ತಿಲ್ಲ. ಆದ್ದರಿಂದ ನಿಜವಾದ ಫಲಾನುಭವಿಗಳನ್ನು ಪಾರದರ್ಶಕವಾಗಿ ಗುರುತಿಸಿ, ಯೋಜನೆಗಳು ಎಲ್ಲರಿಗೂ ಸಮಾನವಾಗಿ ತಲುಪುವಂತೆ ಮಾಡುವುದು ಅವಶ್ಯಕ.

**ಜಗದೀಶ್,** ಬೆತ್ತನಗೆರೆ

#### ಮೀಸಲಾತಿ: ಕಾಲಮಾನಕ್ಕೆ ತಕ್ಕಂತೆ ಬದಲಾಗಬೇಕಿದೆ

ಮೀಸಲಾತಿಗೆ ಸಂಬಂಧಿಸಿದಂತೆ ಸಮಕಾಲೀನ ಸವಾಲುಗಳನ್ನು ಎದುರಿಸಬೇಕಿದೆ ಎಂದು ಬರಗೂರು ರಾಮಚಂದ್ರಪ್ಪ ಅವರು ಹೇಳಿರುವುದು (ಪ್ರ.ವಾ., ಆ. 8) ಸಕಾಲಿಕವಾಗಿದೆ. ಸ್ವಾತಂತ್ರ್ಯದ ನಂತರ ಆಧುನಿಕತೆ ಮತ್ತು ಜಾಗತೀಕರಣದ ಹಿನ್ನೆಲೆಯಲ್ಲಿ ಅವಕಾಶಗಳು, ಸೌಲಭ್ಯಗಳು ಪ್ರವಾಹದೋಪಾದಿಯಲ್ಲಿ ತೆರೆದುಕೊಂಡಿವೆ. ಮೀಸಲಾತಿಯಿಂದಾಗಿ ಹಿಂದುಳಿದವರು ಮತ್ತು ದಲಿತರು ವಿವಿಧ ಕ್ಷೇತ್ರಗಳಲ್ಲಿ ಆರೇಳು ದಶಕಗಳಿಂದ ಅವಕಾಶ ಪಡೆದಿದ್ದಾರೆ. ಅದೇ ವೇಳೆ ‘ಮುಂದುವರಿದವರು’ ಎಂದು ಪರಿಗಣಿತವಾದವರಲ್ಲಿ ಅವಕಾಶ ವಂಚಿತರು ಮತ್ತು ಬಡವರ ಸಂಖ್ಯೆ ಹೆಚ್ಚುತ್ತಿದೆ.

ಸಾಮಾಜಿಕ ಮತ್ತು ಶೈಕ್ಷಣಿಕ ಹಿಂದುಳಿದಿರುವಿಕೆಯಂತೆ ಬಡತನವೂ ಒಂದು ಶಾಪ. ಕೆಲ ವರ್ಗಗಳು ಸಾವಿರಾರು ವರ್ಷಗಳಿಂದ ಸೌಲಭ್ಯ ಪಡೆದಿವೆ ಎಂಬ ಅಭಿಪ್ರಾಯ ಸರಿಯಲ್ಲ. ಆಗ ನಮ್ಮ ದೇಶ ಪ್ರಾಚೀನ ಸ್ಥಿತಿಯಲ್ಲಿತ್ತು. ಬಹಳಷ್ಟು ಸೌಲಭ್ಯಗಳೇ ಸೃಷ್ಟಿಯಾಗಿರಲಿಲ್ಲ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ‘ಮುಂದುವರಿದವರಲ್ಲಿನ’ ಬಡವರ ಸಂಖ್ಯೆಯೇ ಒಂದು ಸಾಮಾಜಿಕ ಸಮಸ್ಯೆಯಾಗಬಹುದು. ನಮ್ಮದು ಚಲನಶೀಲ ಸಮಾಜ. ಬದಲಾದ ಕಾಲಮಾನಕ್ಕೆ ಅನುಗುಣವಾಗಿ ಸಂವಿಧಾನದಲ್ಲಿಯೂ ಸೂಕ್ತ ಬದಲಾವಣೆಗೆ ಅವಕಾಶ ಇದ್ದೇ ಇದೆ. ಹಿಂದುಳಿದಿರುವಿಕೆಯನ್ನು ಗುರುತಿಸಲು ಜಾತಿಯ ಬದಲು ಕುಟುಂಬವನ್ನು ಒಂದು ಘಟಕವಾಗಿ ಪರಿಗಣಿಸಲು ಇದು ಸಕಾಲ.

**ಲಂಬೋಧರ ಎಲ್.ವಿ.,** ಸಾಗರ

Printed and published by B A Ravi on behalf of The Printers (Mysore ) Private Ltd., at The Printers ( Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

# ಬೆಟ್ಟದ ಜೀವಗಳ ಧ್ಯಾನ ಮತ್ತು ಪರಿಸರವಾದ

ಜೀವ, ಜೀವನ - ಜೀವ ವೈವಿಧ್ಯ, ಕೃಷಿ ವೈವಿಧ್ಯ ಎಲ್ಲವೂ ಉಳಿಯಬೇಕು. ಇವೆಲ್ಲವುಗಳ ಕೇಂದ್ರ ಮನುಷ್ಯ ಎನ್ನುವುದನ್ನು ಅರಿಯಬೇಕು. ರೆಸಾರ್ಟ್‌ನಲ್ಲಿ ಉಳಿದು ಮುಂಜಾನೆಗೊಂದು ಫೋಟೊ, ಸಂಜೆಗೊಂದು ಸೆಲ್ಫಿ ತೆಗೆದುಕೊಂಡ ಸುಖದಂತೆ ಪಶ್ಚಿಮ ಘಟ್ಟದ ನೆಲವಾಸಿಗಳು ಬಾಳುತ್ತಿಲ್ಲ. ಬೆಟ್ಟದ ಜೀವಗಳ ಸಮುದಾಯ ಸಹಭಾಗಿತ್ವದಲ್ಲಿ ಪಶ್ಚಿಮ ಘಟ್ಟವನ್ನು ನಮ್ಮ ನೆಮ್ಮದಿಯ ನಾಳೆಗಳಿಗಾಗಿ ಉಳಿಸಿಕೊಳ್ಳಬೇಕು

• ಸುಧೀರ್ ಕುಮಾರ್ ಮುರೊಳ್ಳಿ

ಪಶ್ಚಿಮ ಘಟ್ಟದಲ್ಲಿ ಭೂ ಕುಸಿತ ಹೆಚ್ಚಾಗುತ್ತಿದೆ, ಕೃಷಿಗಾಗಿ ಭೂ ಒತ್ತುವರಿ ನಡೆಯುತ್ತಿದೆ, ಹೋಂ ಸ್ಟೇಗಳು ವಿಪರೀತವಾಗಿವೆ, ಮಾನವ-ಪ್ರಾಣಿಗಳ ಸಂಘರ್ಷ ಹೆಚ್ಚುತ್ತಿದೆ ಎಂದು ಪುಕಾರು ಹಬ್ಬಿಸಲಾಗುತ್ತಿದೆ. ಕಸ್ತೂರಿರಂಗನ್ ವರದಿ ಜಾರಿಯಾದರೆ ಮಾತ್ರ ಈ ಸಮಸ್ಯೆಗಳಿಗೆಲ್ಲ ಪರಿಹಾರ ಸಿಕ್ಕಿ, ಜೀವ ವೈವಿಧ್ಯ ಹಾಗೂ ನದಿ ಮೂಲಗಳ ರಕ್ಷಣೆಯಾಗಲಿದೆ ಎಂಬ ವಾದವನ್ನು ಮುಂದಿಡಲಾಗುತ್ತಿದೆ. ನಿಜ, ಪರಿಸರ ರಕ್ಷಣೆ ಆಗಲೇಬೇಕಾಗಿದೆ. ಆದರೀಗ ತಲೆಮಾರುಗಳಿಂದ ಪರಿಸರವನ್ನು ರಕ್ಷಣೆ ಮಾಡಿಕೊಂಡು ಬಂದಂತಹ ಘಟ್ಟದ ನೆಲವಾಸಿಗಳನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವ ಪ್ರಯತ್ನಗಳು ನಡೆಯುತ್ತಿವೆ. ಕಸ್ತೂರಿರಂಗನ್‌ರವರು ವಿಜ್ಞಾನಿ ಹೌದು. ಕ್ಷೇತ್ರ ಕಾರ್ಯ ನಡೆಸದೇ ವಾಸ್ತವ ಅರಿಯದೇ ನೀಡಿದ ವರದಿಯನ್ನು ವೈಜ್ಞಾನಿಕ ಎಂದು ಒಪ್ಪುವುದು ಹೇಗೆ?

ಈ ವರದಿಯ ಜಾರಿಯಿಂದ ನೆಲವಾಸಿಗಳ ಎತ್ತಂಗಡಿ ಆಗುವುದಿಲ್ಲ ಎಂಬ ವಾದವೂ ಇದೆ. ಎತ್ತಂಗಡಿಗೆ ಪರೋಕ್ಷವಾಗಿ ಕಾರಣವಾಗುವ ಒಂದೆರಡು ನೈಜ ಘಟನೆಗಳನ್ನು ಇಲ್ಲಿ ಹೇಳಲೇಬೇಕು. ಯಾವುದೇ ಅರಣ್ಯ ಅಧಿಕಾರಿ, ಪರಿಸರವಾದಿ ಭೇಟಿಯೇ ಕೊಡದ ಮಲೆನಾಡಿನ ಹೆಮ್ಮಿಗೆಯಲ್ಲಿ, ಮುರಿದುಹೋದ ಕಿರು ಸೇತುವೆಯೊಂದರ ಮರುನಿರ್ಮಾಣಕ್ಕೆ ಸರ್ಕಾರ ಅನುದಾನ ಒದಗಿಸಿದೆ. ಆದರೆ, ಆ ಸೇತುವೆಯ ಪುನರ್ ನಿರ್ಮಾಣಕ್ಕೆ ಅರಣ್ಯ ಇಲಾಖೆ ಅವಕಾಶ ಕೊಡಲಿಲ್ಲ. ಸಂಪರ್ಕ ಕಳೆದುಕೊಂಡ ಒಂದು ಹಳ್ಳಿಯ ಜನ ಅನಿವಾರ್ಯವಾಗಿ ಊರು ಬಿಡುತ್ತಾರೆ ಎನ್ನುವುದು ಇದರ ಹಿಂದಿನ ಲೆಕ್ಕಾಚಾರ.

ಇತ್ತೀಚೆಗೆ ಮಲೆನಾಡಿನ ಒಂದೆರಡು ತಾಲ್ಲೂಕುಗಳಲ್ಲಿ ಕಾಡಾನೆಯ ಓಡಾಟ ಹೆಚ್ಚಾಯಿತು. ಕಾಡಾನೆ ಕಂಡಿರದ ಜನ ಆನೆಯನ್ನು ಓಡಿಸುವಂತೆ ಅರಣ್ಯ ಇಲಾಖೆಯ ಅಧಿಕಾರಿಗಳ ಬಳಿ ದೌಡಾಯಿಸಿದರು. ತಮ್ಮ ಮೊಬೈಲ್ ತೆಗೆದು ಆನೆ ಇರುವ ಸ್ಥಳ ಮತ್ತು ಓಡಾಟವನ್ನು ತೋರಿಸಿದ ಅಧಿಕಾರಿ, ಜನ ಸತ್ತರೆ ಮಾತ್ರ ಆನೆಯನ್ನು ಓಡಿಸುವ ಯೋಜನೆ ಜಾರಿ ಮಾಡಬಹುದು ಎಂಬ ವಾದ ಮುಂದಿಟ್ಟರು. ಜನರ ಆತಂಕ ಮುಂದುವರಿದಿದೆ. ಪರಿಸರವಾದದ ಆನೆ ಈಗಲೂ ಘೀಳಿಡುತ್ತಿದೆ.

ಮಲೆನಾಡಿನ ಕೃಷಿ ಬದುಕಿಗೆ ಕಾಡು ಅನಿವಾರ್ಯ. ಆ ಕಾಡನ್ನು, ನದಿ ಮೂಲಗಳನ್ನು ರಕ್ಷಿಸುವ ಹೊಣೆಗಾರಿಕೆಯನ್ನು ಅಲ್ಲಿನ ನೆಲವಾಸಿಗಳೇ ಈವರೆಗೆ ತಮ್ಮ ಮನೆಯ ಕೆಲಸದಂತೆ ನಿಭಾಯಿಸುತ್ತಲೇ ಬಂದಿದ್ದಾರೆ. ಹಾಗೆ ಅವರು ರಕ್ಷಿಸದೇ ಹೋಗಿದ್ದಲ್ಲಿ ಯಾವ ನದಿಮೂಲವೂ ಉಳಿಯುತ್ತಿರಲಿಲ್ಲ. ಕಸ್ತೂರಿರಂಗನ್ ವರದಿ ಜಾರಿಯಿಂದ ನೆಲವಾಸಿಗಳಿಗೆ ತೊಂದರೆ ಏನೂ ಇಲ್ಲ ಎಂದು ವಾದ ಮುಂದಿಡುತ್ತಿರುವವರು ಈ ಹಿಂದೆಯೂ ಪುನರ್ವಸತಿ ಯೋಜನೆಗಳಲ್ಲಿ ವಿದೇಶಿ ಅನುದಾನ ಪಡೆಯುವ ಎನ್‌.ಜಿ.ಒ.ಗಳ ದಲ್ಲಾಳಿಗಳಾಗಿ ಕೆಲಸ ಮಾಡಿದವರು ಎನ್ನುವುದು ರಹಸ್ಯವೇನಲ್ಲ.

ಕೆಲವು ವರ್ಷಗಳ ಹಿಂದೆ ಮಲೆನಾಡು ಭಾಗದಲ್ಲಿ ಬಿದಿರಿಗೆ ಕಟ್ಟೆ ರೋಗ ಬಂದಿತ್ತು. ಮಲೆನಾಡಿನ ಜನರು ಆತಂಕಕ್ಕೆ ಒಳಗಾಗಲಿಲ್ಲ. ಏಕೆಂದರೆ ಪ್ರತೀ 12 ವರ್ಷಗಳಿಗೊಮ್ಮೆ ಬರುವ ಬಿದಿರುಕಟ್ಟೆ ಬೀಜೋತ್ಪನ್ನವನ್ನು ಮಾಡಿ ನಂತರ ಬಿದಿರು ಹುಲುಸಾಗಿ ಬೆಳೆಯುತ್ತದೆ ಎಂಬ ಸೂಕ್ಷ್ಮ ಜೈವಿಕ ಕ್ರಿಯೆಯನ್ನು ಪರಿಸರ ಧ್ಯಾನಿಗಳು ಬಲ್ಲವರಾಗಿದ್ದರು. ಆದರೆ ಪರಿಸರವಾದಿಗಳ ನೆಪದಲ್ಲಿ ಬಂದವರು ಮಲೆನಾಡಿನಲ್ಲಿ ಬಿದಿರು ನಾಟಿ ಆಗಬೇಕೆಂದು ಹುಯಿಲೆಬ್ಬಿಸಿ ಗುಡ್ಡಗಳಲ್ಲಿ ಗುಂಡಿ ತೋಡಿ ಬಿದಿರು ನೆಡಿಸಿದ್ದರು. ಸರ್ಕಾರ ಮತ್ತು ಎನ್‌.ಜಿ.ಒ.ಗಳು ನೆಟ್ಟ ಬಿದಿರು ಮೇಲೇಳಲಿಲ್ಲ. ಬಿದಿರುಕಟ್ಟೆ ಬಂದ ಜಾಗದಲ್ಲಿ ಸಹಜ ಬೀಜೋತ್ಪನ್ನದಿಂದ ಬಿದಿರು ಮತ್ತೆ ಸೊಂಪಾಗಿ ಚಿಗುರಿದೆ. ಕಾಂಕ್ರೀಟ್ ಕಟ್ಟಡದೊಳಗಿನ ವಾದಗಳು ಸೋತಿವೆ. ಆದರೂ ಒಪ್ಪಿಕೊಳ್ಳುತ್ತಿಲ್ಲ. ಇಂಥವರೇ ಮಲೆನಾಡಿನ ನೈಸರ್ಗಿಕ ಕಾಡಿನೊಳಗೆ ನೀಲಗಿರಿ, ಅಕೇಶಿಯಾ ಗಿಡ ನೆಟ್ಟು ವನಮಹೋತ್ಸವ ಆಚರಿಸಿದವರು!

ಮಲೆನಾಡಿನಲ್ಲಿ ಹಸು ಸಾಕಾಣಿಕೆ ಒಂದು ಉಪ ಕಸುಬು. ಗೋಮಾಳಗಳಲ್ಲಿ ಮೇಯಲು ಹೋಗುತ್ತಿದ್ದ ಈ ಹಸುಗಳನ್ನು ನಿಯಂತ್ರಿಸಲು ಹಲವು ವರ್ಷಗಳ ಹಿಂದೆ ಸಿ.ಪಿ.ಟಿ. (ಕೌ ಪ್ರೂಫ್ ಟ್ರೆಂಚ್-ದನಗಳು- ದಾಟುವುದನ್ನು ತಡೆಯುವ ಕಂದಕ) ನಿರ್ಮಾಣ ಮಾಡಿ ಗೋಮಾಳಗಳನ್ನು ಅರಣ್ಯ ಪ್ರದೇಶ ಎನ್ನಲಾಯಿತು. ಈಗ ಅದೇ ಟ್ರೆಂಚ್‌ಗಳನ್ನು ಇನ್ನಷ್ಟು ಆಳ ಮಾಡಿ ಅದು ಇ.ಪಿ.ಟಿ. (ಎಲಿಫೆಂಟ್ ಪ್ರೂಫ್ ಟ್ರೆಂಚ್- ಆನೆ ದಾಟುವುದನ್ನು ತಡೆಯುವ ಕಂದಕ) ಎಂದು ಹೇಳಲಾಗುತ್ತಿದೆ. ಅರಣ್ಯದೊಳಗಿನಿಂದ ಆನೆಗಳು ಊರಿಗೆ ಬರಬಾರದು, ಇದು ನಿಮ್ಮ ರಕ್ಷಣೆಗೆ ಎಂದು ಜನರಿಗೆ ಸುಳ್ಳು ಹೇಳಲಾಗಿದೆ. ಇದರ ಹಿಂದಿನ ಹಣದ ಲೂಟಿಯ ಕಥೆ ದೊಡ್ಡದಿದೆ. ನೈಸರ್ಗಿಕವಾಗಿ ತಲೆತಲಾಂತರಗಳಿಂದ ಆನೆಗಳೇ ಇರದ ಭೂಮಿಯಲ್ಲಿ ಆನೆ ಹುಟ್ಟಿ ಬರಲು ಅದ್ಯಾವ ಜಾದೂವಿನಿಂದ ಸಾಧ್ಯ? ಕಾಡು, ನದಿ, ತೊರೆಗಳನ್ನು ತಮ್ಮ ಬದುಕಿನ ತೊಟ್ಟಿಲಾಗಿ ಕೊನೆಗೆ ಚಟ್ಟವಾಗಿಸಿಕೊಂಡು ಈ ಘಟ್ಟದಲ್ಲಿ ಬದುಕಿದ ಬೆಟ್ಟದ ಜೀವಗಳನ್ನು ಕಾಡಿನ ಸಂಪರ್ಕದಿಂದ ಹೊರದೂಡುವುದು ಜೀವ ವಿರೋಧಿ ಪ್ರಕ್ರಿಯೆ.

ಮಲೆನಾಡಿನಲ್ಲಿ ಸರ್ಕಾರಿ/ಖಾಸಗಿ ಪ್ರಾಯೋಜಿತ ರೆಸಾರ್ಟ್‌ಗೆ ಪ್ರವಾಸಕ್ಕೆ ಬಂದು ಪರಿಸರದ ಪಾಠಗಳನ್ನು ಬೋಧಿಸುವ ಜನರಿಗೆ ಇಲ್ಲಿನ ಪರಿಸರ ಧ್ಯಾನದ 'ಮಲೆಗಳಲ್ಲಿ ಮದುಮಗಳು' ಪರಿಚಯವಾಗಿಲ್ಲ. ಇಂಥವರು ಕೊಡಗು, ಹಾಸನ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ ಹಾಗೂ ಉತ್ತರ ಕನ್ನಡ ಜಿಲ್ಲೆಯ ಭಾಗಗಳಲ್ಲಿ ಪರ್ಯಾಯ ಕಸುಬಾಗಿ ಹುಟ್ಟಿರುವ ಹೋಂ ಸ್ಟೇಗಳ ವಿರುದ್ಧ ಮಾತನಾಡುತ್ತಾ ಭೂ ಕುಸಿತಕ್ಕೆ ಈ ಹೋಂ ಸ್ಟೇಗಳು ಕಾರಣ ಎಂದಿದ್ದಾರೆ. ಇಲ್ಲಿನ ಕೃಷಿ ಆದಾಯ ಕೈಕೊಟ್ಟಾಗ ಜನರು ಕಂಡುಕೊಂಡ ಈ ಪರ್ಯಾಯ ದುಡಿಮೆ ಪರಿಸರವಾದಿಗಳು ಹೇಳುವಂಥ ಯಾವ ಹಾನಿಯನ್ನೂ ಮಾಡುತ್ತಿಲ್ಲ. ಆದರೂ ಜನರ ಬದುಕು ಕಸಿಯುವ ಮಾತುಗಳನ್ನು ಏಕೆ ಆಡಬೇಕು?

ನಿಜ, ಭೂ ಕುಸಿತಗಳು ವರದಿಯಾಗುತ್ತಿವೆ. ಅದು ಹಿಂದೆಯೂ ಆಗಿದೆ. ಈಗಲೂ ಆಗುತ್ತಿದೆ. ಅವೈಜ್ಞಾನಿಕವಾದ ರಸ್ತೆ ಅಗಲೀಕರಣ ಕಾಮಗಾರಿಗಳು, ಅರಣ್ಯ ಇಲಾಖೆಯೇ ಅನವಶ್ಯಕವಾಗಿ ಗುಡ್ಡದ ಮೇಲೆ ತೋಡುತ್ತಿರುವ ಇಂಗು ಗುಂಡಿಗಳು, ಅರಣ್ಯದ ನಡುವೆ ಯಾವುದೇ ಸ್ಪಷ್ಟ ರೂಪುರೇಷೆಯಿಲ್ಲದೇ ತೋಡುತ್ತಿರುವ ಕಂದಕಗಳು, ನೈಸರ್ಗಿಕ ಮಳೆ ನೀರಿನ ಹರಿವಿನ ದಿಕ್ಕನ್ನು ಬದಲಾಯಿಸಿರುವುದು ಭೂ ಕುಸಿತಗಳಿಗೆ ಕಾರಣ ಎಂಬುದನ್ನು ಅರಿಯಬೇಕಾಗಿದೆ.

ಮಳೆಕಾಡು ಅಧ್ಯಯನದ ಹೆಸರಿನಲ್ಲಿ ಬಂದ ಸಂಸ್ಥೆಗಳು ಪಡೆಯುತ್ತಿರುವ ಅನುದಾನದ ಮೂಲವನ್ನು ಶೋಧಿಸಬೇಕಾಗಿದೆ. ಕಾಳಿಂಗ ಹಾವಿನ ಸಹಜ ಸಂತಾನೋತ್ಪತ್ತಿ ಕ್ರಿಯೆಯನ್ನು ಯಾಂತ್ರಿಕಗೊಳಿಸಿ ಮಲೆನಾಡಿನ ಪೇಟೆಗಳಲ್ಲೂ ಕಾಳಿಂಗ ಮನೆಗಳಿಗೆ ನುಗ್ಗುವಂತೆ ಮಾಡಿರುವುದು ಪರಿಸರವಾದ. ಕಾಳಿಂಗ ಹಾವುಗಳ ಹತ್ಯೆ ಪಾಪಕಾರಕ ಎಂದು ನಂಬಿ ಗುಡ್ಡಗಳಿಗೊಂದು ದೈವದ ಕಲ್ಲು, ಬನದಲ್ಲೊಂದು ನಾಗನ ಸ್ಥಾನ, ನದಿ ಮೂಲದಲ್ಲೊಂದು ಜಲದುರ್ಗಿ ಇಟ್ಟು ಪೂಜಿಸಿ ಘಟ್ಟ ರಕ್ಷಿಸಿದವರ ಪರಿಸರ ಧ್ಯಾನವನ್ನು ಅನುಮಾನಿಸುವುದೇ ಒಂದು ನೈತಿಕ ಅಪರಾಧ.

ಜೀವ, ಜೀವನ - ಜೀವ ವೈವಿಧ್ಯ, ಕೃಷಿ ವೈವಿಧ್ಯ ಎಲ್ಲವೂ ಉಳಿಯಬೇಕು. ಇವೆಲ್ಲವುಗಳ ಕೇಂದ್ರ ಮನುಷ್ಯ ಎನ್ನುವುದನ್ನು ಅರಿಯಬೇಕು. ರೆಸಾರ್ಟ್‌ನಲ್ಲಿ ಉಳಿದು ಮುಂಜಾನೆಗೊಂದು ಫೋಟೊ, ಸಂಜೆಗೊಂದು ಸೆಲ್ಫಿ ತೆಗೆದುಕೊಂಡ ಸುಖದಂತೆ ಪಶ್ಚಿಮ ಘಟ್ಟದ ನೆಲವಾಸಿಗಳು ಬಾಳುತ್ತಿಲ್ಲ. ಬೆಟ್ಟದ ಜೀವಗಳ ಸಮುದಾಯ - ಸಹಭಾಗಿತ್ವದಲ್ಲಿ ಪಶ್ಚಿಮ ಘಟ್ಟವನ್ನು ನಮ್ಮ ನೆಮ್ಮದಿಯ ನಾಳೆಗಳಿಗಾಗಿ ಉಳಿಸಿಕೊಳ್ಳಬೇಕು. ಉಪಗ್ರಹ ಆಧಾರಿತ ಫೋಟೊಗಳಲ್ಲಿ ಕಾಣದ ಪರಿಸರ ಧ್ಯಾನವನ್ನು ಮರುಶೋಧಿಸಬೇಕು. ವಿದೇಶಿ ನಿಧಿ ಆಶ್ರಯದ ಪರಿಸರವಾದವನ್ನು ಅನುಮಾನಿಸಲೇಬೇಕು.

ಲೇಖಕ: ವಕೀಲ

## 'ಪಶ್ಚಿಮ ಘಟ್ಟ ಮಾತ್ರ ಉಳಿದರೆ ಸಾಕೇ?'

ಜಾಗತಿಕ ತಾಪಮಾನ ಹೆಚ್ಚಳದಿಂದ ಪ್ರಪಂಚದಲ್ಲಿ ಆಗುತ್ತಿರುವ ಸಮಸ್ಯೆಗಳಿಗೆ ಕಾರಣ ಸ್ಥಳೀಯವಲ್ಲ. ಕಾರಣಗಳೂ ಜಾಗತಿಕ ಮಟ್ಟದ್ದೇ ಆಗಿವೆ. ಪಡುವಣ ಘಟ್ಟದಂತಹ ಕೆಲವು ಪ್ರದೇಶಗಳಲ್ಲಿ ಮಾತ್ರ ಪರಿಸರ ಇರುವುದಲ್ಲ; ಅಥವಾ ಅದನ್ನು ಬೇಲಿ ಹಾಕಿ ಉಳಿಸಿಬಿಟ್ಟರೆ ಪ್ರಪಂಚ ಉಳಿಯುವುದಿಲ್ಲ. ಪ್ರಪಂಚ ಉಳಿಯಬೇಕು ಅಂದರೆ ಪಡುವಣ ಘಟ್ಟವೂ ಉಳಿಯಬೇಕು, ಬೆಂಗಳೂರು ತರಹದ ನಗರಗಳು ಕೂಡ ಪರಿಸರ ಪೂರಕ ಅಭಿವೃದ್ಧಿಗೆ ಹೊರಳಿಕೊಳ್ಳಬೇಕು.

ನಮ್ಮಲ್ಲಿ ಒಂದು ಆಸ್ಪತ್ರೆ, ಒಂದು ಮೆಸ್ಕಾಂ ಘಟಕ, ಬಸ್ ಡಿಪೋ ಕಟ್ಟಲು ಕಂದಾಯ ಜಾಗವಿಲ್ಲ. ಹಾಡ್ಯದಲ್ಲಿ ಮಾಡಿಕೊಂಡಿರುವ ಜಮೀನಿಗೆ ದಾಖಲೆ ಪತ್ರಗಳಿಲ್ಲ, ನಾವು ಕೇಳದೆಯೇ ಮಾಡಿದ ರಾಷ್ಟ್ರೀಯ ಹೆದ್ದಾರಿ ನಮ್ಮೂರನ್ನು ದಾಟಿ ಹೋಗುತ್ತದೆ. ಅದನ್ನು ಬೇಕಾದಷ್ಟು ಅಗಲ ಕೂಡ ಮಾಡುತ್ತಿಲ್ಲ, ಆಗಲೋ ಈಗಲೋ ಮುರಿದು ಬೀಳುವ ಸ್ಥಿತಿಯಲ್ಲಿ ಇರುವ ಸೇತುವೆಗಳು ಕೂಡ ದುರಸ್ತಿ ಆಗುತ್ತಿಲ್ಲ. ಹೀಗಿರುವಾಗ ಇನ್ನಷ್ಟು ವರದಿ ಸಿದ್ಧಪಡಿಸಿ ನಮ್ಮನ್ನು ಏನೋ ಮಾಡಲು ಹೊರಟಿದ್ದಾರೆ ಅನ್ನುವ ಆತಂಕ ಬರುವುದು ಸಹಜ ಅಲ್ಲವೇ?

**ಕ್ರುಶಿಕ ಎ. ವಿ.,** ಮಠದಗದ್ದೆ, ಶೃಂಗೇರಿ

## 'ಜನರಲ್ಲಿ ಭರವಸೆ ಮೂಡಿಸಿ'

ವಿನಾಶಕಾರಿ ಅಭಿವೃದ್ಧಿಯಿಂದ ಪಶ್ಚಿಮ ಘಟ್ಟ ಪ್ರದೇಶದ ಪರಿಸರವನ್ನು ಉಳಿಸಲು ಸೂಕ್ಷ್ಮ ಪ್ರದೇಶ ಘೋಷಣೆ ಆಗಲೇಬೇಕಿದೆ. ಆದರೆ ಈಗ ಹೊರಡಿಸಲಾಗಿರುವ ಕರಡು ಅಧಿಸೂಚನೆಯು ಅಲ್ಲಿನ ಅಭಿವೃದ್ಧಿ ಚಟುವಟಿಕೆಗಳನ್ನು ನಿಯಂತ್ರಿಸುವ ಕ್ರಮಗಳನ್ನು ಮಾತ್ರ ಸೂಚಿಸಿದೆ. ಪಶ್ಚಿಮ ಘಟ್ಟ ಪ್ರದೇಶದ ಪರಿಸರ ರಕ್ಷಣೆ ಆಗಬೇಕೆಂದರೆ ಗಾಡ್ಗೀಳ್ ವರದಿಯಲ್ಲಿ ಉಲ್ಲೇಖಿಸಿರುವಂತೆ ಸ್ಥಳೀಯ ಜನಸಮುದಾಯವನ್ನು ಒಳಗೊಳ್ಳುವ ಪರಿಸರ ಸಂರಕ್ಷಣಾ ಮಾದರಿಗಳನ್ನು ಅನುಸರಿಸಬೇಕಿದೆ. ಅಲ್ಲಿ ಬದುಕು ಕಟ್ಟಿಕೊಂಡಿರುವ ಜನರಿಗೆ ಪರಿಸರ ಸಂರಕ್ಷಣೆಯ ಲಾಭಗಳು ದೊರಕುವಂತಾಗಬೇಕು. ಅಲ್ಲದೇ ಪರಿಸರ ಸಂರಕ್ಷಣಾ ಕ್ರಮಗಳು ತಮ್ಮ ಬದುಕನ್ನು ಕಿತ್ತುಕೊಳ್ಳುವುದಿಲ್ಲ ಎಂಬ ಭರವಸೆಯನ್ನು ಅಲ್ಲಿನ ನಿವಾಸಿಗಳಲ್ಲಿ ಮೂಡಿಸುವ ಅಗತ್ಯವಿದೆ. ಸ್ಥಳೀಯ ಜನಸಮುದಾಯಗಳನ್ನು ಒಳಗೊಳ್ಳುವ ಸಮಗ್ರ ಪರಿಸರ ಸಂರಕ್ಷಣಾ ಯೋಜನೆಯನ್ನು ರೂಪಿಸಿ ಜಾರಿಗೊಳಿಸಿದರೆ ಮಾತ್ರ ಪಶ್ಚಿಮ ಘಟ್ಟದ ಪರಿಸರವನ್ನು ಉಳಿಸಿಕೊಳ್ಳಬಹುದಾಗಿದೆ.

**ಗುರುಮೂರ್ತಿ,** ಜೋಗಿಬೈಲು

## 'ಜನರಿಗೆ ಮಾಹಿತಿ ಕೊಡಿ'

ಪಶ್ಚಿಮ ಘಟ್ಟವನ್ನು ಸೂಕ್ಷ್ಮ ಪ್ರದೇಶ ಎಂದು ಘೋಷಿಸುವುದಕ್ಕೆ ಯಾವುದೇ ಅಭ್ಯಂತರವಿಲ್ಲ. ಆದರೆ, ಪಶ್ಚಿಮ ಘಟ್ಟದ ತಪ್ಪಲಿನಲ್ಲಿರುವ ಎಷ್ಟೋ ಜನರ ಜೀವನ ವ್ಯವಸಾಯದ ಮೇಲೆ ಅವಲಂಬಿತ. ಸೂಕ್ಷ್ಮ ಪ್ರದೇಶ ಎಂದು ಘೋಷಿಸಿದ ಕೆಲವೇ ವರ್ಷಗಳಲ್ಲಿ ಅವರನ್ನು ಒಕ್ಕಲೆಬ್ಬಿಸುವ ಕಾರ್ಯ ಶುರುವಾಗುವುದರಲ್ಲಿ ಯಾವುದೇ ಸಂಶಯವಿಲ್ಲ. ಪಶ್ಚಿಮ ಘಟ್ಟ ಪ್ರದೇಶಗಳಿಗೆ ಭೇಟಿ ಕೊಟ್ಟು, ಅಲ್ಲಿನ ಜನರ ಜೀವನವನ್ನು ಅಧ್ಯಯನ ಮಾಡಿ ವರದಿ ಸಿದ್ಧಪಡಿಸಬೇಕು. ಸೂಕ್ಷ್ಮ ಪ್ರದೇಶ ಎಂದರೆ ಏನೆಂದು ಜನರಿಗೆ ತಿಳಿದಿಲ್ಲ. ಜನರಿಗೆ ಈ ಬಗ್ಗೆ ಮಾಹಿತಿ ನೀಡುವ ಅಗತ್ಯವೂ ಇದೆ.

**ಸುಧೀರ್ ಜೈನ್,** ಕಾರ್ಕಳ

## ಪ್ರಜಾವಾಣಿ ಪ್ರಜಾಧ್ವನಿ

ಜನರ ಮನದಾಳದ ಮಾತು

ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಭಾರತದ ಪದಕಗಳ ಕೊಯ್ಲು ಕ್ರೀಡಾ ಕ್ಷೇತ್ರದ ದಿಕ್ಕು ಬದಲಿಸಬಲ್ಲದೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ

ಹೌದು 100%

## ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 194

### ಹಿಮವಂತ ಮೇನಾದೇವಿ ವಿವಾಹ

ಶ್ರೀಶಿವಮಹಾಪುರಾಣದ ಎರಡನೇ ಸಂಹಿತೆಯಾದ ರುದ್ರಸಂಹಿತೆಯ ಮೂರನೇ ಖಂಡವಾದ ಪಾರ್ವತೀಖಂಡದ ಮೊದಲ ಅಧ್ಯಾಯದಲ್ಲಿ ನಾರದಮುನಿಯು 'ಓ ಬ್ರಹ್ಮನೇ, ದಕ್ಷಯಜ್ಞದಲ್ಲಿ ಶರೀರವನ್ನು ತ್ಯಜಿಸಿದ ಸತೀದೇವಿಯು ಹೇಗೆ ಪರ್ವತಪುತ್ರಿಯಾದಳು? ಶಿವನನ್ನು ಹೇಗೆ ವರಿಸಿದಳು?' ಎಂದು ಕೇಳುತ್ತಾನೆ. ಆಗ ಬ್ರಹ್ಮನು ಪಾರ್ವತೀಖಂಡವನ್ನು ಪ್ರಸ್ತುತಪಡಿಸುತ್ತಾನೆ.

ಹಿಂದೆ ಸತೀದೇವಿಯು ಹಿಮಾಲಯದಲ್ಲಿ ಹರನೊಂದಿಗಿರುವಾಗ ಹಿಮವಂತನ ಪ್ರಿಯೆಯಾದ ಮೇನಾದೇವಿಯು ಸತೀದೇವಿಯನ್ನು ತನ್ನ ಮಗಳಂತೆ ಉಪಚರಿಸುತ್ತಿದ್ದಳು. ದಕ್ಷನ ಯಜ್ಞದಲ್ಲಿ ಅವಮಾನಿತಳಾದ ಸತೀದೇವಿಯೂ, ತಂದೆ ದಕ್ಷನಿಂದ ಹುಟ್ಟಿದ ತನ್ನ ಶರೀರವನ್ನು ತ್ಯಜಿಸಲು ನಿರ್ಧರಿಸುವಾಗ, ಅವಳ ಮನದಲ್ಲಿ ಮೂಡಿದ್ದು ಮೇನಾದೇವಿ ಮತ್ತು ಹಿಮವಂತ ದಂಪತಿ. ಮುಂದಿನ ಜನ್ಮದಲ್ಲಿ ಜನಿಸಿದರೆ ಈ ದಂಪತಿಯಂಥ ವಾತ್ಸಲ್ಯ ತುಂಬಿದವರ ಮಗಳಾಗೇ ಜನಿಸಬೇಕೆಂದು ಬಯಸಿದಳು. ಆ ಜನ್ಮದಲ್ಲೂ ಶಿವನನ್ನೇ ಪತಿಯಾಗಿ ಪಡೆಯಬೇಕೆಂದು ನಿಶ್ಚಯಿಸಿದಳು. ಅದರಂತೆ ಸತೀದೇವಿಯು ಯುಕ್ತವಾದ ಸಮಯದಲ್ಲಿ ಶರೀರವನ್ನು ತ್ಯಜಿಸಿ, ಹಿಮವಂತ–ಮೇನಾದೇವಿಯ ಮಗಳಾಗಿ ಜನಿಸಿದಳು. ಪರ್ವತರಾಜನ ಮಗಳಾಗಿದ್ದರಿಂದ 'ಪಾರ್ವತೀ' ಎಂದು ಹೆಸರುಳ್ಳವಳಾದಳು. ನಿನ್ನ ಉಪದೇಶದಿಂದ ಘೋರವಾದ ತಪವನ್ನಾಚರಿಸಿ ಮತ್ತೆ ಶಿವನನ್ನು ಪತಿಯಾಗಿ ಪಡೆದಳು' ಎಂದ ಬ್ರಹ್ಮ, ಮೇನಾದೇವಿ ಮತ್ತು ಹಿಮವಂತನ ವಿವಾಹಕಥೆಯನ್ನು ತಿಳಿಸುತ್ತಾನೆ.

ಉತ್ತರದಿಕ್ಕಿನಲ್ಲಿ ಹಿಮಾಲಯವೆಂಬ ಪರ್ವತರಾಜನಿದ್ದ. ಅವನು ಮಹಾತೇಜಸ್ವಿಯೂ, ಸರ್ವಸಮೃದ್ಧಿಯುಳ್ಳವನಾಗಿದ್ದ. ಅವನಿಗೆ ಎರಡು ಸ್ವರೂಪಗಳಿದ್ದವು. ಒಂದು ಸ್ಥಿರವಾದ ಮಹಾರೂಪ, ಮತ್ತೊಂದು ಚರವಾದ ಸೂಕ್ಷ್ಮರೂಪ. ಅದು ಪೂರ್ವಪಶ್ಚಿಮ ಸಮುದ್ರಗಳೆರಡನ್ನೂ ವ್ಯಾಪಿಸಿತ್ತು. ಅದರಲ್ಲಿ ಅನೇಕ ರತ್ನಗಳು ಇದ್ದವು. ಪರ್ವತವು ಭೂಮಿಯನ್ನು ಅಳೆಯುವ ಕೋಲಿನಂತೆ ಇತ್ತು. ಅದರಲ್ಲಿ ಅನೇಕ ವೃಕ್ಷ, ಪಶು, ಪಕ್ಷಿಗಳು, ಅನೇಕ ಬಗೆಯ ವಿಚಿತ್ರ ಶಿಖರಗಳು ಇದ್ದವು. ಹಿಮಕ್ಕೆ ಆ ಗಿರಿಯು ಮನೆಯಾಗಿದ್ದರಿಂದಲೇ ಅದಕ್ಕೆ ಹಿಮಾಲಯನೆಂದು ಹೆಸರಾಗಿತ್ತು. ಅಲ್ಲಿ ದೇವತೆಗಳು, ಮುನಿಗಳು, ಸಿದ್ಧರು ಮೊದಲಾದವರು ಆಶ್ರಯಿಸಿದ್ದರು. ಶಿವನಿಗೆ ಹಿಮಗಿರಿಯು ಪ್ರಿಯವಾದ ಸ್ಥಳವಾಗಿತ್ತು. ತಪಸ್ಸಿಗೆ ಯೋಗ್ಯವಾದ ಮಹಾಪವಿತ್ರವಾದ ಸ್ಥಾನವಾಗಿತ್ತು. ತಪಸ್ಸಿದ್ಧಿಯನ್ನು ಉಂಟುಮಾಡುವ ಅನೇಕ ಧಾತುಗಳು ಅಲ್ಲಿದ್ದವು. ವಿಷ್ಣುವಿನ ಅಂಶವೇ ಅವನಾಗಿದ್ದರಿಂದ ಸಾಧುಗಳಿಗೆ ಪ್ರಿಯನಾದವನಾಗಿದ್ದ. ಇಂಥ ಹಿಮವಂತನು, ತನ್ನ ವಂಶಕ್ಕಾಗಿ, ಧರ್ಮಕ್ಕಾಗಿ, ಪಿತೃದೇವತೆಗಳನ್ನು ತೃಪ್ತಿಪಡಿಸುವುದಕ್ಕಾಗಿ ವಿವಾಹವಾಗಲು ಇಚ್ಛಿಸಿದ. ಆಗ ದೇವತೆಗಳು ಪಿತೃದೇವತೆಗಳನ್ನು ಸಂಧಿಸಿ ತಮ್ಮ ಕಾರ್ಯಸಾಧನೆಗಾಗಿ ಹೀಗೆ ಹೇಳಿದರು:

'ಓ ಪಿತೃದೇವತೆಗಳೇ, ದೇವಹಿತಕ್ಕಾಗಿ ನಿಮ್ಮ ಜ್ಯೇಷ್ಠಕುವರಿಯಾದ ಮೇನಾದೇವಿಯನ್ನು ಹಿಮವಂತನಿಗೆ ಮದುವೆ ಮಾಡಿಕೊಡಿ: ಎಲ್ಲರಿಗೂ ಕ್ಷೇಮವಾಗುವುದು. ನಿಮಗೂ ದೇವತೆಗಳಿಗೂ ಪದೇ ಪದೇ ಬರುವ ದುಃಖವು ನಾಶವಾಗುವುದು' ಎಂದರು. ಪಿತೃದೇವತೆಗಳು 'ಹಾಗೆಯೇ ಆಗಲಿ' ಎಂದು ಒಪ್ಪಿಕೊಂಡರು. ಆ ಮದುವೆಗೆ ದೇವತೆಗಳು, ಮುನಿಗಳು ಆಗಮಿಸಿದ್ದರು. ವಧು-ವರರನ್ನು ಆಶೀರ್ವದಿಸಿ, ಬಗೆಬಗೆಯ ದಾನಗಳನ್ನು ಕೊಟ್ಟರು. ಹಾಗೆಯೇ, ಹಿಮವಂತನಿಗೆ ಮಗಳು ಮೇನಾದೇವಿಯನ್ನು ಧಾರೆ ಎರೆದ ಪಿತೃದೇವತೆಗಳನ್ನು ಅಭಿನಂದಿಸಿದರು. ಹಿಮವಂತನು ತನ್ನ ವಿವಾಹ ಮಹೋತ್ಸವದಲ್ಲಿ ಅನೇಕ ಬಳುವಳಿಯನ್ನು ಪಡೆದು, ಸಂತೋಷದಿಂದ ಪತ್ನಿ ಮೇನೆಯೊಡನೆ ತನ್ನ ಮನೆಗೆ ಹಿಂದಿರುಗಿದ ಎಂಬಲ್ಲಿಗೆ ಶ್ರೀಶಿವಮಹಾಪುರಾಣದ ಎರಡನೆ ಸಂಹಿತೆಯಾದ ರುದ್ರಸಂಹಿತೆಯ ಮೂರನೇ ಖಂಡವಾದ ಪಾರ್ವತೀಖಂಡದಲ್ಲಿ 'ಹಿಮವತ್ಪರ್ವತರಾಜನ ವಿವಾಹವರ್ಣನ' ಎಂಬ ಮೊದಲನೆಯ ಅಧ್ಯಾಯ ಮುಗಿಯುತ್ತದೆ.

## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

**ಬಿಳಿ ದಿರಿಸು ಧರಿಸಿರುವ** ಇಬ್ಬರ ಜೊತೆ ಬಾಲಿವುಡ್ ನಟ ಅಮೀರ್ ಖಾನ್ ಅವರು ನಿಂತಿರುವ ಚಿತ್ರವೊಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. 'ಅಫ್ರಿದಿ ಮತ್ತು ಜಮಾತ್-ಎ-ಉಲ್ ಸಂಘಟನೆಯ ಉಗ್ರ ತಾರೀಕ್ ಜಮೀಲ್ ಅವರ ಜೊತೆ ಅಮೀರ್ ಖಾನ್ ಇದ್ದಾರೆ. ಈ ಚಿತ್ರವನ್ನು ಆದಷ್ಟು ಹೆಚ್ಚು ಹಂಚಿಕೊಳ್ಳಿ. ಅಮೀರ್‌ನ ನಿಜರೂಪ ಎಲ್ಲರಿಗೂ ತಿಳಿಯಲಿ' ಎಂಬ ವಿವರಣೆಯನ್ನು ಚಿತ್ರದ ಜೊತೆ ನೀಡಲಾಗಿದೆ. ಅಮೀರ್ ಖಾನ್ ಅಭಿನಯದ 'ಲಾಲ್ ಸಿಂಗ್ ಛಡ್ಡಾ' ಚಿತ್ರ ಬಿಡುಗಡೆಗೆ ಸಿದ್ಧವಾಗಿರುವ ಬೆನ್ನಲ್ಲೇ ಈ ಚಿತ್ರ ವೈರಲ್ ಆಗಿದೆ.

**ಈ ಚಿತ್ರದ ಜೊತೆ** ನೀಡಲಾಗಿರುವ ಮಾಹಿತಿ ಸುಳ್ಳು ಎಂದು 'ದಿ ಲಾಜಿಕಲ್ ಇಂಡಿಯನ್' ವೇದಿಕೆ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ಈ ಚಿತ್ರವು 2012ರ ಹಜ್ ಯಾತ್ರೆಯ ವೇಳೆ ಸೌದಿ ಅರೇಬಿಯಾದ ಹೋಟೆಲ್ ಒಂದರಲ್ಲಿ ತೆಗೆದಿದ್ದು. ಅಮೀರ್ ಖಾನ್ ಜೊತೆ ಇರುವವರು ಪಾಕಿಸ್ತಾನಿ ಕ್ರಿಕೆಟಿಗ ಶಾಹಿದ್ ಅಫ್ರಿದಿ ಮತ್ತು ಪಾಕಿಸ್ತಾನದ ಧರ್ಮಗುರು ಮೌಲಾನಾ ತಾರೀಕ್ ಜಮೀಲ್. ಅಮೀರ್ ಇವರಿಬ್ಬರನ್ನು ಭೇಟಿ ಆದ ಕುರಿತು 'ದಿ ಎಕ್ಸ್‌ಪ್ರೆಸ್ ಟ್ರಿಬ್ಯೂನ್' ಪತ್ರಿಕೆಯು 2012ರ ಡಿಸೆಂಬರ್ 23ರಂದು ಸುದ್ದಿ ಪ್ರಕಟಿಸಿತ್ತು. ಈ ಚಿತ್ರವು 2014ರಲ್ಲಿ ಕೂಡಾ ಇದೇ ರೀತಿಯ ವಿವರಣೆಯೊಂದಿಗೆ ವೈರಲ್ ಆಗಿತ್ತು ಎಂದು ಫ್ಯಾಕ್ಟ್‌ಚೆಕ್‌ನಲ್ಲಿ ವಿವರಿಸಲಾಗಿದೆ.

## ಗುಂಡಣ್ಣ




## ಬೆರಗಿನ ಬೆಳಕು

ಗುರುರಾಜ ಕರಜಗಿ

### ನಿರ್ಮಿತ್ರತೆ

**ಓರ್ವನೇ ನಿಲ್ಲುವೆ ನೀನುತ್ಕಟಕ್ಷಣಗಳಲಿ |**
**ಧರ್ಮಸಂಕಟಗಳಲಿ, ಜೀವಸಮರದಲಿ ||**
**ನಿರ್ವಾಣದೀಕ್ಷೆಯಲಿ, ನಿರ್ಯಾಣಘಟ್ಟದಲಿ |**
**ನಿರ್ಮಿತ್ರನಿರಲು ಕಲಿ - ಮಂಕುತಿಮ್ಮ || 689 ||**

**ಪದ-ಅರ್ಥ:** ನೀನುತ್ಕಟಕ್ಷಣಗಳಲಿ = ನೀನು + ಉತ್ಕಟ + ಕ್ಷಣಗಳಲಿ, ನಿರ್ವಾಣ ದೀಕ್ಷೆಯಲಿ = ಮುಕ್ತಿಯ ಸಮಯದಲ್ಲಿ, ನಿರ್ಯಾಣ ಘಟ್ಟದಲಿ = ನಿರ್ಯಾಣ (ಮರಣದ) + ಘಟ್ಟದಲಿ(ಸಮಯದಲಿ), ನಿರ್ಮಿತ್ರನಿರಲು = ನಿರ್ಮಿತ್ರ(ಮಿತ್ರನಿರದೆ) = ಇರಲು

**ವಾಚ್ಯಾರ್ಥ:** ಬದುಕಿನ ಉತ್ಕಟಕ್ಷಣಗಳಲ್ಲಿ, ಧರ್ಮಸಂಕಟದ ಸಮಯದಲ್ಲಿ, ಜೀವನದ ಹೋರಾಟದಲ್ಲಿ, ಮುಕ್ತಿಯ ಕ್ಷಣಗಳಲ್ಲಿ, ಮರಣ ಸಮಯದಲ್ಲಿ ಯಾರೂ ನಿನ್ನೊಂದಿಗೆ ಇರುವುದಿಲ್ಲ. ಆದ್ದರಿಂದ ನಿರ್ಮಿತ್ರನಿರಲು ಕಲಿ.

**ವಿವರಣೆ:** ಮನುಷ್ಯ ಸಂಘಜೀವಿ ಎನ್ನುವುದು ನಿಜ. ಸಮಷ್ಟಿಯಲ್ಲಿ ಮನುಷ್ಯ ಸಮೂಹದಲ್ಲೇ ಇದ್ದರೂ ವ್ಯಕ್ತಿಯಾಗಿ ಆತ ಏಕಾಂಗಿಯೇ. ದ್ರೌಪದಿ ಅಸಾಮಾನ್ಯ ಕನ್ಯೆ. ಆಕೆ ಅಯೋನಿಜೆ, ಅಗ್ನಿಕುಂಡದಲ್ಲಿ ಹುಟ್ಟಿದವಳು. ದ್ರುಪದ ರಾಜನ ಪುತ್ರಿ. ಅಂದು ಅತ್ಯಂತ ಪರಾಕ್ರಮಶಾಲಿಗಳಾಗಿದ್ದ ಪಂಚಪಾಂಡವರ ಪತ್ನಿ, ಧರ್ಮರಾಜನ ರಾಜಸೂಯ ಯಾಗದಲ್ಲಿ ಮಹಾರಾಣಿಯಾಗಿ ಋಷಿಗಳಿಂದಅಭಿಷೇಕ ಮಾಡಿಸಿಕೊಂಡವಳು ಆಕೆಯಷ್ಟು ಭಾಗ್ಯಶಾಲಿ ಯಾರೂ ಇಲ್ಲ ಎನ್ನುವಂಥ ಸ್ಥಿತಿಯಲ್ಲಿದ್ದವಳು. ಆದರೆ ಒಂದು ಪರೀಕ್ಷೆಯ ಕಾಲ ಬಂದಿತು. ಮಗನಂತಿರಬೇಕಾದ ಮೈದುನ ಆಕೆಯ ತಲೆಗೂದಲನ್ನು ಹಿಡಿದು ಎಳೆದು ಸಭೆಗೆ ತಂದಾಗ, ಅವಳ ದುಃಖವನ್ನು ನಿವಾರಿಸುವವರೂ ಒಬ್ಬರೂ ಇರದೆ ಏಕಾಂಗಿಯಾಗಿ ಆಕೆ ಅವಮಾನ ಭರಿಸಬೇಕಾಯಿತು. ದೈವವೇ ಅವಳನ್ನು ಕಾಪಾಡಬೇಕಾಯಿತು.

ಮಾಯಾವಿ ಮಾರೀಚ ಸಾಯುವಾಗ "ಹೇ ಲಕ್ಷ್ಮಣಾ, ಹೇ ಸೀತಾ" ಎಂದು ಕೂಗಿದಾಗ ಆತಂಕಗೊಂಡ ಸೀತೆ ರಾಮನನ್ನು ಹುಡುಕಿಕೊಂಡು ಹೋಗಲು ಅಪ್ಪಣೆ ಮಾಡುತ್ತಾಳೆ. ಅವನು ಬೇಡವೆಂದಾಗ ಕಟುಮಾತುಗಳನ್ನಾಡುತ್ತಾಳೆ. ಅಣ್ಣ ರಾಮ ಆಕೆಯನ್ನು ತೊರೆದು ಹೋಗಬೇಡ ಎಂದಿದ್ದರೆ, ಅತ್ತಿಗೆ ತಕ್ಷಣ ಹೋಗು ಎನ್ನುತ್ತಾಳೆ. ಈ ಧರ್ಮಸಂಕಟದಲ್ಲಿ ತೀರ್ಮಾನ ತೆಗೆದುಕೊಳ್ಳುವಾಗ ಲಕ್ಷ್ಮಣ ಏಕಾಂಗಿ. ಯಾವ ತೀರ್ಮಾನ ತೆಗೆದುಕೊಂಡರೂ ತನಗೆ ಅತ್ಯಂತ ಪ್ರಿಯರಾದ ಒಬ್ಬರಿಗೆ ಕೋಪ ಬರಬಹುದು ಎಂಬ ಚಿಂತೆ ಅವನದು. ಸಂಸಾರದಲ್ಲಿ ಬದುಕಿರುವಾಗ ಪರಿವಾರದವರು ಜೊತೆಗಿದ್ದರೂ ನಿಮ್ಮ ಸಮಸ್ಯೆ ನಿಮ್ಮದೆ. ಉಳಿದವರು ಅಭಿಪ್ರಾಯಗಳನ್ನು ಕೊಡಬಹುದು. ಆದರೆ ತೀರ್ಮಾನದ ಜವಾಬ್ದಾರಿ ಮತ್ತು ಪರಿಣಾಮ ನಿಮ್ಮ ಮೇಲೆಯೇ. ಕೈವಲ್ಯ-ಜ್ಞಾನವನ್ನು ಪಡೆಯಲು ರಾಜಕುಮಾರ ಸಿದ್ಧಾರ್ಥ ಹೊರಟದ್ದು ಮಧ್ಯರಾತ್ರಿಯಲ್ಲಿ ಒಬ್ಬನೇ. ಅವನ ಸುತ್ತ ರಾಜ ಪರಿವಾರವಿದೆ, ಸುಂದರ ಪತ್ನಿ, ಪುಟ್ಟ ಮಗು ಎಲ್ಲವೂ ಇದ್ದರೂ ಸಂಸಾರವನ್ನು ತೊರೆಯುವ, ದೀಕ್ಷೆ ಪಡೆಯುವ ವಿಷಯದಲ್ಲಿ, ಆತ ಏಕಾಂಗಿಯಾಗಿಯೇ ತೀರ್ಮಾನ ತೆಗೆದುಕೊಂಡ. ಒಬ್ಬ ವ್ಯಕ್ತಿ ಅದೆಷ್ಟೇ ಉನ್ನತಸ್ಥಾನದಲ್ಲಿದ್ದರೂ, ಮರಣಸಮಯದಲ್ಲಿ 'ಯಾರೂ ಸಂಗಡ ಬಾಹೋರಿಲ್ಲ' ಎಂಬಂತೆ ಏಕಾಂಗಿಯೇ. ಹೊರಗಡೆಗೆ ಸಾವಿರಾರು ಕಾದು ನಿಂತಿದ್ದರೂ, ವೈದ್ಯರ ತಂಡವೇ ಸಿದ್ಧವಾಗಿದ್ದರೂ ವ್ಯಕ್ತಿ ತನ್ನ ಮರಣಯಾತ್ರೆಯನ್ನು ಏಕಾಂಗಿಯಾಗಿಯೇ ಮಾಡಬೇಕಾಗುತ್ತದೆ. ಅದಕ್ಕೇ ಕಗ್ಗ 'ನಿರ್ಮಿತ್ರನಿರಲು ಕಲಿ' ಎನ್ನುತ್ತದೆ. ಹಾಗೆಂದರೆ ಮಿತ್ರರಿರಬಾರದು ಎಂದಲ್ಲ. ಬದುಕಿನ ತೀವ್ರತಮ ಕ್ಷಣಗಳಲ್ಲಿ ಯಾರೂ ಜೊತೆಗೆ ಇರುವುದಿಲ್ಲವೆಂಬುದನ್ನು ತಿಳಿದುಕೊಂಡು, ಆ ಸ್ಥಿತಿಗೆ ಮನಸ್ಸನ್ನು ಸಿದ್ಧಮಾಡಿಕೊಳ್ಳಬೇಕು.

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಆಗಸ್ಟ್ 9, 2022

**ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯಣ– ವರ್ಷ ಋತು ತಿಥಿ:** (ಶ್ರಾವಣ ಶುಕ್ಲ) ದ್ವಾದಶಿ ಗಂ. 17-46 ನಕ್ಷತ್ರ: ಮೂಲ ಗಂ. 12-18 ಯೋಗ: ವಿಷ್ಕಂಭ ಗಂ. 23-35, ಕರಣ: ಬವ ಗಂ. 07-26 ಕರ್ಕಾಟಕ ಮಾಸದ 23 ನೇ ದಿನ.
ರಾಹುಕಾಲ : ಮಧ್ಯಾಹ್ನ 03:00 – 04:30 ಸೂರ್ಯೋದಯ : 06-21 ಸೂರ್ಯಾಸ್ತ : 06-51 ಮುಸ್ಲಿಂ ದಿನಾಂಕ : 10 ಮೊಹರಮ್
ದಿನ ವಿಶೇಷ : ಪಕ್ಷ ಪ್ರದೋಷ, ಮೊಹರಮ್
ಅದೃಷ್ಟ ಸಂಖ್ಯೆ: 9, 11

**ಮೇಷ:** ಸಂಸ್ಥೆಯ ಬಗ್ಗೆ ಗೌರವದಿಂದ, ನಿಷ್ಠೆಯಿಂದ ಕೆಲಸ ಮಾಡುವವರಿಗೆ ಇನ್ನಷ್ಟು ಹೆಚ್ಚಿನ ಅನುಕೂಲವಾಗುವ ಸಾಧ್ಯತೆ ಇದೆ. ಗೃಹ ನಿರ್ಮಾಣ ಅಥವಾ ನಿವೇಶನ ಖರೀದಿಯಂತಹ ಕೆಲಸ ಆರಂಭಿಸಲು ಒಳ್ಳೆಯ ಕಾಲವಾಗಿದೆ.

**ವೃಷಭ:** ಕಂಪನಿಯಲ್ಲಿ ಸಹೋದ್ಯೋಗಿಗಳೊಂದಿಗೆ ಸಾಧ್ಯವಾದಷ್ಟು ಸಮಾಧಾನ ತಾಳ್ಮೆಯಿಂದ ಮುಂದುವರಿದಲ್ಲಿ ಮಾನಸಿಕ ನೆಮ್ಮದಿ ಕಾಣುವಿರಿ. ನಿಮ್ಮ ಪಾರಮಾರ್ಥಿಕ ಪ್ರಯತ್ನಕ್ಕೆ ಆರ್ಥಿಕವೃದ್ಧಿ ಆಗುವುದು.

**ಮಿಥುನ:** ಕಷ್ಟದಲ್ಲಿರುವವರಿಗೆ ನಿಮ್ಮಿಂದ ಆಗುವ ಸಹಾಯ ಮಾಡುವ ಅಭ್ಯಾಸವನ್ನು ಬೆಳೆಸಿಕೊಳ್ಳಿರಿ. ವೈದ್ಯರ ಸಲಹೆಯಂತೆ ನಿಯಮದಿಂದ ಇರುವುದು ಆರೋಗ್ಯವನ್ನು ತಂದುಕೊಡುತ್ತದೆ.

**ಕರ್ಕಾಟಕ:** ನಿಮ್ಮ ಶ್ರಮಕ್ಕೆ ಏನೇ ಆದರೂ ಅದನ್ನು ಮುಕ್ತವಾಗಿ ಸ್ವೀಕರಿಸುವ ಭಾವನೆ ಇರಲಿ. ಬಹುದಿನಗಳಿಂದ ಕೂಡಿಟ್ಟ ಹಣದಿಂದ ಬಂಗಾರ ಖರೀದಿಸುವ ಮನಸ್ಸಾಗುವುದು, ಹಾಗೆ ಮಾಡುವುದರಿಂದ ಲಾಭ ಉಂಟಾಗುವುದು.

**ಸಿಂಹ:** ಸಂಗೀತ ಕಲಾವಿದರಿಗೆ ಉತ್ತಮ ವೇದಿಕೆ ಸಿಗುವ ಮುನ್ಸೂಚನೆ ಸಿಗುತ್ತದೆ. ರಾಜಕೀಯ ವ್ಯಕ್ತಿಗಳಿಗೆ ಇಂದಿನ ಸನ್ನಿವೇಶಗಳು ಅನುಕೂಲಮಯವಾಗಿರುವುದು. ವ್ಯಾಪಾರ ವ್ಯವಹಾರಗಳಲ್ಲಿ ಉತ್ತಮ ಧನಲಾಭವನ್ನು ಕಾಣುವಿರಿ.

**ಕನ್ಯಾ:** ನಿಮ್ಮನ್ನು ಹಿಂದೊಂದು ದಿನ ಅವಮಾನಿಸಿದ ವ್ಯಕ್ತಿಗಳಿಂದ ಗೌರವ ಪಡೆಯುವಂತಹ ಕಾಲವನ್ನು ನಿರೀಕ್ಷಿಸಬಹುದು. ರೇಷ್ಮೆ ವ್ಯಾಪಾರಿಗಳಿಗೆ ಲಾಭ ಆಗುತ್ತದೆ. ನವಗ್ರಹ ಪೂಜೆಯಿಂದ ಶುಭ ವಾರ್ತೆ ಪಡೆಯುವಿರಿ.

**ತುಲಾ:** ವಿದ್ಯಾರ್ಥಿಗಳಿಗೆ ತಮ್ಮ ಅಭ್ಯಾಸದಲ್ಲಿ ಉದಾಸೀನತೆ ತೋರಿಬರಲಿದೆ. ತಾಮ್ರದ ವಸ್ತುಗಳ ಮಾರಾಟದಲ್ಲಿ ಲಾಭವಾಗಲಿದೆ. ನಿರ್ಧಾರಗಳನ್ನು ತೆಗೆದುಕೊಳ್ಳುವುದರ ಪರಿಣಾಮ ಏನಾಗುವುದೆಂದು ಯೋಚಿಸಿ ನಿರ್ಧರಿಸಿ.

**ವೃಶ್ಚಿಕ:** ಸಾಂಸಾರಿಕ ವಿಷಯದಲ್ಲಿ ಹಿರಿಯರ ಸಲಹೆ ಸ್ವೀಕರಿಸುವುದು ಉತ್ತಮ. ಸಾಹಿತ್ಯ ವಿದ್ಯಾರ್ಥಿಗಳಿಗೆ ಓದಿನಲ್ಲಿ ಆಸಕ್ತಿ ಹೆಚ್ಚುವುದು. ಪ್ರಾರಂಭಿಸಿದ ಕಾರ್ಯವನ್ನು ಪೂರ್ಣಗೊಳಿಸಲು ಬೇಕಾದ ವ್ಯವಸ್ಥೆಯನ್ನು ಮಾಡಿಕೊಳ್ಳಿರಿ.

**ಧನು:** ರಾಜಕೀಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಅವಕಾಶಗಳು ಬರುವುದು. ನಿಮ್ಮ ಕೆಲಸಕಾರ್ಯಗಳಿಗೆ ಮೇಲಧಿಕಾರಿಗಳಿಂದ ಅಪೇಕ್ಷಿಸಿದ ಬೆಂಬಲ ನಿಮಗೆ ದೊರೆಯಲಿದೆ. ಆಹಾರದಲ್ಲಿ ಗಮನವಿರಲಿ.

**ಮಕರ:** ವ್ಯಾಪಾರದಲ್ಲಿ ಅನಿರೀಕ್ಷಿತ ಬದಲಾವಣೆಯನ್ನು ಕಾಣುವ ಸಾಧ್ಯತೆ ಇದೆ. ಹಣಕಾಸಿನ ವಿಚಾರದಲ್ಲಿ ನಿಮ್ಮ ಪರಿಶ್ರಮಕ್ಕೆ ತಕ್ಕ ಫಲ ದೊರೆಯುವುದು. ಶ್ರೀ ಆಂಜನೇಯನ ದರ್ಶನದಿಂದ ಎಲ್ಲಾ ಕಾರ್ಯಗಳು ನೆರವೇರುವುದು.

**ಕುಂಭ:** ಶನಿಯ ವಕ್ರಗತಿಯ ಫಲವಾಗಿ ನೂತನ ವಾಹನ ಕೊಳ್ಳುವುದನ್ನು ಮುಂದೂಡುವುದು ಉತ್ತಮ. ದೂರ ಪ್ರಯಾಣ, ಅಧಿಕದೇಹಾಯಾಸದಂತಹ ಸಮಸ್ಯೆಗಳು ಎದುರಾಗುವುದು. ಮಕ್ಕಳ ಅಗತ್ಯಗಳನ್ನು ಪೂರೈಸಿ.

**ಮೀನ:** ನಷ್ಟ ಸಂಭವಿಸುತ್ತಿರುವ ಕಾರಣದಿಂದಾಗಿ ಜೀವನದ ಬಗ್ಗೆ ನಿರುತ್ಸಾಹವನ್ನು ತಾಳದಿರಿ. ಖರ್ಚು-ವೆಚ್ಚಗಳ ವಿಷಯದಲ್ಲಿ ಜಾಗ್ರತೆ ಇರಲಿ. ಮನೆಗೆ ಬಂಧುಗಳ ಆಗಮನವಿರುವುದು. ಬಿಳಿ ಬಣ್ಣ ಶುಭ ತರಲಿದೆ.

## ಪದಬಂಧ 5044

– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1. ಪ್ರೇಮಿಗಳ ಅಗಲಿಕೆಯ ನೋವು (3)
3. ಆಶ್ವಯುಜ ಕಾರ್ತೀಕ ಮಾಸಗಳನ್ನೊಳಗೊಂಡ ಕಾಲ (4)
5. ರಸ ಒಸರುತ್ತಿರುವ ಜಿಹ್ವೆ (3)
7. ಹತ್ತನೆಯ ಒಂದು ಭಾಗವಿದು (4)
9. ಚಾರನದ್ದು ಒಳ್ಳೆಯ ನಡತೆ (4)
11. ಗಣಪತಿಯ ವಾಹನ (3)
14. ಬಾಗಿಲು ಕಾಯುವವನು ಹಾರ ಧರಿಸಿ ನಿಂತಿದ್ದಾನೆ (4)
15. ಮನಸ್ಸಿಗೆ ಬಂದಂತೆ ನಡೆಯುವುದು (3)

**ಮೇಲಿಂದ ಕೆಳಕ್ಕೆ**
1. ಹೆಂಡತಿಯನ್ನು ಕಳೆದುಕೊಂಡವನು (3)
2. ವನದ ಕೊನೆಗೆ ಮಾಡಿದ ಯಜ್ಞ (3)
3. ನಿಘಂಟು ಇಲ್ಲಿದೆ (4)
4. ಲಡಾಯಿ ನಡೆಸಿ ಪಡೆದಿರುವ ದಾರದ ಉಂಡೆ (2)
6. ಸೂಕ್ತವಾದುದನ್ನು ಹೀಗೆ ಹೇಳಿ (4)
7. ಮೈಮೇಲೆ ಗುಳ್ಳೆಗಳು ಏಳುವ ಒಂದು ಅಂಟುರೋಗ (3)
8. ನೂರು ವರ್ಷಗಳ ಕಾಲ ಬದುಕಿರುವವನು (4)
10. ಪಿಸುಣನನ್ನು ಹೀಗೂ ಕರೆವರು (4)
11. ಮೂಗಿನಲ್ಲಿ ಧರಿಸುವ ಆಭರಣ (3)
12. ಎರವಲು ಪಡೆದುಕೊಂಡವ ತೋರಿಸಿರುವ ಸಮುದ್ರ (3)
13. ಪ್ರಭಾವಿತರ ಹತ್ತಿರ ಬ್ರಾಹ್ಮಣನಿದ್ದಾನೆ (2)



### 5043ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ಹಳವಂಡ 3.ಉಪೋದ್ಘಾತ 5.ಕೆಸರು 7.ದುಮ್ಮಾನ 9.ಮತ್ಸರ 10.ಶರಣ 11.ಅಂಗದ 15.ಕೋಲಾಹಲ 16.ಕಾರಬಾರು

**ಮೇಲಿಂದ ಕೆಳಕ್ಕೆ:**
1.ಹರಕೆ 2.ಡಬ್ಬ 3.ಉಮೇದುವಾರ 4.ತಖ್ತೆ 6.ಸದವಕಾಶ 8.ನರೆದಲೆಗ 9.ಮರಣಕಾಲ 12.ದರ್ಬಾರು 13.3ಕೋ 14.ಕಾಕಾ

## ಸುಡೊಕು 5430

| | | | | | | | | |
|---|---|---|---|---|---|---|---|---|
| 2 | | | 1 | | | | 8 | |
| | | | | | | 5 | | 9 |
| 8 | | 3 | | | 9 | | 1 | |
| 3 | | 9 | 5 | | 1 | | | |
| | 6 | | | | | | 4 | |
| 5 | | 1 | 6 | | 8 | | | 2 |
| | 7 | | | 3 | | 2 | | 4 |
| 4 | | 5 | | | | | 6 | |
| | 8 | | 4 | 6 | | 3 | | 1 |

### ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5429 ಸುಡೊಕು

| | | | | | | | | |
|---|---|---|---|---|---|---|---|---|
| 4 | 7 | 5 | 3 | 9 | 8 | 2 | 6 | 1 |
| 1 | 2 | 9 | 6 | 4 | 7 | 5 | 8 | 3 |
| 3 | 6 | 8 | 5 | 1 | 2 | 4 | 9 | 7 |
| 9 | 5 | 2 | 7 | 8 | 1 | 3 | 4 | 6 |
| 6 | 4 | 1 | 9 | 5 | 3 | 8 | 7 | 2 |
| 8 | 3 | 7 | 2 | 6 | 4 | 1 | 5 | 9 |
| 7 | 1 | 6 | 4 | 3 | 5 | 9 | 2 | 8 |
| 5 | 9 | 3 | 8 | 2 | 6 | 7 | 1 | 4 |
| 2 | 8 | 4 | 1 | 7 | 9 | 6 | 3 | 5 |

## ಷೇರುಪೇಟೆ ವಹಿವಾಟು




## ಎನ್‌ಎಸ್‌ಇ ನಿಫ್ಟಿ

| | |
|---|---|
| ಹಿಂದಿನ ಅಂತ್ಯ | 17,397 |
| ಇಂದಿನ ಅಂತ್ಯ | 17,525 |
| ▲ | 128 |
| ದಿನದ ಗರಿಷ್ಠ | 17,548 |

## ವಿನಿಮಯ ದರ

| | |
|---|---|
| $ ಡಾಲರ್ | 79.63 |
| £ ಪೌಂಡ್ | 96.26 |
| € ಯುರೊ | 81.14 |
| ¥ ಯೆನ್ (100ಕ್ಕೆ) | 59 |

## ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹405 |
| 12 ಮೊಟ್ಟೆಗೆ | ₹57 |
| ಮೈಸೂರು | |
| 100 ಮೊಟ್ಟೆಗೆ | ₹405 |

## ಖಾದ್ಯ ತೈಲ ಮುಂಬೈ

(10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1620 (1620) |
| ಸೋಯಾ (ರಿಫೈನ್ಡ್) | ₹1270 (1245) |
| ಸೂರ್ಯಕಾಂತಿ (ರಿಫೈನ್ಡ್) | ₹1620(1600) |
| ಪಾಮೋಲಿನ್ | ₹1250 (1225) |

## ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹200-532

ದ್ವಿತಳಿ (ಬಿ.ವಿ) ₹177-816

## ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

| | |
|---|---|
| ಆರ್‌ಎಸ್‌ಎಸ್-4 | ₹167 |
| ಆರ್‌ಎಸ್‌ಎಸ್-5 | ₹156 |
| ಗುಡ್ ಲಾಟ್ | ₹148 |

## ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು

1ನೇ ದರ್ಜೆ ₹16000-20000

2ನೇ ದರ್ಜೆ ₹12000-15000

## ಮುಂಬೈ ಧಾರಣೆ

### ಶೇಂಗಾ

8-8-2022

| | |
|---|---|
| ಜಾವಾ 70/80(ಹೊಸ) | 11250-11300 |
| ಜಾವಾ 80/90(ಹೊಸ) | 10650-10700 |
| ದಪ್ಪ ಮಧ್ಯಪ್ರದೇಶ(ಹೊಸ) | 9950-10000 |
| ದಪ್ಪ ಗುಜರಾತ್(ಹೊಸ) | 10650-10700 |

### ಶೇಂಗಾ ಎಣ್ಣೆ (10 ಕೆಜಿಗೆ)

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1630 (1630) |
| ಒಂದು ವಾರದ ಡೆಲಿವರಿ | 1625 (1625) |
| ಸೋಯಾ ಕಚ್ಚಾ | 1220 (1180) |
| ಪಾಮ್ ವಾರದ ಡೆಲಿವರಿ | 1248 (1223) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1520 (1500) |

### ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

51,950 (51,775)

ಬೆಳ್ಳಿ ಕೆ.ಜಿ 58,150 (57,000)

ಆವರಣದಲ್ಲಿ ಶನಿವಾರದ ಧಾರಣೆ

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀಮತಿ ಇಂದಿರಾ ಎಂ.

ಇವರು ನಮ್ಮ ಬ್ಯಾಂಕಿನ ನಿರ್ದೇಶಕರಾಗಿದ್ದು ದಿನಾಂಕ 08-08-2022ನೇ ಸೋಮವಾರದಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರ ಆತ್ಮಕ್ಕೆ ಶಾಂತಿ ಕೋರುವ: ಅಧ್ಯಕ್ಷರು, ನಿರ್ದೇಶಕರು ಮತ್ತು ಸಿಬ್ಬಂದಿ ವರ್ಗ ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ, ಕೋರಮಂಗಲ, ಬೆಂಗಳೂರು ಹಾಗೂ ಮೃತರ ಕುಟುಂಬ ವರ್ಗದವರು.

ಮೂಲಸೌಕರ್ಯ ವಲಯದ ಯೋಜನೆಗಳಿಗೆ ಅನುದಾನ: ಸಚಿವ ಪಂಕಜ್ ಚೌಧರಿ ಮಾಹಿತಿ

# ₹1.62 ಲಕ್ಷ ಕೋಟಿ ಆಸ್ತಿ ನಗದೀಕರಣ

ನವದೆಹಲಿ (ಪಿಟಿಐ): 'ಮೂಲಸೌಕರ್ಯ ವಲಯದ ₹ 1.62 ಲಕ್ಷ ಕೋಟಿ ಮೌಲ್ಯದ ಆಸ್ತಿಗಳನ್ನು ಪ್ರಸಕ್ತ ಹಣಕಾಸು ವರ್ಷದಲ್ಲಿ ನಗದೀಕರಿಸಲಾಗುವುದು' ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ತಿಳಿಸಿದ್ದಾರೆ.

ಈ ಕುರಿತು ಅವರು ಸೋಮವಾರ ಲೋಕಸಭೆಗೆ ಮಾಹಿತಿ ನೀಡಿದ್ದಾರೆ. '2021-22ನೆಯ ಹಣಕಾಸು ವರ್ಷದಲ್ಲಿ ₹ 97 ಸಾವಿರ ಕೋಟಿ ಮೌಲ್ಯದ ಆಸ್ತಿಗಳನ್ನು ನಗದೀಕರಿಸಲಾಗಿದೆ' ಎಂದು ಹೇಳಿದ್ದಾರೆ.

'ಪ್ರಸಕ್ತ ಹಣಕಾಸು ವರ್ಷದಲ್ಲಿ, ರಾಷ್ಟ್ರೀಯ ಹೆದ್ದಾರಿಗಳ ಕಾರ್ಯಾಚರಣೆಯನ್ನು ಖಾಸಗಿಯವರಿಗೆ ದೀರ್ಘಾವಧಿಗೆ ಗುತ್ತಿಗೆ ನೀಡುವುದು, ವಿದ್ಯುತ್ ಉತ್ಪಾದನೆ ಮತ್ತು ಪೂರೈಕೆಗೆ ಸಂಬಂಧಿಸಿದ ಸ್ವತ್ತುಗಳ ಮಾರಾಟ, ಸರ್ಕಾರಿ-ಖಾಸಗಿ ಸಹಭಾಗಿತ್ವದ (ಪಿಪಿಪಿ) ಮೂಲಕ ವಿಮಾನ ನಿಲ್ದಾಣಗಳ ಗುತ್ತಿಗೆ, ಟವರ್ ಮತ್ತು ಗಣಿಗಾರಿಕೆ ಸ್ವತ್ತುಗಳ ನಗದೀಕರಣ ಸೇರಿದಂತೆ ಹಲವು ಸ್ವತ್ತುಗಳನ್ನು ನಗದೀಕರಿಸುವ ಉದ್ದೇಶ ಇದೆ' ಎಂದು ಅವರು ತಿಳಿಸಿದ್ದಾರೆ.



ದೇಶದ ಮೂಲಸೌಕರ್ಯ ವಲಯದ ಯೋಜನೆಗಳಿಗೆ ಅನುದಾನ ಒದಗಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು ಕಳೆದ ವರ್ಷ ₹ 6 ಲಕ್ಷ ಕೋಟಿ ಮೊತ್ತದ ರಾಷ್ಟ್ರೀಯ ಆಸ್ತಿ ನಗದೀಕರಣ ಯೋಜನೆಯನ್ನು (ಎನ್‌ಎಂಪಿ) ಘೋಷಿಸಿದೆ.

ಯೋಜನೆಯ ಅಡಿ ಗುರುತಿಸಿರುವ ವಲಯಗಳೆಂದರೆ; ಬಂದರು, ವಿಮಾನ ನಿಲ್ದಾಣ, ರೈಲ್ವೆ, ಗೋದಾಮು, ಅನಿಲ ಮತ್ತು ಕೊಳವೆ ಮಾರ್ಗ, ವಿದ್ಯುತ್ ಉತ್ಪಾದನೆ ಮತ್ತು ಸರಬರಾಜು, ಗಣಿಗಾರಿಕೆ, ದೂರಸಂಪರ್ಕ, ಕ್ರೀಡಾಂಗಣ, ನಗರದ ರಿಯಲ್ ಎಸ್ಟೇಟ್.

ಆಸ್ತಿ ನಗದೀಕರಣ ಯೋಜನೆಯ ಅಡಿಯಲ್ಲಿ ಆಸ್ತಿಯ ಮಾಲೀಕತ್ವವು ಕೇಂದ್ರ ಸರ್ಕಾರದ ಬಳಿಯಲ್ಲೇ ಇರುತ್ತದೆ. 'ಖಾಸಗಿ ವಲಯದ ಪಾಲುದಾರರು ಆಸ್ತಿಯನ್ನು ನಿರ್ದಿಷ್ಟ ಸಮಯದ ನಂತರ ಕೇಂದ್ರಕ್ಕೆ ವಾಪಸ್ ಕೊಡಬೇಕಾಗುತ್ತದೆ' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಯೋಜನೆಯ ಅನಾವರಣದ ಸಂದರ್ಭದಲ್ಲಿ ವಿವರಿಸಿದ್ದರು. ನಗದೀಕರಣ ಯೋಜನೆಯ ಅಡಿ ಕೇಂದ್ರವು ಜಮೀನು ಮಾರಾಟ ಮಾಡುವುದಿಲ್ಲ.

'ಎನ್‌ಎಂಪಿ ಯೋಜನೆಯು ಈಗಾಗಲೇ ಹೂಡಿಕೆ ಮಾಡಿರುವ ಆಸ್ತಿಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಬಗ್ಗೆ, ಅದರಿಂದ ಹೆಚ್ಚು ಆದಾಯ ಬರುವಂತೆ ಮಾಡುವ ಬಗ್ಗೆ ಗಮನ ನೀಡುತ್ತದೆ' ಎಂದು ನಿರ್ಮಲಾ ತಿಳಿಸಿದ್ದರು.

## ದೇಶದಾದ್ಯಂತ ಮಾರುಕಟ್ಟೆ ಧಾರಣೆ

| | |
|---|---|
| **ಏಲಕ್ಕಿ ಧಾರಣೆ** | |
| **ಸಕಲೇಶಪುರ** | |
| ಕೂಳೆ | 400-420 |
| ನಡುಗೋಲು | 450-480 |
| ರಾಶಿ | 500-600 |
| ರಾಶಿ ಉತ್ತಮ | 550-600 |
| ಜರಡಿ | 600-650 |
| ಹೆರಕಿದ್ದು | 1000-1100 |
| ಹಸಿರು ಸಾಧಾರಣ | 600-700 |
| ಹಸಿರು ಉತ್ತಮ | 900-1000 |
| ಹಸಿರು ಅತಿ ಉತ್ತಮ | 1150-1250 |
| ಕಾಳು ಮೆಣಸು | 485 |
| **ಅಡಿಕೆ** | |
| **ಬಂಟ್ವಾಳ** | |
| ಕೋಕ | 12500-25000 |
| ಹೊಸತು | 27500-45000 |
| ಹಳತು | 46000-56000 |
| **ಕಾರ್ಕಳ** | |
| ಹಳತು | 46000-56000 |
| ಹೊಸತು | 40000-45000 |
| **ಕುಮಟ** | |
| ಚಿಪ್ಪು | 28089-32229 |
| ಕೋಕ | 21569-31999 |
| ಫ್ಯಾಕ್ಟರಿ | 13889-22069 |
| ಹಳೆಚಾಲಿ | 42569-47099 |
| ಹೊಸಚಾಲಿ | 36599-40219 |
| **ಪುತ್ತೂರು** | |
| ಹೊಸತು | 32500-45500 |
| **ಸಾಗರ** | |
| ಬಿಳಿಗೋಟು | 25099-34129 |
| ಚಾಲಿ | 34110-38569 |
| ಕೋಕ | 23879-35601 |
| ಕೆಂಪುಗೋಟು | 30399-38500 |
| ರಾಶಿ | 35989-50799 |
| ಸಿಪ್ಪೆಗೋಟು | 17290-22289 |
| **ಶಿವಮೊಗ್ಗ** | |
| ಬೆಟ್ಟೆ | 51559-54709 |
| ಗೊರಬಲು | 32009-38599 |
| ರಾಶಿ | 46009-50419 |
| ಸರಕು | 56899-79040 |
| **ಸಿದ್ದಾಪುರ** | |
| ಬಿಳಿಗೋಟು | 26299-33099 |
| ಚಾಲಿ | 35669-40400 |
| ಕೋಕ | 26119-33600 |
| ಕೆಂಪುಗೋಟು | 33199-34599 |
| ರಾಶಿ | 48509-51109 |
| ತಟ್ಟಿಬೆಟ್ಟೆ | 36999-39009 |
| **ಶಿರಸಿ** | |
| ಬೆಟ್ಟೆ | 38199-45609 |
| ಬಿಳಿಗೋಟು | 2689-33899 |
| ಚಾಲಿ | 36809-41351 |
| ರಾಶಿ | 44010-52699 |
| **ಯಲ್ಲಾಪುರ** | |
| ಬಿಳಿಗೋಟು | 26312-34369 |
| ಚಾಲಿ | 35519-40809 |
| ಕೋಕ | 19099-30699 |
| ಕೆಂಪುಗೋಟು | 30400-35627 |
| ರಾಶಿ | 47099-55568 |
| ತಟ್ಟಿಬೆಟ್ಟೆ | 37499-46719 |

### ಕಾಫಿ (50 ಕೆ.ಜಿಗೆ ₹ ಗಳಲ್ಲಿ)

| | ಮೂಡಿಗೆರೆ | ಹಾಸನ | | |
|---|---|---|---|---|
| | ಮುದ್ರೆಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | 15900 | 15500 | 15850 | 209.90 ಸೆಂಟ್ಸ್ |
| ಎಸಿ | 8820 | 8400 | 8800 | |
| ಆರ್‌ಪಿ | 9500 | 9500 | 9700 | ಲಂಡನ್ |
| ಆರ್‌ಸಿ | 4800 | 4500 | 4550 | 2027 ಡಾಲರ್ಸ್ |

## ಏರ್‌ಟೆಲ್ ಲಾಭ ಐದು ಪಟ್ಟು ಏರಿಕೆ

ನವದೆಹಲಿ (ಪಿಟಿಐ): ದೂರಸಂಪರ್ಕ ಸೇವಾ ಕಂಪನಿ ಭಾರ್ತಿ ಏರ್‌ಟೆಲ್‌ನ ಜೂನ್ ತ್ರೈಮಾಸಿಕದ ಲಾಭ ಐದು ಪಟ್ಟು ಹೆಚ್ಚಳ ಆಗಿದೆ. ಕಂಪನಿಯು ಜೂನ್ ತ್ರೈಮಾಸಿಕದಲ್ಲಿ ₹ 1,607 ಕೋಟಿ ಲಾಭ ಗಳಿಸಿದೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹ 283.5 ಕೋಟಿ ಲಾಭ ಗಳಿಸಿತ್ತು. ಕಂಪನಿಯ ಕಾರ್ಯಾಚರಣೆ ವರಮಾನವು ಜೂನ್ ತ್ರೈಮಾಸಿಕದಲ್ಲಿ ₹ 32,805 ಕೋಟಿಗೆ ಹೆಚ್ಚಳವಾಗಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಕಾರ್ಯಾಚರಣೆ ವರಮಾನವು ₹ 26,854 ಕೋಟಿ ಆಗಿತ್ತು.

ಕಂಪನಿಯು ಭಾರತದಲ್ಲಿ ಒದಗಿಸುತ್ತಿರುವ ಮೊಬೈಲ್ ಸೇವೆಗಳಿಂದ ಬರುವ ವರಮಾನವು ಜೂನ್ ತ್ರೈಮಾಸಿಕದಲ್ಲಿ ಶೇ 27ರಷ್ಟು ಹೆಚ್ಚಾಗಿದ್ದು ₹ 18,220 ಕೋಟಿಗೆ ತಲುಪಿದೆ. ಇದು ಹಿಂದಿನ ವರ್ಷದ ಜೂನ್ ತ್ರೈಮಾಸಿಕದಲ್ಲಿ ₹14,305 ಕೋಟಿ ಆಗಿತ್ತು.

## ಟಾಟಾ ಮೋಟರ್ಸ್ ತೆಕ್ಕೆಗೆ ಫೋರ್ಡ್ ತಯಾರಿಕಾ ಘಟಕ

ನವದೆಹಲಿ (ಪಿಟಿಐ): ಗುಜರಾತ್‌ನ ಸಾನಂದದಲ್ಲಿ ಇರುವ ಫೋರ್ಡ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ (ಎಫ್‌ಐಪಿಎಲ್) ಘಟಕವನ್ನು ₹725.7 ಕೋಟಿಗೆ ಸ್ವಾಧೀನಪಡಿಸಿಕೊಳ್ಳುವ ಒಪ್ಪಂದಕ್ಕೆ ಟಾಟಾ ಮೋಟರ್ಸ್ ಸಹಿ ಮಾಡಿದೆ.

ಘಟಕವನ್ನು ಸ್ವಾಧೀನಪಡಿಸಿಕೊಳ್ಳಲು ಎಫ್‌ಐಪಿಎಲ್ ಜೊತೆ ಟಾಟಾ ಮೋಟರ್ಸ್‌ನ ಅಂಗಸಂಸ್ಥೆ ಆಗಿರುವ ಟಾಟಾ ಪ್ಯಾಸೆಂಜರ್ ಎಲೆಕ್ಟ್ರಿಕ್ ಮೊಬಿಲಿಟಿ ಲಿಮಿಟೆಡ್ (ಟಿಪಿಇಎಂಎಲ್) 'ಯುನಿಟ್ ಟ್ರಾನ್ಸ್‌ಫರ್ ಅಗ್ರಿಮೆಂಟ್'ಗೆ ಸಹಿ ಮಾಡಿದೆ.

'ಈ ಒಪ್ಪಂದದಿಂದಾಗಿ ಪ್ರಯಾಣಿಕ ವಾಹನ ವಿಭಾಗದಲ್ಲಿ ಟಾಟಾ ಮೋಟರ್ಸ್‌ನ ಮಾರುಕಟ್ಟೆ ಸ್ಥಾನವು ಇನ್ನಷ್ಟು ಬಲಗೊಳ್ಳಲಿದೆ. ಇದರ ಜೊತೆಗೆ ವಿದ್ಯುತ್ ಚಾಲಿತ ವಾಹನ ವಿಭಾಗದಲ್ಲಿ ನಾಯಕತ್ವದ ಸ್ಥಾನ ಹೊಂದಲು ಅನುಕೂಲ ಆಗಲಿದೆ' ಎಂದು ಟಾಟಾ ಮೋಟರ್ಸ್‌ನ ಪ್ರಯಾಣಿಕ ವಾಹನಗಳ ವಿಭಾಗದ ವ್ಯವಸ್ಥಾಪಕ ನಿರ್ದೇಶಕ ಶೈಲೇಶ್ ಚಂದ್ರ ತಿಳಿಸಿದ್ದಾರೆ.

## 'ರಷ್ಯಾ-ಉಕ್ರೇನ್ ಅಧ್ಯಕ್ಷರ ಭೇಟಿ ಸದ್ಯಕ್ಕೆ ಇಲ್ಲ'

ಮಾಸ್ಕೊ(ರಾಯಿಟರ್ಸ್): ಪ್ರಸ್ತುತ ಸಂದರ್ಭದಲ್ಲಿ ರಷ್ಯಾ ಮತ್ತು ಉಕ್ರೇನ್ ಅಧ್ಯಕ್ಷರ ಭೇಟಿಗೆ ಯಾವುದೇ ಆಧಾರವಿಲ್ಲ ಎಂದು ರಷ್ಯಾ ಹೇಳಿದೆ.

ಶಾಂತಿ ಮಾತುಕತೆಯನ್ನು ಕೈಬಿಡಬೇಕು ಎಂಬ ಟರ್ಕಿಯ ಪ್ರಸ್ತಾವ ಕುರಿತ ಪ್ರಶ್ನೆಗೆ ರಷ್ಯಾದ ವಕ್ತಾರ ಡಿಮಿಟ್ರಿ ಪೆಸ್ಕೊವ್ ಅವರು ಈ ಮಾತು ಹೇಳಿದರು.

ಆಯಾ ಹಂತದಲ್ಲಿ ಅಗತ್ಯ ಸಿದ್ಧತೆಗಳು ನಡೆದ ನಂತರವೇ ವ್ಲಾಡಿಮಿರ್ ಪುಟಿನ್ ಮತ್ತು ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ಭೇಟಿ ಸಾಧ್ಯ ಆಗಬಹುದು ಎಂದು ಹೇಳಿದರು.

## ಸುದ್ದಿ 2 ನಿಮಿಷ

### ಸೆನ್ಸೆಕ್ಸ್ 465 ಅಂಶ ಏರಿಕೆ

ಮುಂಬೈ (ಪಿಟಿಐ): ಜಾಗತಿಕ ಮಾರುಕಟ್ಟೆಗಳಲ್ಲಿನ ಸಕಾರಾತ್ಮಕ ಚಲನೆಯ ಜೊತೆಗೆ ಎಚ್‌ಡಿಎಫ್‌ಸಿ, ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ಷೇರುಗಳು ಉತ್ತಮ ಗಳಿಕೆ ಕಂಡವು. ಇದರಿಂದಾಗಿ ದೇಶಿ ಷೇರುಪೇಟೆಗಳ ವಹಿವಾಟು ಸೋಮವಾರ ಏರಿಕೆ ಕಂಡಿತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 465 ಅಂಶ ಹೆಚ್ಚಾಗಿ 58,853 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 127 ಅಂಶ ಏರಿಕೆ ಕಂಡು 17,525 ಅಂಶಗಳಿಗೆ ತಲುಪಿತು.

'ಷೇರುಪೇಟೆಯಲ್ಲಿನ ಸದ್ಯದ ಏರಿಕೆಗೆ ವಿದೇಶಿ ಸಾಂಸ್ಥಿಕ ಬಂಡವಾಳದ ಒಳಹರಿವು ಮತ್ತು ಕಚ್ಚಾ ತೈಲ ದರ ಇಳಿಕೆ ಪ್ರಮುಖ ಕಾರಣಗಳು' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಏಷ್ಯಾದಲ್ಲಿ ಸೋಲ್, ಶಾಂಘೈ ಮತ್ತು ಟೋಕಿಯೊ ಷೇರುಪೇಟೆಗಳು ಗರಿಷ್ಠ ಮಟ್ಟದಲ್ಲಿ ವಹಿವಾಟು ಅಂತ್ಯಗೊಳಿಸಿದವು. ಹಾಂಗ್‌ಕಾಂಗ್ ಷೇರುಪೇಟೆ ನಷ್ಟ ಕಂಡಿತು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರ ಶೇ 0.68ರಷ್ಟು ಇಳಿಕೆ ಕಂಡು ಒಂದು ಬ್ಯಾರಲ್‌ಗೆ 94.32 ಡಾಲರ್‌ಗೆ ತಲುಪಿತು.

**ರೂಪಾಯಿ 39 ಪೈಸೆ ಇಳಿಕೆ:** ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಸೋಮವಾರ 39 ಪೈಸೆ ಇಳಿಕೆ ಕಂಡು ಒಂದು ಡಾಲರ್‌ಗೆ ₹79.63ಕ್ಕೆ ತಲುಪಿತು.

ಕಚ್ಚಾ ತೈಲ ದರ ಇಳಿಕೆ ಮತ್ತು ದೇಶಿ ಷೇರುಪೇಟೆಗಳ ಸಕಾರಾತ್ಮಕ ವಹಿವಾಟಿನಿಂದಾಗಿ ರೂಪಾಯಿ ಮೌಲ್ಯವು ಒಂದು ಹಂತದವರೆಗೆ ನಷ್ಟ ಕಾಣುವುದಕ್ಕೆ ತಡೆ ಬಿದ್ದಿತ್ತು ಎಂದು ವರ್ತಕರು ಹೇಳಿದ್ದಾರೆ.



### ಇಪಿಎಫ್‌ಒ: ಇಟಿಎಫ್ ಹೂಡಿಕೆ ₹ 1.59 ಲಕ್ಷ ಕೋಟಿ

ನವದೆಹಲಿ (ಪಿಟಿಐ): ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆಯು (ಇಪಿಎಫ್‌ಒ) ವಿನಿಮಯ ವಹಿವಾಟು ನಿಧಿಗಳಲ್ಲಿ (ಇಟಿಎಫ್) ಒಟ್ಟು ₹ 1.59 ಲಕ್ಷ ಕೋಟಿ ತೊಡಗಿಸಿದ್ದು, ಅದರ ಮೌಲ್ಯವು ₹ 2.26 ಲಕ್ಷ ಕೋಟಿ ಆಗಿದೆ ಎಂದು ಕೇಂದ್ರ ಸರ್ಕಾರ ಸಂಸತ್ತಿಗೆ ಸೋಮವಾರ ತಿಳಿಸಿದೆ.

ಮಾರ್ಚ್‌ವರೆಗಿನ ಮಾಹಿತಿ ಆಧರಿಸಿ ಕೇಂದ್ರ ಈ ವಿವರ ನೀಡಿದೆ. ಇಪಿಎಫ್‌ಒ 2015ರಿಂದ ಇಟಿಎಫ್‌ಗಳಲ್ಲಿ ಹೂಡಿಕೆ ಮಾಡುತ್ತಿದೆ. ಆರಂಭದಲ್ಲಿ ಅದು ತನ್ನ ಒಟ್ಟು ಹೂಡಿಕೆಗಳಲ್ಲಿ ಶೇಕಡ 5ರಷ್ಟನ್ನು ಷೇರು ಮಾರುಕಟ್ಟೆಯಲ್ಲಿ ತೊಡಗಿಸಿತು. ನಂತರದ ದಿನಗಳಲ್ಲಿ ಅದನ್ನು ಶೇ 10ಕ್ಕೆ ಹೆಚ್ಚಿಸಲಾಯಿತು. 2017-18ರಿಂದ ಶೇ 15ರಷ್ಟು ಮೊತ್ತವನ್ನು ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

General

ತಕ್ಷಣ ಬೇಕಾಗಿದ್ದಾರೆ: ಮಾರ್ಕೆಟಿಂಗ್‌ಅಲ್ಲ, ನೇರನೇಮಕಾತಿ ಕಂಪನಿಗಳಿಗೆ, ಆಫೀಸ್ಗಳಿಗೆ ವಿದ್ಯಾರ್ಹತೆಯಿರುವ, ವಿದ್ಯಾರ್ಹತೆಯಿಲ್ಲದವರಿಗೂ, ಯುವಕ, ಯುವತಿಯರಿಗೆವಸತಿ ಊಟದೊಂದಿಗೆ 16,500-54,600/-. 9980462311, 9620228807

ನಿರುದ್ಯೋಗಿಗಳಿಗೆ ಸದವಕಾಶ. ನಮ್ಮ ಕಂಪನಿಯ ಅಮೃತಬಳ್ಳಿ ನೋನಿಯನ್ನು ಕಾರಿನಲ್ಲಿ ಹೋಗಿ ಪ್ರಚಾರ ಮಾಡಿ ಬಿಜಿನೆಸ್ ಮಾಡಿ ದಿನಕ್ಕೆ 800- 1200ರೂವರೆಗೆ ಪ್ರತಿ ದಿನ ಸಂಪಾದಿಸಿ. (ಉಚಿತ ವಸತಿ) ಸಂಪರ್ಕಿಸಿ: 8904379634/ 9513670249

EDUCATION CORNER ಕ್ಲಾಸಿಫೈಡ್ಸ್

VIVEKANANDA INSTITUTE OF TECHNOLOGY
AN INSTITUTE OF JANATHA EDUCATION SOCIETY®
Recognised by GOK, Affiliated to VTU & Approved by AICTE
CET CODE: E087 | ESTD.: 1997 | COMEDK CODE: E149

BE: Bachelor of Engineering
- Computer Science
- Information Science
- Artificial Intelligence & Machine Learning
- Electronics & Communication
- Mechanical
- Civil

Ph.D Program
CSE | E&C | MECH
Maths | Chemistry
Physics

VKIT

2022-23 Admissions Open

College of Pharmacy
D.Pharm
B.Pharm
M.Pharm
CET B060

Institute of Management
BCA | BCA - Hons.
BBA | BBA - Hons.
MBA | M.Com
PGCET B-323

College of Law
5 Yrs : BA - LLB | B.Com - LLB
3 Yrs : LLB

Degree College
BSc | BA | BA-Journalism
B.Com | B.Com-Data Analytics
NAAC ACCREDITED

7625013738
9513953482

JES

Admission Center: Dr.Rajkumar Road, Next to Orion Mall, Rajajinagar II Stage, Bengaluru-560055
VKIT Campus: Kumbalagodu, Kengeri, Bengaluru-560074

ಭವಿಷ್ಯ

Astrology

ಕೇರಳ ಬಂಗಾಳಿ ವಶೀಕರಣ ಮೋಡಿ ಸಿದ್ಧಿಯನ್ನು ವಶದಲ್ಲಿರಿಸಿಕೊಂಡಿರುವ, ಸ್ತ್ರೀ ಪುರುಷ ವಶೀಕರಣ ಸಂತಾನ, ಮರಣ ಭಯ, ಪ್ರೇಮ ವಿಚಾರ. 9632075984

★॥ಆದಿಶಕ್ತಿ ಹುಲಿಗೆಮ್ಮ ದೇವಿ ಜ್ಯೋತಿಷ್ಯರು॥★ ಸ್ತ್ರೀಪುರುಷ ವಶೀಕರಣ, ಸಂಭೋಗ ವಶಿಕರಣ ಇನ್ನೂಯಾವುದೇ ಸಮಸ್ಯೆಗಳಿಗೆ 24ಗಂಟೆಗಳಲ್ಲಿ ಶಾಶ್ವತ ಪರಿಹಾರ. ಪಂಡಿತ್.ಮಂಜುನಾಥ್‌ಭಟ್. 9900222591

★ಸಿಗಂಧೂರುಚೌಡೇಶ್ವರಿ ಜ್ಯೋತಿಷ್ಯ★ ಸ್ತ್ರೀಪುರುಷ ವಶೀಕರಣ, ದಾಂಪತ್ಯ ಕಲಹ, ಉದ್ಯೋಗ, ಹಣಕಾಸು ಇನ್ನಾವುದೇ ಸಮಸ್ಯೆಗಳಿಗೆ 100%ಪರಿಹಾರ. ಪಂಡಿತ್ ಲಕ್ಷ್ಮಣ್ ಆಚಾರ್ಯ 7019622190

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

★॥ಶ್ರೀಕೇದಾರನಾಥ॥★ ಆರಾಧನೆಯಿಂದ ಪ್ರೀತಿಪ್ರೇಮ, ಸ್ತ್ರೀಪುರುಷ ವಶೀಕರಣ, ದಾಂಪತ್ಯ, ಜನವಶೀಕರಣ, ಧನವಶೀಕರಣ, ಕೋರ್ಟ್‌ಕಛೇರಿ ಸಾಲಬಾಧೆ ಯಾವುದೇ ಸಮಸ್ಯೆಯಿದ್ದರೂ. 100% ಶಾಶ್ವತ ಪರಿಹಾರ. 9148773459

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರವಾಸ

Travel

13.09.2022 06.10.2022 14.11.2022 ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 14.10.2022 06.11.2022 ದುಬೈ 5 ದಿನಗಳು. 09.09.2022 19.10.2022 27.11.2022 ನೇಪಾಳ 11 ದಿನಗಳು. 06.10.2022 02.11.2022 06.12.2022 ಕಾಶಿ,ಗಯಾ,ಅಯೋಧ್ಯ 7ದಿನಗಳು. 14.09.2022 13.10.2022 12.11.2022 ಗುಜರಾತ್ 8ದಿನಗಳು. 27.09.2022 21.10.2022 20.11.2022 ರಾಜಸ್ಥಾನ್ 8 ದಿನಗಳು. 07.10.2022 11.11.2022 ದೆಹಲಿ,ಆಗ್ರಾ,ಜೈಪುರ್ 6 ದಿನಗಳು. ಜೈನ್ ಟ್ರಾವಲ್ಸ್ ಬೆಂಗಳೂರು-3 9448402248 7022547922

DH ಪ್ರಜಾವಾಣಿ

Classifieds EDUCATION SPECIAL

SPECIAL RATES FOR • Admission Notice, Education Success • Congratulation Ads

For More Details Contact:
Jerry Louis : 9731810277 | Ravichandra : 9901641752
Vishal GM : 9845114560 | Tanveer : 9886213331
Email : dhclassifieds@deccanherald.co.in

ತೈವಾನ್ ಗಡಿಯಲ್ಲಿ ಪಿಎಲ್‌ಎ • ಯುದ್ಧ ವಿಮಾನಗಳ ಹಾರಾಟ

# ಮುಂದುವರಿದ ಚೀನಾ ಸಮರಾಭ್ಯಾಸ

ಬೀಜಿಂಗ್(ಪಿಟಿಐ): ಅಮೆರಿಕ ಜನಪ್ರತಿನಿಧಿಗಳ ಸಭೆಯ ಸ್ಪೀಕರ್ ನ್ಯಾನ್ಸಿ ಪೆಲೋಸಿ ಅವರು ತೈಪೆಗೆ ಭೇಟಿ ನೀಡಿದ್ದಕ್ಕೆ ಪ್ರತೀಕಾರವಾಗಿ ತೈವಾನ್ ಗಡಿಯಲ್ಲಿ ನಡೆಸುತ್ತಿರುವ ಸಮರಾಭ್ಯಾಸವನ್ನು ಚೀನಾದ ಪಿಎಲ್‌ಎ ನಿಗದಿತ ನಾಲ್ಕು ದಿನಗಳ ನಂತರವೂ ಮುಂದುವರಿಸಿದೆ.

ಚೀನಾದ ಪೀಪಲ್ಸ್ ಲಿಬರೇಷನ್ ಆರ್ಮಿಯ (ಪಿಎಲ್‌ಎ) ಸಾಗರೋತ್ತರ ವಿದ್ಯಮಾನದ ಉಸ್ತುವಾರಿ ಘಟಕ ತೈವಾನ್ ದ್ವೀಪ ವ್ಯಾಪ್ತಿಯ ಸಮುದ್ರ ವ್ಯಾಪ್ತಿಯಲ್ಲಿ ತಾಲೀಮು ಮುಂದುವರಿಯಲಿದೆ ಎಂದು ತಿಳಿಸಿದೆ.

ಚೀನಾವು ತನ್ನ ಭೌಗೋಳಿಕ ಭಾಗ ಎಂದೇ ಪ್ರತಿಪಾದಿಸುತ್ತಿರುವ ತೈಪೆಗೆ ಪೆಲೋಸಿ ಅವರು ಭೇಟಿ ನೀಡಿದ್ದಕ್ಕೆ ಆಕ್ರೋಶ ವ್ಯಕ್ತಪಡಿಸಿದ್ದ ಚೀನಾ ಬಳಿಕ ತಾಲೀಮು ಆರಂಭಿಸಿತ್ತು. ಪಿಎಲ್‌ಎ ತನ್ನ ಎಲ್ಲ ತುಕಡಿಗಳ ಜಂಟಿ ಸಮರಾಭ್ಯಾಸವನ್ನು ತೈವಾನ್ ಆಸುಪಾಸಿನಲ್ಲಿ ನಡೆಸಿತ್ತು.

ತೈವಾನ್ ವ್ಯಾಪ್ತಿಯ ವಾಯು ಮಾರ್ಗದಲ್ಲಿ ಚೀನಾದ ಯುದ್ಧ ವಿಮಾನಗಳು ಈಚೆಗೆ ಹಾರಾಟ ನಡೆಸಿದವು –ಎಪಿ ಚಿತ್ರ

ಸಮರಾಭ್ಯಾಸ ಮುಂದುವರಿಯಲಿದೆ ಎಂದು ಹೇಳಿರುವ ಪಿಎಲ್‌ಎ, ಸ್ಥಳದ ವಿವರವನ್ನು ಬಹಿರಂಗಪಡಿಸಿಲ್ಲ. ಜಲ ಮತ್ತು ವಾಯು ಮಾರ್ಗದ ಸಮರಾಭ್ಯಾಸವನ್ನು ಚೀನಾ ಈಗ ಮುಂದುವರಿಸಿದೆ ಎಂದು ಸ್ಥಳೀಯ ಗ್ಲೋಬಲ್ ಟೈಮ್ಸ್ ವರದಿ ಮಾಡಿದೆ.

ಪಿಎಲ್‌ಎ ಕಮ್ಯಾಂಡ್ ಅವರು ಈ ಸಂಬಂಧ ನೀಡಿರುವ ಹೇಳಿಕೆಯಲ್ಲಿ ನಿಗದಿಯಂತೆ ಭಾನುವಾರವೂ ಸಮರಾಭ್ಯಾಸ ನಡೆದಿದೆ. ಭೂಮಿ ಮತ್ತು ವಾಯುಮಾರ್ಗದಲ್ಲಿ ದೂರಗಾಮಿ ಗುರಿಯನ್ನು ಕೇಂದ್ರೀಕರಿಸಿ ಸಮರಾಭ್ಯಾಸ ನಡೆದಿದೆ ಎಂದು ತಿಳಿಸಿದ್ದಾರೆ.

ತೈವಾನ್‌ನ ಉತ್ತರ ಮತ್ತು ದಕ್ಷಿಣಾಭಿಮುಖವಾಗಿ ಹಲವು ಯುದ್ಧ ವಿಮಾನಗಳು ಹಾರಾಟ ನಡೆಸಿದ್ದು, ನಿರ್ದಿಷ್ಟ ಗುರಿಯನ್ನು ಕೇಂದ್ರೀಕರಿಸಿ ನೆಲೆಯನ್ನು ನಾಶಗೊಳಿಸುವ ತಾಲೀಮು ನಡೆಸಿದವು.

### ಪ್ರತಿದಾಳಿ ತಾಲೀಮು: ತೈವಾನ್

ತೈಪೆ (ಎಎಫ್‌ಪಿ): ಚೀನಾದ ಸಮರಾಭ್ಯಾಸ ಮುಂದುವರಿದಿರುವಂತೆಯೇ ತೈವಾನ್ ಕೂಡಾ ಯಾವುದೇ ದಾಳಿಯನ್ನು ಎದುರಿಸುವ ಕುರಿತಂತೆ ಸೇನಾ ತಾಲೀಮು ನಡೆಸಲು ತೀರ್ಮಾನಿಸಿದೆ.

ಸ್ವಯಂ ಆಡಳಿತ ವ್ಯವಸ್ಥೆಯುಳ್ಳ ದ್ವೀಪರಾಷ್ಟ್ರ ತೈವಾನ್, ಚೀನಾದಿಂದ ನಿರಂತರವಾಗಿ ಅತಿಕ್ರಮಣ ಭೀತಿಯನ್ನು ಎದುರಿಸುತ್ತಿದೆ. ಬಲವಂತವಾಗಿ ಅತಿಕ್ರಮಣ ಮಾಡಿಕೊಳ್ಳುವ ಸಾಧ್ಯತೆಯನ್ನು ಚೀನಾ ಪ್ರತಿಪಾದಿಸಿದೆ.

ಪಿಂಗ್‌ಟುಂಗ್ ಪ್ರಾಂತ್ಯದಲ್ಲಿ ಮಂಗಳವಾರದಿಂದ ಮೂರು ದಿನ ಈ ತಾಲೀಮು ನಡೆಯಲಿದೆ ಎಂದು ತೈವಾನ್‌ನ ಸೇನೆಯು ತಿಳಿಸಿದೆ. ಪ್ರತಿದಾಳಿ ಮತ್ತು ರಕ್ಷಣಾತ್ಮಕ ಕ್ರಮಗಳ ಕುರಿತು ತಾಲೀಮು ನಡೆಸಲಾಗುವುದು ಎಂದು ಏಯ್ತ್ ಆರ್ಮಿ ಕಾರ್ಪ್ಸ್ ವಕ್ತಾರ ಲೌ ವೋ ಜೇ ಹೇಳಿದರು.

ಆಯಕಟ್ಟಿನ ಪ್ರದೇಶಗಳಲ್ಲಿ ಸೇನೆಯ ನಿಯೋಜನೆಯೂ ಈ ತಾಲೀಮಿನಲ್ಲಿ ಸೇರಿದೆ ಎಂದು ಅವರು ತಿಳಿಸಿದ್ದಾರೆ.

## ಗಾಜಾ ಗಡಿ ಮತ್ತೆ ತೆರೆದ ಇಸ್ರೇಲ್

ಗಾಜಾ/ಜೆರುಸಲೇಂ (ರಾಯಿಟರ್ಸ್): ಉಗ್ರಗಾಮಿ ಇಸ್ಲಾಮಿಕ್ ಜಿಹಾದ್ ಗುಂಪಿನೊಂದಿಗೆ ಈಜಿಪ್ಟ್ ಮಧ್ಯಸ್ಥಿಕೆಯಲ್ಲಿ ನಡೆದ ಕದನ ವಿರಾಮದ ಬಳಿಕ ಇಸ್ರೇಲ್ ಸೋಮವಾರ ಗಾಜಾ ಗಡಿಯನ್ನು ಮತ್ತೆ ತೆರೆದಿದೆ.

ಇಸ್ರೇಲ್ ಮತ್ತು ಪ್ಯಾಲೆಸ್ಟೀನ್ ಉಗ್ರಗಾಮಿಗಳ ನಡುವೆ ಕದನ ವಿರಾಮ ಒಪ್ಪಂದದೊಂದಿಗೆ ಗಾಜಾದಲ್ಲಿನ ಮೂರು ದಿನಗಳ ಹೋರಾಟ ಸೋಮವಾರ ಕೊನೆಗೊಂಡಿತು.

ಇಸ್ರೇಲ್ ವೈಮಾನಿಕ ದಾಳಿಯಲ್ಲಿ ಹಿರಿಯ ಇಸ್ಲಾಮಿಕ್ ಜಿಹಾದ್ ಕಮಾಂಡರ್ ಹತ್ಯೆ ನಂತರ ನಡೆದ 56 ಗಂಟೆಗಳ ಹಿಂಸಾಚಾರದಲ್ಲಿ 15 ಮಕ್ಕಳು ಸೇರಿದಂತೆ ಕನಿಷ್ಠ 44 ಜನರು ಸಾವನ್ನಪ್ಪಿದರು. ಇರಾನ್ ಬೆಂಬಲಿತ ಗುಂಪು ಯೋಜಿಸಿರುವ ದಾಳಿ ವಿರುದ್ಧ ಕ್ರಮ ಕೈಗೊಳ್ಳುವುದು ಪೂರ್ವ ನಿರ್ಧರಿತವಾಗಿತ್ತು ಎಂದು ಇಸ್ರೇಲ್ ಹೇಳಿದೆ.

ಗಾಜಾ ಪಟ್ಟಿಯಲ್ಲಿ ನೂರಾರು ಜನರು ಗಾಯಗೊಂಡರು ಮತ್ತು ಹಲವಾರು ಮನೆಗಳು ನಾಶವಾದವು. ಪ್ಯಾಲೆಸ್ಟೀನ್ ಉಗ್ರಗಾಮಿಗಳು ಇಸ್ರೇಲ್‌ನ ಮೇಲೆ ಸಾವಿರಕ್ಕೂ ಹೆಚ್ಚು ರಾಕೆಟ್ ದಾಳಿ ನಡೆಸಿದರು. ದಕ್ಷಿಣ ಪ್ರದೇಶ ಮತ್ತು ಟೆಲ್‌ಅವಿವ್ ಸೇರಿದಂತೆ ಪ್ರಮುಖ ನಗರಗಳ ನಿವಾಸಿಗಳು ಆಶ್ರಯಕ್ಕಾಗಿ ಪಲಾಯನ ಮಾಡಿದರು.

ಭಾನುವಾರ ತಡರಾತ್ರಿ ಕದನ ವಿರಾಮದ ನಂತರ ಸುದ್ದಿಗೋಷ್ಠಿಯಲ್ಲಿ ಇಸ್ಲಾಮಿಕ್ ಜಿಹಾದ್ ನಾಯಕ ಜಿಯಾದ್ ಅಲ್-ನಖಾಲಾ, 'ಇದು ವಿಜಯ' ಎಂದು ಘೋಷಿಸಿದರು.

## ಹಣದುಬ್ಬರ, ಜೀವನವೆಚ್ಚ ಏರಿಕೆ ಸುನಕ್–ಟ್ರುಸ್ ಮಧ್ಯೆ ಬಿಸಿ ಚರ್ಚೆ

ಲಂಡನ್(ಪಿಟಿಐ): ಬ್ರಿಟನ್‌ನ ಪ್ರಧಾನಿ ಸ್ಥಾನದ ಸ್ಪರ್ಧೆಯಲ್ಲಿರುವ ರಿಷಿ ಸುನಕ್ ಮತ್ತು ಲಿಜ್ ಟ್ರುಸ್ ಅವರು, ಹಣದುಬ್ಬರ ಮತ್ತು ದೇಶದಲ್ಲಿ ಜೀವನವೆಚ್ಚದ ತೀವ್ರ ಏರಿಕೆಗೆ ಕಡಿವಾಣ ಹಾಕುವ ತಮ್ಮ ಪ್ರಸ್ತಾವ ಕುರಿತಂತೆ ವಾಕ್ಸಮರ ನಡೆಸಿದ್ದಾರೆ.

ಏರುತ್ತಿರುವ ಹಣದುಬ್ಬರ ಮತ್ತು ಅದಕ್ಕೆ ಕಡಿವಾಣ ಹಾಕುವ ಕ್ರಮವು ಉಭಯ ಸ್ಪರ್ಧಿಗಳ ನಡುವಿನ ಬಿಸಿ ಚರ್ಚೆಗೆ ಈಗ ವಸ್ತುವಾಗಿದೆ. ಉಭಯ ನಾಯಕರು ಭಿನ್ನ ಪರಿಹಾರ ಕ್ರಮಗಳನ್ನು ಮುಂದಿಟ್ಟಿದ್ದಾರೆ.

ಆಯ್ಕೆಯಾದಲ್ಲಿ ಹಣದುಬ್ಬರಕ್ಕೆ ಕಡಿವಾಣ ಹಾಕಲು ತ್ವರಿತಗತಿಯಲ್ಲಿ ತೆರಿಗೆ ಕಡಿತ ಮಾಡುವ ಪ್ರಸ್ತಾವವನ್ನು ಟ್ರುಸ್ ಮುಂದಿಟ್ಟಿದ್ದರೆ, ತೆರಿಗೆ ಕಡಿತದ ಜೊತೆಗೆ ಬಾಧಿತ ಕುಟುಂಬಗಳಿಗೆ ಅಗತ್ಯ ನೆರವು ನೀಡುವ ಭರವಸೆಯನ್ನು ರಿಷಿ ಸುನಕ್ ನೀಡಿದ್ದಾರೆ.

'ಸುದೀರ್ಘ ಚಳಿಗಾಲ, ಬೆಲೆ ಏರಿಕೆಯಿಂದ ಹಲವು ಕುಟುಂಬಗಳು ಬಾಧಿತವಾಗಿವೆ. ತೆರಿಗೆ ಕಡಿತದಿಂದ ವಾಣಿಜ್ಯ ವರ್ಗಕ್ಕೆ ಹೆಚ್ಚು ನೆರವಾಗಬಹುದು. ಬಾಧಿತ ಕುಟುಂಬಗಳಿಗೆ ಹೆಚ್ಚು ನೆರವಾಗಲು ದಿಟ್ಟ ನಿರ್ಧಾರ ಅಗತ್ಯವಾಗಿದೆ' ಎಂದು ಸುನಕ್ ಪ್ರತಿಪಾದಿಸಿದ್ದಾರೆ.

ಇನ್ನೊಂದೆಡೆ, ತೆರಿಗೆ ಕಡಿತ ಕುರಿತಂತೆ ಟ್ರುಸ್ ಅವರು ಕಳೆದ ವಾರಾಂತ್ಯ ನೀಡಿರುವ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಲಾಗಿದೆ ಎಂದು ಅವರ ಬೆಂಬಲಿಗರು ಪ್ರತಿಪಾದಿಸಿದ್ದಾರೆ.

## ಚೀನಾದಲ್ಲಿ ನಿಯಂತ್ರಣಕ್ಕೆ ಬಾರದ ಕೋವಿಡ್

ಬೀಜಿಂಗ್(ಎಪಿ): ಲಾಕ್‌ಡೌನ್ ಜಾರಿ ಮಾಡಿದ ಬಳಿಕವೂ ದಕ್ಷಿಣ ಚೀನಾದ ಹೈನಾನ್ ಪ್ರಾಂತ್ಯದಲ್ಲಿ ಸೋಮವಾರ 259 ಕೊರೊನಾ ಪ್ರಕರಣಗಳು ದೃಢಪಟ್ಟಿವೆ.

ಸೋಂಕು ಉಲ್ಬಣಗೊಳ್ಳುತ್ತಿರುವ ಹೈನಾನ್‌ನ ರೆಸಾರ್ಟ್ ನಗರ ಸಾನ್ಯಾವನ್ನು ಕೋವಿಡ್ 'ಹಾಟ್‌ಸ್ಪಾಟ್' ಎಂದು ಪರಿಗಣಿಸಿ ಶನಿವಾರದಿಂದ ಲಾಕ್‌ಡೌನ್ ಜಾರಿ ಮಾಡಲಾಗಿದೆ. ಹೀಗಾಗಿ ಸುಮಾರು 80,000 ಪ್ರವಾಸಿಗರು ಇಲ್ಲಿ ಅತಂತ್ರರಾಗಿದ್ದಾರೆ.

ಚೀನಾದಲ್ಲಿ ಸೋಮವಾರ 324 ಹೊಸ ಪ್ರಕರಣಗಳು ಪತ್ತೆಯಾಗಿವೆ. ಇದಲ್ಲದೆ 483 ಲಕ್ಷಣ ರಹಿತ ಪ್ರಕರಣಗಳು ದೃಢಪಟ್ಟಿವೆ.

## ಕಲ್ಲಿದ್ದಲು: ಮಾಜಿ ಕಾರ್ಯದರ್ಶಿಗೆ ಜೈಲು

ಒಂದನೇ ಪುಟದಿಂದ...

ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಅರುಣ್ ಭಾರದ್ವಾಜ್ ಅವರು, ಸಚಿವಾಲಯದ ಮಾಜಿ ಜಂಟಿ ಕಾರ್ಯದರ್ಶಿ ಕೆ.ಎಸ್. ಕ್ರೋಫಾ ಅವರಿಗೆ ಎರಡು ವರ್ಷ ಜೈಲು ಶಿಕ್ಷೆ, ₹ 50 ಸಾವಿರ ದಂಡ ಹಾಗೂ ಖಾಸಗಿ ಕಂಪನಿ ಗ್ರೇಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ (ಜಿಐಎಲ್) ನಿರ್ದೇಶಕ ಮುಖೇಶ್ ಗುಪ್ತಾ ಅವರಿಗೆ 4 ವರ್ಷ ಜೈಲುಶಿಕ್ಷೆ ಹಾಗೂ ₹ 2 ಲಕ್ಷ ದಂಡ ವಿಧಿಸಿದ್ದಾರೆ ಎಂದು ಪ್ರಕರಣಕ್ಕೆ ಸಂಬಂಧಿಸಿದ ವಕೀಲರು ತಿಳಿಸಿದ್ದಾರೆ.

ಮಹಾರಾಷ್ಟ್ರದ ಲೋಹಾರಾ ಈಸ್ಟ್ ಕಲ್ಲಿದ್ದಲು ನಿಕ್ಷೇಪ ಹಂಚಿಕೆಗೆ ಸಂಬಂಧಿಸಿದ ಪ್ರಕರಣದಲ್ಲಿ ಕಲ್ಲಿದ್ದಲು ಸಚಿವಾಲಯದ ಮಾಜಿ ಕಾರ್ಯದರ್ಶಿ ಹಾಗೂ ಜಂಟಿ ಕಾರ್ಯದರ್ಶಿ ಸರ್ಕಾರಕ್ಕೆ ವಂಚಿಸಿ, ಗ್ರೇಸ್ ಇಂಡಸ್ಟ್ರೀಸ್ ಲಿಮಿಟೆಡ್‌ಗೆ ಅಕ್ರಮವಾಗಿ ಕಲ್ಲಿದ್ದಲು ಹಂಚಿಕೆ ಮಾಡಿದ್ದರು. ಕ್ರಿಮಿನಲ್ ಪಿತೂರಿ, ವಂಚನೆ ಮತ್ತು ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಇಬ್ಬರ ವಿರುದ್ಧ ಸಿಬಿಐ ಪ್ರಕರಣ ದಾಖಲಿಸಿತ್ತು.

ಕಲ್ಲಿದ್ದಲು ಹಗರಣಗಳಿಗೆ ಸಂಬಂಧಿಸಿದಂತೆ ಎಚ್.ಸಿ.ಗುಪ್ತಾ ಅವರ ವಿರುದ್ಧ ದಾಖಲಾಗಿದ್ದ ಈ ಮೊದಲಿನ ಮೂರು ಪ್ರಕರಣಗಳಲ್ಲೂ ಅವರು ದೋಷಿ ಆಗಿದ್ದರು ಹಾಗೂ ಈ ತೀರ್ಪಿನ ವಿರುದ್ಧ ದೆಹಲಿ ಹೈಕೋರ್ಟ್‌ನಲ್ಲಿ ಅವರು ಸಲ್ಲಿಸಿದ್ದ ಅರ್ಜಿ ಬಾಕಿ ಉಳಿದಿದೆ. ಸದ್ಯ ಅವರು ಇತರ ಆರೋಪಿಗಳ ಜತೆಗೆ ಜಾಮೀನಿನ ಮೇಲೆ ಇದ್ದಾರೆ.

ಮಹಾರಾಷ್ಟ್ರದಲ್ಲಿನ ಈ ಕಲ್ಲಿದ್ದಲು ಹಂಚಿಕೆ ಹಗರಣ 2005 ಮತ್ತು 2011ರ ನಡುವೆ ನಡೆದಿತ್ತು. ಹಗರಣ ಬೆಳಕಿಗೆ ಬಂದ ಬಳಿಕ 2014ರ ಆಗಸ್ಟ್ 25ರಂದು ಸುಪ್ರೀಂ ಕೋರ್ಟ್ ಈ ಹಂಚಿಕೆಯನ್ನು ರದ್ದುಪಡಿಸಿತ್ತು. ಇದುವರೆಗೆ ದಾಖಲಾಗಿರುವ ವಿವಿಧ ಕಲ್ಲಿದ್ದಲು ಹಗರಣಗಳಿಗೆ ಸಂಬಂಧಿಸಿದಂತೆ ಶಿಕ್ಷೆ ವಿಧಿಸಲಾದ 11ನೇ ಪ್ರಕರಣ ಇದಾಗಿದೆ.

# ಬರ್ಮಿಂಗ್‌ಹ್ಯಾಮ್‌ನಲ್ಲಿ ಮೂಡಿದ ಭರವಸೆ ಬೆಳಕು

**ಬರ್ಮಿಂಗ್‌ಹ್ಯಾಮ್:** ಪದಕದ ನಿರೀಕ್ಷೆ ಇಟ್ಟುಕೊಂಡವರು ನಿರಾಸೆ ಉಂಟುಮಾಡಲಿಲ್ಲ. ಕೆಲವರು ಅಚ್ಚರಿಯ ಫಲಿತಾಂಶ ನೀಡಿದರು. ಒಂದಷ್ಟು ಸ್ಪರ್ಧೆಗಳಲ್ಲಿ ಐತಿಹಾಸಿಕ ಸಾಧನೆಯ ಸಂಭ್ರಮ.

ಬರ್ಮಿಂಗ್‌ಹ್ಯಾಮ್‌ನಲ್ಲಿ ಸೋಮವಾರ ಮುಕ್ತಾಯಗೊಂಡ ಕಾಮನ್‌ವೆಲ್ತ್ ಕೂಟದಲ್ಲಿ ಭಾರತದ ಒಟ್ಟಾರೆ ಸಾಧನೆಯ ಸಂಕ್ಷಿಪ್ತ ನೋಟವಿದು. 215 ಕ್ರೀಡಾಪಟುಗಳೊಂದಿಗೆ ಬರ್ಮಿಂಗ್‌ಹ್ಯಾಮ್‌ಗೆ ತೆರಳಿದ್ದ ಭಾರತ ತಂಡ, 61 ಪದಕಗಳನ್ನು ಬಗಲಿಗೆ ಹಾಕಿಕೊಂಡಿದೆ.

ವೇಟ್‌ಲಿಫ್ಟರ್ ಸಂಕೇತ್ ಸರ್ಗರ್ ಪಡೆದ ಬೆಳ್ಳಿಯೊಂದಿಗೆ ಈ ಕೂಟದಲ್ಲಿ ಆರಂಭವಾಗಿದ್ದ ಭಾರತದ ಪದಕದ ಬೇಟೆಗೆ, ಪುರುಷರ ಹಾಕಿ ತಂಡ ಸೋಮವಾರ ಜಯಿಸಿದ ಬೆಳ್ಳಿಯೊಂದಿಗೆ ತೆರೆಬಿದ್ದಿತು. 11 ದಿನ ವಿವಿಧ ಕ್ರೀಡೆಗಳಲ್ಲಿ ಭಾರತದ ಸ್ಪರ್ಧಿಗಳು ಸ್ಮರಣೀಯ ಸಾಧನೆ ಮಾಡಿದರು. ಆಸ್ಟ್ರೇಲಿಯಾ, ಇಂಗ್ಲೆಂಡ್ ಮತ್ತು ಕೆನಡಾ ಬಳಿಕ ಪದಕ ಪಟ್ಟಿಯಲ್ಲಿ ಭಾರತಕ್ಕೆ ನಾಲ್ಕನೇ ಸ್ಥಾನ ದೊರೆತಿದೆ. ಕೊನೆಯ ಎರಡು ದಿನಗಳಲ್ಲಿ 10ಕ್ಕೂ ಅಧಿಕ ಚಿನ್ನ ಕೊರಳಿಗೇರಿಸಿಕೊಂಡದ್ದು, ಪದಕ ಪಟ್ಟಿಯಲ್ಲಿ ಮೇಲಕ್ಕೇರಲು ಕಾರಣ. ಕುಸ್ತಿ, ವೇಟ್‌ಲಿಫ್ಟಿಂಗ್, ಬ್ಯಾಡ್ಮಿಂಟನ್, ಬಾಕ್ಸಿಂಗ್ ಮತ್ತು ಟೇಬಲ್ ಟೆನಿಸ್‌ನಲ್ಲಿ ಭಾರತ ಹೆಚ್ಚು ಚಿನ್ನ ಗೆದ್ದುಕೊಂಡಿತು. ಅಷ್ಟೊಂದು ಜನಪ್ರಿಯತೆ ಹೊಂದಿರದೇ ಇರುವ ಲಾನ್ ಬಾಲ್ಸ್‌ನಲ್ಲಿ ಚೊಚ್ಚಲ ಚಿನ್ನ ಗೆದ್ದು ಸಂಭ್ರಮಿಸಿತು.

ಅಥ್ಲೆಟಿಕ್ಸ್‌ನಲ್ಲಿ ಎಂಟು ಪದಕ ಜಯಿಸಿದ್ದು, ಟ್ರ್ಯಾಕ್ ಮತ್ತು ಫೀಲ್ಡ್‌ನಲ್ಲಿ ಭಾರತದ ಶಕ್ತಿಯನ್ನು ಸಾಬೀತುಪಡಿಸಿತು. ಸ್ಟಾರ್ ಅಥ್ಲೀಟ್ ನೀರಜ್ ಚೋಪ್ರಾ ಅವರ ಅನುಪಸ್ಥಿತಿಯಲ್ಲೂ 1 ಚಿನ್ನ, 4 ಬೆಳ್ಳಿ ಮತ್ತು 3 ಕಂಚು ಜಯಿಸಿದೆ. ವಿದೇಶದಲ್ಲಿ ನಡೆದ ಕೂಟಗಳ ಅಥ್ಲೆಟಿಕ್ಸ್‌ನಲ್ಲಿ ಭಾರತದ ಶ್ರೇಷ್ಠ ಸಾಧನೆ ಈ ಬಾರಿ ಮೂಡಿಬಂದಿದೆ.

**ಶ್ರೇಷ್ಠ ಸಾಧನೆ:** ಭಾರತದ ಹೊರಗೆ ನಡೆದ ಕಾಮನ್‌ವೆಲ್ತ್ ಕೂಟದಲ್ಲಿ ಮೂರನೇ ಹಾಗೂ ಒಟ್ಟಾರೆಯಾಗಿ ನಾಲ್ಕನೇ ಉತ್ತಮ ಪ್ರದರ್ಶನ ಇದಾಗಿದೆ. ಭಾರತದ ಶ್ರೇಷ್ಠ ಸಾಧನೆ 2010ರ ನವದೆಹಲಿ ಕಾಮನ್‌ವೆಲ್ತ್ ಕೂಟದಲ್ಲಿ ದಾಖಲಾಗಿತ್ತು. ಅಲ್ಲಿ 38 ಚಿನ್ನ ಸೇರಿದಂತೆ 101 ಪದಕಗಳು ಬಂದಿದ್ದವು.

2002ರ ಮ್ಯಾಂಚೆಸ್ಟರ್ ಕೂಟದಲ್ಲಿ 30 ಚಿನ್ನ ಒಳಗೊಂಡಂತೆ 69 ಪದಕ ಜಯಿಸಿದ್ದ ಭಾರತ, ವಿದೇಶಿ ನೆಲದಲ್ಲಿ ಉತ್ತಮ ಪ್ರದರ್ಶನ ತೋರಿತ್ತು. 2018ರ ಗೋಲ್ಡ್‌ಕೋಸ್ಟ್ ಕೂಟದಲ್ಲಿ 26 ಚಿನ್ನ ಸೇರಿದಂತೆ 66 ಪದಕಬಂದಿದ್ದವು. 2006ರ ಮೆಲ್ಬರ್ನ್ ಕೂಟದಲ್ಲಿ ಭಾರತಕ್ಕೆ 22 ಚಿನ್ನ ದೊರೆತಿದ್ದರೂ, ಒಟ್ಟು ದೊರೆತದ್ದು 50 ಪದಕ. ಆದ್ದರಿಂದ ಈ ಬಾರಿಯದ್ದು ವಿದೇಶಿ ನೆಲದಲ್ಲಿ ಮೂರನೇ ಶ್ರೇಷ್ಠ ಸಾಧನೆಯಾಗಿದೆ.

ಕೂಟದ ಆರಂಭಕ್ಕೆ ಮುನ್ನ ತಂಡಗಳ ಆಯ್ಕೆಯಲ್ಲಿನ ಗೊಂದಲ, ನ್ಯಾಯಾಲಯದ ಮೊರೆ ಹೋದ ಬಳಿಕ ತಂಡದಲ್ಲಿ ಕೆಲವರಿಗೆ ಸ್ಥಾನ, ವೀಸಾ ಲಭಿಸುವಲ್ಲಿ ವಿಳಂಬ ಸೇರಿದಂತೆ ವಿವಾದಗಳೇ ಹೆಚ್ಚು ಸುದ್ದಿಯಾಗಿದ್ದವು. ಆದರೆ ವಿವಾದಗಳನ್ನು ಬದಿಗಿರಿಸಿದ ಕ್ರೀಡಾಪಟುಗಳು ವೀರೋಚಿತ ಪ್ರದರ್ಶನ ನೀಡಿ ದೇಶಕ್ಕೆ ಹೆಮ್ಮೆ ತಂದಿತ್ತರು.

**ಭಾರತಕ್ಕೆ ಯಾವ ಕ್ರೀಡೆಯಲ್ಲಿ ಎಷ್ಟು ಪದಕ**

| ಕ್ರೀಡೆ | ಚಿನ್ನ | ಬೆಳ್ಳಿ | ಕಂಚು | ಒಟ್ಟು |
|---|---|---|---|---|
| ಕುಸ್ತಿ | 6 | 1 | 5 | 12 |
| ವೇಟ್‌ಲಿಫ್ಟಿಂಗ್ | 3 | 3 | 4 | 10 |
| ಅಥ್ಲೆಟಿಕ್ಸ್ | 1 | 4 | 3 | 8 |
| ಬಾಕ್ಸಿಂಗ್ | 3 | 1 | 3 | 7 |
| ಟೇಬಲ್ ಟೆನಿಸ್ | 3 | 1 | 1 | 5 |
| ಬ್ಯಾಡ್ಮಿಂಟನ್ | 3 | 1 | 2 | 6 |
| ಜೂಡೊ | 0 | 2 | 1 | 3 |
| ಲಾನ್‌ಬಾಲ್ಸ್ | 1 | 1 | 0 | 2 |
| ಸ್ಕ್ವಾಷ್ | 0 | 0 | 2 | 2 |
| ಹಾಕಿ | 0 | 1 | 1 | 2 |
| ಪ್ಯಾರಾ ಟಿಟಿ | 1 | 0 | 1 | 2 |
| ಪ್ಯಾರಾ ಪವರ್‌ಲಿಫ್ಟಿಂಗ್ | 1 | 0 | 0 | 1 |
| ಕ್ರಿಕೆಟ್ | 0 | 1 | 0 | 1 |



ಚಿನ್ನ ಗೆದ್ದ ಸಂಭ್ರಮದಲ್ಲಿ ಲಕ್ಷ್ಯ ಸೇನ್ –ಪಿಟಿಐ ಚಿತ್ರ

### ಸಿಂಗಲ್ಸ್‌ನಲ್ಲಿ ಸಿಂಧು, ಸೇನ್‌ಗೆ; ಡಬಲ್ಸ್‌ನಲ್ಲಿ ಸಾತ್ವಿಕ್– ಚಿರಾಗ್‌ಗೆ ಚಿನ್ನ ಸಂಭ್ರಮ

# ಬ್ಯಾಡ್ಮಿಂಟನ್‌ಗೆ ಸುವರ್ಣಯುಗ

**ಬರ್ಮಿಂಗ್‌ಹ್ಯಾಮ್ (ಪಿಟಿಐ):** ಬರ್ಮಿಂಗ್‌ಹ್ಯಾಮ್‌ನ ಎನ್‌ಇಸಿ ಅರೆನಾದಲ್ಲಿ ಸೋಮವಾರ ಭಾರತದ ಬ್ಯಾಡ್ಮಿಂಟನ್ ಕ್ರೀಡೆಯ ಶಕ್ತಿ ಅನಾವರಣಗೊಂಡಿತು. ಮೂರು ಚಿನ್ನದ ಪದಕ ಬಗಲಿಗೆ ಹಾಕಿಕೊಂಡ ಭಾರತದ ಸ್ಪರ್ಧಿಗಳು ಇತಿಹಾಸ ರಚಿಸಿದರು.

ಪಿ.ವಿ.ಸಿಂಧು ಮತ್ತು ಲಕ್ಷ್ಯಸೇನ್ ಅವರು ಸಿಂಗಲ್ಸ್ ವಿಭಾಗದಲ್ಲಿ ಚಾಂಪಿಯನ್ ಆದರೆ, ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಹಾಗೂ ಚಿರಾಗ್ ಶೆಟ್ಟಿ ಚಿನ್ನದ ಪದಕ ಕೊರಳಿಗೇರಿಸಿಕೊಂಡರು.

ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಹಾಗೂ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಜಯಿಸಿದ್ದ ಸಿಂಧು ಅವರಿಗೆ ಕಾಮನ್‌ವೆಲ್ತ್ ಕೂಟದ ಚಿನ್ನ ಮರೀಚಿಕೆಯಾಗಿಯೇ ಉಳಿದಿತ್ತು. ಅವರ ಕಾಯುವಿಕೆಗೆ ಈ ಬಾರಿ ತೆರೆಬಿದ್ದಿದೆ. ಸಿಂಧು 2018 ಮತ್ತು 2014ರ ಕಾಮನ್‌ವೆಲ್ತ್ ಕೂಟದಲ್ಲಿ ಬೆಳ್ಳಿ ಹಾಗೂ ಕಂಚು ಗೆದ್ದುಕೊಂಡಿದ್ದರು.

ಸೋಮವಾರ ನಡೆದ ಫೈನಲ್‌ನಲ್ಲಿ ಹೈದರಾಬಾದ್‌ನ ಆಟಗಾರ್ತಿ 21–15, 21–13 ರಲ್ಲಿ ಕೆನಡಾದ ಮಿಷೆಲ್ ಲಿ ಅವರನ್ನು ಪರಾಭವಗೊಳಿಸಿದರು. ಲಕ್ಷ್ಯ ಸೇನ್ ಪುರುಷರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ 19-21, 21-9, 21-16 ರಲ್ಲಿ ಮಲೇಷ್ಯಾದ ಎಂಗ್ ತ್ಸೆ ಯೊಂಗ್ ಅವರನ್ನು ಮಣಿಸಿದರು.

ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್– ಚಿರಾಗ್ 21–15, 21–13 ರಲ್ಲಿ ಇಂಗ್ಲೆಂಡ್‌ನ ಬೆನ್ ಲೇನ್– ಸೀನ್ ವೆಂಡಿ ಅವರ ಸವಾಲನ್ನು ಮೆಟ್ಟಿನಿಂತರು.

ವಿಶ್ವ ರ‍್ಯಾಂಕಿಂಗ್‌ನಲ್ಲಿ ಏಳನೇ ಸ್ಥಾನದಲ್ಲಿರುವ ಸಿಂಧು ಅವರು 13ನೇ ರ‍್ಯಾಂಕ್‌ನ ಆಟಗಾರ್ತಿ ಎದುರು ಎರಡೂ ಗೇಮ್‌ಗಳಲ್ಲಿ ಪೂರ್ಣ ಪ್ರಭುತ್ವ ಸಾಧಿಸಿದರು. ಮಿಷೆಲ್ ಅವರು 2014ರ ಗ್ಲಾಸ್ಗೊ ಕಾಮನ್‌ವೆಲ್ತ್ ಕೂಟದಲ್ಲಿ ಕೊನೆಯದಾಗಿ ಸಿಂಧು ಅವರನ್ನು ಮಣಿಸಿದ್ದರು.

ಮೊದಲ ಗೇಮ್‌ನಲ್ಲಿ ಮಿಷೆಲ್ ನೆಟ್ ಬಳಿಯೇ ಆಡಿ ಪಾಯಿಂಟ್ ಗಳಿಸಲು ಪ್ರಯತ್ನಿಸಿದರೆ, ಸಿಂಧು ಆಕ್ರಮಣಕಾರಿ ಆಟದ ಮೊರೆಹೋದರು. 7–5 ರಲ್ಲಿ ಮೇಲುಗೈ ಪಡೆದ ಅವರು ಮೊದಲ ವಿರಾಮದ ಅವಧಿಯ ಬಳಿಕ ಸತತ ಮೂರು ಪಾಯಿಂಟ್ ಗಿಟ್ಟಿಸಿ ಮುನ್ನಡೆಯನ್ನು 14–8ಕ್ಕೆ ಹೆಚ್ಚಿಸಿಕೊಂಡರು.

ಸತತ ಎರಡು ಬ್ಯಾಕ್‌ಹ್ಯಾಂಡ್ ವಿನ್ನರ್‌ಗಳ ಮೂಲಕ ಮಿಷೆಲ್ ಹಿನ್ನಡೆಯನ್ನು 14–17ಕ್ಕೆ ತಗ್ಗಿಸಿದರು. ಆ ಬಳಿಕ ಎದುರಾಳಿಗೆ ಒಂದು ಪಾಯಿಂಟ್ ಬಿಟ್ಟುಕೊಟ್ಟ ಸಿಂಧು ಗೇಮ್ ಗೆದ್ದರು.

ಎರಡನೇ ಗೇಮ್‌ನ ಆರಂಭದಲ್ಲಿ 4–2ರ ಮೇಲುಗೈ ಪಡೆದ ಸಿಂಧು, ವಿರಾಮದ ವೇಳೆಗೆ 11–6ರ ಮುನ್ನಡೆಯಲ್ಲಿದ್ದರು. ಆ ಬಳಿಕವೂ ಶಿಸ್ತಿನ ಆಟ ಮುಂದುವರಿಸಿ ಕ್ರಾಸ್ ಕೋರ್ಟ್ ವಿನ್ನರ್ ಮೂಲಕ ಗೇಮ್ ಹಾಗೂ ಪಂದ್ಯವನ್ನು ಗೆದ್ದುಕೊಂಡು ಚೊಚ್ಚಲ ಚಿನ್ನದ ಪದಕಕ್ಕೆ ಮುತ್ತಿಟ್ಟರು.

ಫೈನಲ್ ಪಂದ್ಯದ ಗೆಲುವಿನ ಬಳಿಕ ಕೋಚ್ ಪಾರ್ಕ್ ಟೆ ಸಾಂಗ್ ಅವರೊಂದಿಗೆ ಪಿ.ವಿ.ಸಿಂಧು ಸಂಭ್ರಮಿಸಿದರು

ಪುರುಷರ ಡಬಲ್ಸ್‌ನಲ್ಲಿ ಚಿನ್ನ ಗೆದ್ದ ಸಾತ್ವಿಕ್– ಚಿರಾಗ್ ಅವರ ಸಂಭ್ರಮ –ಪಿಟಿಐ ಚಿತ್ರಗಳು

> **ಈ ಚಿನ್ನದ ಪದಕಕ್ಕಾಗಿ ಹಲವು ವರ್ಷಗಳಿಂದ ಕಾಯುತ್ತಿದ್ದೆ. ಕೊನೆಗೂ ಅದು ಸಿಕ್ಕಿದೆ. ಅತಿಯಾದ ಸಂತಸ ಆಗುತ್ತಿದೆ.**
> **ಪಿ.ವಿ.ಸಿಂಧು**

> **ಆರಂಭದಲ್ಲಿ ಒತ್ತಡಕ್ಕೆ ಒಳಗಾಗಿದ್ದೆ. ಕಠಿಣ ಪ್ರಯತ್ನದ ಮೂಲಕ ಮರುಹೋರಾಟ ನಡೆಸಿದೆ. ಯೊಂಗ್ ಅತ್ಯುತ್ತಮವಾಗಿ ಆಡಿದರು.**
> **ಲಕ್ಷ್ಯ ಸೇನ್**

20 ವರ್ಷದ ಲಕ್ಷ್ಯ ಅವರು ಮೊದಲ ಗೇಮ್‌ನಲ್ಲಿ ಸೋತರೂ, ಅಮೋಘ ರೀತಿಯಲ್ಲಿ ತಿರುಗೇಟು ನೀಡಿ ಚಿನ್ನದ ಪದಕ ಕೊರಳಿಗೇರಿಸಿಕೊಂಡರು.

ಎರಡನೇ ಗೇಮ್‌ನಲ್ಲಿ ಇಬ್ಬರೂ 9–9 ರಲ್ಲಿ ಸಮಬಲ ಸಾಧಿಸಿದ್ದರು. ಆ ಬಳಿಕದ ಆಟ 'ಒನ್‌ವೇ ಟ್ರಾಫಿಕ್'ನಂತೆ ಭಾಸವಾಯಿತು. ಸೇನ್ ಸತತ 12 ಪಾಯಿಂಟ್ ಕಲೆಹಾಕಿ ಗೇಮ್ ಗೆದ್ದುಕೊಂಡು ಪಂದ್ಯವನ್ನು 1–1 ರಲ್ಲಿ ಸಮಸ್ಥಿತಿಗೆ ತಂದರು.

ಮೂರನೇ ಗೇಮ್‌ನಲ್ಲಿ ಸೇನ್ ಅವರು ಆರಂಭದಿಂದಲೇ ಆಕ್ರಮಣಕಾರಿ ಆಟವಾಡಿದರು. ವಿರಾಮದ ವೇಳೆಗೆ 11–7ರ ಮುನ್ನಡೆ ಪಡೆದರು. ಹಿನ್ನಡೆಯನ್ನು 12–15ಕ್ಕೆ ತಗ್ಗಿಸಿದ ಎಂಗ್, ಮರುಹೋರಾಟಕ್ಕೆ ಪ್ರಯತ್ನಿಸಿದರು.

ಆದರೆ ಒಂದೊಂದು ಪಾಯಿಂಟ್ ಗಳಿಸುತ್ತಿದ್ದಂತೆ ಆತ್ಮವಿಶ್ವಾಸವನ್ನು ವೃದ್ಧಿಸಿಕೊಳ್ಳುತ್ತಿದ್ದ ಸೇನ್ ಅವರನ್ನು ತಡೆಯಲು ಮಲೇಷ್ಯಾದ ಆಟಗಾರನಿಗೆ ಸಾಧ್ಯವಾಗಲಿಲ್ಲ. ಲಕ್ಷ್ಯ ಅವರು ಪಂದ್ಯ ಗೆಲ್ಲುತ್ತಿದ್ದಂತೆಯೇ ತಮ್ಮ ರ‍್ಯಾಕೆಟ್, ಟಿ–ಶರ್ಟ್‌ಅನ್ನು ಪ್ರೇಕ್ಷಕರತ್ತ ಎಸೆದು ಸಂಭ್ರಮಿಸಿದರು.

**ಪದಕ ಪಟ್ಟಿ**

| ಸ್ಥಾನ | ದೇಶ | ಚಿನ್ನ | ಬೆಳ್ಳಿ | ಕಂಚು | ಒಟ್ಟು |
|---|---|---|---|---|---|
| 1 | ಆಸ್ಟ್ರೇಲಿಯಾ | 67 | 57 | 54 | 178 |
| 2 | ಇಂಗ್ಲೆಂಡ್ | 57 | 66 | 53 | 176 |
| 3 | ಕೆನಡಾ | 26 | 32 | 34 | 92 |
| 4 | ಭಾರತ | 22 | 16 | 23 | 61 |
| 5 | ನ್ಯೂಜಿಲೆಂಡ್ | 20 | 12 | 17 | 49 |
| 6 | ಸ್ಕಾಟ್ಲೆಂಡ್ | 13 | 11 | 27 | 51 |

### ಟಿಟಿ: 40 ವರ್ಷದ ಆಟಗಾರನ ಅಮೋಘ ಸಾಧನೆ

# ಶರತ್‌ಗೆ 16 ವರ್ಷದ ಬಳಿಕ ಚಿನ್ನ

**ಬರ್ಮಿಂಗ್‌ಹ್ಯಾಮ್ (ಪಿಟಿಐ):** ವಯಸ್ಸು ತನ್ನ ಪ್ರದರ್ಶನದ ಮೇಲೆ ಯಾವುದೇ ಪರಿಣಾಮ ಬೀರಿಲ್ಲ ಎಂಬುದನ್ನು ಸಾಬೀತುಪಡಿಸಿದ ಟೇಬಲ್ ಟೆನಿಸ್ ಆಟಗಾರ ಅಚಂತಾ ಶರತ್ ಕಮಲ್, ಕಾಮನ್‌ವೆಲ್ತ್ ಕೂಟದಲ್ಲಿ ಚಿನ್ನದ ನಗು ಬೀರಿದರು.

ಸೋಮವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಅವರು 11-13, 11-7, 11-2, 11-6, 11-8 ರಲ್ಲಿ ಇಂಗ್ಲೆಂಡ್‌ನ ಲಿಯಾಮ್ ಪಿಚ್‌ಫೋರ್ಡ್ ಅವರನ್ನು ಮಣಿಸಿದರು.

40 ವರ್ಷದ ಶರತ್, 16 ವರ್ಷಗಳ ಬಿಡುವಿನ ಬಳಿಕ ಸಿಂಗಲ್ಸ್ ವಿಭಾಗದಲ್ಲಿ ಚಿನ್ನ ಗೆದ್ದ ಸಾಧನೆ ಮಾಡಿದ್ದಾರೆ. 2006ರ ಮೆಲ್ಬರ್ನ್ ಕೂಟದಲ್ಲೂ ಅವರು ಚಿನ್ನ ಜಯಿಸಿದ್ದರು.

ಈ ಕೂಟದಲ್ಲಿ ಅವರು ಒಟ್ಟಾರೆ ಮೂರು ಚಿನ್ನ ಗೆದ್ದ ಸಾಧನೆ ಮಾಡಿದರು. ಮಿಶ್ರ ಡಬಲ್ಸ್ ಮತ್ತು ತಂಡ ವಿಭಾಗದಲ್ಲೂ ಅವರಿಗೆ ಚಿನ್ನ ಲಭಿಸಿತ್ತು. ಇದರೊಂದಿಗೆ ಕಾಮನ್‌ವೆಲ್ತ್ ಕೂಟಗಳಲ್ಲಿ ತಮ್ಮ ಪದಕಗಳ ಸಂಖ್ಯೆಯನ್ನು ಅವರು 13ಕ್ಕೆ ಹೆಚ್ಚಿಸಿಕೊಂಡರು.

ಫೈನಲ್ ಪಂದ್ಯದಲ್ಲಿ ಮೊದಲ ಗೇಮ್ ಕಳೆದುಕೊಂಡ ಶರತ್, ಆ ಬಳಿಕ ಲಯ ಕಂಡುಕೊಂಡು ಶಿಸ್ತಿನ ಆಟವಾಡಿದರು. ಸತತ ನಾಲ್ಕು ಗೇಮ್ ಗೆದ್ದು ಚಿನ್ನ ತಮ್ಮದಾಗಿಸಿಕೊಂಡರು.

**ಮಿಶ್ರ ಡಬಲ್ಸ್‌ನಲ್ಲಿ ಸಾಧನೆ:** ಶರತ್ ಮತ್ತು ಶ್ರೀಜಾ ಅಕುಲಾ ಅವರು ಮಿಶ್ರ ಡಬಲ್ಸ್ ವಿಭಾಗದಲ್ಲಿ ಚಿನ್ನ ಗೆದ್ದುಕೊಂಡರು. ಭಾನುವಾರ ರಾತ್ರಿ ನಡೆದ ಫೈನಲ್‌ನಲ್ಲಿ ಭಾರತದ ಜೋಡಿ 11-4, 9-11, 11-5, 11-6 ರಲ್ಲಿ ಮಲೇಷ್ಯಾದ ಜಾವೆನ್ ಚೂಂಗ್– ಕರೆನ್ ಲೈನಿ ಅವರನ್ನು ಮಣಿಸಿತು. ಅಕುಲಾ ಅವರಿಗೆ ಕಾಮನ್‌ವೆಲ್ತ್ ಕೂಟದ ಮೊದಲ ಪದಕ ಇದು.

ಪುರುಷರ ಡಬಲ್ಸ್‌ನಲ್ಲಿ ಶರತ್ ಮತ್ತು ಜಿ.ಸತ್ಯನ್ ಜೋಡಿ ಫೈನಲ್‌ನಲ್ಲಿ ಸೋತು ಬೆಳ್ಳಿ ಪಡೆದುಕೊಂಡಿದ್ದರು.

ಶರತ್ ಕಮಲ್ ಮತ್ತು ಶ್ರೀಜಾ ಅಕುಲಾ – ಪಿಟಿಐ ಚಿತ್ರ

ಕಂಚು ಗೆದ್ದ ಸಂಭ್ರಮದಲ್ಲಿ ಜಿ.ಸತ್ಯನ್ –ಎಎಫ್‌ಪಿ ಚಿತ್ರ

## ಸತ್ಯನ್‌ಗೆ ಕಂಚು

ಭಾರತದ ಜಿ.ಸತ್ಯನ್ ಅವರು ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಕಂಚು ಗೆದ್ದರು. ಮೂರನೇ ಸ್ಥಾನವನ್ನು ನಿರ್ಣಯಿಸಲು ಸೋಮವಾರ ನಡೆದ ಪಂದ್ಯದಲ್ಲಿ ಅವರು 11-9, 11-3, 11-5, 8-11, 9-11, 10-12, 11-9 ರಲ್ಲಿ ಇಂಗ್ಲೆಂಡ್‌ನ ಪಾಲ್ ಡ್ರಿಂಕ್‌ಹಾಲ್ ಅವರನ್ನು ಮಣಿಸಿದರು.

ಕಾಮನ್‌ವೆಲ್ತ್ ಕೂಟದಲ್ಲಿ ಒಟ್ಟಾರೆಯಾಗಿ ಸತ್ಯನ್‌ಗೆ ದೊರೆತ ಆರನೇ ಪದಕ ಇದು. ಸಿಂಗಲ್ಸ್ ವಿಭಾಗದಲ್ಲಿ ಅವರಿಗೆ ಲಭಿಸಿದ ಮೊದಲ ಪದಕ ಇದಾಗಿದೆ.

ಬೆಳ್ಳಿ ಪದಕ ಗಳಿಸಿದ ಭಾರತ ಪುರುಷರ ಹಾಕಿ ತಂಡ –ಪಿಟಿಐ ಚಿತ್ರ

## ಹಾಕಿ: 8 ವರ್ಷಗಳ ನಂತರ ಭಾರತಕ್ಕೆ ಪದಕ

**ಬರ್ಮಿಂಗ್‌ಹ್ಯಾಮ್ (ಪಿಟಿಐ):** ಭಾರತ ಪುರುಷರ ಹಾಕಿ ತಂಡವು ಸೋಮವಾರ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಬೆಳ್ಳಿ ಪದಕ ಗಳಿಸಿತು.

ಫೈನಲ್ ಪಂದ್ಯದಲ್ಲಿ ಕಳಪೆ ಆಟವಾಡಿದ ಮನ್‌ಪ್ರೀತ್ ಸಿಂಗ್ ಬಳಗವು 0–7ರಿಂದ ಬಲಿಷ್ಠ ಆಸ್ಟ್ರೇಲಿಯಾ ತಂಡದ ಎದುರು ಮಣಿಯಿತು. ಹೋದ ವರ್ಷ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ತಂಡವು ಕಂಚಿನ ಪದಕ ಜಯಿಸಿತ್ತು. ಅದರ ನಂತರದ ಟೂರ್ನಿಗಳಲ್ಲಿಯೂ ಉತ್ತಮವಾಗಿಯೇ ಆಡಿತ್ತು. ಆದರೆ ಈ ಪಂದ್ಯದಲ್ಲಿ ಮಂಕಾಯಿತು.

ಎಂಟು ವರ್ಷಗಳ ನಂತರ ಕಾಮನ್‌ವೆಲ್ತ್ ಕೂಟದಲ್ಲಿ ಪದಕ ಗಳಿಸಿತು. 2010ರಲ್ಲಿ ನವದೆಹಲಿ ಹಾಗೂ 2014ರಲ್ಲಿ ಗ್ಲಾಸ್ಗೊದಲ್ಲಿಯೂ ತಂಡವು ಬೆಳ್ಳಿ ಪದಕ ಗಳಿಸಿತ್ತು. 1998ರಲ್ಲಿ ಕೂಟದಲ್ಲಿ ಮೊದಲ ಬಾರಿಗೆ ಹಾಕಿ ಸೇರ್ಪಡೆಯಾಗಿತ್ತು. ಆಗಿನಿಂದ ಮೂರು ಬಾರಿ ಫೈನಲ್ ಪ್ರವೇಶಿಸಿತ್ತು.

ಇಡೀ ಟೂರ್ನಿಯಲ್ಲಿ ತಂಡದ ಸಾಧನೆ ಉತ್ತಮವಾಗಿತ್ತು. ಆದರೆ, ಅಂತಿಮ ಪಂದ್ಯದಲ್ಲಿ ಆಸ್ಟ್ರೇಲಿಯಾದ ರಕ್ಷಣಾ ಕೋಟೆಯನ್ನು ದಾಟುವಲ್ಲಿಯೂ ವಿಫಲವಾಯಿತು. ಅನುಭವಿ ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ ಅವರನ್ನೂ ಆಸ್ಟ್ರೇಲಿಯಾ ಆಟಗಾರರು ವಂಚಿಸಿ ಗೋಲು ಗಳಿಸುವಲ್ಲಿ ಸಫಲರಾದರು.

ಕಾಮನ್‌ವೆಲ್ತ್ ಕೂಟದ 92 ಕೆಜಿ ವಿಭಾಗದ ಬಾಕ್ಸಿಂಗ್ ಸ್ಪರ್ಧೆಯಲ್ಲಿ ಬೆಳ್ಳಿ ಜಯಿಸಿದ ಭಾರತದ ಸಾಗರ್ ಅಹ್ಲಾವತ್ ಪದಕದೊಂದಿಗೆ ಸಂಭ್ರಮಿಸಿದರು– ಪಿಟಿಐ ಚಿತ್ರ

## 'ರಾಜೇಶ್ವರಿ ಗಾಯಕವಾಡಗೆ ₹15 ಲಕ್ಷ ಬಹುಮಾನ'

ರಾಜೇಶ್ವರಿ

**ಬೆಂಗಳೂರು:** ಕಾಮನ್‌ವೆಲ್ತ್ ಗೇಮ್ಸ್ ಕ್ರೀಡಾಕೂಟದಲ್ಲಿ ಬೆಳ್ಳಿ ಪದಕ ಗಳಿಸಿರುವ ಭಾರತ ಮಹಿಳಾ ಕ್ರಿಕೆಟ್ ತಂಡವನ್ನು ಪ್ರತಿನಿಧಿಸಿದ್ದ ಕನ್ನಡತಿ ರಾಜೇಶ್ವರಿ ಗಾಯಕ್ವಾಡ್ ಅವರಿಗೆ ರಾಜ್ಯ ಸರ್ಕಾರದಿಂದ ₹ 15 ಲಕ್ಷ ನಗದು ಬಹುಮಾನ ನೀಡಲಾಗುವುದು ಎಂದು ಕ್ರೀಡಾ ಸಚಿವ ಕೆ.ಸಿ. ನಾರಾಯಣ ಗೌಡ ತಿಳಿಸಿದ್ದಾರೆ.

'ಭಾರತದ ಮಹಿಳಾ ಕ್ರಿಕೆಟ್ ತಂಡವು ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ್ದು, ಸಣ್ಣ ಅಂತರದಲ್ಲಿ ಚಿನ್ನದ ಪದಕ ಕೈತಪ್ಪಿದೆ. ಈ ತಂಡದಲ್ಲಿದ್ದ ಕರ್ನಾಟಕದ ರಾಜೇಶ್ವರಿ ಅವರಿಗೆ ರಾಜ್ಯ ಸರ್ಕಾರದ ವತಿಯಿಂದ ನಗದು ಬಹುಮಾನ ನೀಡಿ ಗೌರವಿಸಲಾಗುವುದು' ಎಂದು ಅವರು ಪ್ರಕಟಣೆಯಲ್ಲಿ ಹೇಳಿದ್ದಾರೆ.

## ಪರಿತಪಿಸಿದ ಕೌರ್ ಬಳಗ

**ಬರ್ಮಿಂಗ್‌ಹ್ಯಾಮ್ (ಪಿಟಿಐ):** ಭಾರತ ಮಹಿಳಾ ಕ್ರಿಕೆಟ್ ತಂಡದ ಆಗಾರ್ತಿಯರು ತಮ್ಮ ಕೊರಳಲ್ಲಿದ್ದ ಬೆಳ್ಳಿ ಪದಕಗಳನ್ನು ಪದೇ ಪದೇ ಸ್ಪರ್ಶಿಸಿ ಪುಳಕಿತರಾದರು. ಅದರ ಹಿಂದೆಯೇ 'ಸ್ವಲ್ಪ ತಾಳ್ಮೆಯಿಂದ ಆಡಿದ್ದರೆ ಚಿನ್ನದ ಪದಕ ನಮ್ಮದಾಗುತ್ತಿತ್ತು' ಎಂಬ ಭಾವ ಹರ್ಮನ್‌ಪ್ರೀತ್ ಕೌರ್ ಬಳಗದವರ ಮುಖದಲ್ಲಿ ಕಾಣುತ್ತಿತ್ತು.

ಕಾಮನ್‌ವೆಲ್ತ್ ಕೂಟದಲ್ಲಿ ಭಾನುವಾರ ತಡರಾತ್ರಿ ಮುಕ್ತಾಯವಾದ ಫೈನಲ್‌ನಲ್ಲಿ ಭಾರತ ತಂಡವು 9 ರನ್‌ಗಳಿಂದ ಆಸ್ಟ್ರೇಲಿಯಾದ ಎದುರು ಸೋತಿತು.

ಮೊದಲು ಬ್ಯಾಟಿಂಗ್ ಮಾಡಿದ್ದ ಆಸ್ಟ್ರೇಲಿಯಾ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 161 ರನ್ ಗಳಿಸಿತ್ತು. ಅದಕ್ಕುತ್ತರವಾಗಿ ಭಾರತ ತಂಡವು 19.3 ಓವರ್‌ಗಳಲ್ಲಿ 152 ರನ್ ಗಳಿಸಿ ಎಲ್ಲ ವಿಕೆಟ್‌ಗಳನ್ನೂ ಕಳೆದುಕೊಂಡಿತು.

ನಾಯಕಿ ಹರ್ಮನ್‌ಪ್ರೀತ್ ಕೌರ್ (65; 43ಎ) ಮತ್ತು ಜೆಮಿಮಾ ರಾಡ್ರಿಗಸ್ (33;33) ಅವರಿಬ್ಬರೂ ಮೂರನೇ ವಿಕೆಟ್ ಜೊತೆಯಾಟದಲ್ಲಿ 96 ರನ್ ಗಳಿಸಿ ಗೆಲುವಿನ ಭರವಸೆ ಮೂಡಿಸಿದ್ದರು. ಕೊನೆಯ ಆರು ಓವರ್‌ಗಳಲ್ಲಿ ಗೆಲುವಿಗೆ 50 ರನ್‌ಗಳ ಅಗತ್ಯವಿದ್ದಾಗ ಪಂದ್ಯ ನಾಟಕೀಯ ತಿರುವು ಪಡೆಯಿತು.

ಹರ್ಮನ್‌ಪ್ರೀತ್ ಕೌರ್

ಆಸ್ಟ್ರೇಲಿಯಾ ಬೌಲರ್ ಮೇಗನ್ ಶುಟ್ (27ಕ್ಕೆ2) ಈ ಜೊತೆಯಾಟ ಮುರಿದು ಮಹತ್ವದ ತಿರುವು ನೀಡಿದರು. ಕೌರ್ ಸೇರಿದಂತೆ ಮೂರು ವಿಕೆಟ್‌ಗಳನ್ನು ಆ್ಯಷ್ಲೆ ಗಾರ್ಡನರ್ ಗಳಿಸಿದರು. ಅಲ್ಲದೇ ಭಾರತದ ಮೂವರು ಬ್ಯಾಟರ್‌ಗಳು ರನ್‌ಔಟ್ ಆಗಿದ್ದು, ಚಿನ್ನದ ಪದಕ ಕೈತಪ್ಪಲು ಕಾರಣವಾದವು.

'ಪ್ರತಿ ಸಲ ಫೈನಲ್ ಹಣಾಹಣಿಗಳಲ್ಲಿ ನಾವು ಇಂತಹ ಲೋಪಗಳನ್ನು ಮಾಡುತ್ತಿದ್ದೇವೆ. ಅದೂ ಬ್ಯಾಟಿಂಗ್‌ನಲ್ಲಿ. ಈ ದೌರ್ಬಲ್ಯವನ್ನು ತೊಡೆದುಹಾಕಬೇಕಿದೆ. ಮಾನಸಿಕವಾಗಿ ಗಟ್ಟಿಯಾಗಬೇಕಿದೆ' ಎಂದು ಪಂದ್ಯದ ನಂತರ ನಡೆದ ಸುದ್ದಿಗೋಷ್ಠಿಯಲ್ಲಿ ಕೌರ್ ಹೇಳಿದರು.

'ಕೊನೆಯ ಹಂತದಲ್ಲಿ ನಾನು ಅಥವಾ ಪೂಜಾ (ವಸ್ತ್ರಕರ್) ಗಟ್ಟಿಯಾಗಿ ನಿಲ್ಲಬೇಕಿತ್ತು' ಎಂದರು.

ಪ್ರಶಸ್ತಿ ವಿಜೇತ ಕೆಎಸ್‌ಸಿಎ ತಂಡ: ಕುಳಿತವರು–ಎಡದಿಂದ: ಸುನಿಲ್ ಎಚ್‌.ಬಿ, ಸ್ವರೂಪ್ ಕೆ.ಪಿ, ಎನ್‌.ಎನ್‌. ಯುವರಾಜ್, ವಿನಯ್ ಮೃತ್ಯುಂಜಯ, ಅನಂತ್ ಬಿ, ರಾಜೇಂದ್ರ. ನಿಂತವರು: ಸದಾಶಿವ ಜೆ. ಕಾರಂತ್, ಕುಮಾರ್ ಸೆಲ್ವರಾಜ್ ಎಸ್, ಶ್ರೀವರ್ಧನ್ ಟಿ.ಆರ್, ನಜೀಬ್ ಕುನಿಲ್, ಅಜಯ್ ಅಗರವಾಲ್, ನಿತಿನ್ ಪಿ, ಎಚ್‌.ಎನ್‌.ರವೀಂದ್ರ, ವೃಶಾಂಕ್ ಕೆ.ಎಂ.

## ಬ್ಯಾಡ್ಮಿಂಟನ್: ಕೆಎಸ್‌ಸಿಎ 'ಎ'ಗೆ ಪ್ರಶಸ್ತಿ

**ಬೆಂಗಳೂರು:** ಕೆಎಸ್‌ಸಿಎ 'ಎ' ತಂಡವು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಆಯೋಜಿಸಿದ್ದ ಅಂತರಕ್ಲಬ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದೆ.

ಭಾನುವಾರ ನಡೆದ ಟೂರ್ನಿಯ ಫೈನಲ್ ಪಂದ್ಯದಲ್ಲಿ ಆತಿಥೇಯ ಕೆಎಸ್‌ಸಿಎ 'ಎ' 3–0ಯಿಂದ ಎಚ್‌ಬಿಸಿಸಿ ತಂಡವನ್ನು ಸೋಲಿಸಿತು.

'ಬೆಸ್ಟ್ ಆಫ್ ಫೈವ್' ಮಾದರಿಯ ಫೈನಲ್‌ನಲ್ಲಿ ವಿಜೇತ ತಂಡದ ಸದಾಶಿವ ಜೆ. ಕಾರಂತ್–ವೃಶಾಂಕ್ ಕೆ.ಎಂ 15-21, 21-15, 18-21ರಿಂದ ಎಚ್‌ಬಿಸಿಸಿಯ ಪ್ರಸಾದ್ ಎನ್.– ವಿನೋದ್ ಬಿ.ಎಸ್. ಎದುರು, ಶ್ರೀವರ್ಧನ್ ಟಿ.ಆರ್. ನಜೀಬ್ ಕುನಿಲ್ 21-17, 4-21, 14-21ರಿಂದ ವಿವೇಕ್ ಮತ್ತು ಮುನಿರಾಜು ವಿರುದ್ಧ, ವಿನಯ್ ಮೃತ್ಯುಂಜಯ–ಸುನೀಲ್ ಎಚ್.ಬಿ. 21-17, 5-21, 17-21ರಿಂದ ಚಂದ್ರಶೇಖರ್ ಮತ್ತು ಲಾರೆನ್ಸ್ ಎದುರು ಗೆದ್ದರು.

## ರಾಜ್ಯದಲ್ಲಿ ಕ್ರೀಡೆಗೆ ಪ್ರೋತ್ಸಾಹ ಕಡಿಮೆ: ಗುರುರಾಜ ಬೇಸರ

ಪ್ರಜಾವಾಣಿ ವಾರ್ತೆ

**ಉಡುಪಿ:** 'ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಕೂಟದಲ್ಲಿ ಪದಕ ಗೆದ್ದವರಿಗೆ ರಾಜ್ಯ ಸರ್ಕಾರ ಪ್ರೋತ್ಸಾಹ ಧನವನ್ನು ತಡವಾಗಿ ಬಿಡುಗಡೆ ಮಾಡುತ್ತಿದೆ. ಬೇರೆ ರಾಜ್ಯಗಳಲ್ಲಿ ಕಂಚು ಗೆದ್ದ ಕ್ರೀಡಾಪಟುಗಳಿಗೆ ₹ 40 ರಿಂದ ₹ 50 ಲಕ್ಷ ಪ್ರೋತ್ಸಾಹ ಧನ ಘೋಷಿಸಿದರೆ ಕರ್ನಾಟಕದಲ್ಲಿ ಕೇವಲ ₹ 8 ಲಕ್ಷ ಘೋಷಿಸಲಾಗುತ್ತಿದೆ' ಎಂದು ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಕಂಚಿನ ಪದಕ ವಿಜೇತ ಕುಂದಾಪುರದ ಗುರುರಾಜ ಪೂಜಾರಿ ಬೇಸರ ವ್ಯಕ್ತಪಡಿಸಿದರು.

'ವೇಟ್‌ಲಿಫ್ಟಿಂಗ್ ತರಬೇತಿಗೆ ತಿಂಗಳಿಗೆ ₹ 30 ರಿಂದ ₹ 40 ಸಾವಿರ ವ್ಯಯವಾಗುತ್ತದೆ. ಕ್ರೀಡಾಪಟುಗಳಿಗೆ ಪ್ರೋತ್ಸಾಹ ಹಾಗೂ ಉದ್ಯೋಗಗಳನ್ನು ನೀಡಿದರೆ ದೇಶಕ್ಕೆ ಹೆಚ್ಚು ಪದಕಗಳು ಬರಲಿವೆ' ಎಂದು ಇಲ್ಲಿ ವಿಶ್ವಾಸ ವ್ಯಕ್ತಪಡಿಸಿದರು.



ಗುರುರಾಜ

'8 ವರ್ಷಗಳಿಂದ ಏರ್‌ಫೋರ್ಸ್‌ನಲ್ಲಿ ಸೇವೆ ಸಲ್ಲಿಸುತ್ತಿದ್ದು, ಸ್ವಂತ ಊರುಬಿಟ್ಟು ಬೇರೆಡೆ ಕರ್ತವ್ಯ ನಿರ್ವಹಿಸುವುದು ಕಷ್ಟವಾಗುತ್ತಿದೆ. ರಾಜ್ಯದಲ್ಲಿ ಉದ್ಯೋಗ ನೀಡಿದರೆ ಹೆಚ್ಚು ಅನುಕೂಲವಾಗುತ್ತದೆ' ಎಂದು ಗುರುರಾಜ ಪೂಜಾರಿ ಮನವಿ ಮಾಡಿದರು.

# ಚೆಸ್: ಡ್ರಾ ಪಂದ್ಯದಲ್ಲಿ ಭಾರತ 'ಬಿ'

ಮಹಾಬಲಿಪುರಂ: ಭಾರತ 'ಬಿ' ತಂಡದವರು 44ನೇ ಚೆಸ್ ಒಲಿಂಪಿಯಾಡ್‌ನ 10ನೇ ಸುತ್ತಿನಲ್ಲಿ ಉಜ್ಬೆಕಿಸ್ತಾನದ ಜತೆ ಡ್ರಾ ಮಾಡಿಕೊಂಡರು.

ಸೋಮವಾರ ನಡೆದ ಪಂದ್ಯದಲ್ಲಿ ಆರ್.ಪ್ರಗ್ನಾನಂದ ಅವರು ಸಿಂದ್ರನೊವ್ ಜಾವೊಕಿರ್ ಅವರನ್ನು ಮಣಿಸಿದರು. ಆದರೆ ಡಿ.ಗುಕೇಶ್ ಅವರು ಅಬ್ದುಸತ್ತಾರೊವ್ ನೊದಿರ್ಬೆಕ್ ಕೈಯಲ್ಲಿ ಪರಾಭವಗೊಂಡರು. ಭಾರತದ ಯುವ ಆಟಗಾರನಿಗೆ ಟೂರ್ನಿಯಲ್ಲಿ ಎದುರಾದ ಮೊದಲ ಸೋಲು ಇದು.

ನಿಹಾಲ್ ಸರಿನ್– ಯಾಕುಬೊವ್ ನೊದಿರ್ಬೆಕ್ ಮತ್ತು ಬಿ. ಅಧಿಬನ್– ವಖಿದೊವ್ ಜಾಕೊಂಗಿರ್ ನಡುವಿನ ಪಂದ್ಯ ಡ್ರಾದಲ್ಲಿ ಕೊನೆಗೊಂಡಿತು.

ಇನ್ನೊಂದು ಪಂದ್ಯದಲ್ಲಿ ಭಾರತ 'ಎ' ತಂಡ 2.5– 1.5 ಪಾಯಿಂಟ್‌ಗಳಿಂದ ಇರಾನ್ ತಂಡವನ್ನು ಮಣಿಸಿತು.

ವಿದಿತ್ ಸಂತೋಷ್ ಗುಜರಾತಿ ಅವರು ತಬತೆಬೆ ಅಮಿನ್ ವಿರುದ್ಧ ಗೆದ್ದರೆ, ಎಸ್.ಎಲ್.ನಾರಾಯಣನ್ ಅವರು ದೆಬೆಶ್ವರ್ ಬರ್ದಿಯಾ ಅವರನ್ನು ಸೋಲಿಸಿದರು. ಪಿ.ಹರಿಕೃಷ್ಣ ಅವರು ಮಗ್ಸೂದುಲು ಪರ್ಹಾನ್ ಎದುರು ಸೋತರು. ಅರ್ಜುನ್ ಎಗಿರೈಸಿ– ಇದಾನಿ ಪೌಯಾ ಜತೆ ಪಾಯಿಂಟ್ ಹಂಚಿಕೊಂಡರು.

ಭಾರತ 'ಸಿ' ತಂಡ ಸ್ಲೊವಾಕಿಯಾ ಜತೆ 2–2 ರಲ್ಲಿ ಡ್ರಾ ಸಾಧಿಸಿತು. ಅಭಿಮನ್ಯು ಪುರಾಣಿಕ್ ತಮ್ಮ ಎದುರಾಳಿಯನ್ನು ಮಣಿಸಿದರೆ, ಎಸ್.ಪಿ.ಸೇತುರಾಮನ್ ಸೋತರು. ಸೂರ್ಯಶೇಖರ್ ಗಂಗೂಲಿ ಹಾಗೂ ಕಾರ್ತಿಕೇಯನ್ ಮುರಳಿ ತಮ್ಮ ಪಂದ್ಯಗಳನ್ನು ಡ್ರಾ ಮಾಡಿಕೊಂಡರು.

ಆರ್.ಪ್ರಗ್ನಾನಂದ 10ನೇ ಸುತ್ತಿನಲ್ಲಿ ಆಡಿದರು –ಪಿಟಿಐ ಚಿತ್ರ

10 ಸುತ್ತುಗಳ ಬಳಿಕ ಮುಕ್ತ ವಿಭಾಗದಲ್ಲಿ ಉಜ್ಬೆಕಿಸ್ತಾನ ಮತ್ತು ಅರ್ಮೇನಿಯಾ ಕ್ರಮವಾಗಿ ಮೊದಲ ಎರಡು ಸ್ಥಾನಗಳಲ್ಲಿವೆ. ಭಾರತ 'ಬಿ' ಹಾಗೂ ಭಾರತ 'ಎ' ತಂಡಗಳು ಮೂರು ಹಾಗೂ ನಾಲ್ಕನೇ ಸ್ಥಾನಗಳಲ್ಲಿವೆ. ಮಂಗಳವಾರ ಕೊನೆಯ ಸುತ್ತಿನ ಪಂದ್ಯಗಳು ನಡೆಯಲಿವೆ.

**ಅಗ್ರಸ್ಥಾನದಲ್ಲಿ ಭಾರತ ಮಹಿಳೆಯರು:** ಮಹಿಳೆಯರ ವಿಭಾಗದಲ್ಲಿ ಭಾರತ 'ಎ' ತಂಡ 3.5–0.5 ಪಾಯಿಂಟ್‌ಗಳಿಂದ ಕಜಕಸ್ತಾನ ತಂಡವನ್ನು ಸೋಲಿಸಿತು. ಕೊನೇರು ಹಂಪಿ, ತಾನಿಯಾ ಸಚ್‌ದೇವ್ ಮತ್ತು ಭಕ್ತಿ ಕುಲಕರ್ಣಿ ತಮ್ಮ ಪಂದ್ಯಗಳನ್ನು ಗೆದ್ದುಕೊಂಡರು.

# ತಂಡಕ್ಕೆ ಮರಳಿದ ಕೊಹ್ಲಿ, ರಾಹುಲ್

ನವದೆಹಲಿ (ಪಿಟಿಐ): ಮಾಜಿ ನಾಯಕ ವಿರಾಟ್ ಕೊಹ್ಲಿ ಮತ್ತು ಗಾಯದಿಂದ ಚೇತರಿಸಿಕೊಂಡಿರುವ ಕೆ.ಎಲ್. ರಾಹುಲ್ ಅವರು ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಪಾಲ್ಗೊಳ್ಳುವ ಭಾರತ ತಂಡಕ್ಕೆ ಮರಳಿದ್ದಾರೆ.

ರೋಹಿತ್ ಶರ್ಮಾ ನಾಯಕತ್ವದ 15 ಸದಸ್ಯರ ಭಾರತ ತಂಡವನ್ನು ಸೋಮವಾರ ಪ್ರಕಟಿಸಲಾಗಿದ್ದು, ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರು ಬೆನ್ನು ನೋವಿನ ಕಾರಣ ಟೂರ್ನಿಯಲ್ಲಿ ಆಡದಿರಲು ನಿರ್ಧರಿಸಿದ್ದಾರೆ.

ವೆಸ್ಟ್ ಇಂಡೀಸ್ ಪ್ರವಾಸದಲ್ಲಿ ತಂಡದಲ್ಲಿದ್ದ ಬ್ಯಾಟರ್ ಶ್ರೇಯಸ್ ಅಯ್ಯರ್, ಎಡಗೈ ಸ್ಪಿನ್ನರ್ ಅಕ್ಷರ್ ಪಟೇಲ್, ವೇಗಿ ದೀಪಕ್ ಚಾಹರ್ ಅವರನ್ನು ಕೈಬಿಡಲಾಗಿದೆ.

ತಂಡ ಹೀಗಿದೆ: ರೋಹಿತ್ ಶರ್ಮಾ (ನಾಯಕ), ಕೆ.ಎಲ್.ರಾಹುಲ್ (ಉಪನಾಯಕ), ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್, ದೀಪಕ್ ಹೂಡಾ, ರಿಷಭ್ ಪಂತ್ (ವಿಕೆಟ್ ಕೀಪರ್), ದಿನೇಶ್ ಕಾರ್ತಿಕ್ (ವಿಕೆಟ್ ಕೀಪರ್), ಹಾರ್ದಿಕ್ ಪಾಂಡ್ಯ, ರವೀಂದ್ರ ಜಡೇಜ, ಆರ್. ಅಶ್ವಿನ್, ಯಜುವೇಂದ್ರ ಚಾಹಲ್, ರವಿ ಬಿಷ್ಣೋಯಿ, ಭುವನೇಶ್ವರ್ ಕುಮಾರ್, ಅರ್ಶದೀಪ್ ಸಿಂಗ್, ಆವೇಶ್ ಖಾನ್

## ರೋನಿತ್ ಮೋರೆ ಮಾರಕ ಬೌಲಿಂಗ್ ದಾಳಿ

# ಮಯಂಕ್ ಅಬ್ಬರ: ಬೆಂಗಳೂರಿಗೆ ಜಯ

• ಮೋಹನ್ ಕುಮಾರ ಸಿ.

ಮೈಸೂರು: ಅರ್ಧಶತಕ ಗಳಿಸಿದ ನಾಯಕ ಮಯಂಕ್ ಅಗರ್‌ವಾಲ್ ಹಾಗೂ ಶಿಸ್ತಿನ ಬೌಲಿಂಗ್ ಮಾಡಿದ ರೋನಿತ್ ಮೋರೆ ನೆರವಿನಿಂದ ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ ತಂಡವು ಜಯಗಳಿಸಿತು.

ಮಾನಸಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿರುವ ಮಹಾರಾಜ ಟ್ರೋಫಿ ಟ್ವೆಂಟಿ-20 ಕ್ರಿಕೆಟ್ ಟೂರ್ನಿಯಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಬೆಂಗಳೂರು ತಂಡವು 54 ರನ್‌ಗಳಿಂದ ಗುಲ್ಬರ್ಗ ಮಿಸ್ಟಿಕ್ಸ್ ತಂಡವನ್ನು ಸೋಲಿಸಿತು.

ಟಾಸ್ ಗೆದ್ದ ಗುಲ್ಬರ್ಗ ತಂಡದ ನಾಯಕ ಮನೀಷ್ ಪಾಂಡೆ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಬೆಂಗಳೂರು ತಂಡದ ಮಯಂಕ್ ಹಾಗೂ ಎಲ್.ಆರ್.ಚೇತನ್ ಮೊದಲ 5 ಓವರ್‌ಗಳಲ್ಲಿ 61 ರನ್ ಸೇರಿಸಿದರು. ಇದರಿಂದಾಗಿ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 189 ರನ್ ಗಳಿಸಿತು. ಅದಕ್ಕುತ್ತರವಾಗಿ ಗುಲ್ಬರ್ಗ ತಂಡಕ್ಕೆ 20 ಓವರ್‌ಗಳಲ್ಲಿ 135 ರನ್‌ಗಳಿಸಲಷ್ಟೇ ಸಾಧ್ಯವಾಯಿತು. ಮಯಂಕ್ 7 ಬೌಂಡರಿ, 2 ಸಿಕ್ಸರ್ ನೆರವಿನಿಂದ 52 ರನ್ ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ ಮಂಗಳೂರು ಯುನೈಟೆಡ್ 8 ರನ್‌ಗಳಿಂದ ಮೈಸೂರು ವಾರಿಯರ್ಸ್ ಎದುರು ಗೆದ್ದಿತು.

**ಸಂಕ್ಷಿಪ್ತ ಸ್ಕೋರ್:** ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ 20 ಓವರ್‌ಗಳಲ್ಲಿ 8ಕ್ಕೆ 189 (ಮಯಂಕ್ ಅಗರ್‌ವಾಲ್ 52, ಕೆ.ವಿ.ಅನಿಷ್ 44, ಕ್ರಾಂತಿ ಕುಮಾರ್ 22. ವಿದ್ವತ್ ಕಾವೇರಪ್ಪ 35ಕ್ಕೆ 2, ರಿತೇಶ್ ಭಟ್ಕಳ್ 18ಕ್ಕೆ 2) ಗುಲ್ಬರ್ಗ ಮಿಸ್ಟಿಕ್ಸ್: 20 ಓವರ್‌ಗಳಲ್ಲಿ 135 (ಮನೋಜ್ ಭಾಂಡಗೆ 35, ಕೆ.ಎಲ್. ಶ್ರೀಜಿತ್ 25, ದೇವದತ್ ಪಡಿಕ್ಕಲ್ 18. ರೋನಿತ್ ಮೋರೆ 22ಕ್ಕೆ 4, ಕುಮಾರ್ 12ಕ್ಕೆ 2)

**ಫಲಿತಾಂಶ:** ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್‌ಗೆ 54 ರನ್ ಗೆಲುವು. ಪಂದ್ಯಶ್ರೇಷ್ಠ: ಮಯಂಕ್ ಅಗರ್‌ವಾಲ್

ಮಯಂಕ್ ಅಗರ್‌ವಾಲ್ ಬ್ಯಾಟಿಂಗ್ ವೈಖರಿ –ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

# ಮೂಲ ಮಾದರಿಯಲ್ಲಿಯೇ ಮರಳಿದ ದುಲೀಪ್ ಟ್ರೋಫಿ

## ದೇಶಿ ಕ್ರಿಕೆಟ್ ಋತುವಿನ ವೇಳಾಪಟ್ಟಿ

ನವದೆಹಲಿ (ಪಿಟಿಐ): ಮೂರು ವರ್ಷಗಳ ನಂತರ ಮತ್ತೆ ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಯನ್ನು ಈ ವರ್ಷ ಆರಂಭಿಸಲಾಗುತ್ತಿದೆ.

ಸೆಪ್ಟೆಂಬರ್ 8 ರಿಂದ 25ರವರೆಗೆ ಟೂರ್ನಿಯು ನಡೆಯಲಿದೆ. ಹಳೆಯ ಮಾದರಿಯಲ್ಲಿಯೇ ಮುಂದುವರಿಸಲಾಗುತ್ತಿದೆ. ಈ ಟೂರ್ನಿಯೊಂದಿಗೆ ವರ್ಷದ ದೇಶಿ ಕ್ರಿಕೆಟ್ ಋತುವೂ ಆರಂಭವಾಗಲಿದೆ. ಪುರುಷರ ಹಾಗೂ ಮಹಿಳಾ ವಿಭಾಗಗಳ ಟೂರ್ನಿಯ ವೇಳಾಪಟ್ಟಿಯನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಭಾನುವಾರ ಬಿಡುಗಡೆ ಮಾಡಿದೆ.

'ದಿಲೀಪ್ ಟ್ರೋಫಿ ಟೂರ್ನಿಯಲ್ಲಿ ಆರು ವಲಯ ತಂಡಗಳು (ಉತ್ತರ, ದಕ್ಷಿಣ, ಕೇಂದ್ರ, ಪೂರ್ವ, ಪಶ್ಚಿಮ ಮತ್ತು ಈಶಾನ್ಯ) ಆಡಲಿವೆ. ಇರಾನಿ ಟ್ರೋಫಿ, ಸೈಯದ್ ಮುಷ್ತಾಕ್ ಅಲಿ ಟಿ20, ವಿಜಯ್ ಹಜಾರೆ ಏಕದಿನ ಹಾಗೂ ರಣಜಿ ಟ್ರೋಫಿ ಟೂರ್ನಿಗಳು ನಡೆಯಲಿವೆ' ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ತಿಳಿಸಿದ್ದಾರೆ.

ಕೋವಿಡ್ ಸೃಷ್ಟಿಸಿದ ಬಿಕ್ಕಟ್ಟಿನಿಂದಾಗಿ ದೇಶಿ ಕ್ರಿಕೆಟ್ ಚಟುವಟಿಕೆಗಳಿಗೆ ತಡೆ ಬಿದ್ದಿತ್ತು. ಹೋದ ಋತುವಿನಲ್ಲಿ ರಣಜಿ ಟ್ರೋಫಿ ಆಯೋಜಿಸಲಾಗಿತ್ತು.

| ಟೂರ್ನಿ | ದಿನಾಂಕ |
|---|---|
| **ಪುರುಷರು** | |
| ದಿಲೀಪ್ ಟ್ರೋಫಿ | ಸೆ 8 ರಿಂದ 25 |
| ಇರಾನಿ ಕಪ್ | ಅ 1 ರಿಂದ 5 |
| ಸೈಯದ್ ಮುಷ್ತಾಕ್ ಅಲಿ ಟಿ20 | ಅ 11 ರಿಂದ ನ 5 |
| ವಿಜಯ್ ಹಜಾರೆ ಏಕದಿನ | ನ 12 ರಿಂದ ಡಿ 8 |
| ರಣಜಿ ಟ್ರೋಫಿ | ಡಿ 13 ರಿಂದ ಫೆ 20, 2023 |
| **ಮಹಿಳೆಯರು** | |
| ರಾಷ್ಟ್ರೀಯ ಟಿ20 | ಅ 11 ರಿಂದ ನ 5 |
| ಅಂತರ ವಲಯ ಟಿ20 | ನ 8 ರಿಂದ 15 |
| ಚಾಲೆಂಜರ್ ಟಿ20 | ನ 20 ರಿಂದ 26 |
| ಅಂತರ ವಲಯ ಏಕದಿನ | ಫೆ 12 ರಿಂದ 21 |

# ಗಾಲ್ಫ್: ಗಗನ್‌ಜೀತ್‌ಗೆ ಇಂಡೊನೇಷ್ಯಾ ಓಪನ್ ಕಿರೀಟ

ಜಕಾರ್ತ (ಪಿಟಿಐ): ಭಾರತದ ಗಾಲ್ಫ್ ಆಟಗಾರ ಗಗನ್‌ಜೀತ್ ಭುಲ್ಲರ್ ಅವರು ಮಂದಿರಿ ಇಂಡೊನೇಷ್ಯಾ ಓಪನ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದ್ದಾರೆ. ಇದರೊಂದಿಗೆ ಏಷ್ಯನ್ ಟೂರ್‌ನಲ್ಲಿ ಭಾರತದ ನಾಲ್ಕು ವರ್ಷಗಳ ಪದಕದ ಬರವನ್ನು ನೀಗಿಸಿದರು.

ಸುಮಾರು ₹ 4 ಕೋಟಿ ಬಹುಮಾನ ಮೊತ್ತದ ಟೂರ್ನಿಯಲ್ಲಿ ಗಗನಜೀತ್ ಭಾರತದವರೇ ಆದ ರಶೀದ್ ಖಾನ್ ಮತ್ತು ಇಂಗ್ಲೆಂಡ್‌ನ ಸ್ಟೀವ್ ಲೇಟನ್ ಅವರನ್ನು ಹಿಂದಿಕ್ಕಿದರು. 2018ರಲ್ಲಿ ಖಾಲಿನ್ ಜೋಷಿ ಪ್ಯಾನಾಸೋನಿಕ್ ಓಪನ್ ಜಯಿಸಿದ ಬಳಿಕ ಏಷ್ಯನ್ ಟೂರ್‌ನಲ್ಲಿ ಭಾರತದ ಯಾರೂ ಪ್ರಶಸ್ತಿ ಗೆದ್ದಿರಲಿಲ್ಲ.

ಗಗನ್‌ಜೀತ್ ಅವರಿಗೆ ಇದು ಏಷ್ಯನ್ ಟೂರ್‌ನಲ್ಲಿ 10ನೇ ಜಯವಾಗಿದೆ. ಆ ಮೂಲಕ ತಮ್ಮದೇ ದಾಖಲೆಯನ್ನು ಅವರು ವಿಸ್ತರಿಸಿದರು.

ಈ ಟೂರ್ನಿಯಲ್ಲಿ ಸ್ಪರ್ಧಿಸಿದ್ದ ಭಾರತದ ಇನ್ನುಳಿದ ಸ್ಪರ್ಧಿಗಳಾದ ಅಜಿತೇಶ್ ಸಂಧು ಜಂಟಿ 19, ಶಿವ ಕಪೂರ್ ಜಂಟಿ 27, ಕರಣದೀಪ್ ಕೊಚ್ಚಾರ್ ಮತ್ತು ವೀರ್ ಅಹ್ಲಾವತ್ ಜಂಟಿ 37, ಎಂ. ಧರ್ಮ ಜಂಟಿ 45, ಎಸ್. ಚಿಕ್ಕರಂಗಪ್ಪ ಮತ್ತು ಹನಿ ಬಿಸೋಯಿ ಜಂಟಿ 50ನೇ ಸ್ಥಾನ ಗಳಿಸಿದರು.

ಟ್ರೋಫಿಯೊಂದಿಗೆ ಗಗನ್‌ಜೀತ್– ಎಎಫ್‌ಪಿ ಚಿತ್ರ

WT.5044.2022KAN